ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ನೆಲೆಗಳು

ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಸಣ್ಣ ದೇವೇಂದ್ರಸ್ವಾಮಿ

ಮಾರ್ಗದರ್ಶಕರು

ಡಾ. ಟಿ.ಆರ್. ಚಂದ್ರಶೇಖರ

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ನೆಲೆಗಳು

ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಸಣ್ಣ ದೇವೇಂದ್ರಸ್ವಾಮಿ

ಮಾರ್ಗದರ್ಶಕರು
ಡಾ. ಟಿ.ಆರ್. ಚಂದ್ರಶೇಖರ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಸಣ್ಣ ದೇವೇಂದ್ರಸ್ವಾಮಿ ಅವರು **ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ನೆಲೆಗಳು** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 08/02/2018

ಸ್ಥಳ : ವಿದ್ಯಾರಣ್ಯ

(ಡಾ. ಟಿ.ಆರ್. ಚಂದ್ರಶೇಖರ)
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ನೆಲೆಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಟಿ.ಆರ್. ಚಂದ್ರಶೇಖರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 08/02/2018
ಸ್ಥಳ : ವಿದ್ಯಾರಣ್ಯ

(ಸಣ್ಣ ದೇವೇಂದ್ರಸ್ವಾಮಿ)
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಪ್ರಸ್ತಾವನೆ

ಸಂಶೋಧನಾ ವಿಷಯದ ಸಮಸ್ಯೀಕರಣ

ಸಂಶೋಧನಾ ಪ್ರಶ್ನೆಗಳು

ಅಧ್ಯಯನದ ಉದ್ದೇಶಗಳು

ಅಧ್ಯಯನದ ವಿಧಾನಗಳು

ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಪ್ರಸ್ತಾವನೆ

ಕಡ್ಡಾಯ ಪ್ರಾಥಮಿಕ ಶಿಕ್ಷಣವು ಜಾರಿಗೆ ಬಂದು ದಶಕಗಳೇ ಕಳೆದರೂ ನಮ್ಮ ದೇಶದಲ್ಲಿ ಅದು ಸಂಪೂರ್ಣ ಅಸ್ತಿತ್ವಕ್ಕೆ ಬಂದಿಲ್ಲವೆಂದು ಹೇಳಬಹುದು. ಏಕೆಂದರೆ ಇಂದಿಗೂ ಆರರಿಂದ ಹದಿನಾಲ್ಕು ವರ್ಷದ ಮಕ್ಕಳು ಶಾಲೆಯಲ್ಲಿ ಇರದೇ ಪಾಲಕರ ಜೊತೆ ಮನೆಗೆಲಸದಲ್ಲಿ ಮತ್ತು ಹೊಲಗದ್ದೆಗಳ ಕೆಲಸದಲ್ಲಿ ನಿರತರಾಗಿರುವುದು ನಮಗೆ ಕಂಡು ಬರುತ್ತದೆ. ಮುಂದುವರಿದು ಹೋಟೆಲ್‌ಗಳು, ಗುಡಿಕೈಗಾರಿಕೆಗಳ ಕೆಲಸದಲ್ಲಿ ನಿರತರಾಗಿದ್ದಾರೆ. ಅಲ್ಲದೇ ಅನೈತಿಕ ಚಟುವಟಿಕೆ ಗಳಲ್ಲಿ ತೊಡಗಿ ಸಮಾಜಕ್ಕೆ ಮಾರಕವಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಬಾಲಕಾರ್ಮಿಕರ ಸಂಖ್ಯೆ ತುಂಬಾ ಇದೆ. ಈ ಬಾಲಕಾರ್ಮಿಕರ ನಿರ್ಮೂಲನೆ ಮಾಡಿ ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಗೋಪಾಲಕೃಷ್ಣ ಗೋಕಲೆಯವರು ೧೪ ವರ್ಷದ ವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ. ಈ ಕಾಯಿದೆ ಜಾರಿಗೆ ಬಂದರೂ ಕೂಡ ಬಹಳಷ್ಟು ಮಕ್ಕಳು ಶಾಲೆಗೆ ದಾಖಲಾಗದಿರುವುದು ಮತ್ತು ದಾಖಲಾದ ಮಕ್ಕಳು ಅರ್ಧಕ್ಕೆ ತಮ್ಮ ಓದನ್ನು ನಿಲ್ಲಿಸಿ ಶಾಲೆಬಿಟ್ಟು ಹೋಗುವವರ ಸಂಖ್ಯೆ ಹೆಚ್ಚಾಗಿರುವುದನ್ನು ಸರಕಾರದ ವರದಿಗಳು ಮತ್ತು ಅನೇಕ ಅಧ್ಯಯನಗಳಿಂದ ತಿಳಿದುಕೊಳ್ಳಬಹುದಾಗಿದೆ. ಇಂತಹ ಹಲವು ಸಮಸ್ಯೆಗಳಲ್ಲದೇ ನಮ್ಮ ರಾಜ್ಯದ ಪ್ರಾಥಮಿಕ ಶಾಲೆಗಳ ಮೂಲ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ, ಗ್ರಂಥಾಲಯದಂತಹ ಸೌಲಭ್ಯಗಳಿಂದ ವಂಚಿತಗೊಂಡಿದ್ದರೂ ಸಹ ಅವುಗಳು ಬಳಕೆಯ ಸ್ಥಿತಿಯಲ್ಲಿ ಇರುವುದು ತುಂಬಾ ಕಡಿಮೆ. ಸರ್ಕಾರ ಶಾಲಾ ಮಕ್ಕಳಿಗಾಗಿ ಕೊಡಮಾಡಿದ ಅತ್ಯುತ್ತಮ ಕಾರ್ಯಕ್ರಮವಾದ ಸರ್ವಶಿಕ್ಷಣ ಅಭಿಯಾನ ಕಾರ್ಯ

ಕ್ರಮದ ಮುಖಾಂತರ(ಡಿಪಿಇಪಿ) ಜಿಲ್ಲಾ ಪ್ರಾಥಮಿಕ ಶಿಕ್ಷಣದ ಕಾರ್ಯಕ್ರಮದಲ್ಲಿ ೬-೧೪ ವರ್ಷದ ಮಕ್ಕಳನ್ನು ದಾಖಲಾತಿ ಹೆಚ್ಚಿಸುವುದಲ್ಲದೆ ಅವರ ಶಿಕ್ಷಣದ ಗುಣಮಟ್ಟ ಕಾಪಾಡುವುದಾಗಿದೆ. ಆದರೂ ಕೂಡ ಅದು ಸಾಧಿತವಾಗುತ್ತಿಲ್ಲ. ಈ ಕಾರ್ಯಕ್ರಮದ ಮುಖಾಂತರ ಶಿಕ್ಷಕರಿಗೆ ಉತ್ತಮ ತರಬೇತಿಗಳನ್ನು ನೀಡುತ್ತಿದ್ದರೂ, ಅವರ ಕಾರ್ಯಕ್ಷಮತೆ ಹೆಚ್ಚಾಗುತ್ತಿಲ್ಲ.

ಶಿಕ್ಷಣವೇ ಅಭಿವೃದ್ಧಿ ಎಂಬ ಮಾತು ಇತ್ತೀಚಿನ ದಿನಗಳಲ್ಲಿ ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ಹೆಚ್ಚಾಗಿ ಕೇಳಿಬರುತ್ತಿದೆ. ಶಿಕ್ಷಣ ಮತ್ತು ಅಭಿವೃದ್ಧಿಯು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಣವು ಪ್ರತಿ ಹಂತದಲ್ಲಿಯೂ ಮಹಿಳೆಯರು, ದಲಿತರು, ಹಿಂದುಳಿದವರು, ಅವಕಾಶವಂಚಿತ ಜನರನ್ನು ಸಬಲೀಕರಣಗೊಳಿಸಬಲ್ಲದು. ಬೇರೆ ಬೇರೆ ವರ್ಷಗಳಲ್ಲಿ ಪ್ರಕಟವಾಗಿರುವ ಮಾನವ ಅಭಿವೃದ್ಧಿ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಯಾವ ಪ್ರದೇಶದಲ್ಲಿ ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಿದೆಯೋ ಆ ದೇಶ ಅಭಿವೃದ್ಧಿ ಹೊಂದಿರುವುದನ್ನು ಕಾಣಬಹುದು. ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆ ಕಡಿಮೆ ಪ್ರಮಾಣದಲ್ಲಿದೆ. ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವ ಪ್ರಮಾಣ ಅತ್ಯಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಯಾವ ಪ್ರದೇಶದಲ್ಲಿ ಅಗತ್ಯವಾದ ಕನಿಷ್ಠ ಮೂಲಭೂತ ಸೌಲಭ್ಯಗಳು ಮಾನವ ಜೀವನಕ್ಕೆ ದೊರಕುತ್ತಿಲ್ಲವೋ, ಆ ಪ್ರದೇಶಗಳಲ್ಲಿ ಬಡ ಕುಟುಂಬಗಳ ಹೆಣ್ಣುಮಕ್ಕಳು ಅದರಲ್ಲಿಯೂ ಅವಕಾಶವಂಚಿತ ಸಮುದಾಯದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವಲ್ಲಿ ಅತ್ಯಂತ ಹಿಂದುಳಿದಿದ್ದಾರೆ.

ಶಿಕ್ಷಣವು ಮಾನವರಿಗೆ ಅತ್ಯಗತ್ಯವಾದದ್ದು ವಿದ್ಯಾಭ್ಯಾಸವಿಲ್ಲದಿದ್ದರೆ ಅವರು ಅನಾಗರಿಕರಾಗುತ್ತಾನೆ. ಮಾನವರು ಸಂಘಜೀವಿಯಾಗಬೇಕಾದರೆ ಶಿಕ್ಷಣವು ಅತ್ಯಗತ್ಯ. ಶಿಕ್ಷಣ ಮಾತ್ರವೇ ಮಾನವರನ್ನು ಸಂಘ ಜೀವಿಯಾಗಿ ರೂಪಿಸುತ್ತದೆ. ಅವರನ್ನು ಪ್ರಾಣಿಗಳಗಿಂತ ಶ್ರೇಷ್ಠ ಎನಿಸಿಕೊಳ್ಳಲು ಅರ್ಹರನ್ನಾಗಿ ಮಾಡುವುದೇ ಶಿಕ್ಷಣ. ಮಾನವರು ಇವುಗಳ ಜೊತೆಗೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಂಶಗಳನ್ನು ಸಂಪಾದಿಸಿ ತಮ್ಮ ಬುದ್ಧಿ ಶಕ್ತಿಯನ್ನು ಸಾಬೀತುಪಡಿಸುತ್ತಾರೆ. ಇದು ಅವರು ಪಡೆಯುವ ಜ್ಞಾನಶಕ್ತಿಯಿಂದಲೇ ಲಭ್ಯವಿರುತ್ತದೆ.

ಮುಂದುವರಿದು, ರಾಜ್ಯದ ಹಿಂದುಳಿದ ಪ್ರದೇಶವಾದ ಗುಲ್ಬರ್ಗಾ ವಿಭಾಗದಲ್ಲಿನ ಫಲಿತಾಂಶದ ಪ್ರಮಾಣವು ಕೂಡ ಇತರ ವಿಭಾಗಗಳಿಗೆ ಹೋಲಿಸಿದಾಗ ತುಂಬಾ ಕಡಿಮೆ ಇದೆ. ಅದರಲ್ಲಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳು ಹಿಂದಿವೆ. ಅದನ್ನು ನಾವು ಅನೇಕ ವರದಿಗಳಿಂದ ದೃಢಪಡಿಸಿಕೊಳ್ಳಬಹುದಾಗಿದೆ. ಸರಕಾರದ ಕಾರ್ಯಕ್ರಮಗಳು ಅನೇಕ ರೀತಿಯಲ್ಲಿದ್ದರೂ ಸಾಕಷ್ಟು ಹಣವನ್ನು ವ್ಯಯ ಮಾಡುತ್ತಿದ್ದರೂ ಅಂದುಕೊಂಡಷ್ಟು ಪ್ರಗತಿ

ಪ್ರಾಥಮಿಕ ಶಿಕ್ಷಣದಲ್ಲಿ ಆಗುತ್ತಿಲ್ಲ. ಈ ಅಧ್ಯಯನದಿಂದ ಗುಲ್ಬರ್ಗಾ ವಿಭಾಗಕ್ಕೆ ಹೆಚ್ಚಿನ ಉಪಯೋಗವಾಗಬಹುದೆಂದು ಕೊಂಡಿದ್ದೇನೆ. ಪ್ರಾಥಮಿಕ ಶಿಕ್ಷಣದಲ್ಲಿ ಇರುವಂಥಹ ಸಾಧನೆ, ವೈಫಲ್ಯಗಳು ಮತ್ತು ಸಮಸ್ಯೆಗಳನ್ನು ಅಧ್ಯಯನ ಮಾಡಿ ವಿವರಿಸುವುದರಿಂದ ಅದರ ವಸ್ತು ಸ್ಥಿತಿ ಅರ್ಥವಾಗುವುದರಿಂದ ಸರಕಾರಗಳು, ಸಂಘಟನೆಗಳು ಇದರ ಮುಖಾಂತರ ಬೆಳಕು ಚೆಲ್ಲಿ ತೊಂದರೆಯನ್ನು ಹೊಗಲಾಡಿಸಲು ಪ್ರಯತ್ನಿಸಿದಾಗ ಜನತೆಗೆ ಸೌಲಭ್ಯಗಳು ದೊರೆತು ಮಕ್ಕಳನ್ನು ಶಾಲೆಗೆ ಕಳುಹಿಸಲು ಅನುಕೂಲತೆಗಳು ದೊರೆತು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯಲ್ಲಿ ಕಡಿಮೆಯಾಗಿ ಅವರು ಶಿಕ್ಷಿತರಾಗಿ ಸಮಾಜ ಸುಧಾರಣೆ ಜೊತೆಗೆ ಎಲ್ಲಾ ವಿಭಾಗಗಳು ಸಮಾನತೆಯಿಂದ ಇರಲು ಸಹಕಾರಿಯಾಗುವುದರೊಂದಿಗೆ ರಾಜ್ಯ ಅಭಿವೃದ್ಧಿ ಕಾಣಲಿಕ್ಕೆ ಸಹಕಾರಿಯಾಗುತ್ತದೆ. ದೇಶದಲ್ಲಿ ನಮ್ಮ ರಾಜ್ಯವು ಉನ್ನತ ಮಟ್ಟದ ಸ್ಥಾನಕ್ಕೆ ಹೋಗಬಹುದಾಗಿದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ.

ಇಂದು ನಮ್ಮ ರಾಜ್ಯದಲ್ಲಿ ಸುಮಾರು ೧೨೩೭೭ ಪ್ರಾಥಮಿಕ ಸರ್ಕಾರಿ ಶಾಲೆಗಳಿವೆ. ೨೬೯೦ ಅನುದಾನ ಶಾಲೆಗಳಿವೆ. ೯೬೮೭ಕ್ಕೂ ಅಧಿಕ ಅನುದಾನರಹಿತ ಪ್ರಾಥಮಿಕ ಶಾಲೆಗಳಿವೆ. ಈ ಶಾಲೆಗಳಲ್ಲಿ ಗ್ರಾಮೀಣ ಭಾಗದ ಶಾಲೆಗಳು ಹೆಚ್ಚಾಗಿ ಕಂಡುಬರುವುದು ವಿಶೇಷ. ೨೦೧೧ರ ಜನಗಣತಿಯ ಪ್ರಕಾರ ಒಟ್ಟಾರೆ ಮಹಿಳೆಯರ ಶಿಕ್ಷಣವು ಇಲ್ಲಿ ಶೇ. ೬೮.೧೫ರಷ್ಟು ಕಂಡುಬರುವುದು. ಪುರುಷರ ಶಿಕ್ಷಣವು ಶೇ. ೮೨.೮೪ರಷ್ಟು ಕಂಡುಬರುತ್ತದೆ. ಉದಾರಿಕರಣ, ಖಾಸಗೀಕರಣ, ಜಾಗತೀಕರಣದಿಂದಾಗಿ ಶಿಕ್ಷಣವು ದೇಶದೆಲ್ಲೆಡೆ ವ್ಯಾಪಿಸಿತ್ತು.

೨೦೧೧ರ ಜನಗಣತಿಯ ಪ್ರಕಾರ ನಗರ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೭೪.೧೩ ಇದೆ. ಗ್ರಾಮೀಣ ಮಹಿಳೆಯರ ಶಿಕ್ಷಣ ಪ್ರಾಮಾಣ ಶೇ. ೪೮ರಷ್ಟಿದೆ. ಗ್ರಾಮೀಣ ಮಹಿಳೆಯರಿಗೆ ಶಿಕ್ಷಣವು ಅಗತ್ಯವಾಗಿದೆ. ಮಹಿಳಾ ಜನಸಂಖ್ಯೆಯಲ್ಲಿ ಶೇ. ೭೦ರಷ್ಟು ಗ್ರಾಮೀಣ ಮಹಿಳೆಯರಿದ್ದಾರೆ. ಇತ್ತೀಚೆಗೆ ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮಹಿಳೆಯರಿಗೆ ಶೇ. ೩೩ರಷ್ಟು ಮೀಸಲಾತಿ ನೀಡಲಾಗಿದೆ. ಗ್ರಾಮೀಣ ಮಹಿಳೆಯರು ಇಂದು ಈ ಮೀಸಲಾತಿ ಮೀರಿ ಪಂಚಾಯಿತಿಗಳಿಗೆ ಆಯ್ಕೆ ಯಾಗುತ್ತಿದ್ದಾರೆ. ಮಕ್ಕಳ ಶಿಕ್ಷಣ, ಕೃಷಿ, ಪಶುಪಾಲನೆ, ಆರೋಗ್ಯ ಮುಂತಾದವುಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಮಹಿಳೆಯರಿಗೆ ಶಿಕ್ಷಣ ಮಹತ್ವವಾಗಿದೆ. ಇಂತಹ ಶಿಕ್ಷಣದಿಂದ ಸಮೃದ್ಧಿ ಜೀವನ ನಡೆಸಲು ಮಹಿಳೆಯರಿಗೆ ಅಕ್ಷರ ಸಂಸ್ಕೃತಿ ಬೇಕು. ತನ್ನ ವ್ಯಕ್ತಿತ್ವ ಕಟ್ಟಿಕೊಳ್ಳಲು ಅಕ್ಷರಜ್ಞಾನ ಬೇಕು. ತನ್ನ ಹಿತಾಸಕ್ತಿಗಳಾಗುವುವು ಎಂಬುದನ್ನು ಕಂಡುಕೊಳ್ಳಲು. ಕುಟುಂಬದಲ್ಲಿ ನಿರ್ಣಯ ತೆಗೆದುಕೊಳ್ಳಲು ಮಹಿಳೆಯರಿಗೆ ಶಿಕ್ಷಣ ಅಗತ್ಯವಾಗಿದೆ ಎಂದು ತಿಳಿದುಬಂದಿದೆ.

೧. ಸಂಶೋಧನಾ ವಿಷಯದ ಸಮಸ್ಯೀಕರಣ

ಪ್ರತಿಯೊಬ್ಬರು ಹುಟ್ಟಿನಿಂದಲೇ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಶಿಕ್ಷಣ ಹಲವಾರು ಮೂಲಗಳಿಂದ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಸಫಲಗೊಳಿಸಲು ಮತ್ತು ಆಚರಣೆಗೆ ತರುವುದು ಸಾಕಷ್ಟು ಸಂಭವನೀಯವಾದದ್ದು ಆದರೂ ಎಲ್ಲಾ ಪ್ರಾಂತ್ಯಗಳಲ್ಲೂ ಶಿಕ್ಷಣವನ್ನು ಸಮಾನವಾಗಿ ಹರಡಲಾಗಿದೆಯೇ? ಸ್ತ್ರೀ–ಪುರುಷ ಶಿಕ್ಷಣವನ್ನು ಸಮನಾಗಿ ಪಡೆಯುತ್ತಿದ್ದಾರೆಯೇ? ಶಿಕ್ಷಣವನ್ನು ಪಡೆದ ನಂತರ ಎಲ್ಲರೂ ಸಮಾನವಾಗಿ ಉದ್ಯೋಗವಕಾಶ ಗಳನ್ನು ಪಡೆಯುತ್ತಿದ್ದಾರೆಯೇ? ಶಿಕ್ಷಣದ ಮೇಲೆ ಎಷ್ಟು ವೆಚ್ಚವನ್ನು ಕೈಗೊಳ್ಳಬೇಕು? ಇಂತಹ ವೆಚ್ಚಗಳನ್ನು ಯಾರು ಭರಿಸಬೇಕು? ಆರ್ಥಿಕತೆಯಲ್ಲಿ ಶಿಕ್ಷಣವನ್ನು ಹೇಗೆ ಸಮ್ಮಿಲನಗೊಳಿಸಬೇಕು? ಶ್ರಮವನ್ನು ಭಿನ್ನವಾಗಿಸುವಲ್ಲಿ ಶಿಕ್ಷಣ ಒಂದು ನಿಯೋಗಿಯೇ? ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವೆಷ್ಟು? ಶಿಕ್ಷಕರ ವಿದ್ಯಾರ್ಥಿಗಳ ಅನುಪಾತವೆಷ್ಟು? ಹೀಗೆ ಶಿಕ್ಷಣದಲ್ಲಿ ಕಾಣಿಸಿಕೊಂಡ ಇಂತಹ ಹಲವಾರು ಪ್ರಶ್ನೆಗಳಿಗೆ ಭಾರತದಲ್ಲಿ ಹಲವಾರು ಅಧ್ಯಯನಗಳನ್ನು ನಡೆಸಲಾಗಿದೆ. ಶಟ್ಜ [Vicious circle in Education] ಕಾರ್ನಿಕ್ (Gujarat study) ಜಾರ್ಜ (Tamilanadu study) ಹಾಗೂ ಸಾಲುಂಕೆ, ಪಂಚಮುಖಿ, ಶ್ರೀವಾಸ್ತವ, ಗುಪ್ತಾ ಮೊದಲಾದವರು ಅಧ್ಯಯನಗಳು ಮಕ್ಕಳ ಶಾಲೆ ಬಿಡಲು ಕಾರಣಗಳನ್ನು ಹುಡುಕುವುದಾಗಿದೆ. ಈ ಅಧ್ಯಯನಗಳು ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ಅಧ್ಯಯನಗಳಾಗಿವೆ. ಇಂತಹ ಪ್ರಶ್ನೆಗಳನ್ನು ಇಟ್ಟುಕೊಂಡು ಸಮಸ್ಯೀಕರಣವನ್ನು ನೋಡಲಾಗಿದೆ.

ವಾದ್ವಾನಿ. ಎಂ.ಆರ್.ಎಲ್. ಡಿಸೋಜಾ. ಅವರು ತಮ್ಮ ಅಧ್ಯಯನದಲ್ಲಿ (೧೯೮೦) ವಸಾಹತು ಕಾಲದಲ್ಲಿ ಶಿಕ್ಷಣವು ಸಮಾಜದಲ್ಲಿ ಉನ್ನತ ಜಾತಿಯವರಿಗೆ ಮಾತ್ರ ಸುಲಭ ಸಾಧ್ಯವಾಗಿತ್ತು. ಶಿಕ್ಷಣ ಕೆಲವರಿಗಷ್ಟೇ ದೊರೆಯುತ್ತಿದ್ದದರಿಂದ ಬಹುಸಂಖ್ಯಾತರನ್ನು ಶಿಕ್ಷಣ ಪಡೆಯುವಿಕೆಯಿಂದ ದೂರವಿಡಲಾಗುತ್ತಿತ್ತು. ಆದರೆ ಬ್ರಿಟಿಷ್ ಸರ್ಕಾರದ ಆಡಳಿತದಲ್ಲಿ ಕ್ರಿ.ಶ. ೧೮೧೩ರ ಗೊತ್ತುವಳಿಯಲ್ಲಿ ಈಸ್ಟ್ ಇಂಡಿಯಾ ಕಂಪನಿಯವರಿಂದ ಭಾರತೀಯರೆಲ್ಲರಿಗೂ ಶಿಕ್ಷಣ ದೊರೆಯುವಂತೆ ಒಪ್ಪಂದವಾಯಿತು. ಈ ಒಪ್ಪಂದದಂತೆ ಎಲ್ಲರಿಗೂ ಶಿಕ್ಷಣ ನೀಡಲು ಸಾಧ್ಯವಾಯಿತೇ? ಎಲ್ಲರಿಗೂ ಶಿಕ್ಷಣ ಸಮಾನಾಂತರವಾಗಿ ದೊರೆಯುವಂತೆ ಕ್ರಮ ಕೈಗೊಳ್ಳ ಲಾಯಿತೇ?[೧] ಎಂಬುದನ್ನು ಲೇಖಕರು ವಿವರಿಸಿದ್ದಾರೆ.

ಗ್ರೋವರ್ ಬಿ.ಎಲ್. (೧೯೮೩) ಅವರು ತಮ್ಮ ಅಧ್ಯಯನದಲ್ಲಿ ೧೯೧೩ರಲ್ಲಿ ಬ್ರಿಟಿಷ್ ಸರ್ಕಾರವು ಶಿಕ್ಷಣ ನೀತಿ ಬಗೆಗೆ ಪ್ರಮುಖವಾದ ನಿರ್ಣಯವನ್ನು ಕೈಗೊಂಡಿತು. ಇದಕ್ಕೆ

ಕಾರಣ ೧೯೦೬ರಲ್ಲಿ ಬರೋಡಾ ರಾಜ್ಯವು ಪ್ರಾಥಮಿಕ ಶಿಕ್ಷಣವನ್ನು ರಾಜ್ಯಾದ್ಯಂತ ಕಡ್ಡಾಯವಾಗಿ ಜಾರಿಗೆ ತಂದದ್ದು. ೧೯೧೦ ರಿಂದ ೧೯೧೩ರ ಅವಧಿಯಲ್ಲಿ ಗೋಪಾಲಕೃಷ್ಣ ಗೋಖಲೆಯವರು ಕೇಂದ್ರ ಶಾಸಕಾಂಗ ಸಭೆಯಲ್ಲಿ ಸರ್ಕಾರವು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಹೊರುವಂತೆ ಒತ್ತಾಯ ತಂದರು. ಇದರ ಪರಿಣಾಮವಾಗಿ ಸರ್ಕಾರವು ೧೯೧೭ರ ಫೆಬ್ರವರಿ ೨೧ರಂದು ಹೊಸ ನೀತಿಯ ನಿರ್ಣಯವನ್ನು ಪ್ರಕಟಿಸಿತು. ಇದರ ಪ್ರಕಾರ ಸರ್ಕಾರವು ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಒಪ್ಪದೇ ಹೋದರೂ ಸಹ ಅನಕ್ಷರತೆಯನ್ನು ಹೊಗಲಾಡಿಸುವ ನೀತಿಯನ್ನು ಅಂಗೀಕರಿಸಿ ಬಡವರಿಗೆ ಮತ್ತು ಹಿಂದುಳಿದವರಿಗೆ ಮುಕ್ತವಾಗಿ ಪ್ರಾಥಮಿಕ ಶಿಕ್ಷಣ ಕೊಡಬೇಕೆಂದು ಪ್ರಾಂತಿಯ ಸರಕಾರಗಳನ್ನು ಕೇಂದ್ರ ಸರ್ಕಾರ ಆಗ್ರಹಿಸಿತು. ಈ ದಿಸೆಯಲ್ಲಿ ಸರಕಾರಗಳು ಒಂದು ಉತ್ತಮವಾದ ಯೋಜನೆಯನ್ನು ಕಡ್ಡಾಯವೆಂದು ಹಾಕಿಕೊಂಡಿದ್ದರು ಸಹ ಶಿಕ್ಷಣ ಪ್ರಾಪ್ತಿ ನೂರಕ್ಕೆ ನೂರರಷ್ಟು ಆಗುತ್ತಿಲ್ಲವೆಂಬುದೆ ವಿಷಾದಕರ ಸಂಗತಿಯಾಗಿದೆ.[೨]

ಜಾನ್ ಡ್ಯೂಯಿ ಅವರು (೧೯೯೪) ತಮ್ಮ ಅಧ್ಯಯನದಲ್ಲಿ ಶಿಕ್ಷಣವು ಒಂದು ಸಾಮಾಜಿಕ ಪ್ರಕ್ರಿಯೇ ಶಿಕ್ಷಣ ಒಂದು ಬೆಳವಣಿಗೆ, ಶಿಕ್ಷಣ ಜೀವನಕ್ಕೆ ಒಂದು ಸಿದ್ಧತೆಯಲ್ಲಾ, ಶಿಕ್ಷಣವೇ ಜೀವನ. ಲೇಖಕರು ಸಾಮಾಜಿಕ ಪ್ರಗತಿ ಆಗಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಎಂದು ಅದರ ಮಹತ್ವ ವಿವರಿಸಿದ್ದಾರೆ. ಸಾಮಾಜಿಕವಾಗಿ ಜನರು ಅಭಿವೃದ್ಧಿಯಾದರೆ ಮಾತ್ರ ಆರ್ಥಿಕ ಅಭಿವೃದ್ಧಿ ಸುಗಮವಾಗಿ ನಡೆಯುತ್ತದೆ. ಇದಕ್ಕೆಲ್ಲಾ ಶಿಕ್ಷಣವೇ ಅಡಿಪಾಯ. ಆದರೆ ಇವರು ಕೇವಲ ಸಾಮಾಜಿಕ ಜೀವನಕ್ಕೆ ಮಾತ್ರ ಶಿಕ್ಷಣವನ್ನು ಮೂಲ ಎಂದು ಸೀಮಿತ ಗೊಳಿಸಿದ್ದಾರೆ.[೩]

ಹಕ್ ಅವರು (೧೯೯೮) ತಮ್ಮ ಅಧ್ಯಯನದಲ್ಲಿ ಶಿಕ್ಷಣವು ಆರ್ಥಿಕ ಬೆಳವಣಿಗೆ ಬುನಾದಿ ಈ ಹಿನ್ನೆಲೆಯಲ್ಲಿ ಗಮನಿಸಿದ್ದಾರೆ. ಜಪಾನ ಮತ್ತು ಪೂರ್ವ ಏಷ್ಯಯನ್ ರಾಷ್ಟ್ರಗಳ ಅಧಿಕ ಆರ್ಥಿಕ ಬೆಳವಣಿಗೆಗೆ ಮತ್ತು ಅದನ್ನು ಸಂರಕ್ಷಣೆ ಮಾಡುವಲ್ಲಿ ಶಿಕ್ಷಣವು ಪರಿಣಾಮಕಾರಿ ಪಾತ್ರವನ್ನು ನಿರ್ವಹಿಸಿದೆ. ಈ ಲೇಖಕರ ಮಾತು ತುಂಬಾ ಸಮಂಜಸವಾಗಿದೆ. ಏಕೆಂದರೆ ಯಾವುದೇ ದೇಶದ ಆರ್ಥಿಕ ಪ್ರಗತಿಗೆ ಪ್ರಮುಖದಾರಿ ಶಿಕ್ಷಣವೆ ಆಗಿರುತ್ತದೆ. ಯಾವ ದೇಶಗಳು ಶಿಕ್ಷಣದಲ್ಲಿ ಹಿನ್ನಡೆಯಲ್ಲಿರುತ್ತವೆಯೋ ಆ ದೇಶದ ಸಮಾಜಿಕ ಮತ್ತು ಆರ್ಥಿಕವಾಗಿ ಅವುಗಳ ತುಂಬಾ ಹಿಂದೆ ಬಿದ್ದಿರುತ್ತದೆ ಎಂಬುದು ಸತ್ಯವಾದ ವಿಚಾರವಾಗಿದೆ ಎಂದು ಹೇಳಬಹುದು.[೪]

ಶಿಕ್ಷಣವೆಂದರೆ ದೇಹ ಮನಸ್ಸು ಸಂಸ್ಕಾರಗಳ ಸಾಮರ್ಥ್ಯವನ್ನು ಬಲಪಡಿಸುವ ವಿಧಾನ, ಬುದ್ಧಿ ಅಂತಃಕರಣ ಮತ್ತು ಕೌಶಲ್ಯಗಳನ್ನು ಒಂದು ಗೂಡಿಸುವುದು. ತ್ರಿಪಾಠಿಯವರು ಹೇಳಿದ್ದು ಸತ್ಯವಾದ ವಿಚಾರವಾಗಿದೆ. ಶಿಕ್ಷಣದಿಂದಲೇ ಮನುಷ್ಯನ ಜೀವನಶೈಲಿ ಸುಧಾರಿಸುತ್ತದೆ. ಆದರೆ ಬರಿ ಸಂಸ್ಕಾರಗಳಿಂದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಿಲ್ಲವೆಂದು ಹೇಳಬಹುದು. ಯಾವ ಶಿಕ್ಷಣ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಎದುರಾಗುವ ಸಮಸ್ಯೆಗಳನ್ನು ಸರಿಯಾಗಿ ಬಗೆಹರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಯಲ್ಲಿ ಉಂಟುಮಾಡುವ ರೀತಿಯಲ್ಲಿ ಅವನ ಬುದ್ಧಿಶಕ್ತಿಯನ್ನು ಹೊರಗೆಳೆಯುತ್ತದೆಯೋ ಅದು ಮಾತ್ರ ಮೌಲ್ಯವುಳ್ಳದ್ದು, ಎಂದು ಮಹಾತ್ಮ ಗಾಂಧಿಜೀಯವರು ಶಿಕ್ಷಣದ ಅತ್ಯಮುಲ್ಯವಾದ ಮಹತ್ವವನ್ನು ತಿಳಿಸಿದ್ದಾರೆ. ಬಡತನವನ್ನು ಕಡಿಮೆ ಮಾಡುವಲ್ಲಿ ಶಿಕ್ಷಣದ ಪಾತ್ರವು ನಿರ್ಣಾಯಕವಾದುದಾಗಿದೆ. ಸಮಾಜದಲ್ಲಿ ಶಿಕ್ಷಣ ಮಟ್ಟ ಅಧಿಕಗೊಂಡಂತೆ ಬಡತನದ ಪ್ರಮಾಣದಲ್ಲಿ ತೀವ್ರ ಇಳಿಕೆಯಾಗಿರುವುದನ್ನು ಹಲವಾರು ಅಧ್ಯಯನಗಳು ದೃಢಪಡಿಸಿವೆ. ಲೇಖಕರ ಈ ಮಾತು ನಿಜಕ್ಕೂ ಸತ್ಯವಾದ ಸಂಗತಿಯಾಗಿದೆ. ಶಿಕ್ಷಣದ ಪ್ರಾಪ್ತಿಯಲ್ಲಿ ಹೆಚ್ಚಳವಿರುವ ದೇಶಗಳಲ್ಲಿ ಬಡತನ ನಿಜಕ್ಕೂ ಕಡಿಮೆ ಇರುತ್ತದೆ. ಮತ್ತು ಕಡಿಮೆಯಾಗುತ್ತದೆ.

ಶಿಕ್ಷಣ ಪಾತ್ರವು ಗ್ರಾಮೀಣ ಪ್ರದೇಶಲ್ಲಿ ಅಧಿಕವಾಗಿರುತ್ತದೆ. ನೇಪಾಳ, ಮಲೇಷಿಯಾ ಮತ್ತು ಥೈಲ್ಯಾಂಡ್‌ಗಳಲ್ಲಿ ಶಿಕ್ಷಣವು ಸಣ್ಣ ರೈತರ ಕೃಷಿ ಉತ್ಪಾದಕತೆಯ ಹೆಚ್ಚಳಕೆ ಕಾರಣವಾಗಿ ಅದು ಅವರ ಬಡತನದ ಪ್ರಮಾಣವನ್ನು ಕಡಿಮೆಗೊಳಿಸಿದೆ. ಇದು ನಿಜಕ್ಕು ಸತ್ಯಸಂಗತಿಯಾಗಿದೆ. ಶಿಕ್ಷಣದ ಪ್ರಸಾರ ಹಳ್ಳಿಗಳಲ್ಲಿ ಹೆಚ್ಚಾದಂತೆ ಜನರ ತಿಳುವಳಿಕೆ ಸುಧಾರಿಸಿ ಅವರು ತಮ್ಮ ಕೃಷಿಯನ್ನು ವೈಜ್ಞಾನಿಕತೆಗೆ ಅಳವಡಿಸಿಕೊಂಡು ಉತ್ಪಾದನೆಯನ್ನು ಹೆಚ್ಚಾಗಿ ಪಡೆದು ತನ್ನ ಜೀವನಮಟ್ಟವನ್ನು ಸುಧಾರಿಸಿಕೊಳ್ಳುತ್ತಾನೆ. ಇದು ಸತ್ಯ. ನಮ್ಮ ದೇಶದ ಮಹಿಳೆಯರು ಶೋಷಿತರಾಗುತ್ತಿದ್ದಾರೆ. ಸಾಕ್ಷರತಾ ಪ್ರಮಾಣ ಗುರಿ ಮೀರಿ ಸಾಧನೆಯಾಗಿರುವುದಿಲ್ಲ. ಎಲ್ಲಿ ಮಹಿಳೆಯರ ಶಿಕ್ಷಣ ಸುಧಾರಿಸುತ್ತದೆಯೋ ಆ ಪ್ರದೇಶದ ಒಟ್ಟಾರೆ ಶಿಕ್ಷಣದಲ್ಲಿಯೂ ಸಹ ಸುಧಾರಣೆ ಕಂಡುಬರುತ್ತದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂದು ಹೇಳಬಹುದಾಗಿದೆ. ಏಕೆಂದರೆ ತಾಯಿಯೇ ಮೊದಲ ಗುರು. ಏಕೆಂದರೆ ತಾಯಿ ಶಿಕ್ಷಣ ಪಡೆದಿದ್ದರೆ ಮಕ್ಕಳಿಗೆ ಜ್ಞಾನ ನೀಡಿ ಅವರನ್ನು ಶಾಲೆಗೆ ಕಳುಹಿಸುತ್ತಾಳೆ. ಅಲ್ಲದೇ ಕೆಲವೊಂದು ಸಮಯದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ತಾಯಿ ಮಾತ್ರ ಮರಳಿ ಶಾಲೆಗೆ ಕಳುಹಿಸಲು ಸಾಧ್ಯ. ಆದ್ದರಿಂದ ಹೆಣ್ಣ ಅಕ್ಷರಸ್ಥಳಾದರೆ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವೂ ಕೂಡ ಕಡಿಮೆಗೊಳ್ಳುತ್ತದೆ.

ಎಸ್. ವಿ. ರುಹಿಲಾ (೧೯೯೬) ಕಡಿಮೆ ತಲಾವರಮಾನವಿರುವ ಹಲವಾರು ದೇಶಗಳಲ್ಲಿ ಶಿಕ್ಷಣದ ಕಳೆದ ೧೫ ವರ್ಷಗಳಿಂದ ನೋಡಿದಾಗ ತುಂಬಾ ನಿರಾಶಾದಾಯಕವಾಗಿದೆ. ನಮ್ಮ ಭಾರತದಲ್ಲಿಯೂ ಸಹ ಅಷ್ಟರಮಟ್ಟಿಗೆ ವೇಗದ ಬೆಳವಣಿಗೆ ಇರುವುದಿಲ್ಲ. ಭಾರತವು ಬಾಲಕಾರ್ಮಿಕರನ್ನು ಶಾಲೆಗಳತ್ತ ತರಲು ಹೆಚ್ಚಿನ ಶ್ರಮವನ್ನು ವಹಿಸುತ್ತಿಲ್ಲ. ಅದಕ್ಕಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಜಾಸ್ತಿ ಇದೆ. ಸರಕಾರ ಮಕ್ಕಳ ಪಾಲಕರಿಗೆ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡದಿರುವುದರಿಂದ ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲ. ಮತ್ತು ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಕಡ್ಡಾಯ ಮತ್ತು ಉಚಿತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದಿಲ್ಲ. ಶಿಕ್ಷಣದ ನೀತಿಗೆ ಅಧಿಕಾರಿಗಳು ರಾಜಕಾರಣಿಗಳು ಜೊತೆಗೂಡಿ ಹೆಚ್ಚಿನ ಹಣಕಾಸನ್ನು ಒದಗಿಸುತ್ತಿಲ್ಲ. ಹಾಗಾಗಿ ವೇಗದ ಬೆಳವಣಿಗೆ ಆಗುತ್ತಿಲ್ಲ.[೫]

ಜಾರ್ಜ ಮತ್ತು ಮೌರಿನ್ ವರ್ಲ್ಡ್ ಹಾಲ್ (೧೯೮೫) :ಶಿಕ್ಷಣವು ಅಭಿವೃದ್ಧಿಯ ಕೇಂದ್ರ ಬಿಂದು. ಅದಕ್ಕಾಗಿ ಶಿಕ್ಷಣದ ಮೇಲೆ ಸರಕಾರವು ಹೂಡಿಕೆ ಮಾಡಬೇಕು ಅಂದಾಗ ಮಾನವರ ಜೀವನ ಸುಧಾರಿಸಿ ಬಡತನ ನಿವಾರಣೆ ಆಗಿ ಮಾನವ ಬಂಡವಾಳವನ್ನಾಗಿ ನಿರ್ಮಾಣ ಮಾಡುತ್ತದೆ. ಉತ್ಪಾದಕತೆ ಹೆಚ್ಚಾಗಿ ಉತ್ಪಾದನೆ ಸಾಮರ್ಥ್ಯ ಕೂಡ ಹೆಚ್ಚಾಗಿ ಮೂಲ ಸೌಕರ್ಯ ಹೆಚ್ಚಾಗಿ ದೇಶಗಳ ಅಭಿವೃದ್ಧಿ ತಾನಾಗೆ ಆಗುತ್ತದೆ.[೬]

ದೇವಿ (೧೯೮೩) "ಪ್ರಾಬ್ಲಮ್ ಆಫ್ ಡ್ರಾಪ್ ಔಟ್ಸ್ ಇನ್ ಪ್ರೈಮರಿ ಸ್ಕೂಲ್ ಆಫ್ ಮಣಿಪುರ" ರಲ್ಲಿ ಕಂಡುಕೊಂಡಿದ್ದೇನೆಂದರೆ, ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಹೆಣ್ಣು ಮಕ್ಕಳೆ ಗಂಡು ಮಕ್ಕಳಿಗಿಂತ ಜಾಸ್ತಿ, ಮತ್ತು ಶಾಲೆಯಿಂದ ಹೊರಗಿರುವುದಕ್ಕೆ ಬಡತನ, ವಸತಿ ವರ್ಗಾವಣೆ, ಅನುತ್ತೀರ್ಣತೆ ಮತ್ತು ಪಾಲಕರ ಅಲಕ್ಷತನವೇ ಪ್ರಮುಖ ಕಾರಣಗಳಾಗಿವೆ ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಅದು ನಿಜವಾದ ಕಾರಣಗಳಲ್ಲ. ಇನ್ನೇನಾದರೂ ಕಾರಣಗಳು ಇರಬಹುದು.[೭]

ಆಥೇಕೆಡತ್ ಕೆ.ಕೆ. (೧೯೯೮) ಅವರು "ಶತಮಾನದ ಅಂಚಿನಲ್ಲಿ ಶಿಕ್ಷಣ" ಎಂಬ ಗ್ರಂಥದಲ್ಲಿ ಶಾಲೆಗೆ ಹೋಗುವ ಮಕ್ಕಳ ಕುಟುಂಬದ ಆರ್ಥಿಕ ಸ್ಥಿತಿಗೂ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಗೂ ಅನ್ಯೂನ್ಯವಾದ ಸಂಬಂಧವಿರುವುದನ್ನು ಗುರುತಿಸಿದ್ದಾರೆ. ಮುಂಬೈನ ಮಹಾನಗರ ಪಾಲಿಕೆಯು ಶಾಲೆಗೆ ಹೋಗುವ ಮಕ್ಕಳ ಅಪೌಷ್ಠಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಕಾಯಿಲೆಗಳು ಕೆಲವು ಮಾಹಿತಿಗಳನ್ನು ಒದಗಿಸುವುದನ್ನು ಕೂಡ ಥೇಕ್ಡತ್ರವರು ವಿವರಿಸಿದ್ದಾರೆ. ಪ್ರಾಥಮಿಕ ಶಾಲೆಗೆ ಹೋಗುವ ೩.೦೫ ಲಕ್ಷ ಮಕ್ಕಳನ್ನು ಪರೀಕ್ಷಿಸಿದ ವೈದ್ಯರು ಅಪೌಷ್ಠಿಕತೆ ಮತ್ತು ನಿರ್ಲಕ್ಷತೆಯಿಂದ ಸುಮಾರು ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇದರಲ್ಲಿ ಶೇಕಾಡ ೨೬.೭೬ರಷ್ಟು ಮಕ್ಕಳ.[೮]

ಟಿ. ಆರ್. ಚಂದ್ರಶೇಖರ (೨೦೦೬) ಅವರು ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ ಎಂಬ ಲೇಖನದಲ್ಲಿ ಪ್ರಾದೇಶಿಕ ಸ್ವರೂಪ, ಜಾತಿ ಮತ್ತು ಲಿಂಗಸಂಬಂಧಿ ಸ್ವರೂಪ ಎಂಬ ಆಯಾಮಗಳನ್ನು ಚರ್ಚಿಸಿದ್ದಾರೆ. ಮುಂದುವರಿಸು ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಸಮಸ್ಯೆಗೆ ಅನೇಕ ಕಾರಣಗಳನ್ನು ಗುರುತಿಸುತ್ತಾ ಸಾಮಾಜಿಕ, ರಾಜಕೀಯ ಮತ್ತು ಚಾರಿತ್ರಿಕ ಕಾರಣಗಳು ಮುಖ್ಯ ಎಂದಿದ್ದಾರೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿ ಊಟ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವದರಿಂದ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವು ಸ್ವಲ್ಪ ಕಡಿಮೆ ಯಾದರೂ ಸಮುದಾಯದ ವಲಸೆಗಳು ಪರಿವರ್ತನೆಯಾಗುವ ಪ್ರದೇಶಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ಕಡಿಮೆಗೊಳಿಸಲು ಉದ್ಯೋಗ ಭದ್ರತೆಯು ಪ್ರಮುಖವಾಗುತ್ತದೆ ಎಂಬುದನ್ನು ಲೇಖಕರು ಪ್ರತಿಪಾದಿಸಿದ್ದಾರೆ.

ಭಾರತದಲ್ಲಿ 'ಸರ್ವರಿಗೂ ಶಿಕ್ಷಣ' ಎಂಬ ನೀತಿಯು ೧೯೪೭ ರಿಂದ ಅನುಷ್ಠಾನದಲ್ಲಿದ್ದರೂ ಶಿಕ್ಷಣದ ಸಾರ್ವತ್ರೀಕರಣ ಸಂಪೂರ್ಣವಾಗಿಲ್ಲ, ಶಿಕ್ಷಣದ ಸಾರ್ವತ್ರೀಕರಣ ಅನೇಕ ಪ್ರಯತ್ನಗಳ ಫಲವಾಗಿ ೨೦೦೧–೦೨ರಲ್ಲಿ ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇ. ೪೦.೦೭ ರಿಂದ ಶೇ ೩೫.೦೬ಕ್ಕೆ ಕಡಿಮೆಯಾಗಿದ್ದರೂ ೬ ರಿಂದ ೧೪ ವರ್ಷದ ವಯಸ್ಸಿನ ಸುಮಾರು ೨೩ ದಶಲಕ್ಷ ಮಕ್ಕಳು ಶಾಲೆಯಿಂದ ಹೊರಗಡೆಯಿದ್ದಾರೆ, ಹಾಗೂ ಹೆಚ್ಚಿನ ಸಂಖ್ಯೆಯ ಮಕ್ಕಳು ೫ನೇ ತರಗತಿಯಲ್ಲಿ ಪುನಾವರ್ತನೆಯಾಗುತ್ತಿದ್ದಾರೆಂಬುದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ೨೦೦೩–೦೪ರ ವರದಿಯಿಂದ ತಿಳಿದುಬರುತ್ತದೆ. ೬–೧೪ ವರ್ಷದ ವಯಸ್ಸಿನ ಶೇ.೩೦ರಷ್ಟು ಮಕ್ಕಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳೆ ಶಾಲೆಗೆ ಹಾಜರಾಗದಿರುವುದನ್ನು ೧೯೮೬–೮೭ರ ರಾಷ್ಟ್ರೀಯ ಮಾದರಿಯ ಸಮೀಕ್ಷೆ ಗುರುತಿಸಿದೆ.

ಅಂಜು. ಜಿ (೨೦೦೨) ಅವರು "ಭಾರತದಲ್ಲಿ ಲಿಂಗ–ಸಮಾನತೆ" ಎನ್ನುವ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣದಲಲಿ ಲಿಂಗ–ಸಮಾನತೆ ತರುವ ಉದ್ದೇಶದಿಂದ ಸರ್ಕಾರ ಹಲವಾರ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಅದು ವಿಫಲವಾಗಿದೆ. ಈ ಕಾರ್ಯಕ್ರಮಗಳು ಅಥವಾ ಯೋಕನೆಗಳು ಸಾಧಿಸಬೇಕೆಂದು ಇಟ್ಟುಕೊಂಡತಹ ಗುರಿಯನ್ನು ತಲುಪಿಲ್ಲ. ಇಂತಹ ಯೋಜನೆಗಳು ವಿನ್ಯಾಸ ಹಾಗೂ ಅನುಷ್ಠಾನದಲ್ಲಿ ಫಲಾನುಭವಿಗಳ ಕೊರತೆಯಿಂದ ಯಶಸ್ವಿ ಗೊಳಿಸುವಲ್ಲಿ ವಿಫಲವಾಗಿದೆ. ಇನ್ನೂ ಅನೇಕ ಯೋಜನೆಗಳು ಅನುಷ್ಠಾನದಲ್ಲಿನ ಲೋಪದೋಷ ಗಳಿಂದ ಯಶಸ್ವಿಯಾಗಿಲ್ಲ ಎಂದು ತಿಳಿಸಿದ್ದಾರೆ ಇದಕ್ಕೆ ಹೊಸ ಹೊಸ ಯೋಜನೆಗಳನ್ನು ರೂಪಿಸಿ. ಅನುಷ್ಠಾನಕ್ಕೆ ತರುವ ಜೊತೆಯಲ್ಲಿಯೇ ಮಹಿಳೆಯರ/ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚು ಮಾಡಬೇಕು ಜೊತೆಗೆ ಶಾಲಾ ಹಂತದಲ್ಲಿಯೇ ಲಿಂಗ ಅಸಮಾನತೆ

ಯಿಂದ ಉಂಟಾಗುವ ಶೋಷಣೆಯ ವಿವಿಧ ಮುಖಗಳನ್ನು ತಿಳಿಸಬೇಕು ಆ ಮೂಲಕ ಮಹಿಳಾಭಿವೃದ್ಧಿಗಾಗಿ ರೂಪಿಸಿ ಆಚರಣೆಗೆ ತರುತ್ತಿರುವ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಮಹಿಳೆಯರನ್ನು ಜಾಗೃತಿ ಮೂಡಿಸುವ ಅಗತ್ಯತರಯನ್ನು ಒತ್ತಿ ಹೇಳಿದ್ದಾರೆ.[೧೦]

ಮುಜಾಮಿಲ್ ಜಾನ್ ಅವರು. 'ಇನ್‌ಫ್ಯಾಕ್ಟ್ ಆಫ್ ಎಜುಕೇಷನ್' ಎಂಬ ಕೃತಿಯಲ್ಲಿ ಶಿಕ್ಷಣವು ಸಮಾಜ, ಇತಿಹಾಸ, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಂತ್ರಜ್ಞಾನ ಮುಂತಾದ ಎಲ್ಲಾ ಅಂಶಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತದೆ. ಶಿಕ್ಷಣ ವ್ಯಕ್ತಿಗೆ ಜ್ಞಾನ ಹಾಗೂ ತಿಳಿವಳಿಕೆಯನ್ನು ನೀಡುತ್ತದೆ. ಮುಖ್ಯವಾಗಿ ವ್ಯಕ್ತಿ ತನ್ನನ್ನು ತಾನು ತಿಳಿಯಲು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು, ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅತ್ಯಗತ್ಯ. ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಾಮರಸ್ಯ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಲು ಶಿಕ್ಷಣ ಅಗತ್ಯ ಹಾಗೂ ಅನಿವಾರ್ಯ ಎಂದು ತಿಳಿಯಲಾಗಿದೆ.

ಕಾಮತ್ ಜೋತ್ಸ್ಲ? ಅವರು. 'ಮಹಿಳೆಯರು: ಒಂದು ಅಧ್ಯಯನ' ಎಂಬ ಲೇಖನದಲ್ಲಿ ಈ ಶತಮಾನದ ಕೊನೆಯಲ್ಲಿ ಭಾರತೀಯ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯ ಗಂಡಸರಿಗೆ ಸರಿಸಮಾನ ಶಿಕ್ಷಣ ಪಡೆದು ವಿವಿಧ ರಂಗಗಳಲ್ಲಿ ಮುಂದುವರಿಯುತ್ತಿರುವುದನ್ನು ಅಖಂಡ ದೇಶದ ಪ್ರಗತಿಗೆ ಹೋಲಿಸಿದಾಗ ಪ್ರಗತಿಪರ ಮಹಿಳೆಯರ ಸಂಖ್ಯೆ ಅತ್ಯಲ್ಪವೆಂದೇ ಹೇಳಬಹುದಾಗಿದೆ ಎಂದಿದ್ದಾರೆ. ಇತ್ತೀಚಿನ ಸಮೀಕ್ಷೆಯಲ್ಲಿ ಪತಿಯ ಮರಣದಿಂದ ನಿರ್ಗತಿಕರಾಗಿರುವ ಹೆಣ್ಣುಮಕ್ಕಳ ಸಂಖ್ಯೆ ವರ್ಷಕ್ಕೆ ೧೦ ಲಕ್ಷದಷ್ಟಿದೆ. ಆಪತ್‌ಕಾಲಕ್ಕೆ ಮಾಡಿಕೊಳ್ಳುವಂತಹ ಯಾವ ಶಿಕ್ಷಣವೂ ಹುಡುಗಿಯರಿಗೆ ದೊರೆಯುವಂತಿಲ್ಲ. ಸರಕಾರವಾದರೂ ಎಲ್ಲರಿಗೂ ಎಲ್ಲ ಕಾಲಕ್ಕೆ ಬಯಸುವ ನೌಕರಿಗಳನ್ನು ಕೊಡಮಾಡುವ ಸ್ಥಿತಿಯಲ್ಲಿ ಇಲ್ಲ. ಶಿಕ್ಷಣದೊಂದಿಗೆ ಶ್ರಮ, ಗೌರವದ ಕಲ್ಪನೆ ಸೇರ್ಪಡೆಯಾಗದೆ, ದೈಹಿಕಶ್ರಮದಿಂದ ಜೀವಿಸುವ ವರ್ಗದಂತೆ ಸ್ತ್ರೀಯರು ಅಕ್ಷರಾಭ್ಯಾಸ ದೊರೆತೊಡನೆ ಕೌಟುಂಬಿಕ ವೃತ್ತಿಗಳನ್ನು ಕೈಗೊಳ್ಳುವುದನ್ನು ಕೀಳಾಗಿ ಭಾವಿಸುತ್ತಾರೆ. ಸರ್ಕಾರಿ ನೌಕರಿಯೆಂದೇ ಸಮಾಜದಲ್ಲಿ ಮನ್ನಣೆ ತರುತ್ತದೆಂದು ನಂಬುವವರೇ ಅಲ್ಲದೆ ನಗರ ಮತ್ತು ಗ್ರಾಮಗಳ ಜೀವನದಲ್ಲಿ ಅಪಾರ ತಾರತಮ್ಯವಿದ್ದು ಈಗಲೂ ಅದು ಹೆಚ್ಚುತ್ತಲೇ ಇದೆ. ಆದರೆ ನಗರ ಮಹಿಳೆಯರ ವೃತ್ತಿ ಪ್ರವೃತ್ತಿಗಳು ಅವಕಾಶ ಪಡೆಯುತ್ತಿದ್ದರೆ, ಗ್ರಾಮಸ್ಥ ಮಹಿಳೆಯರಿಗೆ ಅವಕಾಶವೇ ಇಲ್ಲ. ದೇಶದ ಲಕ್ಷಗಟ್ಟಲೆ ಗ್ರಾಮೀಣ ಮಹಿಳೆಯರ ಸ್ಥಾನಮಾನ ಮತ್ತು ಶೈಕ್ಷಣಿಕ ಪ್ರಗತಿ ಅತ್ಯಂತ ನಿರಾಶಾದಾಯಕವಾಗಿಯೇ ಉಳಿದಿದೆ. ಇಂತಹ ಶಿಕ್ಷಣದ ಓಸ್ನಡೆಯನ್ನು ಸರಿದೂಗಿಸುವ ಪ್ರಯತ್ನ ವಿವಿಧ ವಲಯಗಳಿಂದ ಆಗಬೇಕಾದ ಅಗತ್ಯವಿದೆ.

ಪ್ರಸ್ತುತ ಶಿಕ್ಷಣವನ್ನು ನಮ್ಮ ಸಂವಿಧಾನದ ಸಹಕಾರಿ ನೀತಿಯ ನಿರ್ದೇಶಕ ಸೂತ್ರಗಳಲ್ಲಿ ಕಲ್ಯಾಣ ರಾಷ್ಟ್ರ ಪರಿಕಲ್ಪನೆಯ ಭಾಗವಾಗಿ ಸೇರ್ಪಡೆಗೊಳಿಸಲಾಗಿದೆ. ಹೀಗಾಗಿ ಭಾರತ ಸರ್ಕಾರವು ೧೪ ವರ್ಷಗಳವರೆಗಿನ ಪ್ರಾಯದ ಎಲ್ಲಾ ಮಕ್ಕಳಿಗೂ ಶಿಕ್ಷಣ ನೀಡುವ ಸಾರ್ವತ್ರಿಕ ಉದ್ದೇಶ ಹೊಂದಿದೆ. ಈ ಮಾತು ನಮ್ಮ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. ಹೀಗೆ ಭಾರತೀಯ ಸಂವಿಧಾನವು ಮೊಟ್ಟ ಮೊದಲ ಸಲಕ್ಕೆ ಲಿಂಗತಾರತಮ್ಯವಿಲ್ಲದೆ ಶಿಕ್ಷಣ ಅವಕಾಶಗಳನ್ನು ಗಂಡು ಹೆಣ್ಣು ಮಕ್ಕಳೀರ್ವರಿಗೂ ಕಲ್ಪಿಸಿತು. ಭಾರತೀಯ ಶಿಕ್ಷಣಪದ್ಧತಿಯಲ್ಲಿ ಪುರುಷರಿಗೆ ನೀಡಿದ ಶಿಕ್ಷಣಕ್ಕೆ ಪ್ರೋತ್ಸಾಹದ ಮಟ್ಟವನ್ನು ಇಂದಿಗೂ ಮಹಿಳೆಯರು ತಲುಪದಿರುವುದರಿಂದ ಶಿಕ್ಷಣದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣದೆ ಮಹಿಳೆಯರು ಇಂದಿಗೂ ಸಬಲೀಕರಣ ಗೊಳ್ಳದಿರುವುದನ್ನು ನೋಡಲಾಗಿದೆ. ಆದ್ದರಿಂದ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕರ್ನಾಟಕದ ಮಾನವ ಅಭಿವೃದ್ಧಿ ವರದಿ (೨೦೦೫) ಈ ವರದಿಯಲ್ಲಿ ಕಂಡುಕೊಂಡ ಪ್ರಕಾರ ಕರ್ನಾಟಕದಲ್ಲಿ ಗುಲ್ಬರ್ಗಾ ವಿಭಾಗವು ಶೈಕ್ಷಣಿಕ ಮೂಲ ಸೌಕರ್ಯಗಳ ಸೂಚ್ಯಂಕದಲ್ಲಿ ಮತ್ತು ಮಕ್ಕಳ ಫಲಿತಾಂಶ ಪಡೆಯುವಿಕೆಯಲ್ಲಿ ತುಂಬಾ ಕೆಳಮಟ್ಟದಲ್ಲಿದೆ. ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯಲ್ಲಿ ಇತರೆ ವಿಭಾಗಗಳಿಗಿಂತ ತುಂಬಾ ಹೆಚ್ಚಾಗಿದೆ.[೧೧]

ಮೇಲಿನ ಎಲ್ಲಾ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಈ ಕೆಳಗಿನ ಪ್ರಶ್ನೆಗಳನ್ನು ಕಂಡುಕೊಳ್ಳಲಾಗಿದೆ.

೨. ಸಂಶೋಧನಾ ಪ್ರಶ್ನೆಗಳು

೧) ಪ್ರಾಥಮಿಕ ಶಿಕ್ಷಣದ ಬೆಳವಣಿಗೆ ಇಡೀ ರಾಜ್ಯದಲ್ಲಿ ಏಕರೂಪದಲ್ಲಿ ಯಾಕಿಲ್ಲ ಮತ್ತು ವಿಭಾಗಗಳ ನಡುವೆ ಭಿನ್ನತೆ ಯಾಕಿದೆ? ಇದಕ್ಕೆ ಯಾವ ಕಾರಣಗಳಿವೆ ಎಂಬುದು ನನ್ನ ಮುಖ್ಯ ಪ್ರಶ್ನೆಯಾಗಿದೆ.

೨) ಸರಕಾರ ಎಷ್ಟೊಂದು ಶೈಕ್ಷಣಿಕ ಕಾರ್ಯಕ್ರಮಗಳ ಮುಖಾಂತರ ಪೂರೈಕೆ ಮಾಡಿದಾಗ್ಯೂ ಸಂಪೂರ್ಣವಾಗಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ ಅದು ಯಾಕೆ?

೩) ಸರಕಾರದ ನೀತಿಗಳಲ್ಲಿ ದೋಷವಿದೆಯಾ? ಅನುಷ್ಠಾನದಲ್ಲಿ ತೊಂದರೆ ಇದೆಯಾ? ಮತ್ತು ಜನರು ಪಡೆದುಕೊಳ್ಳುವಿಕೆಯಲ್ಲಿ ವಿಫಲತೆ ಇದೆಯಾ? ಎಂಬುದು ನನ್ನ ಪ್ರಶ್ನೆಯಾಗಿದೆ.

೪) ಗುಲ್ಬರ್ಗಾ ವಿಭಾಗವು ಇತರೆ ವಿಭಾಗಳಿಗಿಂತ ಹಿಂದಿರುವುದು ಯಾಕೆ? ಎಂಬುದೇ ನನ್ನ ಪ್ರಮುಖ ಸಮಸ್ಯೆಯಾಗಿದೆ?

ಈ ಎಲ್ಲಾ ಸಾಹಿತ್ಯಕ ಅಧ್ಯಯನ ಹಾಗೂ ಈ ಸಮಸ್ಯೆಗಳ ಆಧಾರದ ಮೇಲೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲವು ಸಮಸ್ಯೆಗಳು ಹುಟ್ಟಿಕೊಳ್ಳುವುದು ಸಹಜವಾಗಿದೆ. ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗನುಸಾರ ಶಿಕ್ಷಣದ ಹಿಂದುಳಿದಿರುವಿಕೆಯನ್ನು, ಶಿಕ್ಷಣದ ಅಂತರವನ್ನು ಕಾಣಬಹುದಾಗಿದೆ. ಸಮಾನ ಶಿಕ್ಷಣನೀತಿ ಇದ್ದರೂ ಗ್ರಾಮೀಣ ಪ್ರದೇಶದ ಮತ್ತು ನಗರ ಪ್ರದೇಶದ ಮಕ್ಕಳ ಶಿಕ್ಷಣದಲ್ಲಿ ಅಂತರಗಳಿವೆ. ಪರಿಶಿಷ್ಟಜಾತಿಯ ಶಿಕ್ಷಣ ಪ್ರಮಾಣ ಸಾಮಾನ್ಯ ಮಹಿಳೆಯರ ಶಿಕ್ಷಣದ ನಡುವೆ ಅಗಾಧವಾದ ಅಂತರವೇಕೆ ಉಂಟಾಗುತ್ತಿದೆ? ಏಕ ರೀತಿಯ ಶಿಕ್ಷಣ ಮಾಧ್ಯಮವಿದ್ದರೂ ಆಂಗ್ಲ ಮತ್ತು ಕನ್ನಡ ಮಾಧ್ಯಮವೆಂಬ ಭಿನ್ನ ರೀತಿಯ ಶಿಕ್ಷಣ ಮಾಧ್ಯಮಗಳೇಕೆ? ಹೆಣ್ಣುಮಕ್ಕಳಿಗಾಗಿಯೇ ಪ್ರತ್ಯೇಕ ವಿವಿಧ ಅನುಷ್ಠಾನಗಳಿದ್ದರೂ, ವಿವಿಧ ಸಮುದಾಯ ಗ್ರಾಮೀಣ ಮತ್ತು ನಗರಗಳ ಮಕ್ಕಳಲ್ಲಿ ಶಿಕ್ಷಣದ ಅಂತರ, ತಾರತಮ್ಯವೇಕೆ? ಈ ಎಲ್ಲಾ ಸಮಸ್ಯೆಗಳಿಗೆ ಕಾರಣ ಮತ್ತು ಉತ್ತರ ಹುಡುಕುವ ಸಲುವಾಗಿ ಕೆಳಗಿನ ಉದ್ದೇಶಗಳನ್ನಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೩. ಅಧ್ಯಯನದ ಉದ್ದೇಶಗಳು

೧. ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ಸ್ಥಿತಿಗತಿಯನ್ನು ಗುರುತಿಸಲಾಗಿದೆ.

೨. ಪ್ರಾಥಮಿಕ ಶಿಕ್ಷಣದಲ್ಲಿ ಇರುವಂತಹ ಶಾಲಾ ಕಾರ್ಯಕ್ರಮಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

೩. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಸರಕಾರ ತೆಗೆದುಕೊಂಡ ಕ್ರಮಗಳನ್ನು ವಿಶ್ಲೇಷಿಸಲಾಗಿದೆ.

೪. ಪ್ರಾಥಮಿಕ ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದ ಗುಲ್ಬರ್ಗಾ ವಿಭಾಗವನ್ನು ಕುರಿತು ಅಧ್ಯಯನ ಮಾಡುವುದರೊಂದಿಗೆ ಪ್ರಸ್ತುತ ಪ್ರಮುಖ ಧ್ಯೇಯವಾಗಿ ಕಾಣಲಾಗಿದೆ.

ಈ ಮೇಲಿನ ಉದ್ದೇಶಕ್ಕೆ ಅನುಗುಣವಾಗಿ ಪರಿಹಾರ ಕಂಡುಕೊಳ್ಳುವುದಕ್ಕೆ ಅನುಕೂಲಕರ ರೀತಿಯಲ್ಲಿ ಅಧ್ಯಯನ ವಿಧಾನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಇಂಪಿರಿಕಲ್ ಅಧ್ಯಯನವಾಗಿದೆ. ಸಮಾಜ-ವಿಜ್ಞಾನ ಅಧ್ಯಯನಗಳಲ್ಲಿ, ಅನೇಕ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಅವುಗಳಲ್ಲಿ ಸಾಂಪ್ರದಾಯಿಕ ವಿಧಾನಗಳಾದ ಚಾರಿತ್ರಿಕ ವಿಧಾನ, ಪರಿಣಾಮ ವಿಧಾನ, ವಿವರಣಾತ್ಮಕ ವಿಧಾನ, ವಿಶ್ಲೇಷಣಾತ್ಮಕ ವಿಧಾನಗಳು ಸಾಮಾನ್ಯವಾಗಿ ಹಿಂದಿನಿಂದ ಬಳಸಿಕೊಂಡು ಬಂದ ವಿಧಾನಗಳಾಗಿವೆ. ಆದರೆ ಅರ್ಥಗ್ರಹಣ

ವಿಧಾನವು ಇತ್ತೀಚಿನ ಜನಪ್ರಿಯ ವಿಧಾನವಾಗಿದೆ. ಮುಂದುವರಿದು, ಈ ಪ್ರಸ್ತುತ ಅಧ್ಯಯನಕ್ಕಾಗಿ ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮಾಹಿತಿಯನ್ನು ಪಡೆಯಲು ಪ್ರಶ್ನಾವಳಿ ಮತ್ತು ಸಂದರ್ಶನದ ವಿಧಾನವನ್ನು ಬಳಕೆ ಮಾಡಲಾಗಿದ್ದು, ಇವೆರೆಡರಲ್ಲಿನ ಮಿತಿಗಳನ್ನು ತುಂಬಿಕೊಳ್ಳಲು ಗುಂಪು ಚರ್ಚೆ ವಿಧಾನ ಅಳವಡಿಸಿಕೊಂಡು ಈ ಮಾಹಿತಿಯನ್ನು ಶಾಲಾ ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ಮತ್ತು ಶಾಲಾ ಸುಧಾರಣಾ ಸಮಿತಿಯವರಿಂದ ಸಮಗ್ರ ಮಾಹಿತಿಯನ್ನು ಪಡೆಯಲಾಗಿದೆ. ಸಂಶೋಧನೆಯ ಮತ್ತೊಂದು ವಿಧಾನವಾದ ದ್ವಿತಿಯ ಹಂತದ ಮಾಹಿತಿಯನ್ನು ಗ್ರಂಥಗಳು, ಸಂಶೋಧನಾ ಪ್ರಬಂಧಗಳು, ಲೇಖನಗಳು, ನಿಯತಕಾಲಿಕೆಗಳು ಮತ್ತು ವರದಿಗಳು ಶಿಕ್ಷಣ ಇಲಾಖೆಯಿಂದ ಪ್ರಕಟಣೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿದ ನಂತರ ಪಡೆದಂತಹ ಮಾಹಿತಿಯನ್ನು ಆಧರಿಸಿ ವೈಜ್ಞಾನಿಕ ರೀತಿಯಿಂದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕದ ಅತೀ ಹಿಂದುಳಿದ ಗುಲ್ಬರ್ಗಾ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ವಿಭಾಗದಲ್ಲಿ ಬರುವಂತಹ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅತೀ ಹಿಂದುಳಿದ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಕೆಲವು ತಾಲೂಕಗಳನ್ನು ಆರಿಸಿಕೊಂಡು, ಅದರಲ್ಲಿ ಬರುವ ಗ್ರಾಮ ಪಂಚಾಯತಿಗಳ ಆಧಾರದ ಮೇಲೆ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲಿ ಗ್ರಾಮ ಪಂಚಾಯತಿಗಳನ್ನು ಆರಿಸಿಕೊಂಡ ಅದರ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ಅಧ್ಯಯನವನ್ನು ಪೂರ್ಣಗೊಳಿಸಿದ್ದೇನೆ. ಅದರಲ್ಲಿ ಲಿಂಗ ಆಧರಿಸಿ ಗಂಡು ಮತ್ತು ಹೆಣ್ಣುಮಕ್ಕಳ ಶಿಕ್ಷಣ ಮಟ್ಟವನ್ನು ಅಧ್ಯಯನ ಮಾಡುವುದಲ್ಲದೇ ಜಾತಿವಾರು ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳನ್ನು ವಿಂಗಡಿಸಿ ಈ ಅಧ್ಯಯನವನ್ನು ಮಾಡಲಾಗಿದೆ.

ಈ ರೀತಿಯಾಗಿ ಪ್ರಾಥಮಿಕ ಮಾಹಿತಿಯನ್ನು ಪ್ರತಿಯೊಂದು ಶಾಲೆಗೆ ಭೇಟಿ ನೀಡಿ ಕುಟುಂಬಗಳು, ಶಿಕ್ಷಕರು ವಿವಿಧ ಸಮಿತಿಯ ಸದಸ್ಯರುಗಳು, ಸಂದರ್ಶನ ಚರ್ಚೆ ಮತ್ತು ಕ್ಷೇತ್ರ ಕಾರ್ಯದ ಮೂಲಕ ಮಾಹಿತಿಯನ್ನು ಕಲೆಹಾಕಿ ಗ್ರಾಮಗಳ ಆರ್ಥಿಕ ಚಟುವಟಿಕೆ ಭೌಗೋಳಿಕ ಪರಿಸರ, ಸಾಮಾಜಿಕ ಸ್ಥಿತಿಗತಿ, ಸಾಕ್ಷರತೆಯ ಮಟ್ಟ ಇನ್ನೂ ಮುಂತಾದ ವಿಷಯಗಳನ್ನು ಆಧರಿಸಿ ಗ್ರಾಮಗಳನ್ನು ಗುರುತಿಸಿಕೊಂಡು ಈ ತರನಾದ ವಿವಿಧ ಮಾಹಿತಿಯನ್ನು ಪಡೆದುಕೊಂಡು ವಿಶ್ಲೇಷಣೆ ಮಾಡಿ ಅಲ್ಲಿ ಇರುವಂತಹ ಸಮಸ್ಯೆಗಳನ್ನು ಗುರುತಿಸಿ ಅದಕ್ಕೆ ಪರಿಹಾರವನ್ನು ನೀಡುವಂತಹ ಕಾರ್ಯವನ್ನು ಮಾಡಲಾಗಿದೆ.

ಅ. ಅಧ್ಯಯನದ ಕ್ಷೇತ್ರ

ನಮ್ಮ ರಾಜ್ಯದಲ್ಲಿ ಗುಲ್ಬರ್ಗಾ ವಿಭಾಗವು ತುಂಬಾ ಹಿಂದುಳಿದಿದೆ. ಇದನ್ನು ನಾವು ಪ್ರಾದೇಶಿಕ ಅಸಮಾನತೆಯ ವರದಿಯಿಂದ ತಿಳಿದುಕೊಳ್ಳಬಹುದು. ಆದುದರಿಂದ ಈ ಹಿಂದುಳಿದ ವಿಭಾಗದಲ್ಲಿನ ಜಿಲ್ಲೆಗಳನ್ನೆ ಆಯ್ಕೆ ಮಾಡಿಕೊಂಡಿದ್ದೇನೆ. ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಆಧಾರದ ಮೇಲೆ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರದೇಶದ ಒಟ್ಟು ಸಾಕ್ಷರತೆ (ಪುರುಷ-ಮಹಿಳೆ) ಮಕ್ಕಳ ಶಿಕ್ಷಕರ ಪರಿಮಾಣ ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ದಾಖಲಾತಿಯ ಪ್ರಮಾಣ ಇವುಗಳನ್ನು ಆಧರಿಸಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಆ. ಅಧ್ಯಯನ ವ್ಯಾಪ್ತಿ

ಈ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಕೇವಲ ಗುಲ್ಬರ್ಗಾ ವಿಭಾಗದ ಮೂರು ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಿಗೆ ಸೀಮಿತಗೊಳಿಸಲಾಗಿದೆ. ಏಕೆಂದರೆ ಸಮಯ ಮತ್ತು ಸಂಪನ್ಮೂಲದ ದೃಷ್ಟಿಯಿಂದ ಮತ್ತು ಅಧಯ್ಯನವನ್ನು ಕೇವಲ ೧ನೇ ತರಗತಿಯಿಂದ ೧೦ನೇ ತರಗತಿವರೆಗೆ ಮಾತ್ರ ಮೀಸಲಿಡಲಾಗಿದೆ. ಅಲ್ಲದೇ ಪ್ರಾಥಮಿಕ ಕ್ಷೇತ್ರ ಕಾರ್ಯಕ್ಕಾಗಿ ಕೇವಲ ಗುಲ್ಬರ್ಗಾ ವಿಭಾಗದ ಒಂದು ಜಿಲ್ಲೆಯಲ್ಲಿ ಎರಡು ತಾಲೂಕುಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಬೇಕೆಂದುಕೊಂಡಿದ್ದೇನೆ. ಸಂಗ್ರಹಿಸಿದ ಮಾಹಿತಿ ಆಧರಿಸಿ ಫಲಿತಗಳನ್ನು ಕಂಡುಕೊಳಬೇಕಾಗಿದೆ. ಶಾಲೆ ಮತ್ತು ಪಂಚಾಯತಿಗಳ ಮಾಹಿತಿಯನ್ನು ಹೆಚ್ಚಾಗಿ ಅವಲಂಬಿಸಬೇಕಾಗಿರುವುದರಿಂದ ಕೆಲವೊಂದು ಅಂಕಿ ಅಂಶಗಳ ಕೊರತೆಯಾಗ ಬಹುದಾಗಿದೆ.

ಇ. ಅಧ್ಯಯನದ ಮಹತ್ವ

ಈ ಪ್ರಸ್ತುತ ಅಧ್ಯಯನದಿಂದ ಅನೇಕ ರೀತಿಯಲ್ಲಿ ಉಪಯೋಗವಾಗುತ್ತದೆ. ಏಕೆಂದರೆ ನಮ್ಮ ಗುಲ್ಬರ್ಗಾ ವಿಭಾಗದ ಜಿಲ್ಲೆಗಳು ತುಂಬಾ ಹಿಂದುಳಿದಿದ್ದು, ಇಲ್ಲಿ ಇರುವಂತಹ ಶಾಲಾ ಕಾರ್ಯಕ್ರಮಗಳಿಂದ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿದೆ. ಶಿಕ್ಷಣದ ಸುಧಾರಣೆ ಎಷ್ಟು ಆಗುತ್ತಿದೆ ಎಂಬುದನ್ನು ತಿಳಿಯಬಹುದಾಗಿದೆ. ಮತ್ತು ಇದನ್ನು ಅನುಸರಿಸಿ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ. ಈ ಅಧ್ಯಯನವು ಸರ್ಕಾರಕ್ಕೆ ಅದರಲ್ಲೂ ಶಿಕ್ಷಣ ಇಲಾಖೆಗೆ ತುಂಬಾ ಉಪಯುಕ್ತವಾಗಬಹುದು. ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಈ ಅಧ್ಯಯನವು ಸಹಕಾರಿಯಾಗಬಹುದು. ಮತ್ತು ಇರುವಂತಹ ಕಾರ್ಯಕ್ರಮಗಳನ್ನು ಸುಧಾರಿಸಲು ಇದು ಸಹಕಾರಿಯಾಗುತ್ತದೆ. ಕೆಲವೊಂದು ಪಂಚಾಯತಿ ಕಾರ್ಯಕ್ರಮಗಳಲ್ಲಿ ಸುಧಾರಣೆಯನ್ನು ಕೈಗೊಳ್ಳಲು ಸಹಕಾರಿಯಾಗಬಹುದು. ಮತ್ತು ಸರಕಾರೇತರ ಸಂಸ್ಥೆಗಳಿಗೂ ಅಧ್ಯಯನವು ಮಾರ್ಗದರ್ಶಿಯಾಗಬಹುದಾಗಿದೆ ಎಂದು ಹೇಳಲಾಗಿದೆ.

ಈ. ಸಮಸ್ಯೆಯ ಆಯ್ಕೆ

ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಸಾಕಷ್ಟು ಸಂಶೋಧನೆಗಳು ಆಗಿರುತ್ತವೆ. ಆದರೆ ಗುಲ್ಬರ್ಗಾ ವಿಭಾಗದ ಜಿಲ್ಲೆಗಳನ್ನು ಇಡಿಯಾಗಿ ಇಟ್ಟುಕೊಂಡು ಸಾಮಾಜಿಕ, ಆರ್ಥಿಕ ಅಂಶ ಮತ್ತು ಲಿಂಗಾಧಾರಿತ ವ್ಯತ್ಯಾಸಗಳನ್ನು ಒಟ್ಟಾಗಿ ಪರಿಗಣಿಸಿ ಶಾಲಾ ಕಾರ್ಯಕ್ರಮಗಳನ್ನು ಮೌಲ್ಯೀಕರಿಸಿ ಜೊತೆಗೆ ಶಾಲೆಯಿಂದ ಹೊರಗೆ ಇರುವ ಮಕ್ಕಳ ನಿಖರ ಕಾರಣಗಳನ್ನು ಅರಿತು ಅವರನ್ನು ಶಾಲೆಗೆ ಮರು ದಾಖಲಾತಿಗೊಳಿಸುವಂತಹ ಕಾರ್ಯ ನಡೆಯಬೇಕಾಗಿದೆ. ಆದ್ದರಿಂದ ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಬೇಕೆಂದುಕೊಂಡಿದ್ದೇನೆ.

ಊ. ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ನೆಲೆಗಳು ಎಂಬ ಶೀರ್ಷಿಕೆಗೆ ಸಂಬಂಧಪಟ್ಟಂತೆ ಸಂಶೋಧನಾ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳಲ್ಲಿ ವಿಷಯಗಳನ್ನು ವಿಭಾಗಿಸಲಾಗಿದೆ. ಮಹಾಪ್ರಬಂಧದ ಮೊದಲ ಭಾಗವಾಗಿ ಪ್ರಸ್ತಾವನೆಯಾಗಿದ್ದು ಅದರಲ್ಲಿ ಸಂಶೋಧನಾ ವಿಷಯದ ಸಮಸ್ಯೀಕರಣ, ಅಧ್ಯಯನದ ಉದ್ದೇಶ, ಅಧ್ಯಯನದ ಮಹತ್ವ, ಅಧ್ಯಯನದ ಸಮಸ್ಯೆಗಳು, ಅಧ್ಯಯನದ ವಿಧಾನಗಳು, ಹಾಗೂ ಅಧ್ಯಯನದ ಅಧ್ಯಾಯನಗಳ ವಿನ್ಯಾಸವನ್ನು ವಿವರಿಸಲಾಗಿದೆ.

ಒಂದನೆಯ ಅಧ್ಯಾಯವು ಅಧ್ಯಯನದ ಸೈದ್ಧಾಂತಿಕ ಚೌಕಟ್ಟು ಹಾಗೂ ಅಧ್ಯಯನಗಳ ಸಮೀಕ್ಷೆ ಇದರಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡ ಕೃತಿಗಳು, ವಿವಿಧ ಪತ್ರಿಕೆಗಳಲ್ಲಿ ಬಂದ ಲೇಖನಗಳು, ವಿವಿಧ ವರದಿಗಳು ಹಾಗೂ ಸಂಶೋಧನಾ ಪ್ರೌಢ ಪ್ರಬಂಧಗಳು, ಸರ್ಕಾರದ ವರದಿಗಳು, ಪುಸ್ತಕ ಮುಂತಾದವುಗಳ ಕುರಿತು ಸಾಹಿತ್ಯ ವಿಮರ್ಶೆ ಮಾಡಲಾಗಿದೆ.

ಎರಡನೆಯ ಅಧ್ಯಾಯವು ಅಧ್ಯಯನದ ಕ್ಷೇತ್ರಪರಿಚಯವಾಗಿದ್ದು ಅದರಲ್ಲಿ ಭೌಗೋಳಿಕ ಅಂಶಗಳು ಮತ್ತು ಹವಾಮಾನ, ನೈಸರ್ಗಿಕ ಸಂಪನ್ಮೂಲ, ಜಿಲ್ಲೆಯ ಜನಸಂಖ್ಯೆ, ಜಿಲ್ಲೆಯ ಆಡಳಿತ, ಜಿಲ್ಲೆಯ ಆರ್ಥಿಕ ವ್ಯವಸ್ಥೆ ಹಾಗೂ ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಪ್ರಾಥಮಿಕ ಶಾಲಾ: ಶಿಕ್ಷಣಕ್ಕಿರುವ ಕಾರ್ಯಕ್ರಮಗಳು ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಹೇಗಿದೆ ಮತ್ತು ಅಭಿವೃದ್ಧಿಗೆ ಅದು ಎಷ್ಟರಮಟ್ಟಿಗೆ ಪೂರಕವಾದ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯನವು ಪ್ರಾಥಮಿಕ ಶಾಲಾ: ಶಿಕ್ಷಣದಲ್ಲಿ ಪಾಲಕರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ, ರಾಜಕೀಯ ಸ್ಥಿತಿಗತಿ ಸಂಬಂಧಿಸಿದಂತೆ ವಿಶ್ಲೇಷಿಸಲಾಗಿದೆ.

ಈ. ಸಮಸ್ಯೆಯ ಆಯ್ಕೆ

ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಸಾಕಷ್ಟು ಸಂಶೋಧನೆಗಳು ಆಗಿರುತ್ತವೆ. ಆದರೆ ಗುಲ್ಬರ್ಗಾ ವಿಭಾಗದ ಜಿಲ್ಲೆಗಳನ್ನು ಇಡಿಯಾಗಿ ಇಟ್ಟುಕೊಂಡು ಸಾಮಾಜಿಕ, ಆರ್ಥಿಕ ಅಂಶ ಮತ್ತು ಲಿಂಗಾಧಾರಿತ ವ್ಯತ್ಯಾಸಗಳನ್ನು ಒಟ್ಟಾಗಿ ಪರಿಗಣಿಸಿ ಶಾಲಾ ಕಾರ್ಯಕ್ರಮಗಳನ್ನು ಮೌಲ್ಯೀಕರಿಸಿ ಜೊತೆಗೆ ಶಾಲೆಯಿಂದ ಹೊರಗೆ ಇರುವ ಮಕ್ಕಳ ನಿಖರ ಕಾರಣಗಳನ್ನು ಅರಿತು ಅವರನ್ನು ಶಾಲೆಗೆ ಮರು ದಾಖಲಾತಿಗೊಳಿಸುವಂತಹ ಕಾರ್ಯ ನಡೆಯಬೇಕಾಗಿದೆ. ಆದ್ದರಿಂದ ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಬೇಕೆಂದುಕೊಂಡಿದ್ದೇನೆ.

ಊ. ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ನೆಲೆಗಳು ಎಂಬ ಶೀರ್ಷಿಕೆಗೆ ಸಂಬಂಧಪಟ್ಟಂತೆ ಸಂಶೋಧನಾ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳಲ್ಲಿ ವಿಷಯಗಳನ್ನು ವಿಭಾಗಿಸಲಾಗಿದೆ. ಮಹಾಪ್ರಬಂಧದ ಮೊದಲ ಭಾಗವಾಗಿ ಪ್ರಸ್ತಾವನೆಯಾಗಿದ್ದು ಅದರಲ್ಲಿ ಸಂಶೋಧನಾ ವಿಷಯದ ಸಮಸ್ಯೀಕರಣ, ಅಧ್ಯಯನದ ಉದ್ದೇಶ, ಅಧ್ಯಯನದ ಮಹತ್ವ, ಅಧ್ಯಯನದ ಸಮಸ್ಯೆಗಳು, ಅಧ್ಯಯನದ ವಿಧಾನಗಳು, ಹಾಗೂ ಅಧ್ಯಯನದ ಅಧ್ಯಾಯನಗಳ ವಿನ್ಯಾಸವನ್ನು ವಿವರಿಸಲಾಗಿದೆ.

ಒಂದನೆಯ ಅಧ್ಯಾಯವು ಅಧ್ಯಯನದ ಸೈದ್ಧಾಂತಿಕ ಚೌಕಟ್ಟು ಹಾಗೂ ಅಧ್ಯಯನಗಳ ಸಮೀಕ್ಷೆ ಇದರಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡ ಕೃತಿಗಳು, ವಿವಿಧ ಪತ್ರಿಕೆಗಳಲ್ಲಿ ಬಂದ ಲೇಖನಗಳು, ವಿವಿಧ ವರದಿಗಳು ಹಾಗೂ ಸಂಶೋಧನಾ ಪ್ರೌಢ ಪ್ರಬಂಧಗಳು, ಸರ್ಕಾರದ ವರದಿಗಳು, ಪುಸ್ತಕ ಮುಂತಾದವುಗಳ ಕುರಿತು ಸಾಹಿತ್ಯ ವಿಮರ್ಶೆ ಮಾಡಲಾಗಿದೆ.

ಎರಡನೆಯ ಅಧ್ಯಾಯವು ಅಧ್ಯಯನದ ಕ್ಷೇತ್ರಪರಿಚಯವಾಗಿದ್ದು ಅದರಲ್ಲಿ ಭೌಗೋಳಿಕ ಅಂಶಗಳು ಮತ್ತು ಹವಾಮಾನ, ನೈಸರ್ಗಿಕ ಸಂಪನ್ಮೂಲ, ಜಿಲ್ಲೆಯ ಜನಸಂಖ್ಯೆ, ಜಿಲ್ಲೆಯ ಆಡಳಿತ, ಜಿಲ್ಲೆಯ ಆರ್ಥಿಕ ವ್ಯವಸ್ಥೆ ಹಾಗೂ ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಪ್ರಾಥಮಿಕ ಶಾಲಾ: ಶಿಕ್ಷಣಕ್ಕಿರುವ ಕಾರ್ಯಕ್ರಮಗಳು ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಹೇಗಿದೆ ಮತ್ತು ಅಭಿವೃದ್ಧಿಗೆ ಅದು ಎಷ್ಟರಮಟ್ಟಿಗೆ ಪೂರಕವಾದ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯನವು ಪ್ರಾಥಮಿಕ ಶಾಲಾ: ಶಿಕ್ಷಣದಲ್ಲಿ ಪಾಲಕರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ, ರಾಜಕೀಯ ಸ್ಥಿತಿಗತಿ ಸಂಬಂಧಿಸಿದಂತೆ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯವು ಪ್ರಾಥಮಿಕ ಶಾಲಾ: ಶಿಕ್ಷಣದಲ್ಲಿ ಶಿಕ್ಷಕರ ಅಭಿಪ್ರಾಯಗಳು ಇದರಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾದೇಶಿಕವಾಗಿ ಭಿನ್ನತೆಯಿಂದ ಕೂಡಿರುವುದಕ್ಕೆ ಕಾರಣಗಳನ್ನು ಕುರಿತು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯನವು ಅಧ್ಯಯನದ ಫಲಿತಗಳು ಹಾಗೂ ಪರಿಹಾರೋಪಾಯಗಳನ್ನು ಎಂಬ ಶೀರ್ಷಿಕೆಯಾಗಿದ್ದು ಒಟ್ಟಾರೆ ಅಧ್ಯಯನದ ಫಲಿತಗಳ ಕುರಿತು ವಿವರಿಸಲಾಗಿದೆ.

ಕೊನೆಯದಾಗಿ ಉಪಸಂಹಾರ, ಅನುಬಂಧಗಳು, ಪರಾಮರ್ಶನ ಗ್ರಂಥಗಳು, ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ ಹಾಗೂ ಛಾಯಾಚಿತ್ರಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. ವಾದ್ವಾನಿ. ಎಂ.ಆರ್., ಎಲ್. ಡಿಸೋಜಾ., ಶಿಕ್ಷಣ ಮತ್ತು ಅಸಮತೋಲನ, ಇ.ಪಿ.ಡಬ್ಲೂ. ವಾಲ್ಯೂಮ ನಂ: ಪಿ.ಪಿ.೨೨-೨೬, ೧೯೮೦, ಪು. ೨೨೮

೨. ಗ್ರೋವರ್ ಬಿ.ಎಲ್., ಎನ್‌ರೋಲಿಂಗ್ ಆ್ಯಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಸ್ಕೂಲ್ ಎ ಫಿಲ್ಡ್ ಸರ್ವೆ ಇನ್ ಇಸ್ಟನ್ ಸ್ಲಮ್ ಆಫ್ ಕೊಲ್ಕತ್ತ, ಇ.ಪಿ.ಡಬ್ಲೂ., ವ್ಯಾಲ್ಯೂಮ್ ನಂ: ಎಕ್ಸ್. ಎಲ್.ವಿ.ಐ ನಂ೧೧., ೧೯೮೩, ಪು. ೩೫೦

೩. ಜಾನ್ ಡ್ಯೂಯಿ, ಯೋಜನಾ, ಜನವರಿ-೧೯೯೪, ಪುಟ. ೧೬

೪. ಹಕ್- ೧೯೯೮, ಪು-೨೬

೫. ಆರ್.ಸಿ. ತ್ರಿಪಾಠಿ, ಯೋಜನಾ ಜನವರಿ-೧೯೯೪

೬. ದ್ವಾರಕನಾಥ ಯೋಜನಾ ೨೦೦೦, ಪು. ೫

೭. ಫೀಲ್ಡ್ಸ್, ರೈಟ್ ಟು ಎಜ್ಯುಕೇಶನ್ ಆ್ಯಕ್ಟ್ ಆ್ಯಂಡ್ ಪಬ್ಲಿಕ್-ಪ್ರೈವೆಟ್ ಪಾರ್ಟ್ನರ್‌ಷೀಪ್: ಇ.ಪಿ.ಡಬ್ಲೂ ವೊ.ನಂಎಕ್ಸ್. ಎಲ್. ವಿ. ಐ ನಂ೧೧. ಪು. ೭೮-೮೦., ೧೯೮೦.

೮. ಹಕ್-೧೯೯೮, ಪು. ೨೯.

೯. ಎಸ್.ವಿ. ರುಹಿಲಾ, ೧೯೯೬,

೧೦. ಜಾರ್ಜ ಮತ್ತು ಮಾರಿನ್ ವುಡ್ ಹಾಲ್, ಎಜ್ಯುಕೇಶನ್ ಫಾರ್ ಡೆವಲಪ್‌ಮೆಂಟ್ ಆನ್ ಇನ್ವೆಸ್ಟ್‌ಮೆಂಟ್ ಚ್ವಾಯ್ಸ್, ವರ್ಲ್ಡ್‌ಬ್ಯಾಂಕ್ ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್, ೧೯೮೫.

೧೧. ಕರ್ನಾಟಕದ ಮಾನವ ಅಭಿವೃದ್ಧಿ ವರದಿ. ೨೦೦೫. ಬೆಂಗಳೂರು.

ಅಧ್ಯಾಯ ಒಂದು

ಅಧ್ಯಯನ ಸೈದ್ಧಾಂತಿಕ ಚೌಕಟ್ಟು ಮತ್ತು ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಸೈದ್ಧಾಂತಿಕ ಚೌಕಟ್ಟು

ಶಿಕ್ಷಣದ ಅಭಿವೃದ್ಧಿಯನ್ನು ನಾವು ಅರ್ಥಶಾಸ್ತ್ರದ ಪೂರೈಕೆ ಮತ್ತು ಬೇಡಿಕೆಯ ಸಾಮಾನ್ಯ ನಿಯಮಕ್ಕೆ ಅನ್ವಯಿಸಿ ನೋಡಿದಾಗ ಅದರ ಸಮಸ್ಯೆ ಎಷ್ಟಿದೆ ಎಂಬುದು ಅರ್ಥವಾಗುತ್ತದೆ. ಸರಕಾರ ಶೈಕ್ಷಣಿಕ ಸೌಲಭ್ಯಗಳ ಪೂರೈಕೆ ಜಾಸ್ತಿ ಮಾಡಿದ್ದರೂ ಕೂಡ ಕಲಿಯುವವರ ಬೇಡಿಕೆ ಜಾಸ್ತಿ ಆಗುತ್ತಿಲ್ಲ. ಅದಕ್ಕೆ ಏನು? ಕಾರಣಗಳಿರಬಹುದು ಎಂಬುದು ದೊಡ್ಡ ಸಮಸ್ಯೆ ಯಾಗಿದೆ. ಮಕ್ಕಳನ್ನು ಶಾಲೆಗೆ ಕಳಿಸುವಷ್ಟು ತಿಳುವಳಿಕೆ ಅಥವಾ ಅನುಕೂಲತೆ ಪಾಲಕರಿಗಿಲ್ಲವೋ? ಎಂಬುದೆ ನನ್ನ ಸವಾಲಾಗಿದೆ. ಅಂದರೆ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಮಾಜದ ಜನರು ಭಾಗವಹಿಸುವಿಕೆಯ ತೊಂದರೆ ಇದೆಯೇ? ಎಂಬುದನ್ನು ಆಧ್ಯಾಯನ ಮಾಡಬೇಕಾದ ಅಗತ್ಯತೆಯಿದೆ.

ಶಿಕ್ಷಣದ ಅಭಿವೃದ್ಧಿಯಲ್ಲಿ ವಿಭಾಗಗಳು ಯಾಕೆ ಭಿನ್ನವಾಗಿವೆ? ಅದರಲ್ಲೂ ಜಾತಿ-ಜಾತಿಗಳ ನಡುವೆ ತಾರತಮ್ಯಯಾಕಿದೆ? ಪುರುಷ ಮತ್ತು ಮಹಿಳೆಯ ಶಿಕ್ಷಣದ ಅಭಿವೃದ್ಧಿಯಲ್ಲಿ ಯಾಕೆ ವ್ಯತ್ಯಾಸವಿದೆ? ಅಲ್ಲದೇ ಸಾಮಾಜಿಕ ಮತ್ತು ಗ್ರಾಮೀಣ ನಗರ ಭಿನ್ನತೆಗಳು ಯಾಕಿದೆ? ಎಂಬುದು ನನ್ನ ಮುಖ್ಯ ಪ್ರಶ್ನೆಯಾಗಿದೆ. ಪ್ರಮುಖವಾಗಿ ಈ ಎಲ್ಲಾ ಭಿನ್ನತೆಗಳಲ್ಲಿ ಗುಲ್ಬರ್ಗಾ ವಿಭಾಗವು ಇತರೆ ವಿಭಾಗಳಿಗಿಂತ ತುಂಬಾ ಹಿಂದಿರುವುದು ನಮಗೆ ಅನೇಕ ಅಧ್ಯಯನಗಳ ಮೂಲಕ ತಿಳಿದು ಬಂದಿದೆ. ಅಭಿವೃದ್ಧಿಗೆ ಮುಖ್ಯ ಸಾಧನವಾದ ಶಿಕ್ಷಣವನ್ನು ಮುಖ್ಯ ವಾಹಿನಿಗೆ ತರಲು ಕೇಂದ್ರ, ರಾಜ್ಯ ಮತ್ತು ಹಲವು ಸಂಘ-ಸಂಸ್ಥೆಗಳ ಮೂಲಕ ಅಭಿವೃದ್ಧಿ

ನೀತಿಗಳು ಮತ್ತು ಕಾರ್ಯಕ್ರಮಗಳ ಪೂರಕವಾಗಿ ೧೯೫೦ರಲ್ಲಿ ಒಟ್ಟು ಸಾಕ್ಷರತೆ ಪ್ರಮಾಣವು ಶೇಕಡಾ ೧೮.೩% ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಶೇಕಡ ೯ ರಷ್ಟು ಕರ್ನಾಟಕವು ದೇಶದಲ್ಲಿ ಸಾಕ್ಷರತಾ ಪ್ರಮಾಣದಲ್ಲಿ ಅತಿ ಹೆಚ್ಚು ಇರದೆ ಮತ್ತು ಕಡಿಮೆ ಇರದೆ ಮಧ್ಯಂತರ ಹಂತದಲ್ಲಿದೆ. ೧೯೫೦ ರಿಂದ ಈಚೆಗೆ ತುಂಬಾ ಅಭಿವೃದ್ಧಿ ಕಂಡಿದೆ. ಇಷ್ಟೆಲ್ಲಾ ಆದರೂ ಕೂಡ ನಮ್ಮ ರಾಜ್ಯದ ಗುಲ್ಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಶಿಕ್ಷಣ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಕಡಿಮೆ ಇದೆ ಎಂದು ಹೇಳಬಹುದು. ರಾಜ್ಯದಲ್ಲಿ ಜಿಲ್ಲಾವಾರು ಆರ್ಥಿಕ ಸ್ಥಿತಿಗತಿಯೂ ಕೂಡ ಸಾಧಾರಣ. ಇಲ್ಲಿನ ಜನರ ಜೀವನ ಮಟ್ಟಕೂಡ ಕೆಳಮಟ್ಟದಲ್ಲಿದೆ. ಅಲ್ಲದೆ ಮೂಲಸೌಕರ್ಯದ ಕೊರತೆಯಿಂದ ಶಿಕ್ಷಣವು ಹಿಂದಿದೆ ಮತ್ತು ಲಿಂಗ ತಾರತಮ್ಯ ಕೂಡ ಇದಕ್ಕೆ ಕಾರಣ ಎಂದು ಹೇಳಲಾಗಿದೆ. ಜಿಲ್ಲೆಯಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ದಾಖಲಾತಿಯಲ್ಲಿ ತುಂಬಾ ಹಿಂದೆ ಬಿದ್ದಿವೆ. ಇದು ಯಾಕೆ ಎಂಬುದು ಸವಾಲಾಗಿದೆ. ಸಾಮಾಜಿಕ ಆರ್ಥಿಕ ತಾರತಮ್ಯದಿಂದಲೂ ಕೂಡ ಶಿಕ್ಷಣದ ಪ್ರಾಪ್ತಿಯಲ್ಲಿ ಈ ಜಿಲ್ಲೆಗಳು ಹಿಂದುಳಿದಿವೆ ಎಂದು ಹಲವು ಅಧ್ಯಯನಗಳಿಂದ ತಿಳಿದು ಬಂದಿದೆ.

ಭಾರತದಲ್ಲಿರುವುದು ಯುರೋಪಿನ ಶಿಕ್ಷಣವ್ಯವಸ್ಥೆಯೆಂಬ ಕಲ್ಪನೆ ಅನೇಕರಲ್ಲಿದೆ. ವಾಸ್ತವವಾಗಿ ಇಲ್ಲಿರುವುದು ವಸಾಹತುಶಾಹಿ ಶಿಕ್ಷಣವ್ಯವಸ್ಥೆ. ಇಂದಿನ ಅಧುನಿಕ ಶಿಕ್ಷಣ ಕೈಗಾರಿಕಾ ಕ್ರಾಂತಿಯ ನಂತರ ಯುರೋಪಿನ ದೇಶಗಳಲ್ಲಿ ಬೆಳೆದು ಬಂದುದಾಗಿದೆ. ಯುರೋಪಿನ ಸಾಂಪ್ರದಾಯಿಕ ಶಿಕ್ಷಣ ಚರ್ಚುಗಳ ಮೂಲಕ ಲ್ಯಾಟೀನ್ ಭಾಷೆಯಲ್ಲಿ ನೀಡುವ ಧಾರ್ಮಿಕ ಶಿಕ್ಷಣವಾಗಿತ್ತು. ೧೭ನೇ ಶತಮಾನದ ನಂತರ ಚರ್ಚುಗಳನ್ನು ಬದಿಗಿಟ್ಟು ದೇಶಿ ಭಾಷೆಗಳಲ್ಲಿ ಅಧುನಿಕ ಶಿಕ್ಷಣವನ್ನು ಅಭಿವೃದ್ಧಿಪಡಿಸಲಾಯಿತು. ಯುರೋಪಿನ ಎಲ್ಲ ದೇಶಗಳಲ್ಲಿ ಇಂದು ಮಾತೃಭಾಷೆ ಯಲ್ಲಿಯೇ ಎಲ್ಲ ಶಿಕ್ಷಣವನ್ನು ನೀಡುವ ವ್ಯವಸ್ಥೆ ಇದ್ದು, ಭಾರತವೂ ಇದನ್ನು ಅನುಕರಿಸುವುದು ಅವಶ್ಯ. ವಸಾಹತುಶಾಹಿಗೆ ಒಳಪಡುವುದರಿಂದ ಯೂರೋಪಿನ ಎಲ್ಲ ದೇಶಗಳಲ್ಲಿ ಪ್ರಾಥಮಿಕದಿಂದ ವಿಶ್ವವಿದ್ಯಾಲಯದ ತನಕದ ಎಲ್ಲ ಶಿಕ್ಷಣವನ್ನು ದೇಶಿ ಭಾಷೆಯಲ್ಲಿಯೇ ಅನುಷ್ಠಾನಕ್ಕೆ ತರಲಾಗಿದೆ. ಆದರೆ ಆ ಕಾಲದಲ್ಲಿ ಬ್ರಿಟೀಷರ ವಸಾಹತಾಗಿದ್ದರಿಂದ ಭಾರತಕ್ಕೆ ಅಧುನಿಕ ಶಿಕ್ಷಣವು ನಮ್ಮ ಭಾಷೆಯಲ್ಲಿಯೇ ಬರದೇ ನಮ್ಮನ್ನಾಳುವವರ ಭಾಷೆಯಲ್ಲಿ ಬಂದಿತ್ತು(೧೮೩೪). ಸ್ವಾತ್ರಂತ್ರ್ಯಾನಂತರ ಭಾರತೀಯ ಭಾಷೆಗಳಲ್ಲಿ ಶಿಕ್ಷಣ ನೀಡಬೇಕೆನ್ನುವ ಬೇಡಿಕೆ ಬಂದರೂ ಪ್ರಾಥಮಿಕ ಶಿಕ್ಷಣದಲ್ಲಿ ಮಾತ್ರ ಮಾತೃಭಾಷಾ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಉನ್ನತ ಶಿಕ್ಷಣದಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಪ್ರಾಮುಖ್ಯತೆಯನ್ನು ನೀಡುವ ನೀತಿಯನ್ನು ಅನುಸರಿಸಿಕೊಂಡು ಬರಲಾಗಿದೆ. ಉನ್ನತ ಶಿಕ್ಷಣದಲ್ಲಿನ ಇಂಗ್ಲಿಷ್ ಪ್ರಾಬಲ್ಯದಿಂದಾಗಿ ನಂತರ ಗ್ರಾಮೀಣ ಪ್ರದೇಶದ ಶೈಕ್ಷಣಿಕ ಅಭಿವೃದ್ಧಿ ಅಸಮಾನವಾದ

ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯೊಳಗೆ ಅಭಿವೃದ್ಧಿಯನ್ನು ಮಾಡಬೇಕಿದೆ. ಕಡ್ಡಾಯ ಹಾಗೂ ಉಚಿತ ಶಿಕ್ಷಣವನ್ನು ಸಾರ್ವತ್ರಿಕವಾಗಿ ೬ರಿಂದ ೧೪ರ ವಯೋಮಾನದ ಎಲ್ಲ ಮಕ್ಕಳಿಗೂ ನೀಡಬೇಕೆನ್ನುವ ಪ್ರಯತ್ನಗಳು ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಿಂದ ಪ್ರಸ್ತುತದವರೆಗೆ ನಡೆದುಕೊಂಡು ಬಂದಿದ್ದರೂ ಭಾರತದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಯುವಪ್ರಧಾನ ರಾಷ್ಟ್ರದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ಜಾತಿ ವರ್ಗದವರು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ನಿರ್ಗತಿಕರಿಗೆ ಶಿಕ್ಷಣ ನೀಡಬೇಕೆಂಬ ಮಾತುಗಳು ಕೇಳುತ್ತಲೇ ಬರುತ್ತಿವೆ. ಹಳ್ಳಿಗಾಡಿನ ಪ್ರದೇಶಗಳಿಗೆ ಹೋಲಿಸಿದರೆ ಅಸಮವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿ ಮಾಡಬೇಕಾಗಿದೆ. ಶೈಕ್ಷಣಿಕ ಅಭಿವೃದ್ಧಿ ಸಾಧಿಸಿದಾಗ ಸಾಮಾಜಿಕ-ಸಾಂಸ್ಕೃತಿಕ ಚೌಕಟ್ಟಿನೊಳಗಡೆಯೇ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಆದ್ಯತೆ ನೀಡುವುದು ಅತ್ಯಂತ ಅಗತ್ಯವಾದ ಅಂಶವಾಗಿದೆ. ಅದಕ್ಕೆ ಅವಶ್ಯಕವಾಗಿ ಬೇಕಾಗಿರುವ ಅರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಹಾರವು ನಮ್ಮ ಸಮಾಜದಲ್ಲಿ ಅಷ್ಟಾಗಿ ಕಂಡುಬರುತ್ತಿಲ್ಲ. ಈ ಕಾರಣದಿಂದಾಗಿಯೇ ನಮ್ಮಲ್ಲಿ ಮಕ್ಕಳು, ಮಹಿಳೆಯರು, ದಲಿತರು, ಬಡವರು, ಹಿಂದುಳಿದ ವರ್ಗದವರು ಮತ್ತು ವಂಚಿತ ಸಮುದಾಯದವರು ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಸಾರ್ವತ್ರೀಕರಣ ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಅಧ್ಯಯನಗಳ ಸಮೀಕ್ಷೆಗಳು

ಚಂದ್ರಶೇಖರ ಟಿ.ಆರ್. (೨೦೦೩) ಅವರು "ಕರ್ನಾಟಕ ಅಭಿವೃದ್ದಿಯ ನೆಲೆಗಳು" ಎಂಬ ಕೃತಿಯಲ್ಲಿ ಅಭಿವೃದ್ಧಿಯನ್ನು ಸಾಮಾಜಿಕ ನೆಲೆಯಲ್ಲಿ ವಿವರಿಸಲು ಪ್ರಯತ್ನ ಮಾಡಿದ್ದಾರೆ ಅಭಿವೃದ್ಧಿಗೆ ಸಂಭಂದಿಸಿದಂತೆ ಕರ್ನಾಟಕ ಸಾಧನೆಗಳನ್ನು ವಿವರಿಸುತ್ತಾ 'ಹಿಂದುಳಿದ ಜಿಲ್ಲೆಗಳಲ್ಲಿ ಶಿಕ್ಷಣ ಕಾಯಕಲ್ಪ' ಡಂಬ ಅಧ್ಯಾಯದಲ್ಲಿ ಬೀದರ್, ಗುಲಬರ್ಗಾ, ಬಿಜಾಪೂರ, ಬಾಗಲಕೋಟೆ, ಬಳ್ಳಾರಿ, ರಾಯಚೂರ ಮತ್ತು ಕೊಪ್ಪಳ ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಗುರ್ತಿಸಿದ್ದಾರೆ ನೆಲೆಯಿಂದ ನೋಡಿದಾಗ ಉಳಿದ ಜಿಲ್ಲೆಗಳ ಸ್ಥಾನಮಾನಕ್ಕಿಂತ ಕೆಳಮಟ್ಟ ದಲ್ಲಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಶಾಲೆಗೆ ಸೆರೆದ ಮಕ್ಕಳ ಪ್ರಮಾಣ ಪ್ರಾದೇಶಿಕ ಸ್ವರೂಪ ತುಂಬಾ ಕೂತೂಹಲಕಾರಿಯಾಗಿದೆ ಎಂದಿರುವ ಲೇಖಕರು ರಾಜ್ಯದ ೬ ರಿಂದ ೧೪ ವಯೋಮಾನದ ಒಟ್ಟು ಮಕ್ಕಳಲ್ಲಿ ಹಿಂದುಳಿದ ಈ ೭ ಜಿಲ್ಲೆಗಳ ಪಾಲು ಶೇಕಡಾ ೨೮.೯ ರಷ್ಟಾಗಿದೆ. ಅದರೆ ರಾಜ್ಯದಲ್ಲಿ ಶಾಲೆಗೆ ಸೇರದ ೦೬-೧೪ ವಯೋಮಾನದ ಒಟ್ಟು ಮಕ್ಕಳಲ್ಲಿ ಹಿಂದುಳಿದ ಈ ಏಳು ಜಿಲ್ಲೆಗಳಲ್ಲಿಯೇ ಶೇಖರಣೆಯಾದಮಂತಿದೆ ಎಂದಿದ್ದಾರೆ. ಇದಕ್ಕೆ

ಪೂರಕವಾದಂತೆ. ಯಾವ ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಮತ್ತು ಒತ್ತಡಗಳು ಅಧಿಕವಾಗಿರುತ್ತವೆ ಎಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.[೧]

ವಿಠೋಬ ಮತ್ತು ಇತರರು (೨೦೦೫) ಇವರು 'ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ' ಎಂಬ ಲೇಖನದಲ್ಲಿ ಶಿಕ್ಷಣವನ್ನು ನಿರ್ಧರಿಸುವ ಅಂಶಗಳಾದ ಶಿಕ್ಷಣದ ಪ್ರಮಾಣ, ಶಾಲೆಗಳ ಸಂಖ್ಯೆ,ಶಿಕ್ಷಕರ ಸಂಖ್ಯೆ, ಶಾಲೆಬಿಟ್ಟ ಮಕ್ಕಳ ಸಂಖ್ಯೆಗಳನ್ನು ಆಧರಿಸಿ ಆಯಾ ಪ್ರದೇಶಕ್ಕನುಗುಣವಾದ ಅಸಮಾನತೆಯನ್ನು ವಿವರಿದಿದ್ದಾರೆ. ಇವರ ಪ್ರಕಾರ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾದೇಶಿಕ ಅಸಮಾನತೆ ಕಂಡುಬರುವಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ. ಸಾಕ್ಷರತೆಯನ್ನು ವಿಭಾಗವಾರು ನೋಡಿದಾಗ ಗುಲ್ಬರ್ಗಾದಲ್ಲಿ ಶೇಕಡ ೫೦.೬೮ ರಷ್ಟಿದ್ದರೆ. ಬೆಂಗಳೂರಿನಲ್ಲಿ ಶೇಕಡಾ ೮೩.೯೧ ರಷ್ಟಿರುವುದು ಸಾಕ್ಷರತೆಯ ಪ್ರಾದೇಶಿಕ ಭಿನ್ನತೆಯನ್ನು ತೋರಿಸುತ್ತದೆ. ಇದಕ್ಕೆ ಸಾಮಾಜಿಕ, ಆರ್ಥಿಕ, ನೈಸರ್ಗಿಕ ಮತ್ತು ರಾಜಕೀಯ ಅಂಶಗಳು ಕಾರಣವಾಗುದೆ ಎಂಬುದನ್ನು ಲೇಖಕರು ಗುರುತಿಸುತ್ತಾರೆ. ಇವುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ, ದೋಷಯುಕ್ತ ಆರ್ಥಿಕ ನೀತಿ, ಅದಕ್ಷ ಆಡಳಿತ, ಬಂಡವಾಳದ ಅಭಾವ, ಜಾತಿಪದ್ಧತಿ, ಆರ್ಥಿಕ ಹಂಚಿಕೆ ಯೋಜನೆಗಳು ಅಸಮರ್ಪಕ ಅನುಷ್ಠಾನ ಬಡತನ ಇನ್ನೂ ಇನ್ನೂ ಮುಂತಾದವುಗಳನ್ನು ಲೇಖಕರು ಗುರುತಿಸುತ್ತಾರೆ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳು ರೂಪಿಸಿಕೊಂಡ ಯೋಜನೆಗಳು ವಿಫಲವಾಗಲು ಆಡಳಿತ ಯಂತ್ರದ ಕೊರತೆ ಅಥವಾ ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣ ಗಳಿರುವುದನ್ನು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳು ಹಿಂದುಳಿಯುತ್ತಲೇ ಹೋಗುತ್ತವೆ. ಶೈಕ್ಷಣೀಕ ಸೌಲಭ್ಯಗಳನ್ನು ಪಡೆದ ಜಿಲ್ಲೆಗಳು ಹಾಗೆಯೇ ಮುಂದುವರಿಯುತ್ತವೆ. ಅಂತಿಮವಾಗಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬುದಾಗಿ ಲೇಖಕರು ವಾದಿಸುತ್ತಾರೆ.[೨]

ರತನ್ ನಬೀಸ್ ಮತ್ತು ತಾನಿತಾ ಚಟರ್ಜಿ(೨೦೦೭) ಅವರ "ಎನ್‌ರೋಲಿಂಗ್ ಅಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಸ್ಕೂಲ್ಸ್, ಎ ಪಿಲ್ಟ್ ಸರ್ವೇ ಇನ್ ಈಸ್ಟನ್ ಸ್ಲಮ್ ಆಪ್ ಕೋಲ್ಕತ್ತ" ಎನ್ನುವ ಲೇಖನದಲ್ಲಿ ಕೊಲ್ಕತ್ತಾದ ಪೂರ್ವ ಕೋಳಗೇರಿ ಪ್ರದೇಶದಲ್ಲಿನ ಶೈಕ್ಷಣಿಕ ಸ್ಥಿತಿಗತಿಯನ್ನು ವಿವರಸುವ ಪ್ರಯತ್ನ ಲೇಖಕರು ಮಾಡಿದ್ದಾರೆ, ಸರ್ವ ಶಿಕ್ಷಣ ಅಭಿಯಾನ ಬಂದ ಮೇಲೆ ಅಲ್ಪ ಪ್ರಮಾಣದಲ್ಲಿ ಕೊಳಗೇರಿಗಳಲ್ಲಿ ದಾಖಲಾತಿ ಮತ್ತು ಹಾಜರಾತಿಯಲ್ಲಿ ಪ್ರಗತಿ ಕಂಡಿದಡ ಆದರೆ ಹೆಣ್ಣುಮಕ್ಕಳ ದಾಖಲಾತಿ ಈ ಪ್ರದೇಶದಲ್ಲಿ ಉತ್ತಮವಾಗಿಲ್ಲ ಎಂದಿದ್ದಾರೆ. ಇನ್ನು ಅನೇಕ ಮಕ್ಕಳು ಮಧ್ಯದಲೇ ಶಾಲೆ ಬಿಡುತ್ತಿದ್ದಾರೆ. ಇವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚು ಎಂದು ಹೇಳಿದ್ದಾರೆ. ಇವರು ವಲಸೆ ಹೋಗಿ

ಕಾರ್ಮಿಕರ ವರ್ಗಕ್ಕೆ ಸೇರುತ್ತಾರೆ. ಇಂತಹ ಪರಿಸ್ಥಿಯಲ್ಲಿ ಅಂತಹ ವಂಚಿತರಾದ ಮಕ್ಕಳನ್ನು ಮತ್ತೆ ಶಾಲೆ ಕರೆತುವ ಪ್ರಯತ್ನ ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಾಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಶಾಲೆ ಬಿಟ್ಟ ಮಕ್ಕಳಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕರೆತರುವುದು ಬಹಳ ದೊಡ್ಡ ಸಮಸ್ಯೆಯಾಗಿದೆ ಇದನ್ನು ನಾಗರಿಕ ಸಮಾಜದಲ್ಲಿ ಜಾಗೃತಿ ಮೂಡಿಸಿವ ಮೂಲಕ ಉತ್ತಮಪಡಿಸಲು ಸಾಧ್ಯ[೩] ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಬಡತನ, ಅಸಮಾನತೆ, ನಿರುದ್ಯೋಗ, ಅನಕ್ಷರತೆ, ಜಾತಿಯತೆ ಇವುಗಳನ್ನು ಹೋಗಲಾಡಿಸುವಂತಹ ಪ್ರಯತ್ನವನ್ನು ವ್ಯಕ್ತಿ, ಸಂಘ–ಸಂಸ್ಥೆಗಳು, ಸರ್ಕಾರ ಮತಯ್ತು ಸಮಾಜ ಜಂಟಿಯಾಗಿ ಮಾಡಬೇಕಾಗಿದೆ. ಆಗ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ ಸುಧಾರಣೆಯಾಗಳೂ ಸಾಧ್ಯ ಎಂಬ ಆಸೆಯವನ್ನು ವ್ಯಕ್ತಪಡಿಸಿದ್ದಾರೆ.

ರೇಖಾ ಕೌಲ್ (೨೦೦೧) ಅವರ "ಅಸ್ಸೆಸಿಂಗ್ ಪ್ರೈಮರಿ ಎಜ್ಯುಕೇಷನ್ ಗೋಯಿಂಗ್ ಬಿಯಾಂಡ್ ದಿ ಕ್ಲಾಸ್ ರೂಮ್" ಎನ್ನುವ ಲೇಖನದಲ್ಲಿ ವಿವಿಧ ಆದಾಯದ ಗುಂಪುಗಳನ್ನು ತುಲಾನಾತ್ಮಕವಾಗಿ ವಿಶೇಷಿಸಿದ್ದಾರೆ ಇವರ ಲೇಖನದಲ್ಲಿ ಪ್ರಮುಖವಾಗಿ ಕಂಡುಬರುವ ಅಂಶವೆಂದರೆ, ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ, ಕೊನೆಯ ಆದ್ಯತೆ ನೀಡುತ್ತಿರುವುದನ್ನು ಇವರು ಗುರುತಿಸಿದ್ದಾರೆ. ತಳಜಾತಿ ಹಾಗೂ ಅಲ್ಪ ಸಂಖ್ಯಾತ ಸಮುದಾಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಅವಕಾಶವಿಲ್ಲ.[೪] ಎಂಬುದನ್ನು ಇವರು ಸ್ಪಷ್ಟಪಡಿಸಿದ್ದಾರೆ.

ಸಾರಥಿ ಆಚಾರ್ಯ (೨೦೦೦) ಅವರ "ಆಸ್ಸಿಂಗ್ ಟು ಪ್ರೈಮರಿ ಎಜ್ಯುಕೇಷನ್: ರೂರಲ್ ಮಾಹಾರಾಷ್ಟ್ರ ಅಂಡ್ ಮಧ್ಯ ಪ್ರದೇಶ" ಎಂಬ ಲೇಖನದ ಮೊದಲನೆಯ ಭಾಗವು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಕೆಲವು ಜಿಲ್ಲೆಗಳ ಸಾಕ್ಷರತೆ, ಶಾಲಾ ದಾಖಲಾತಿ, ಹಾಜರಾತಿ, ಜಾತಿವಾರು ಸಾಕ್ಷರತೆ ಪ್ರಮಾಣವನ್ನು ತುಲಾನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಎರಡನೇ ಭಾಗದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಇರುವ ಮೂಲ ಸೌಲಭ್ಯಗಳು, ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಕಳಿಸಲು ತಗುಲುವ ಖಾಸಗಿ ಮತ್ತು ಸಾರ್ವಜನಿಕ ವೆಚ್ಚ, ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ಇತ್ಯಾದಿಗಳನ್ನು ವಿಶ್ಲೇಷಿಸಿದ್ದಾರೆ. ಈ ಲೇಖನದ ಕೊನೆಯ ಭಾಗದಲ್ಲಿ ಕೆಲವು ಗೊಂದಲಗಳು ಕಂಡುಬರುತ್ತವೆ. ಸಂಶೋಧಕರು ಹೆಚ್ಚಾಗಿ ಅನುಷಂಗಿಕ ಅಂಕಿ ಅಂಶಗಳನ್ನು ಬಳಸಿಕೊಂಡು ಅವುಗಳನ್ನು ಬೇರೆ ಬೇರೆ ಎರಡು ರಾಜ್ಯಗಳ ವಿವಿಧ ಜಿಲ್ಲೆ ಗಳಿಗೆ ಹೋಲಿಸಿ ತುಲಾನ್ಮಕವಾಗಿ ವಿಶ್ಲೇಷಿಸುವದು ಅಷ್ಟು ಸಮಂಜಸವಲ್ಲ. ಏಕೆಂದರೆ, ಶೈಕ್ಷಣಿಕ ವ್ಯವಸ್ಥೆ ಮತ್ತು ಪರಿಸರವನ್ನು ಕುರಿತು ಒಂದೇ

ರಾಜ್ಯ ಅಥವಾ ಪ್ರದೇಶದಲ್ಲಿ ಬರುವ ಜಿಲ್ಲೆಗಳಲ್ಲಿಯೇ ಪ್ರಾದೇಶಿಕ ಅಸಮಾನತೆಯನ್ನು ಗುರುತಿಸಬಹುದಾಗಿದೆ.[೫]

ಎನ್. ಕೃಷ್ಣಾಜೀ (೨೦೦೦) ಅವರು "ಪಾವರ್ಟಿ ಜೆಂಡರ್ ಆ್ಯಂಡ್ ಸ್ಕೂಲಿಂಗ್: ಯ ಸ್ಟಡಿ ಆಫ್ ಟೂ ಡಿಸ್ಟ್ರಿಕ್ಟ್ ಇನ್ ಆಂಧ್ರಪ್ರದೇಶ" ಎಂಬ ಲೇಖನದಲ್ಲಿ ಆಂಧ್ರಪ್ರದೇಶದ ಮೆಹಬೂಬುನಗರ ಮತ್ತು ಆದಿಲಾಬಾದ್ ಜಿಲ್ಲೆಗಳನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಆಂಧ್ರಪ್ರದೇಶದಲ್ಲಿರುವ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿನ ಈ ಎರಡು ಜಿಲ್ಲೆಗಳು ಬರುತ್ತವೆ. ಸಂಶೋಧಕರು ಬಡತನ-ಲಿಂಗ-ಶಾಲೆಗಳಿಗೆ ಇರುವ ಸಂಬಂಧವನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಮೊದಲ ಭಾಗದಲ್ಲಿ ಬಡತನಕ್ಕೂ ಶಾಲಾ ದಾಖಲಾತಿಗೂ, ಹಾಜರಾತಿಗೂ, ಮಧ್ಯದಲ್ಲಿ ಶಾಲೆ ಬಿಡುವುದಕ್ಕೂ ಇರುವ ಸಂಬಂಧವನ್ನು ಗುರುತಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರು ಹೆಚ್ಚಾಗಿ, ಬಡತನದ ರೇಖೆಗಿಂತ ಕೆಳಗಿದ್ದಾರೆ. ಈ ಗುಂಪಿಗೆ ಸೇರಿದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿಲ್ಲ ಎಂಬ ನಿರ್ಧಾರಗಳಿಗೆ ಬಂದಿದ್ದಾರೆ. ಎರಡನೇ ಭಾಗದಲ್ಲಿ ಬಡತನಕ್ಕೂ ಲಿಂಗ ಅಸಮಾನತೆಗೂ ಶಿಕ್ಷಣಕ್ಕೂ ಇರುವ ಸಂಬಂಧಗಳನ್ನು ವಿಶ್ಲೇಷಿಸುತ್ತಾರೆ, ಸ್ವಲ್ಪ ಹೆಚ್ಚು ಕಡಿಮೆ ಮೊದಲ ಭಾಗದ ನಿರ್ಧಾರಗಳನ್ನೇ ಇಲ್ಲಿಯು ಅವರು ಮಾಡಿದ್ದಾರೆ. ಈ ಲೇಖನದ ಪ್ರಮುಖ ನ್ಯೂನ್ಯತೆ ಎಂದರೆ ಗ್ರಾಮಮಟ್ಟದಲ್ಲಿನ ಸಾಮಾಜಿಕ ಸ್ವರೂಪಕ್ಕೂ ಶಿಕ್ಷಣ ವ್ಯವಸ್ಥೆಗೂ ನಡುವಿನ ಸಂಬಂಧವನ್ನು ಗುರುತಿಸಲು ಸಾಧ್ಯವಾಗದೇ ಇರುವುದು, ಇದು ಅಧ್ಯಯನದ ಮಿತಿಯೂ ಕೂಡ.[೬]

ವಿಲ್‌ಫ್ರೆಡ್ ಡಿಸೋಜ (೨೦೦೬) ಅವರು ರೈತರಿಗೆ ಆಸೆ, ಕಂಪನಿಗಳಿಗೆ ಲಾಭದ ದಾಹ, ಶಿಕ್ಷಣದಿಂದ ವಂಚಿತರಾಗುತ್ತಿರುವ ಕಂದಮ್ಮಗಳು ಎಂಬ ಲೇಖನದಲ್ಲಿ ದುಡ್ಡಿನ ಆಸೆಗಾಗಿ ರೈತ ಕುಟುಂಬಗಳು ತಮ್ಮ ಮಕ್ಕಳ ಬದುಕನ್ನು ಬಲಿಕೊಡುತ್ತಿರುವ ಸತ್ಯಾಂಶವನ್ನು ವಿವರಿಸಿದ್ದಾರೆ. ಸಾಲದ ಸಂಕೋಲೆಯಲ್ಲಿ ಸಿಲುಕಿ ಅದರಿಂದ ಹೊರಬರಲು ತವಕಿಸುತ್ತಿರುವ ರೈತರು ಲಾಭ ತರುವ ಹೊಸ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದು ಸಹಜವೆಂದು ಒಪ್ಪಿಕೊಳ್ಳವ ಲೇಖಕರು, ಬಹುರಾಷ್ಟ್ರೀಯ ಬೀಜೋತ್ಪಾದನೆಯ ಕಂಪನಿಗಳು ಸೃಷ್ಟಿಸಿದ ಜಾಲದಲ್ಲಿ ಸಿಲುಕಿದ ರೈತರು ಅಲ್ಪಸ್ವಲ್ಪ ಲಾಭದ ಗುಂಗುನಲ್ಲಿ ತಮ್ಮ ಮಕ್ಕಳ ಜೀವನವನ್ನೇ ಬಲಿಕೊಡುತ್ತಿದ್ದಾರೆಂದು ಆತಂಕ ವ್ಯಕ್ತಪಡಿಸಿದ್ದಾರೆ.[೭]

ಮುಂದುವರಿದಂತೆ ಲೇಖಕರು, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಗ್ರಾಮ ಪಂಚಾಯತಿ ವ್ಯಾಪ್ತಿಯ ಶಾಲೆಗಳಲ್ಲಿ ಮಕ್ಕಳು ದಾಖಲಾಗಿದ್ದರೂ, ಮಕ್ಕಳು ಶಾಲೆಗಳಲ್ಲಿ

ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಏಕೆಂದರೆ ಶಾಲೆಗಳಲ್ಲಿ ದಾಖಲಾದ ಮಕ್ಕಳೆಲ್ಲರೂ ಶಾಲೆಗೆ ಹಾಜರಾಗದೆ ಸ್ಥಳೀಯವಾಗಿ ನಿರ್ಮಾಣವಾಗಿರುವಂತಹ ಬೀಜೋತ್ಪಾದನೆಯು ಆಚರಣೆಯಲ್ಲಿದ್ದು, ದಾವಣಗೆರೆ ಜಿಲ್ಲೆಗೆ ಮಾತ್ರ ಸಿಮಿತವಾಗಿರದೆ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಕಂಡುಬರುತ್ತಿದೆ. ಹಾಗಾಗಿ ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳು ಈಗಲಾದರೂ ಎಚ್ಚೆತ್ತು, ಶಿಕ್ಷಣದಿಂದ ವಂಚಿತರಾದ ಮಕ್ಕಳನ್ನು ಮತ್ತೆ ಶಾಲೆಗೆ ಕರೆ ತರಬೇಕೆಂದಿದ್ದಾರೆ.

ಶಾಂತಾ ಸಿನ್ಹ, (೨೦೦೬) ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವ ಪಂಜಾಬ, ಹರಿಯಾಣ, ಅಸ್ಸಾಂ, ಬಿಹಾರ, ತ್ರಿಪುರ, ಝಾರ್ಖಂಡ, ಓರಿಸ್ಸಾ, ಹಿಮಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಶಾಲೆಗೆ ವಯೋಮಾನದ ಶೇಕಡ ೬೦ ರಷ್ಟು ಮಕ್ಕಳು ಸರ್ಕಾರಿ ಶಾಲೆಗೆ ಹಾಜರಾಗುವುದು ಬೆಳಕಿಗೆ ಬಂದಿದೆ. ವಿಶೇಷವೆಂದರೆ ಕೊಠಡಿಗಳ ಅಭಾವ, ಶಿಕ್ಷಕರ ಕೊರತೆ, ಕುಡಿಯುವ ನೀರು ಮತ್ತು ಶೌಚಾಲಯದ ಕೊರತೆ, ಕಳಪೆ ಮಟ್ಟದ ಶಿಕ್ಷಣ ಇತ್ಯಾದಿಗಳಿಂದ ಅಪಖ್ಯಾತಿಯಾದ ಸರ್ಕಾರಿ ಶಾಲೆಗಳಿಗೆಕೆ ಮಕ್ಕ್ಳ ಹಾಜರಾಗುತ್ತಾರೆ? ಎಂಬ ಸಹಜವಾದ ಪ್ರಶ್ನೆ ಎದುರಾಗುತ್ತದೆ. ತಮ್ಮ ಮಕ್ಕಳು ಶಿಕ್ಷಣ ಪಡೆದು ವಿದ್ಯಾವಂತರಾದರೆ ಮಾತ್ರ ಬಡತನದ ವಿಷವೃತ್ತದಿಂದ ಪಾರಾಗಲು ಸಾದ್ಯವೆಂಬ ಪೋಷಕರ ದೃಢ ನಂಬಿಕೆಯೆ ಉತ್ತಮವಾಗಿರುವುದು ಶಿಕ್ಷಣದ ಬೇಡಿಕೆಯನ್ನು ವ್ಯಕ್ತಪಡಿಸಿದಂತಾಗುತ್ತದೆ ಒಂದು ಅರ್ಥದಲ್ಲಿ ಮಕ್ಕಳು ವಿಧ್ಯಾವಂತರಾದರೆ ಬಡತನದ ವಿಷವೃತ್ತದಿಂದ ಪಾರಾಗುವುದು ವಿಳಂಭವಾದರು ಬಡ ಕುಟುಂಬಗಳ ಜಿವನ ಮತ್ತು ಮೌಲ್ಯಗಳು ಬದಲಾಗುತ್ತದೆ ಎಂದು ಸಿನ್ಹಾ ವಾದಿಸುತ್ತರೆ.[೮]

ಶ್ರೀವಾಸ್ತವ, ಅಮರೇಶ ದುಬೆ ಮತ್ತು ಇತರರು (೨೦೦೨) ಬುಡಕಟ್ಟಿನ ಜನಸಮುದಾಯ ಗಳಿಂದ ಕೂಡಿದ ಈಶಾನ್ಯ ಪ್ರಾಂತ್ಯದ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಮ್ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಯಲ್ಲಿ ಬಡತನ ಮತ್ತು ಲಿಂಗ ತಾರತಮ್ಯಗಳು ಎದ್ದು ಕಾಣುತ್ತವೆ ಈಶಾನ್ಯ ರಾಜ್ಯಗಳಲ್ಲಿ ಬಡತನ ತೀರ್ವತೆ ನಗರ ಮತ್ತು ಗ್ರಾಮಿಣ ಬಡತನಗಳ ಅಂತರ ಹೆಚ್ಚಾಗಿದ್ದರು ಹೆಚ್ಚಿನ ಪ್ರಮಾಣದಲ್ಲಿರುವ ಸಾಕ್ಷರತೆಯಲ್ಲಿ ಲಿಂಗ ತಾರತಮ್ಯವಿದೆ. ಆದರೆ ಲಿಂಗ ತಾರತಮ್ಯಕ್ಕೆ ಬಡತನವೆ ಕಾರಣವಾಗಿಲ್ಲವೆಣಬುದು ವಿಶೇಷ ಈಶಾನ್ಯ ರಾಜ್ಯಗಳ ಭಾಗದಲ್ಲಿ ಶಾಲೆಗೆ ಹೊಗುವ ಗಳಡು ಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿರುವುದು ವಿಭಿನ್ನ ಸಂಗತಿ ಅದರಂತೆ ಈ ರಾಜ್ಯಗಳಲ್ಲಿ ಶಾಲೆಗೆ ಹೊಗುವ ಪರಿಶಿಷ್ಠ ಜಾತಿ ಪರಿಶಿಷ್ಠ ಷಂಗಡ ಹಾಗೂ ಇತರೆ ವರ್ಗದ ಮಕ್ಕಳಲ್ಲಿ ವ್ಯಾತ್ಯಾಸಗಳಿಲ್ಲದಿರುವುದು ತಕ್ಕ ಮಟ್ಟಿಗೆ ಸಮಾಧಾನಪಡುವ ವಿಷಯವಾಗಿದೆ ಎಂದು ಈ ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದರೆ.[೯]

ಮಧು ಎಸ್ (೨೦೦೭) ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗವಲ್ಲದ ಶೇಕಡ ೨೮ ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೆ ಶೇಕಡ ೮೦ ರಷ್ಟು ಜನಸಂಖ್ಯೆ, ಶೇಕಡ ೫೦ಕ್ಕಿಂತ ಹೆಚ್ಚಿನ ಶಿಕ್ಷಣ ಮತ್ತು ಶೇಕಡ ೧೦ ರಷ್ಟು ಜನಸಂಖ್ಯೆ ಶೇಕಡ ೭೫ ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದೆ ಆದರೆ ನಗರ ಪ್ರದೇಶದ ಹಿಂದುಳಿದ ವರ್ಗವಲ್ಲದ ಶೇಕಡ ೧೫ ರಷ್ಟು ಜನತೆ ಶಿಕ್ಷಣ ಪಡೆಯದೆ ಶೇಕಡ ೧೫ ರಷ್ಟು ಜನ ಶೇ ೨೫ಕ್ಕಿಂತ ಹೆಚ್ಚಿನ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ ಒಟ್ಟನಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಲ್ಲಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಶಿಕ್ಷಣದ ಅಸಮಾನತೆ ಪುರುಷರಿಗಿಂತ ಮಹಿಳೆಯರಲ್ಲೆ ಹೆಚ್ಚಾಗಿದೆ ನಗರದ ಪುರುಷರಲ್ಲಿ ಶಿಕ್ಷಣದ ಕಡಿಮೆ ತಾರತಮ್ಯಗಳಿದ್ದರೆ ಗ್ರಾಮೀನ ಮಹಿಳೆಯರಲ್ಲಿ ಹೆಚ್ಚಿನ ತಾರತಮ್ಯವಿರುವುದು ಅಧ್ಯಾಯನಗಳಿಂದ ಧೃಢಪಟ್ಟಿದೆ.[೧೦]

ಎಚ್. ಜಿ. ಗೋವಿಂದೇಗೌಡ (೧೯೯೬) ಅವರು ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಕಲಿಕಾ ಆಂದೋಲನ, ಪರಿಹಾರ ಬೋಧನೆ ಇನ್ನು ಮುಂತಾದ ಯೋಜನೆಗಳಿವೆ. ಅದರಂತೆ ಮೆರಿಟ್ ಆಧಾರಿತ ಶಿಕ್ಷಕರ ನೇಮಕಾತಿಯಲ್ಲಿ ಶೇಕಾಡ ೫೦ ರಷ್ಟು ಮಹಿಳೆಯರ ನೇಮಕ, ಇಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತರಬೇತಿ ಕೇಂದ್ರ ಸ್ಥಾಪನೆ, ಶಾಲಾ ಕೊಠಡಿಗಳ ನಿರ್ಮಾಣ, ಮಕ್ಕಳಗೆ ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ, ಕೈಚೀಲ, ಮಧ್ಯಹ್ನದ ಊಟ ಒದಗಿಸುವುದು ಇತ್ಯಾದಿಗಳಿಂದ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ(ಆದರೂ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವು ಸಂಪೂರ್ಣವಾಗಿ ಸುಧಾರಣೆಯಾಗಿರುವಯದಿಲ್ಲ). ಆದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಕರು, ಕೊಠಡಿಗಳು. ಕಲಿಕಾ ಸಾಮಾಗ್ರಿಗಳು, ಆಟದ ಮೈದಾನ, ನೀರಿನ ವ್ಯವಸ್ತೆ, ಶೌಚಾಲಯ ಮತ್ತು ಕಾಂಪೌಡ್ ಮುಂತಾದ ಸೌಲಭ್ಯಗಳು ಸರಿಯಾದ ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದರಿಂದ ಪ್ರಾಥಮಿಕ ಶಿಕ್ಷಣ ಹಿಂದುಳಿದಿದೆ.[೧೧]

ಮಧು ಎಸ್ (೨೦೦೭) ಕರ್ನಾಟಕ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣವು ಕಡಿಮೆ ಇದೆ. ಅದಕ್ಕಾಗಿ ಲೋಕ ಶಿಕ್ಷಣ ಇಲಾಖೆಯು "ಮುಂದುವರಿಕೆ ಶಿಕ್ಷಣ". 'ಶಿಬಿರ ಸಾಕ್ಷರತೆ' 'ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ'. 'ಪುನಶ್ಚೇತನ ಕುಷ್ಠರೋಗಗಳಿಗೆ, ಜೈಲುವಾಸಿಗಳಿಗೆ ಮತ್ತು ಬಿಕ್ಷುಕರಿಗಾಗಿರುವ ಸಾಕ್ಷರತಾ 'ಬಾರವ್ವ ಕಲಿಯೋಕೆ' ಎಂಬ ಪಠ್ಯಪುಸ್ತಕದ ಸಾಪ್ಟವೇರ್ ಸಿದ್ಧಪಡಿಸಿ ಕಂಪ್ಯೂಟರ್ ಮೂಲಕ ರೇಡಿಯೋ ಪಾಠಗಳನ್ನು ತಯಾರಿಸಿ ಆಕಾಶವಾಣಿ ಮೂಲಕ ಸಾಕ್ಷರತೆ ನೀಡಲಾಗುತ್ತದೆ. ಅಲ್ಲದೇ ಶೈಕ್ಷಣಿಕವಾಗಿ ಹಿಂದುಳಿದ ಗುಲ್ಬುರ್ಗಾ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಮವಾಗಿ ೮೯೫ ಮತ್ತು ೮೮೫ ಎಜುಸ್ಯಾಟ್ ಪ್ರಾರಂಭಿಸಿ

ಸಾಕ್ಷರತೆ ನೀಡಲಾಗುತ್ತದೆ. ಶೀಘ್ರವಾಗಿ ಕಲಿಯಬಹುದಾದ ಪಠ್ಯ ಪುಸ್ತಕ 'ಸಾಕ್ಷರ ಸಂಗಾತಿ' ಯನ್ನು ಸಾಫ್ಟ್ ವೇರ್ ಅಳವಡಿಸಲಾಗಿದೆ.[೨]

ಉಷಾ ರಾಮ್ ಕುಮಾರ್ (೨೦೦೨) ಅವರ "ವುಮೆನ್ಸ್ ಎಜ್ಯುಕೇಷನ್ ಇನ್ ವೆಸ್ಟ್ರನ್ ಗಾಟ್ಸ್ ರೀಜನ್ಸ್ ಆಫ್ ಕರ್ನಾಟಕ" ಎಂಬ ಲೇಖನದಲ್ಲಿ ಸರಕಾರವು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ನೀಡಿದ ಉತ್ತೇಜನಗಳು ಕೂಡ ಅವರನ್ನು ಶಾಲೆಗೆ ಕರೆತರಲು ಮತ್ತು ಶಿಕ್ಷನ ಮುಂದುವರಿಸಲು ನೆರವಾಗಿದೆ. ಸಾಕ್ಷರತೆ ಆಂದೋಲನಗಳು, ಮಹಿಳೆಯರ ಸಾಕ್ಷರತೆ ಹೆಚ್ಚಿಸಲು ಸಹಾಯವಾಗಿದೆ. ಆದರೂ ಹೆಣ್ಣುಮಕ್ಕಳಿಗೆ ವಿಸ್ತರಿಸಲಾದ ಶಾಲಾ ಸೌಲಭ್ಯಗಳಲ್ಲಿ ಮತ್ತು ಶಾಲಾ ಶಿಕ್ಷಣದಲ್ಲಿ ಪಾಲ್ಗೋಳ್ಳಿವ ಪ್ರಮಾಣದಲ್ಲಿ ಪ್ರಾದೇಶಿಕ ಅಂತರವು ಗಣನೀಯವಾಗಿದೆ ಎಂದಿದ್ದಾರೆ.[೧೩]

ಶಿವರಾಜ ಮತ್ತು ಇತತರು (೨೦೦೫) ಅವರ "ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ" ಎಂಬ ಲೇಖನದಲ್ಲಿ ಪ್ರಮುಖವಾಗಿ ಶೀಕ್ಷಣವನ್ನು ನಿರ್ಧರಿಸುವ ಅಂಶಗಳಾದ ಶಿಕ್ಷಣದ ಪ್ರಮಾಣ, ಶಾಲೆಗಳಿದು ಜನಪರವಾದ ಪ್ರಜಾಸತಾತ್ಮಕವಾದ ಚಳಿವಳಿಯಿಂದ ಮಾತ್ರ ಸಾದ್ಯ ಅಂತಹ ಚಳುವಳಿಯಲ್ಲಿ ಮಹಿಳೆಯರೂ ಪ್ರಮುಖ ಪಾತ್ರವಹಿಸಬೇಕು. ಸಂಖ್ಯೆ, ಶಿಕ್ಷಕರು ಸಂಖ್ಯೆ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಇವುಗಳನ್ನು ಆಧರಿಸಿ, ಆಯಾ ಪ್ರದೇಶಕ್ಕೆ ಅನುಗುಣವಾಗಿ ಹೊಂದಿರುವ ಅಸಮಾನತೆಯನ್ನು ವಿವಿಧ ದತ್ತಾಂಶಗಲ ಮೂಲಕ ವಿವರಿದ್ದಾರೆ. ಎಲ್ಲಾ ರಂಗದಲ್ಲೂ ಪ್ರಾದೇಶಿಕ ಅಸಮಾನತೆ ಎದ್ದು ಕಂಡಂತೆ ಶಿಕ್ಷಣದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ. ಸಾಕ್ಷರತೆ ಪ್ರಮಾಣವನ್ನು ಭಾಗವಾರು ನೋಡಿದಾಗ ಗುಲ್ಬರ್ಗಾದಲ್ಲಿ ಪ್ರತಿಶತ ೫೦.೬೮ ರಷ್ಟಿದೆ, ಭಿನ್ನವಾಗಿದೆ, ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಿದ್ದಾರೆ, ಸಾಮಾಜಿಕ, ಆರ್ಥಿಕ ನೀತಿ, ದಕ್ಷ ಆಡಳಿತ ಕೊರತೆ, ಬಂಡವಾಳ ಕೊರೆತ, ಜಾತಿವ್ಯವಸ್ಥೆ, ಅಸಮರ್ಪಕ ಆರ್ಥಿಕ ಯೋಜನೆಗಳು, ಬಡತನ ಇನ್ನು ಮುಂತಾದ ಕಾರಣಗಳನ್ನು ಗುರುತಿಸಿದ್ದಾರೆ, ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದ ಪ್ರಗತಿಗಾಗಿ ಹಾಕಿಕೊಂಡ ಯೋಜನೆಗಳು ನಿಪಲವಾಗುತ್ತದೆ, ಇದಕ್ಕೆ ಆಡಳಿತ ಯಂತ್ರದ ಕೊರತೆಯಿರಬಹುದು ಅಥವಾ ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣಗಳಿವೆ. ಈ ಎಲ್ಲಾ ಕಾರಣಗಳನ್ನು ಬಗೆಹರಿಸುವ ನಿಟ್ಟನಲ್ಲಿ ಸರ್ಕಾರ ಮತ್ತು ಆಡಳಿತ ವರ್ಗ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳತ್ತ ಹೆಚ್ಚು ಗಮನಹರಿಸಬೇಕು. ಇಲ್ಲದಿದ್ದರೆ ಶೈಕ್ಷಣಿಕ ಸೌಲಭ್ಯದಿಂದ ವಂಚಿತವಾದ ಜಿಲ್ಲೆಗಳು ಹಿಂದುಳಿಯುತ್ತಲೇ ಹೋಗುತ್ತದೆ. ಸೌಲಭ್ಯಗಳು ಪಡೆದುಕೊಂಡ ಜಿಲ್ಲೆಗಳು ಹಾಗೆಯೇ ಮುಂದು

ವರಿಯುತ್ತವೆ, ಇಲ್ಲದಿದ್ದರೆ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೊಗಲಾಡಿಸಲು ಸಾಧ್ಯವಿಲ್ಲ ಎಂದುವಾದಿಸುತ್ತಾರೆ.[೧೪]

ಮಾಲಿನಿ ಭಟ್ಟಾಚಾರ್ಯ (೨೦೦೫) ಅವರ "ಭಾರತದಲ್ಲಿ ಶಿಕ್ಷಣ ಮತ್ತು ಮಹಿಳೆ" ಎನ್ನುವ ಲೇಖನದಲ್ಲಿ ಮಹಿಳೆಯರಿಗೆ ಕೊಡುವ ಶಿಕ್ಷಣವು ಸಾಮಾಜಿಕ ಜನತೆಯ ಇಲ್ಲಾ ರೂಪಗಳನ್ನು ಪ್ರಶ್ನಿಸುವದಂತದಾಗಿರಬೇಕು. ಸಮಾಜದ ವಿವಿಧ ಸ್ತರದಿಮದ ಬರುವ ನಹಿಳೆಯರು ವಿವಿಧ ರೀತಿಯ ಸಾಮಾಜಿಕ ಮತ್ತು ರಾಜಕೀಯ ಅಧೀನತೆಗೆ ಒಳಗಾಗಿರುತ್ತಾರೆ. ಶಿಕ್ಷಣ ವ್ಯವಸ್ತೆಗೆ ಕಾರಣವಾದ ಸಾಮಾಜಿಕ ವ್ಯವಸ್ತೆಯಲ್ಲಿಯೇ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡುವುದು ಅಗತ್ಯವಾಗಿದೆ. ಇದು ಜನಪರವಾದ ಪ್ರಜಾಸತಾತ್ಮಕ ಚಳುವಳಿಯಿಂದ ಮಾತ್ರ ಸಾಧ್ಯ ಅಂತಹ ಚಳುವಳಿಯಲ್ಲಿ ಮಹಿಳೆಯರೂ ಪ್ರಮುಖ ಪಾತ್ರವಹಿಸಬೇಕು.[೧೫]

ಜ್ಯೋತಿ ಎಂ. (೨೦೦೬) ಅವರ "ಮಹಿಳಾ ಸಾಮಾಜಿಕತೆ" ಎನ್ನುವ ಪುಸ್ತಕದಲ್ಲಿ ಪ್ರಮುಖವಾಗಿ ಎರಡು ಭಾಗವಾಗಿ ವಿಂಗಡಿಸಿಕೊಂಡಿದ್ದಾರೆ. ಇದರಲ್ಲಿ ಸಮಾಜ ಮತ್ತು ಮಹಿಳೆ ಎನ್ನುವ ಭಾಗದಲ್ಲಿ ಶಿಕ್ಷಣ ವ್ಯವಸ್ಥೆ ಮತ್ತು ಮಹಿಳೆಯನ್ನು ಕುರಿತು ಚರ್ಚಿಸಿದ್ದಾರೆ. ಆಭತರದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ ಆದರೆ ಇಲ್ಲಿ ಮಹಿಳಾ ಸಾಕ್ಷರತೆ ಮತ್ತು ಶಿಕ್ಷಣ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಬಹುಮಟ್ಟಿಗೆ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದಕ್ಕೆ ಕಾರಣ ನಮ್ಮ ಸಾಮಾಜಿಕ ವ್ಯವಸ್ಥೆ ಹಾಗೂ ಶಾಲಾ ಪದ್ಧತಿ. ಇದರ ಜೊತೆಗೆ ಕುಟುಂಬಗಳಲ್ಲಿ ಇಂದಿಗೂ ಹೆಣ್ಣುಮಕ್ಕಳ ಶಿಕ್ಷಣ ಬಗ್ಗೆ ತಾತ್ಸರ ಮನೋಭಾವವಿದೆ. ಗಂಡು ಮತ್ತು ಹೆಣ್ಣುಮಕ್ಕಳ ನಡುವೆ ತಾರತಮ್ಯ, ಪಕ್ಷಪಾತವಿದೆ. ಹೆಣ್ಣುಮಕ್ಕಳ ಶಾಲಾ ಭಾಗಹಿಸುವಿಕೆಗೆ ಸಾಂಪ್ರದಾಯ, ಕಟ್ಟುಪಾಡುಗಳು ಬಾಲಕೀಯರ ಮೇಲೆ ಹೆಚ್ಚು ಹೇರಲಾಗುತ್ತಿದೆ. ಹಾಗೆಯೇ ಹೆಣ್ಣುಮಕ್ಕಳಿಗೆ ಕೌಟುಂಬಿಕ, ಸಾಮಾಜಿಕ ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗಬೇದದಿಂದಾಗಿಯೇ ಉತ್ತಮ ಕಲಿಕೆ ಅವಕಾಶ ದೊರೆಯುತ್ತಿಲ್ಲ ಎಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.[೧೬]

ನಂಜುಂಡಸ್ವಾಮಿ ಎಂ. (೨೦೦೬) ಅವರ "ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು" ಎಂಬ ಲೇಖನದಲ್ಲಿ ಸಮಾಜದ ಎಲ್ಲಾ ವರ್ಗದ ಮಕ್ಕಳಿಗೆ ಉಚಿತ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ಜವಬ್ದಾರಿಯನ್ನು ಸರ್ಕಾರ ಪೂರ್ಣಗೊಳಿಸಬೇಕಾಗಿದೆ. ಗ್ರಾಮೀಣ ಪ್ರದೇಶದ ಶೈಕ್ಷಣಿಕ ಪ್ರಗತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದ ಶಿಕ್ಷಣಸ ನೀತಿ ರೂಪಿಸಿ. ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪಠ್ಯಕ್ರಮ, ಬೋಧನಾ ಕ್ರಮ ಮತ್ತು ಶಿಕ್ಷಣ ಸಾಧನಾ ಸಲಕರಣೆಗಳನ್ನು ಪೂರೈಸಲು ಸರ್ಕಾರ, ಶಿಕ್ಷಕರು, ಪೋಷಕರು

ಇಡೀ ಸಮಾಜವೇ ಶ್ರಮೀಸಬೇಕು. ಮಧ್ಯದಲ್ಲಿಯೇ ಶಾಲೆಯನ್ನು ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆಗೊಳಿಸಲು ಸಮುದಾಯ ಸಹಭಾಗುತ್ವ ಸೂಕ್ತವೆನಿಸುತ್ತದೆ.[೧೬]

ಗೋವಿಂದ ಮತ್ತು ವರ್ಗೀಸ್ (೧೯೯೩) "ಕ್ವಾಲಿಟಿ ಆಫ್ ಪ್ರೈಮರಿ ಸ್ಕೂಲಿಂಗ್ ಇನ್ ಇಂಡಿಯಾ" ಎ ಕೇಸ್ ಸ್ಟಡಿ ಆಫ್ ಮಧ್ಯಪ್ರದೇಶ" ಎಂಬ ಸಂಶೋದನೆಯಲ್ಲಿ ಕಂಡುಕೊಂಡ ಸಂಗತಿ ಎಂದರೆ ಕಲಿಯುವವರು ಮತ್ತು ಶಿಕ್ಷಕರು ಕಲಿಕೆಯ ಚಟುವಟಕೆಗಳು ಮುಖ್ಯೋಪಾಧ್ಯಾಯರ ಆಡಳಿತ ಕ್ರಮ ವೀಕ್ಷಣೆ ನಿಯಂತ್ರಣವನ್ನು ಶಾಲೆಯಲ್ಲಿ ಕೈಗೊಳ್ಳಬೇಕು. ಬೋದನಾ ಸಲಕರಣೆಗಳ ಬಳಕೆ, ನಿರಂತರ ಕಿರುಪರೀಕ್ಷೆಯ ಮೌಲ್ಯಮಾಪನ ಮತ್ತು ಸೂಕ್ತ ಮಾರ್ಗದರ್ಶನ ನೀಡಿದರೆ ಮಾತ್ರ ಪ್ರಾಥಮಿಕ ಶಿಕ್ಷಣದ ಗುಣಾತ್ಮಕತೆ ಹೆಚ್ಚಾಗಿ ಉತ್ತಮ ಶಾಲೆಯಾಗುತ್ತದೆ.[೧೮]

ವಿಶ್ವಬ್ಯಾಂಕ್ (೧೯೯೦) ಶಾಲೆಗಳಲ್ಲಿ ಕಲಿಕಾ ಗುಣಮಟ್ಟ ಹೆಚ್ಚಾಗಿ ಸುಧಾರಣೆ ಕಂಡು ಉತ್ತಮ ಶಾಲೆಯಾಗಿ ಪರಿವರ್ತನೆ ಮಾಡಬೇಕಾದರೆ ಶಾಲಾ ಪರೀಕ್ಷರ (school inspector) ಮಾತ್ರ ತುಂಬಾ ನಿರ್ಣಾಯಕವಾದುದಾಗಿದೆ ಎಂದು ವಿಶ್ವಬ್ಯಾಂಕ್ ತನ್ನ ವರದಿಯಲ್ಲಿ ಕಂಡುಕೊಂಡಿದೆ.[೧೯]

ಆರ್.ಸಿ. ಶರ್ಮಾ ಮತ್ತು ಸಿ.ಎಲ್. ಸಫರಾ (೧೯೬೬) ಅವರು ತಮ್ಮ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣ ಅಂದರೆ ೧ನೇ ತರಗತಿಯಿಂದ ೮ನೇ ತರಗತಿಯವರೆಗಿನ ಶಾಲಾ ಮಕ್ಕಳ ಕಲಿಕೆಯ ಸ್ಥಿತಿ ತುಂಬಾ ದುಸ್ಥಿರವಾಗಿದೆ. ಶೈಕ್ಷಣಿಕವಾಗಿ ಅವರು ಪ್ರಗತಿ ಕಾಣುತ್ತಿಲ್ಲ. ಕಲಿಕೆಯಲ್ಲಿ ತುಂಬಾ ಹಿನ್ನಡೆಯಿದೆ. ಈ ಹಿನ್ನಡೆಯ ಪ್ರಮಾಣ ಶೇ ೭೫.೧೯ ರಷ್ಟು ಗಂಡು ಮಕ್ಕಳು ಮತ್ತು ಶೇ. ೬೪.೭೪ ರಷ್ಟು ಹೆಣ್ಣುಮಕ್ಕಳು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಜಾಸ್ತಿ ಇರುವುದಕ್ಕೆ ಹಲವಾರು ಕಾರಣಗಳನ್ನು ನೀಡಿದ್ದಾರೆ. ಸ್ವತಃ ಮಕ್ಕಳ ಹೇಳಿಕೆ ಏನೆಂದರೆ "ಕುಟುಂಬದ (ಹಣಕಾಸಿನ) ಆರ್ಥಿಕ ಪರಿಸ್ಥಿತಿ" ಚೆನ್ನಾಗಿರದಿದ್ದರಿಂದ ಮತ್ತು ಕೆಲಸದ ಸಲುವಾಗಿ ವಲಸೆಯಿಂದ ನಾವು ಶಾಲೆಯಿಂದ ದೂರವಿದ್ದೇವೆ. ಪಾಲಕರ ಹೇಳಿಕೆ "ಕುಟುಂಬದ ಹಣಕಾಸಿನ ಕೊರತೆ ಜೊತೆಗೆ ಮಕ್ಕಳ ಕಲಿಕೆಯಲ್ಲಿ ಸುಧಾರಣೆ ಇಲ್ಲದುದರಿಂದ ಅವರನ್ನು ಶಾಲೆಗೆ ಕಳುಸುತ್ತಿಲ್ಲ". ಶಿಕ್ಷಕರು ಹೇಳುವ ಪ್ರಕಾರ "ಮಗುವಿನ ಮತ್ತು ಪಾಲಕರ ಆರೋಗ್ಯ ಸ್ಥಿತಿಗತಿ ಮಕ್ಕಳ ಮಾನಸಿಕ ಸ್ಥಿರತೆ, ಸಾಮಾಜಿಕ ತೊಂದರೆಗಳು, ಮಗುವಿನ ಕಲಿಕೆಯಲ್ಲಿ ಹಿನ್ನಡೆಯ ಜೊತೆಗೆ ಶಾಲೆಯ ಇತರೆ ಕೆಲವು ಕಾರಣಗಳು ಮತ್ತು ಬಡತನದಿಂದ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ತುಂಬಾ ಜಾಸ್ತಿ ಇದೆ. ಅದರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ ಇದೆ". ಈ ರೀತಿಯಾದ ಹಲವಾರು ಕಾರಣಗಳನ್ನು ನಾವು ಕಂಡು ಕೊಳ್ಳಬಹುದಾಗಿದೆ.[೨೦]

ಕನ್ನಡಪ್ರಭ ದಿನಪತ್ರಿಕೆ (೦೪.೦೧.೨೦೧೧): ಸರಕಾರವು ತಮ್ಮ ಸಂಪುಟ ಸಭೆಯಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗೆ ನೀಡುತ್ತಿದ್ದ ಸೈಕಲ್ ವಿತರಣೆ ಕಾರ್ಯದ ಬದಲಾಗಿ ಪ್ರತಿ ವಿದ್ಯಾರ್ಥಿಗೆ ರೂ. ೨೨೫೦ ನೀಡುವಂತೆ ನಿರ್ಣಯ ತೆಗೆದುಕೊಂಡಿದೆ. ಈ ನಿರ್ಧಾರದಂತೆ ಹಣವನ್ನು ನೀಡಿದರೆ ಪಾಲಕರು ಆ ಹಣವನ್ನು ಸ್ವಂತ ಖರ್ಚಿಗೆ ಬಳಕೆ ಮಾಡಿಕೊಂಡು ಮಕ್ಕಳಿಗೆ ಸೈಕಲ್ ಕೊಡಿಸದೇ ಇರುವುದೇ ಹೆಚ್ಚು. ಇದರಿಂದ ದೂರದಲ್ಲಿ ಶಾಲೆಯನ್ನು ಹೊಂದಿದ ಗ್ರಾಮದ ವಿದ್ಯಾರ್ಥಿಗಳು ತುಂಬಾ ಸಮಸ್ಯೆ ಅನುಭವಿಸಿ ಶಿಕ್ಷಣದಿಂದ ದೂರ ಉಳಿಯುವ ಸಂಭವು ಇದೆ.[೨೧]

ಅಂಜು ಜಿ. (೨೦೦೨) ಅವರು "ಭಾರತದಲ್ಲಿ ಲಿಂಗ-ಸಮಾನತೆ" ಎನ್ನುವ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ-ಸಮಾನತೆ ತರುವ ಉದ್ದೇಶದಿಂದ ಸರ್ಕಾರ ಹಲವಾರ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಅದು ವಿಫಲವಾಗಿದೆ. ಈ ಕಾರ್ಯಕ್ರಮಗಳು ಅಥವಾ ಯೋಕನೆಗಳು ಸಾಧಿಸಬೇಕೆಂದು ಇಟ್ಟುಕೊಂಡತಹ ಗುರಿಯನ್ನು ತಲುಪಿಲ್ಲ. ಇಂತಹ ಯೋಜನೆಗಳು ವಿನ್ಯಾಸ ಹಾಗೂ ಅನುಷ್ಠಾನದಲ್ಲಿ ಫಲಾನುಭವಿಗಳ ಕೊರತೆಯಿಂದ ಯಶಸ್ವಿ ಗೊಳಿಸುವಲ್ಲಿ ವಿಫಲವಾಗಿದೆ. ಇನ್ನೂ ಅನೇಕ ಯೋಜನೆಗಳು ಅನುಷ್ಠಾನದಲ್ಲಿನ ಲೋಪದೋಷ ಗಳಿಂದ ಯಶಸ್ವಿಯಾಗಿಲ್ಲ ಎಂದು ತಿಳಿಸಿದ್ದಾರೆ. ಇದಕ್ಕೆ ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಜೊತೆಯಲ್ಲಿಯೇ ಮಹಿಳೆಯರ/ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚು ಮಾಡಬೇಕು ಜೊತೆಗೆ ಶಾಲಾ ಹಂತದಲ್ಲಿಯೇ ಲಿಂಗ ಅಸಮಾನತೆಯಿಂದ ಉಂಟಾಗುವ ಶೇಷಣೆಯ ವಿವಿಧ ಮುಖಗಳನ್ನು ತಿಳಿಸಬೇಕು. ಆ ಮೂಲಕ ಮಹಿಳಾಭಿವೃದ್ಧಿಗಾಗಿ ರೂಪಿಸಿ ಆಚರಣೆಗೆ ತರುತ್ತಿರುವ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಮಹಿಳೆಯರನ್ನು ಜಾಗೃತಿ ಮೂಡಿಸುವ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ.[೨೨]

ರತನ್ ನಬೀಸ್ ಮತ್ತು ತಾನಿತಾ ಚಟರ್ಜಿ (೨೦೦೭) ಅವರ "ಎನ್‌ರೋಲಿಂಗ್ ಅಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಸ್ಕೂಲ್ಸ್, ಎ ಪಿಲ್ಟ್ ಸರ್ವೇ ಇನ್ ಈಸ್ಟನ್ ಸ್ಲಮ್ ಆಪ್ ಕೋಲ್ಕತ್ತ" ಎನ್ನುವ ಲೇಖನದಲ್ಲಿ ಕೊಲ್ಕತ್ತಾದ ಪೂರ್ವ ಕೋಳಗೇರಿ ಪ್ರದೇಶದಲ್ಲಿನ ಶೈಕ್ಷಣಿಕ ಸ್ಥಿತಿಗತಿಯನ್ನು ವಿವರಿಸುವ ಪ್ರಯತ್ನ ಲೇಖಕರು ಮಾಡಿದ್ದಾರೆ. ಸರ್ವ ಶಿಕ್ಷಣ ಅಭಿಯಾನ ಬಂದ ಮೇಲೆ ಅಲ್ಪಪ್ರಮಾಣದಲ್ಲಿ ಕೊಳಗೇರಿಗಳಲ್ಲಿ ದಾಖಲಾತಿ ಮತ್ತು ಹಾಜರಾತಿಯಲ್ಲಿ ಪ್ರಗತಿ ಕಂಡಿದಡ ಆದರೆ ಹೆಣ್ಣು ಮಕ್ಕಳ ದಾಖಲಾತಿ ಈ ಪ್ರದೇಶದಲ್ಲಿ ಉತ್ತಮವಾಗಿಲ್ಲ ಎಂದಿದ್ದಾರೆ. ಇನ್ನು ಅನೇಕ ಮಕ್ಕಳು ಮಧ್ಯದಲೇ ಶಾಲೆ ಬಿಡುತ್ತಿದ್ದಾರೆ.

ಇವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚು ಎಂದು ಹೇಳಿದ್ದಾರೆ. ಇವರು ವಲಸೆ ಹೋಗಿ ಕಾರ್ಮಿಕರ ವರ್ಗಕ್ಕೆ ಸೇರುತ್ತಾರೆ. ಇಂತಹ ಪರಿಸ್ಥಿಯಲ್ಲಿ ಅಂತಹ ವಂಚಿತರಾದ ಮಕ್ಕಳನ್ನು ಮತ್ತೆ ಶಾಲೆ ಕರೆತುವ ಪ್ರಯತ್ನ ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಾಡಬೇಕು ಎಂದು ಅಭಿಪ್ರಾಯಪಟ್ಟದ್ದಾರೆ. ಹೀಗೆ ಶಾಲೆ ಬಿಟ್ಟ ಮಕ್ಕಳಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕರೆತರುವುದು ಬಹಳ ದೊಡ್ಡ ಸಮಸ್ಯೆಯಾಗಿದೆ ಇದನ್ನು ನಾಗರಿಕ ಸಮಾಜದಲ್ಲಿ ಜಾಗೃತಿ ಮೂಡಿಸಿವ ಮೂಲಕ ಉತ್ತಮ ಪಡಿಸಲು ಸಾಧ್ಯ.[೨೩] ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಬಡತನ, ಅಸಮಾನತೆ, ನಿರುದ್ಯೋಗ, ಅನಕ್ಷರತೆ, ಜಾತಿಯತೆ ಇವುಗಳನ್ನು ಹೋಗಲಾಡಿಸುವಂತಹ ಪ್ರಯತ್ನವನ್ನು ವ್ಯಕ್ತಿ, ಸಂಘ–ಸಂಸ್ಥೆಗಳು, ಸರಕಾರ ಮತಯ್ತು ಸಮಾಜ ಜಂಟಿಯಾಗಿ ಮಾಡಬೇಕಾಗಿದೆ. ಆಗ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಲ ಶಿಕ್ಷಣ ಸುಧಾರಣೆಯಾಗಳೂ ಸಾಧ್ಯ ಎಂಬ ಆಸೆಯವನ್ನು ವ್ಯಕ್ತಪಡಿಸಿದ್ದಾರೆ.

ವರ್ಲ್ಡ್ ಬ್ಯಾಂಕ (೧೯೯೭) ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ಎಂಬ ನೀತಿಯು ಆರ್ಥಿಕ ಅಭಿವೃದ್ಧಿಗೆ ಪೂರಕದ ಜೊತೆಗೆ ಭಾರತದ ಉದಾರೀಕರಣ ನೀತಿಗೆ ಅನುಕೂಲಕರ ವಾಗುತ್ತದೆ. ಇದರಿಂದ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಸಾರ್ವತ್ರಿಕರಣದ ನೀತಿಗೆ ಅನುಸಾರ ಇನ್ನೂ ಅನೇಕ ರೀತಿಯಲ್ಲಿ ಹಣಕಾಸಿನ ಜೊತೆಗೆ ಇತರ ಸೌಕರ್ಯವನ್ನು ಶಾಲೆಗಳಿಗೆ ಸರ್ಕಾರ ಒದಗಿಸಬೇಕು. ಅಂದಾಗ ಶಿಕ್ಷಣದ ಪ್ರಗತಿಯಾಗಿ ಜನರ ಆರೋಗ್ಯದ ಜೊತೆಗೆ ಅವರ ಜೀವನ ಮಧ್ಯದಲ್ಲಿ ಸುಧಾರಣೆ ಆಗಲಿಕ್ಕೆ ಸಹಾಯಕವಾಗುತ್ತದೆ.[೨೪]

ಹೆಗ್ಡೆ ಡಿ.ವಿ. (೧೯೭೯) ಅವರ **ಮಕ್ಕಳ ಅಭಿವೃದ್ದಿ ಎಲ್ಲರ ಹೊಣೆ** ಎಂಬ ತಮ್ಮ ಲೇಖನದಲ್ಲಿ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣ, ದೈಹಿಕ ಶಿಕ್ಷಣ ಮತ್ತು ಭೌದ್ದಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳು ಅಗತ್ಯ. ವಾಸ್ತವವಾಗಿ ಬಡತನ, ಭೌಗೋಳಿಕ, ಸಾಂಸ್ಕೃತಿಕ ಅಥವಾ ದೈಹಿಕ ಕಾರಣಗಳೊಂದಿಗೆ ಇನ್ನಿತರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶಿಕ್ಷಣದ ಕೊರತೆಗೆ ಕಾರಣವಾಗುತ್ತದೆ. ಅಲ್ಲದೆ ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳ ಜೊತೆಗೆ ಶಿಕ್ಷಣ ಪಡೆದುಕೊಳ್ಳುವ ಇಚ್ಛಾಶಕ್ತಿ ಮತ್ತು ಮನೋಪ್ರವೃತ್ತಿಗಳು ಸಹ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾಗಿರಬೇಕಾಗುತ್ತದೆ. ಆದ್ದರಿಂದ ಈ ಎಲ್ಲಾ ಅಧ್ಯಯನಗಳು ಗ್ರಾಮೀಣ ಭಾಗದ ಹೆಣ್ಣುಮಕ್ಕಳು ಶೈಕ್ಷಣಿಕವಾಗಿ ಯಾಕೆ ಹಿಂದುಳಿದಿದ್ದಾರೆ ಎಂಬ ಅಂಶವನ್ನು ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ನೆಲೆಯನ್ನು ಅರ್ಥಮಾಡಿಕೊಳ್ಳುವ ಮೂಲಕ ಶೈಕ್ಷಣಿಕ ಸ್ಥಿತಿಗತಿಯನ್ನು ವಿವರಿಸಲು ವಿಫಲವಾಗಿದೆ. ಈ

ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ಶಿಕ್ಷಣ ಕುರಿತಂತೆ ಗ್ರಾಮೀಣ ಹೆಣ್ಣುಮಕ್ಕಳು ಮನೋಪ್ರವೃತ್ತಿ ಮತ್ತು ಶಿಕ್ಷಣ ಪಡೆಯುವಾಗ ಹೆಣ್ಣುಮಕ್ಕಳು ಸ್ಥಳೀಯವಾಗಿ ಎದುರಿಸುತ್ತಿರುವ ಸಮಸ್ಯೆಯ ಕಾರಣ ಪರಿಹಾರಗಳನ್ನೊಳಗೊಂಡಂತೆ ಗ್ರಾಮೀಣ ಹೆಣ್ಣುಮಕ್ಕಳ ಸ್ಥಿತಿ ತಿಳಿದುಕೊಳ್ಳುವ ಅಗತ್ಯವಿದೆ ಎಂದಿದ್ದಾರೆ.[೨೫]

ಎಚ್.ಡಿ. ಪ್ರಶಾಂತ್ ಅವರ **ಶೈಕ್ಷಣಿಕ ಪ್ರೇರಕಾಶಗಳ ಸಾಮಾಜಿಕ ಆಯಾಮಗಳು** ಎಂಬ ಪುಸ್ತಕದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸುವವರು ಕೂಡ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ನೀಡಲು ಉದ್ದೇಶಿಸಿರುವ ಮಟ್ಟಕೂಡ ಬಹಳ ಕಡಿಮೆ. ಅತ್ಯಧಿಕ ಸಂಖ್ಯೆಯ ಪೋಷಕರು ತಮ್ಮ ಗಂಡುಮಕ್ಕಳು ಓದುವತನಕ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ ಕನಿಷ್ಟ ಪಕ್ಷ ೧೦ ನೇ ತರಗತಿಯವರಗೆ ಓದಿಸಲು ಕಟ್ಟಿ ಬದ್ದರಾಗಿದ್ದಾರೆ. ಆದರೆ ಬಹುತೇಕ ಪೋಷಕರು ಹೆಣ್ಣುಮಕ್ಕಳ ಶಿಕ್ಷಣ ಕುರಿತು ಇಂತಹ ಮನೋಭಾವನೆಯನ್ನು ಹೊಂದಿರುವುದಿಲ್ಲ. ಸ್ವಲ್ಪ ಪ್ರಮಾಣದ ಹೆಣ್ಣುಮಕ್ಕಳು ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣ ಪಡೆಯುವುದನ್ನು ವಾಸ್ತವಿಕವಾಗಿ ಒಪ್ಪಿಕೊಳ್ಳುವ ಸ್ಥಿತಿಯಲಿಲ್ಲ ಇದಕ್ಕೆ ಪ್ರಮುಖ ಕಾರಣ ತಮ್ಮ ಹಳ್ಳಿಗಳಿಂದ ಸ್ವಲ್ಪ ದೂರದಲ್ಲಿ ಶಾಲೆಗಳಿರುವುದು ಮತ್ತೊಂದು ಗ್ರಾಮದ ಶಾಲೆಗೆ ಹೆಣ್ಣುಮಕ್ಕಳು ಹೋಗುವುದು ಕೆಲವೇ ಪೋಷಕರಿಗೆ ಇಷ್ಟವಿಲ್ಲದಿರುವುದು. ಜೊತೆಗೆ ಇದು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳು ದೊರೆಯದೆ ಇರುವ ಸಮಸ್ಯೆಯನ್ನು ಎತ್ತಿತೋರಿಸುತ್ತದೆ ಎಂದು ತಿಳಿದು ಬಂದಿದೆ.[೨೬]

ಟಿ.ಆರ್. ಚಂದ್ರಶೇಖರ್ ಅವರು **ಲಿಂಗ ಸಂಬಂಧಿ ಆಯಾಮಗಳು ಅಭಿವೃದ್ದಿ ಅಧ್ಯಯನ ಪ್ರಬಂಧಗಳು** ಎಂಬ ಪುಸ್ತಕದಲ್ಲಿ ಅಭಿವೃದ್ದಿಯ ಪ್ರಾಥಮಿಕ ಶಿಕ್ಷಣ, ಆರೋಗ್ಯ, ಆಹಾರ, ಭದ್ರತೆ, ದೈಹಿಕ ಘನತೆ, ಸ್ವಾಯತ್ತತೆಗಳಿಂದ ಮಹಿಳೆಯರು ವ್ಯವಸ್ಥಿತವಾಗಿ ವಂಚಿತರಾಗಿತ್ತಿದ್ದಾರೆ. ಅಮರ್ತ್ಯಾಸೇನ್ ಪ್ರಕಾರ ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ ಇದ್ದಿದ್ದರೆ ಅಭಿವೃದ್ದಿಯ ಪ್ರಾಥಮಿಕ ಸಂಗತಿಗಳಾದ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಪೌಷ್ಠಿಕತೆ, ಉದ್ಯೋಗ, ಕೂಲಿ ಮುಂತಾದ ಸಂಗತಿಗಳಲ್ಲಿ ಮಹಿಳೆಯರ ತಾರತಮ್ಯ ಎದುರಿಸಬೇಕಾಗಿರಲಿಲ್ಲ ಯು.ಎನ್.ಡಿ.ಪಿ.ಯ ೧೯೯೦ ರಿಂದ ಪ್ರಕಟಿಸುತ್ತಿರುವ ಮಾನವ ಅಭಿವೃದ್ದಿ ವರದಿಯಲ್ಲಿ ಕಂಡುಬರುವಂತಹ ಪ್ರಪಂಚದ ಯಾವುದೇ ದೇಶದಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣವು ಪುರುಷರ ಸಾಕ್ಷರತೆ ಪ್ರಮಾಣಕ್ಕೆ ಸಮನಾಗಿಲ್ಲ ಮಹಿಳೆಯರು ಮನೆಯೊಳಗೆ ಮತ್ತು ಮನೆಯ ಹೊರಗೂ ದುಡಿಮೆ ಮಾಡಬೇಕಾಗಿರುವುದರಿಂದ ಉದ್ಯೋಗದಲ್ಲಿ ವೃತ್ತಿ ನೈಪುಣ್ಯತೆಯನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಮಹಿಳೆಯರು ತಮ್ಮ ಗೃಹಣಿಯ

ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಸಂಬಂದಿಗಳಿಗೆ ಬಿಟ್ಟುಕೊಡುತ್ತಾರೆ. ಇಂತಹ ವಿರೋಧಭಾಸಗಳು ಇರುವುದನ್ನು ಕಂಡಾಗ ಹೆಣ್ಣು ಮಕ್ಕಳು ಕನಿಷ್ಠ ಸೌಲಭ್ಯಗಳನ್ನು ಪಡೆಯುವಾಗ ದೊಡ್ಡ ಸಂಗತಿಯಾಗಿದೆ. ಇಂತಹ ತೊಂದರೆಗಳನ್ನು ನಿರ್ವಹಿಸುವುದರ ಮೂಲಕ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ಅಗತ್ಯತೆ ಇದೆ ಎಂದು ತಿಳಿದು ಬಂದಿದೆ.[೨೭]

ಟಿ.ಆರ್ ಚಂದ್ರಶೇಖರ್ ಅವರ **ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ** ಎಂಬ ಪುಸ್ತಕದಲ್ಲಿ ಅತ್ಯಂತ ಕೂತೂಹಲದ ಸಂಗತಿಯೆಂದರೆ ಶಾಲೆ ಬಿಟ್ಟ ಮಕ್ಕಳ ಲಿಂಗ ಸ್ವರೂಪವನ್ನು ಪರಿಶೀಲಿಸಿದಾಗ ಹೆಣ್ಣುಮಕ್ಕಳ ಪ್ರಮಾಣವು ಗಂಡುಮಕ್ಕಳ ಪ್ರಮಾಣಕ್ಕೆ ಸರಿಸುಮಾರು ಸಮನಾಗಿರುವುದು ಕಂಡುಬರುತ್ತದೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಗಂಡು ಮಕ್ಕಳ ಪ್ರಮಾಣ ಶೇ ೧೪.೫೯ ಮತ್ತು ಹೆಣ್ಣುಮಕ್ಕಳ ಪ್ರಮಾಣ ಶೇ ೧೪.೩೪ ಇದೇ ಸ್ಥಿತಿ ಸರಿಸುಮಾರು ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತದೆ.[೨೮]

ಪ್ರಚಲಿತದಲ್ಲಿರುವ ಸಂಗತಿಯೆಂದರೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಲ್ಲಿ ಹೆಣ್ಣುಮಕ್ಕಳ ಪ್ರಮಾಣ ಅಧಿಕ ಎಂಬುದಾಗಿದೆ. ಈ ನಂಬಿಕೆ ವ್ಯಾಪಕವಾಗಿ ಹರಡಿದೆ. ಇದು ಎಲ್ಲಾ ಸಂದರ್ಭದಲ್ಲೂ ನಿಜವಾಗಿರಲೂ ಸಾಧ್ಯವಿಲ್ಲ. ಬದಲಾಗಿ ಇಲ್ಲಿ ಹೆಣ್ಣು–ಗಂಡುಗಳ ನಡುವೆ ತೀವ್ರ ಅಂತರಗಳೇನಿಲ್ಲ. ಇದೇ ಮಾತನ್ನು ಪ್ರೌಡ ಹಾಗೂ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಮಗೆ ಮಾಹಿತಿ ಇಲ್ಲದಿರುವುದರಿಂದ ಅದನ್ನು ಕುರಿತು ಹೇಳಲಾಗದು. ಆದರೆ ಉನ್ನತ ಹಂತಕ್ಕೆ ಸಾಗಿದಂತೆ ಹೆಣ್ಣುಮಕ್ಕಳ ಪ್ರಮಾಣವು ಕಡಿಮೆ ಯಾಗುವುದನ್ನು ೧ರಿಂದ ೭ನೇ ತರಗತಿ ಲಿಂಗ ಸಂಬಂಧಿ ತಾರತಮ್ಯದ ಸೂಕ್ಷ್ಮತೆಯನ್ನು ಗುರುತಿಸಬಹುದು. ಇಲ್ಲಿ ಗಮನಿಸಲೇಬೇಕಾದ ಸಂಗತಿಯೆಂದರೆ, ಹೆಣ್ಣುಮಕ್ಕಳು ಸಬಲೀಕರಣ ಗೊಳ್ಳಬೇಕಾದರೆ ಶಿಕ್ಷಣವು ಒಂದು ಭಾಗಯೆಂದು ಹಲವು ಅಧ್ಯಯನಗಳು ಹೇಳಿವೆ. ಅಂದರೆ ಇಂತಹ ಶಿಕ್ಷಣದಿಂದ ವಂಚಿತಗೊಳ್ಳಲು ಮನೆಯಲ್ಲಿ ಹಿರಿಯರ ಒತ್ತಾಯ, ಬಡತನ, ದುಡಿಯುವ ವರ್ಗಗಳಾಗಿ ಹೆಣ್ಣುಮಕ್ಕಳು ಸಮಾಜದಲ್ಲಿ ಪರಿವರ್ತನೆಯಾಗುವುದು ಇಂತಹ ಹಲವು ಕಾರಣಗಳಿಂದ ಹೆಣ್ಣುಮಕ್ಕಳನ್ನು ರಕ್ಷಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಹೆಚ್.ಡಿ ಪ್ರಶಾಂತ್ ಅವರ **ಹೆಣ್ಣುಮಕ್ಕಳ ಶಿಕ್ಷಣದ ಒಂದು ಸ್ಥೂಲನೋಟ** ಪ್ರಬಂಧದಲ್ಲಿ ಇತ್ತೀಚಿನ ದಿನಗಳಲ್ಲಿ ಲಿಂಗಸಂಬಂದಿ ಆಯಾಮಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಹೆಚ್ಚಾಗಿದೆ ಹಾಗೂ ಶಾಲಾ ದಾಖಲಾತಿಯಲ್ಲಿ ಹೆಣ್ಣು ಮತ್ತು ಗಂಡುಮಕ್ಕಳ ಭಾಗವಹಿಸುವಿಕೆ ಹೆಚ್ಚಾಗಿದೆ. ಶಾಲಾ ದಾಖಲಾತಿಯಲ್ಲಿ ಹೆಣ್ಣು ಮತ್ತು ಗಂಡುಮಕ್ಕಳ ನಡುವಿನ ಅಂತರ ಸಾಕಷ್ಟು ಕಡಿಮೆ ಯಾದರು ಗಂಡು ಮಕ್ಕಳ ಶಾಲಾ

ದಾಖಲಾತಿಗೆ ಹೋಲಿಸಿದರೆ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಸ್ವಲ್ಪ ಕಡಿಮೆ ಇದೆ. ಒಟ್ಟು ಶಾಲಾ ದಾಖಲಾತಿ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡಾಗ ನಗರ-ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಶಾಲಾ ದಾಖಲಾತಿ ದರದಲ್ಲಿ ಸಾಕಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪಂಗಡ, ಇತರೆ ಹಿಂದುಳಿದ ಜಾತಿ ಹಾಗೂ ಕೇಲವು ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಹೆಣ್ಣುಮಕ್ಕಳ ಶಾಲಾ ದಾಖಲಾತಿಯಲ್ಲಿ ಇನ್ನೂ ಸಹ ಬಹಳ ಅಂತರ ವಿರುವುದು ಕಂಡುಬರುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಹೆಣ್ಣುಮಕ್ಕಳ ಮತ್ತು ಗಂಡು ಮಕ್ಕಳಲ್ಲಿ ಶಾಲಾ ದಾಖಲಾತಿಯಲ್ಲಿ ಹೆಣ್ಣುಮಕ್ಕಳ ಪ್ರಮಾಣ ಕಡಿಮೆಯಿರುವುದನ್ನು ನೋಡಿದಾಗ ಮನೆಯಲ್ಲಿ ಸ್ತ್ರೀಯರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಹಲವು ಸಂಗತಿಗಳಿಂದ ಕೊಡದೆಯಿರುವುದನ್ನು ನೋಡಲಾಗಿದೆ. ಅಂದರೆ ಹೆಣ್ಣುಮಕ್ಕಳಲ್ಲಿರುವ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗಬೇಕಾದರೆ ಅವರಿಗೂ ಸಹ ಗಂಡುಮಕ್ಕಳಿಗೆ ನೀಡಿದ ವಿಧಾನದಲ್ಲಿಯೇ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.[೨೯]

ಜೋಷಿ ಜಿ.ಎಸ್. ಅವರು ಬರೋಡ ಜಿಲ್ಲೆಗೆ ಸಂಬಂಧಿಸಿದಂತೆ **ಹಿಂದುಳಿದ ವರ್ಗದವರ ಶೈಕ್ಷಣಿಕ ಸಮಸ್ಯೆಗಳು** ಎಂಬ ಪುಸ್ತಕದಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಶಾಲೆಯಲ್ಲಿ ಕೆಳಮಟ್ಟದ ಸಾಧನೆ ತೋರಲು ಕಾರಣವೆನೆಂದರೆ ಬಗ್ಗೆ ಅಧ್ಯಾಯನ ಮಾಡುತ್ತಾ ಶಿಕ್ಷಕರು ಮತ್ತು ವಿಷಯ ವಸ್ತುಗಳನ್ನು ವಿದ್ಯಾರ್ಥಿಗಳು ಇಷ್ಟಪಡದಿರುವುದು ಕೆಳಮಟ್ಟದ ಸಾಧನೆ ತೋರಲು ಕಾರಣವಾಗಿದೆ ಮತ್ತು ಈ ಮಕ್ಕಳಲ್ಲಿನ ಸಾಮಾಜಿಕ ಸಂಯೋಜನೆ ಮತ್ತು ಸಾಧನೆಗಳ ನಡುವೆ ಸಂಬಂಧವಿರುವುದು ಇದರ ಅಧ್ಯಯನ ಫಲಿತವಾಗಿದೆ ಎಂದಿದ್ದಾರೆ. ಅಂದರೆ ಮಕ್ಕಳಿಗೆ ಪಠ್ಯ ಇಷ್ಟಯಿಲ್ಲದಿರುವ ಪ್ರಶ್ನೆಯಲ್ಲ ಅದನ್ನು ಬೋಧಿಸುವ ಶಿಕ್ಷಕರು ಮನರಂಜನಾತ್ಮಕವಾಗಿ ಹೇಳುವಂತಹ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.[೩೦]

ಕೀಲು ಪಿ ಅವರು ಕೇರಳ **ಪ್ರೌಢಶಾಲಾ ವಿದ್ಯಾರ್ಥಿನಿಯರ ಮಾತೃಭಾಷೆಯಲ್ಲಿನ ಮೂಲಭಾಷೆ ಕೌಶಲ್ಯಗಳು** ಎಂಬ ಪಿ.ಎಚ್.ಡಿ ಪ್ರಬಂಧದಲ್ಲಿ ಕೆಲವು ಸಾಮಾಜಿಕ ಚಲಕಗಳ ಸಹ ಸಂಬಂಧಗಳನ್ನು ಕುರಿತಾದ ಅಧ್ಯಯನ ಕೈಗೊಂಡು ೯ನೇ ತರಗತಿಯ ೧೦೦ ವಿದ್ಯಾರ್ಥಿನಿಯರನ್ನು ತೆಗೆದುಕೊಂಡು ಭಾಷೆಯಲ್ಲಿ ಆಲಿಸುವಿಕೆ ಗ್ರಹಿಸುವಿಕೆ ಪರೀಕ್ಷಣ, ಸಾಮಾಜಿಕ, ಆರ್ಥಿಕ ಮಟ್ಟಮಾಪನ, ಶಾಬ್ದಿಕ ಸಾಮಾಜಿಕ ಬುದ್ಧಿಶಕ್ತಿ ಪರೀಕ್ಷಣ ಮುಂತಾದವುಗಳನ್ನು ಕಲೆಹಾಕಿ ಪೋಷಕರ ಆದಾಯ, ಉದ್ಯೋಗ ಮತ್ತು ಶಿಕ್ಷಣ, ಸಾಮಾಜಿಕ, ಕೌಟುಂಬಿಕವಾದ ಅಂತಸ್ತುಗಳು, ಆಲಿಸುವಿಕೆ, ಗ್ರಹಿಕೆ, ಓದುಗಾರಿಕೆ ಗ್ರಹಿಕೆ, ಕೈಬರಹ ವೇಗ, ಶಬ್ದ ಸಂಪತ್ತು, ಪೋಷಕರ ಶೈಕ್ಷಣಿಕ ಮಟ್ಟ ಮತ್ತು ಕುಟುಂಬದ ಸಾಂಸ್ಕೃತಿಕ ಮಟ್ಟ ಹಾಗೂ ಶಿಕ್ಷಣ, ಕಲಿಕೆಗೆ ಮನೆಯಲ್ಲಿರುವ ಸೌಲಭ್ಯಗಳು

ಅನಾನುಕೂಲಗಳಾಗಿವೆ. ಪೋಷಕರ ಉದ್ಯೋಗಗಳಲ್ಲಿ ಗಮನಾರ್ಹ ವ್ಯತ್ಯಾಸವಿದೆಯೆಂಬ ಅಂಶವನ್ನು ಅಧ್ಯಾಯನದಲ್ಲಿ ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಪೋಷಕರು ಹೆಣ್ಣುಮಕ್ಕಳ ಶಿಕ್ಷಣ ನಿರ್ವಹಣೆಯಲ್ಲಿ ತೆಗೆದುಕೊಳ್ಳುವ ನಿರ್ಧಾರಗಳ ಕಡೆಗೂ ಹೆಚ್ಚಿನ ಗಮನಹರಿಸಬೇಕಾದ ಅಗತ್ಯವಿದೆ ಎಂದು ತಿಳಿಯಲಾಗಿದೆ.[೩೧]

ಅಗರ್ ವಾಲ್ ಅವರು **ಆ್ಯನ್ ಅಸೆಸ್‌ಮೆಂಟ್ ಆಫ್ ಟ್ರೆಂಡ್ ಇನ್ ಆಕ್ಸೆಸ್ ಆಂಡ್ ರಿಟೆನ್ಷನ್** ಎಂಬ ಪುಸ್ತಕದಲ್ಲಿ ಒಟ್ಟು ಭಾರತದ ಜನಸಂಖ್ಯೆಯಲ್ಲಿ ಶೇ ೧೬.೨೧ ರಷ್ಟು ದಲಿತರಿದ್ದು ಭಾರತದಲ್ಲಿ ಇಷ್ಟು ದಲಿತರಲ್ಲಿ ಶೇ ೪೧.೫ ರಷ್ಟು ಮಾತ್ರ ಸಾಕ್ಷರರಾಗಿರುವುದು ಹಿಂದುಳಿದವರ ಶೈಕ್ಷಣಿಕ ಸ್ಥಿತಿಗತಿಯನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿಯ ೪೭.೩ ರಷ್ಟಿರುವ ದಲಿತರ ಸಾಕ್ಷರತಾ ಪ್ರಮಾಣವು ಭಾರತದ ಹಿಂದುಳಿದಿರುವರ ಸಾಕ್ಷರತಾ ಪ್ರಮಾಣವನ್ನು ಲಿಂಗವಾರು ನೋಡಿದರೆ ಶೇ. ೫೪.೭೦ ರಷ್ಟು ಪುರುಷರು ಮತ್ತು ಶೇ ೩೫.೬ ರಷ್ಟು ಮಹಿಳೆಯರು ಸಾಕ್ಷರರಾಗಿರುವುದು ಕಂಡುಬಂದಿದೆ. ನಿರ್ದಿಷ್ಟವಾಗಿ ೬ ರಿಂದ ೧೪ ವಯೋಮಾನದ ಶೇಕಡ ೬೭.೫ ರಷ್ಟು ಮಕ್ಕಳು ಮಾತ್ರ ಔಪಚಾರಿಕವಾಗಿ ಶಾಲೆಗೆ ದಾಖಲಿಸಿದ್ದಾರೆ. ಆದರೆ ಉಳಿದ ಶೇ ೩೭ ರಷ್ಟು ಹಿಂದುಳಿದ ಮಕ್ಕಳು ಶಾಲೆಗೆ ದಾಖಲಾಗದೆ ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆ. ಶಾಲೆಗೆ ದಾಖಲಾದ ಮತ್ತು ಮಧ್ಯದಲ್ಲಿಯೇ ಶಾಲೆ ಬಿಡುವ ೬ ರಿಂದ ೧೪ ವಯೋಮಾನದ ಹಿಂದುಳಿದ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೆ ಜಾಸ್ತಿಯಾಗಿ ರುವುದು ಆತಂಕದ ವಿಷಯವಾಗಿದೆ ಎಂದಿದ್ದಾರೆ ಲೇಖಕರು. ಮೇಲಿನ ಅಂಶವನ್ನು ನೋಡಿದಾಗ ಹೆಣ್ಣುಮಕ್ಕಳು ಶಾಲೆಗೆ ಹೋಗಬೇಕಾದರೆ ಹಲವು ಸವಾಲುಗಳನ್ನು ಎದರಿಸಿ ಹೋಗುವಂತಹ ವ್ಯವಸ್ಥೆ ನೀರ್ಮಾಣಗೊಂಡಿರುವಾಗ ಅವರಿಗೆ ಉತ್ತಮ ರೀತಿಯ ಶಾಲಾ ಸೌಲಭ್ಯಗಳನ್ನು ನೀಡುವ ಮೂಲಕ ಹಿಂದುಳಿದ ಮಕ್ಕಳನ್ನು ಮುಂದುವರಿಸಬೇಕಾದ ಅವಶ್ಯಕತೆಯಿದೆ ಎಂದು ತಿಳಿಯಲಾಗಿದೆ.[೩೨]

ಕೆ.ಆರ್ ಶಶಿಧರ್ ಅವರ **ಸಾಮಾಜಿಕ ಶಿಕ್ಷಣ ಆಯುಕ್ತರು ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ** ಸಂದರ್ಶನದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ಪ್ರದೇಶಗಳನ್ನು ಗುರುತಿಸಿ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲಿ ತರಗತಿಯನ್ನು ಮುಂದುವರಿಸಲು ಅನುಕೂಲ ವಾಗುವಂತೆ ಹಾಗೂ ರಾಷ್ಟ್ರದ Equity ಅಂಶವನ್ನು ಆಧರಿಸಿ ಶಾಲೆಗಳನ್ನು ಪ್ರಾರಂಭಿಸುವುದು ರಾಷ್ಟ್ರದಲ್ಲಿ ಇಂತಹ ೬ ಸಾವಿರ ಶಾಲೆಗಳಿಗೆ ಮಂಜೂರಾತಿ ದೊರಕಿದ್ದು ಕರ್ನಾಟಕ ರಾಜ್ಯಕ್ಕೆ ಇಂತಹ ೭೪ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಈ ಶಾಲೆಗಳಲ್ಲಿ ೬ರಿಂದ ೧೦ನೇ ತರಗತಿಯವರಗೆ ಕಲಿಯುವ ಅವಕಾಶವಿದ್ದು ಪ್ರತಿ ತರಗತಿಗೂ ಎರಡು ವಿಭಾಗಗಳಿಗೆ

ಅವಕಾಶವಿದ್ದು ಒಂದು ಆಂಗ್ಲ ಮಾಧ್ಯಮ ಮತ್ತೊಂದು ಪ್ರಾಂತೀಯ ಭಾಷಾ ಮಾಧ್ಯಮದ ವಿಭಾಗಗಳಿರುತ್ತದೆ. ಪ್ರತಿ ತರಗತಿಗೆ ೮೦ ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. ರಾಷ್ಟ್ರದ ಸಾಕ್ಷರತೆಯ ದೃಷ್ಟಿಯಿಂದ ಹೆಣ್ಣುಮಕ್ಕಳ ದಾಖಲಾತಿ ಉಳಿಯುವಿಕೆ ಅಂಶಗಳ ಆಧಾರದ ಮೇಲೆ ಕೇಂದ್ರ ಸರ್ಕಾರವು ಹೆಣ್ಣುಮಕ್ಕಳು ೧೨ನೇ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಕರ್ನಾಟಕ ರಾಜ್ಯ ೬೨ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಈ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅನುಮೋದನೆ ದೊರೆತಿರುತ್ತದೆ. ಜೊತೆಗೆ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಯಲ್ಲಿನ ೧ ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳ ಆರೋಗ್ಯಕ್ಕೆ ಸಂಬಂದಿಸಿದಂತೆ ಹೇಲ್ತ್ ಕಾರ್ಡ್‌ಗಳನ್ನು ಶಾಲೆಗಳಿಗೆ ವಿತರಿಸಿದೆ ಎಂದು ಆಯುಕ್ತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.[೩೩]

ಟಿ.ಎಚ್ ಕುಮಾರ್ ಅವರ **ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ** ಎಂಬ ಪುಸ್ತಕದಲ್ಲಿ ನಾವು ಕಳೆದ ಶತಮಾನವನ್ನು ಶೇ. ೫ರ ಸಾಕ್ಷರತೆಯಿಂದ ಪ್ರಾರಂಭಿಸಿದೆವು ಎಂಬುದನ್ನು ಮರೆಯಲಾಗದು ಶತಮಾನದ ಮಧ್ಯದ ವೇಳೆಗೆ ಶೇ ೨೦ರಷ್ಟು ಸಾಧನೆ ನೋಡಲಾಗಿದೆ. ೨೦೧೧ರ ಜನಗಣತಿಯಂತೆ ಸಾಕ್ಷರತೆಯ ಪ್ರಮಾಣವು ಒಟ್ಟಾರೆ ಶೇ. ೭೪.೪ ರಷ್ಟು ಭಾರತದಲ್ಲಿ ಕಂಡುಬಂದರೆ ಪುರುಷರ ಸಾಕ್ಷತೆಯ ಪ್ರಮಾಣವು ಶೇ ೮೨.೧೪ ರಷ್ಟು ಕಂಡುಬಂದು ಮಹಿಳೆಯರ ಸಾಕ್ಷರತೆಯ ಪ್ರಮಾಣ ೬೪.೯೬ ರಷ್ಟು ಕಂಡುಬಂದು ನಮ್ಮ ನೀತಿ ನೀರೂಪಣೆಯಲ್ಲಿ ಕಂಡುಬಂದ ಉತ್ಸಾಹ ಅದನ್ನು ಜಾರಿಗೆ ತರುವಲ್ಲಿ ಇರಲಿಲ್ಲ. ರಾಜಕೀಯ ಇಚ್ಛಾಶಕ್ತಿಯು ಸಹ ಮುಖ್ಯ ಸಾರ್ವತ್ರೀಕರಣಕ್ಕೆ ಪ್ರತಿಸಲ ಇಂದೊಂದು ಗಡುವನ್ನು ವಿಸ್ತರಿಸುತ್ತಾ ಬಂದೆವು ಶಿಕ್ಷಣಕ್ಕೆ ರಾಷ್ಟ್ರಮಟ್ಟದಲ್ಲಿ ನಾವು ಚರ್ಚೆಮಾಡುತ್ತಾ ಇದೆ ಹಣ ೧.೧ ಬಿಲಿಯನ್ ರೂಪಾಯಿಗಳಿಂದ (೧೯೫೦-೫೧) ೪೧೨ ಬಿಲಿಯನ್ (೧೯೯೭-೯೮) ಹೆರಿದೆ. ಆದರೆ ೩೬೦ ಪಟ್ಟು ಹೆಚ್ಚಾಗಿದೆ ಇಂದು ಪ್ರಮುಖ ಅಂಶವೆಂದರೆ ಇಷ್ಟು ದೊಡ್ಡ ಪ್ರಮಾಣದ ಬಂಡವಾಳ ಹೆಚ್ಚಳವನ್ನು ನಾವು ೧೯೫೦-೫೧ರ ಸಮಯದಲ್ಲಿ ರೂಪಾಯಿ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ಪ್ರಸ್ತುತ ರೂಪಾಯಿ ಮೌಲ್ಯದ ಹಿನ್ನಲೆಯಲ್ಲಿ ಲೆಕ್ಕ ಹಾಕಿದಾಗ ಒಟ್ಟಾರೆ ಹೆಚ್ಚಳ ೫-೮ ಮಾತ್ರ ಕಂಡುಬರುತ್ತದೆ. ಇಷ್ಟೀದ್ದರೂ ಉದ್ದೇಶಿತ ಗುರುಗಳನ್ನು ತಲುಪಲು ಸಾದ್ಯವಾಗುತ್ತಿಲ್ಲ ಎಂದು ಲೇಖಕರು ಹೇಳಿದ್ದಾರೆ.[೩೪]

ಜೆ.ಪಿ. ನಾಯಕ್ ಅವರು **ಭಾರತೀಯ ಶಿಕ್ಷಣದಲ್ಲಿ ಸಮತಾಗುಣ ಮತ್ತು ಪರಿಮಾಣ** ಎಂಬ ಪುಸ್ತಕವಲ್ಲಿ ವಸಾಹತು ಮತ್ತು ಸಾಮ್ರಾಜ್ಯಶಾಹಿ ಉದ್ದೇಶಗಳಿಗಾಗಿ ೧೮೧೩ ರಿಂದ

೧೯೨೧ರ ಅವಧಿಯಲ್ಲಿ ಬ್ರಿಟಿಷ್ ಆಡಳಿತಗಾರರು ಆಧುನಿಕ ಶಿಕ್ಷಣ ಪದ್ಧತಿಯ ಅಡಿಪಾಯವನ್ನು ಹಾಕಿದಲ್ಲದೆ ಮೇಲ್ವರ್ಗಗಳಿಗಾಗಿ ಶಿಕ್ಷಣ ಪದ್ಧತಿ ಕಟ್ಟಲು ಯತ್ನಿಸಿದರು. ಅದೇ ಅವಧಿಯಲ್ಲಿ ಶಿಕ್ಷಣ ಕ್ರಮದಲ್ಲಿ ತೀರ ಅಸಹ್ಯಕರವಾದ ಅಸಮಾನ ಅಂಶಗಳನ್ನು ಅವರು ತೆಗೆದು ಹಾಕಿದರು ಆದುದರಿಂದ ಶಿಕ್ಷಣದಲ್ಲಿ ಸಹಮತೆಗೆ ಕೊಟ್ಟ ಅವರ ಕೊಡುಗೆ ಒಳಿತು ಕೆಡಕುಗಳೆರಡರಿಂದ ಕೂಡಿತ್ತು. ಆದರೆ ಒಳಿತಿಗಿಂತ ಕೆಡಕೆ ಹೆಚ್ಚು ಸಾರ್ವಜನಿಕ ನಿಧಿಯಿಂದ ನಡೆಸಿದ ಅಥವಾ ಪೋಷಿಸಿದ ಶೈಕ್ಷಣಿಕ ಸಂಸ್ಥೆಗಳ ಪ್ರಜೆಗಳಿಗೂ ಮುಕ್ತ ಪ್ರವೇಶ ಕೊಟ್ಟದ್ದು. ಬ್ರಿಟಿಷ್ ಆಡಳಿತಗಾರರ ಬೆಳವಣಿಗೆಗಳನ್ನು ಉಲ್ಲೇಖಿಸಬಹುದು ಎಂದಿದ್ದಾರೆ. ಒಟ್ಟಾರೆಯಾಗಿ, ಸಮಾಜದಲ್ಲಿ ಹೆಣ್ಣು ಮಕ್ಕಳ ಬೆಳವಣಿಗೆಯನ್ನು ನೋಡಬೇಕಾದರೆ ಶಿಕ್ಷಣದ ಪಾತ್ರ ಮುಖ್ಯಯೆಂದು ತಿಳಿಯಲಾಗಿದೆ. ಅಂದರೆ ಪಾಶ್ಚಿಮಾತ್ಯ ರಾಷ್ಟ್ರಗಳ ಶಿಕ್ಷಣ ವ್ಯವಸ್ಥೆಯಲ್ಲಿರುವ ಸಕಾರಾತ್ಮಕವಾದ ವಿಧಾನಗಳನ್ನು ಇಲ್ಲಿಯೂ ಅಳವಡಿಸಿಕೊಳ್ಳುವ ಅಗತ್ಯತೆಯಿದೆ ಎಂದು ತಿಳಿಯಲಾಗಿದೆ.[೩೫]

ಎ. ಅರ್. ವಾಸು ಅವರ **ತಮ್ಮ ಶಿಕ್ಷಣ ರೂಪಾಂಕುರ** ಪುಸ್ತಕದಲ್ಲಿ ಸಾಕ್ಷರತೆಯ ಮಟ್ಟದಲ್ಲಿ ರಾಜ್ಯಗಳ ನಡುವೆ ಭಿನ್ನತೆ ಇದ್ದರೂ ದೇಶದ ಸಾಕ್ಷರತೆಯ ಸರಾಸರಿ ಮಟ್ಟ ಶೇ. ೬೫.೩೮ (೨೦೦೧ರ ಜನಗಣತಿಯ ಪ್ರಕಾರ) ಬಹಳಷ್ಟು ಅಭಿವೃದ್ದಿ ಶೀಲರಾಷ್ಟ್ರಗಳಿಗಿಂತ ಕಡಿಮೆಯಾಗಿದೆ. ಹಲವು ರಾಜ್ಯಗಳು ಉದಾಹರಣೆಗೆ ಬಿಹಾರ (೪೭.೫೩ ಅಕ್ಷರತೆ ೨೦೦೧ ಜನಗಣತಿ) ಇನ್ನು ಕಡಿಮೆ ಸರಾಸರಿಯನ್ನು ಹೊಂದಿದೆ ಹೆಚ್ಚಿನ ಸಂದರ್ಭಗಳಲ್ಲಿ ಕೆಳಜಾತಿಗೆ ಹಾಗೂ ಬುಡಕಟ್ಟಿಗೆ ಸೇರಿದ ಮಕ್ಕಳು ಮುಖ್ಯವಾಗಿ ಹೆಣ್ಣು ಮಕ್ಕಳು ಶಿಕ್ಷಣದಿಂದ ಹೊರಗುಳಿದಿದ್ದಾರೆ ಅದ್ದರಿಂದ ರಾಷ್ಟ್ರದಲ್ಲಿ ಶೈಕ್ಷಣಿಕ ದಾರಿದ್ರ್ಯ ಇದೆ ಎಂದು ವಿವರಿಸುವುದು ಸಮರ್ಪಕವಾಗಿದೆ. ಇಲ್ಲಿ ೬-೧೪ ವಯೋಮಾನದ ಸುಮಾರು ೧೦೦ ಮಿಲಿಯನ್ ಮಕ್ಕಳು ಶಾಲಾ ವ್ಯವಸ್ಥೆಯಿಂದ ಹೊರಗುಳಿದಿದ್ದಾರೆ. ಒಟ್ಟಾರೆಯಾಗಿ, ಮೇಲಿ ಅಂಶವನ್ನು ಗಮನಿಸಿದಾಗ ಅಭಿವೃದ್ಧಿಶೀಲ ದೇಶಗಳಲ್ಲಿರುವಂತೆಯೇ ದೇಶದಲ್ಲಿ ನೀರ್ಮಾಣಗೊಳ್ಳದೆ ಗ್ರಾಮೀಣ ಪ್ರದೇಶಗಳಲ್ಲಿ ಅಸಮರ್ಪಕ ಶಾಲೆಗಳು ಬಹುತೇಕ ಕಡೆ ಹೆಣ್ಣುಮಕ್ಕಳ ಶಿಕ್ಷಣವನ್ನು ಅಲ್ಲದೇ ಮಧ್ಯಮ ವರ್ಗದ ಹೆಣ್ಣುಮಕ್ಕಳ ಭವಿಷ್ಯವನ್ನು ಮಂಕು ಮಾಡಿವೆ. ಇಡೀ ಗ್ರಾಮ ಪಂಚಾಯಿತಿಯ ನಿಯಮಿತ ಶಾಲಾ ಸೌಲಭ್ಯಗಳ ದೆಸೆಯಿಂದಾಗಿ ಎರಡು ಗ್ರಾಮ ಪಂಚಾಯಿತಿಗಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುವ ಅವಶ್ಯಕತೆ ಇದೆ ಎಂದು ತಿಳಿಯಲಾಗಿದೆ.[೩೬]

೧೯೨೯ರ ಹಾವಾಗ ಸಮಿತಿ ವರದಿಯ ಪ್ರಕಾರ ಸ್ವತಂತ್ರ ಪೂರ್ವದಲ್ಲೆ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ತೆರೆಯುವುದು ಅವಶ್ಯಕತೆಗೆ ಅನುಗುಣವಾಗಿ ಪಠ್ಯಪುಸ್ತಕವನ್ನು ರೂಪಿಸುವುದು ಮಹಿಳಾ ಶಿಕ್ಷಕಿಯರನ್ನು ಹಾಗೂ ಮಹಿಳಾ ತನಿಖಾಧಿಕಾರಿಗಳನ್ನು

ನೇಮಕ ಮಾಡುವುದು ಜೊತೆಗೆ ಸ್ತ್ರೀಯರ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕು ಪ್ರಾಥಮಿಕ ಶಾಲಾ ಸಂಘಟನೆ ಹಾಗೂ ಹಂಚಿಕೆ ಸರಿಯಾಗಿಲ್ಲ ಸಮರ್ಪಕವಾದ ಪೀಠೋಪಕರಣ ಗಳಿರುವುದಿಲ್ಲ ಹಳ್ಳಿಯ ವಾತವರಣಕ್ಕೆ ಹೊಂದಿಕೆಯಾಗುವ ಪಠ್ಯಕ್ರಮಗಳು ತರಬೇತಿ ಹೊಂದಿದ ಶಿಕ್ಷಕರ ಕೊರತೆ ನೀರಸ ಹಾಗೂ ಪರಿಣಮಕಾರಿಯಾದ ಭೋದನಾ ಪದ್ದತಿ, ಏಕರೂಪ ಪದ್ದತಿಯ ಶಾಲೆಗಳು, ಪಾಲಕರ ಅನಕ್ಷರತೆ ಸ್ಥಳೀಯ ಪರಿಸರ ಮತ್ತು ಅವಶ್ಯಕತೆಗೆ ಹೊಂದಾಣಿಕೆಯಾಗದ ರಜಾದಿನಗಳು ಅಸಮಾಧಾನಕರ ರೀತಿಯಲ್ಲಿ ಜಾರಿಗೊಳಪಟ್ಟ ಕಡ್ಡಾಯ ಶಿಕ್ಷಣ ನೀತಿ ಸಮಿತಿಯ ವರದಿ ಇವುಗಳನ್ನು ಈ ಸಮಿತಿಯಲ್ಲಿ ಉಲ್ಲೇಖಿಸಿರುವುದನ್ನು ಕಾಣಲಾಗಿದೆ.[೩೭]

ರಫಿಕ್ ಅಹ್ಮದ್ ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಸೇರಿದಂತೆ ಯಾವುದೇ ಪರಿಕ್ಷೆಯಲ್ಲಾದರೂ ಸರಿ ಯುವತಿಯರದ್ದೇ ಮೇಲುಗೈ ಇದಕ್ಕೆ ಪೂರಕ ವೆಂಬಂತೆ ಕಳೆದ ಒಂದು ದಶಕದಲ್ಲಿ ರಾಜ್ಯದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಶೇ ೧೨ರಷ್ಟು ಪ್ರಗತಿ ಕಂಡಿದೆ. ಹಾಗಾದರೆ ಸಾಕ್ಷರತೆ ಪ್ರಮಾಣದಲ್ಲೂ ಮಹಿಳೆಯರು ಪುರುಷರಿಗಿಂತ ಮೇಲುಗೈ ಸಾಧಿಸಿದ್ದಾರೆಯೆ? ಖಂಡಿತಾ ಇಲ್ಲ ಈಗಲೂ ನಮ್ಮ ರಾಜ್ಯದಲ್ಲಿ ಪೋಷಕರು ಹೆಣ್ಣುಮಗುವಿಗಿಂತ ಗಂಡುಮಗುವಿಗೆ ಶಿಕ್ಷಣ ನೀಡಲು ಆದ್ಯತೆ ನೀಡುತ್ತಾರೆ. ಹೀಗಾಗಿಯೇ ಈಗಲೂ ಪುರುಷರು ಹಾಗೂ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಶೇ ೧೪.೭ ರಷ್ಟು ಅಂತರವಿದೆ. ರಾಜ್ಯದ ಒಟ್ಟಾರೆ ಸಾಕ್ಷರತೆಯ ಪ್ರಮಾಣದಲ್ಲಿ ಹೆಚ್ಚಳವಾಗಿತ್ತಿದ್ದರೂ ಪುರುಷ ಹಾಗೂ ಮಹಿಳೆಯರ ಸಾಕ್ಷರತೆ ಪ್ರಮಾಣದಲ್ಲಿ ಮಾತ್ರ ಸಮಾನತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ೨೦೧೧ ರ ಜನಗಣತಿ ಶೇ. ೭೫.೬೦ ರಷ್ಟಿದೆ ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ ೮೨.೮೫ ರಷ್ಟಿದ್ದರೆ ಮಹಿಳಾ ಸಾಕ್ಷರತೆ ಪ್ರಮಾಣ ಶೇ. ೬೮.೧೩ ರಷ್ಟಿದೆ. ಈ ನಿಟ್ಟನಲ್ಲಿ ಸಾಕ್ಷರತೆಯ ಪ್ರಮಾಣ ಒಟ್ಟಾರೆಯಾಗಿ ಹೆಣ್ಣು ಮಕ್ಕಳ ಪ್ರಮಾಣ ಜಾಸ್ತಿಯಾದರೆ ಸಾಲದು ಅದು ಗ್ರಾಮಾಂತರ ಪ್ರದೇಶದಲ್ಲಿ ಆ ಮಟ್ಟದ ಶೇಕಡವಾರು ಇದೆಯಾ ಎಂಬುದನ್ನು ಗಮನಹರಿಸುವಂತಹ ಅವಶ್ಯಕತೆಯಿದೆ ಎಂದು ತಿಳಿಯಲಾಗಿದೆ.[೩೮]

ಚಂದ್ರಶೇಖರಯ್ಯ ಅವರ **ಪರಿಶಿಷ್ಟ ಜಾತಿ ಶೈಕ್ಷಣಿಕ ಸಮಸ್ಯೆಗಳು** ಎಂಬ ಪಿಎಚ್.ಡಿ ಮಹಾ ಪ್ರಬಂಧದಲ್ಲಿ ಮೈಸೂರು ನಗರ ಪ್ರದೇಶ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮ ಮಟ್ಟದಲಿಲ್ಲದಿರುವುದೇ ಕಾರಣವಾಗಿದೆ ಮತ್ತು ಶಾಲೆಯ ಬಗ್ಗೆ ಪರಿಶಿಷ್ಟ ಜಾತಿಯ ಜನರಲ್ಲಿ ಉತ್ತಮ ಅಭಿಪ್ರಾಯವಿಲ್ಲ. ತಮ್ಮ ಮಕ್ಕಳು ಶಾಲೆಗೆ ಹೋಗುವ ಬದಲು ನೌಕರಿ ಮಾಡಿ ಪ್ರತಿದಿನ ಸಂಪಾದನೆ ಮಾಡಿದರೆ ಉತ್ತಮ

ಎಂಬ ಭಾವನೆ ಈ ಜನರಲ್ಲಿದೆ. ಪ್ರಾಥಮಿಕ ಶಾಲಾ ಹಂತದಲ್ಲಿ ಖಾಸಗಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ದಾಖಲಾತಿಯಾಗಲು ಈ ಶಾಲೆಗಳಲ್ಲಿ ಶಾಲೆಯ ವಾರ್ಷಿಕ ಶುಲ್ಕ, ಗ್ರಂಥಾಲಯ ಶುಲ್ಕ, ಆಟದ ಶುಲ್ಕ ಇನ್ನಿತರೆ ವಂತಿಕೆಗಳು ಹಾಗೂ ಈ ಪ್ರದೇಶದಿಂದ ದೂರದಲ್ಲಿ ಈ ಶಾಲೆಗಳು ಸ್ಥಾಪನೆಯಾಗಿರುವುದು ಕೂಡ ಈ ವಿದ್ಯಾರ್ಥಿಗಳ ಶಾಲೆಯ ವಾತಾವರಣ ಕುಟುಂಬದ ಪರಿಸರ, ಪೋಷಕರ ನಡವಳಿಕೆ, ಸಂಸ್ಕೃತಿ, ಸಮುದಾಯದ ಪ್ರಭಾವ ಮತ್ತು ಜಾತಿಯ ವರ್ಗೀಕರಣ ಮುಂತಾದ ಅಂಶಗಳು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳ ಮೇಲೆ ಯಾವ ರೀತಿಯ ಪ್ರಭಾವ ಬೀರಿದೆ ಎಂದು ತಿಳಿಯಲಾಗಿದೆ. ಮುಂದುವರಿದು ಗ್ರಾಮೀಣ ಪ್ರದೇಶದಲ್ಲಿರುವ ಹೆಣ್ಣುಮಕ್ಕಳು ಜೀವನ ಸಾಗಿಸುವುದೇ ಒಂದು ದೊಡ್ಡ ಸಂಗತಿಯಾಗಿದೆ. ಆದರೆ ಎರಡು ಗ್ರಾಮ ಪಂಚಾಯಿತಯಲ್ಲಿ ಹೆಣ್ಣು ಮಕ್ಕಳು ಸ್ಥಳೀಯ ರಾಜಕೀಯದಲ್ಲಿ ಹೆಚ್ಚಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದರ ಮೂಲಕ ಮಹಿಳಾ ಸಬಲೀಕರಣದ ಜೊತೆಗೆ ನಿಯಮಿತವಾಗಿ ಕಾರ್ಯಕ್ರಮಗಳ ಅನುಷ್ಠಾನ ದಿಂದಾಗಿ ನಿಜಕ್ಕೂ ಹಿಂದುಳಿದ ದೊಡ್ಡ ಆಲಹಳ್ಳಿ ಪಂಚಾಯಿತಿಯ ಜನರ ರೈತರ ಕೃಷಿ ಕಾರ್ಮಿಕರ ಬದುಕನ್ನು ಸುಧಾರಿಸುವುದರ ಜೊತೆಗೆ ಅವರ ಬದುಕಿನ ದಿಕ್ಕನ್ನು ಬದಲಾಯಿಸುವ ತುರ್ತು ಅವಶ್ಯಕತೆಯಿದೆ ಎಂದು ಹೇಳಬಹುದಾಗಿದೆ.[೫]

ಲೈಟನ್ ಜಿ.ಕೆ. ಇವರು ವಿಲ್ಡನ್ ವರ್ಕ್ ಆಂಡ್ ಎಜುಕೇಶನ್ (೨೦೦೦) ಲೇಖನದಲ್ಲಿ ವಿಕೇಂದ್ರಿಕರಣ, ಲಿಂಗ ಸಮಾನತೆ, ಶಿಕ್ಷಣ, ಶಿಕ್ಷಕರ ಸಾಮರ್ಥ್ಯ, ಶಿಕ್ಷಣದ ಗುಣಮಟ್ಟ ಮತ್ತು ತರಗತಿಯ ಚಟುವಟಿಕೆಗಳ ಜೊತೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಮೂಲಕವಾಗಿ ಮಹಿಳೆಯರ ಸಬಲೀಕರಣ ಸಾಧಿಸಬಹುದಾಗಿದೆ. ಅಲ್ಲದೇ, ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಪರೋಕ್ಷವಾಗಿ ಸಾಮಾಜಿಕ ತಾರತಮ್ಯ ಕಂಡುಬರುತ್ತದೆ. ಈ ಯೋಜನೆ ಯಲ್ಲಿ ಹಿಂದುಳಿದ ಹೆಣ್ಣುಮಕ್ಕಳಿಗೆ ನಿಗದಿತ ಪ್ರಮಾಣದ ಮೀಸಲಾತಿ ಇಲ್ಲದಿರುವುದರಿಂದ ಸಾಮಾಜಿಕವಾಗಿ ಈ ಯೋಜನೆಯಲ್ಲಿ ಮೇಲ್ ಜಾತಿಯ ಹೆಣ್ಣುಮಕ್ಕಳು ಇದರ ಪ್ರಯೋಜನ ಪಡೆಯುತ್ತಾರೆ. ಹೀಗಾಗಿ ಲೋಕ ಜಂಬಿಸ್ ಕಾರ್ಯಕ್ರಮದ ಅನುಷ್ಠಾನದಿಂದ ಹಿಂದುಳಿದ ಜಾತಿಯ ಹೆಣ್ಣುಮಕ್ಕಳಿಗೆ ಮಿಸಲಾತಿ ಸೌಲಭ್ಯ ಕಲ್ಪಿಸಿದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆ ಎಂದು ಲೇಖಕರು ಸ್ಪಷ್ಟಪಡಿಸಿದ್ದಾರೆ. ಮೇಲಿನ ಅಧ್ಯಯನವನ್ನು ಗಮನಿಸಿದಾಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಿಕ್ಷಣದ ಬಗ್ಗೆ ಕಾಳಜಿ ವಹಿಸಿದ ಶಿಕ್ಷಣ ಬೆಳವಣಿಗೆಯ ಗುರಿಯನ್ನು ಸಾಧಿಸುವಲ್ಲಿ ಅರ್ಥಪೂರ್ಣ ಬದಲಾವಣೆಯನ್ನು ತರುವುದರಲ್ಲಿ ವಿಫಲಗೊಂಡಿದ್ದು

ಅದು ಅಭಿವೃದ್ಧಿ ಮೂಲ ಸಾಧನವನ್ನು ಸಾಧಿಸುವಲ್ಲಿ ವಿಫಲಗೊಂಡಿರುವುದರಿಂದ ಪಂಚಾಯಿತಿಗಳು ಹಿಂದುಳಿಯುವುದಕ್ಕೆ ಕಾರಣ ಎನ್ನಬಹುದಾಗಿದೆ. ಅಂದರೆ ಜನರ ಅಕ್ಷರ ಸುಧಾರಣೆಯಲ್ಲಿ ಹಿಂದುಳಿದ ಪಂಚಾಯಿತಿಗಳಿಗೆ ಹೆಚ್ಚು–ಹೆಚ್ಚಾಗಿ ಮೂಲ ಸೌಕರ್ಯಗಳನ್ನು ಒದಗಿಸುವುದರ ಅಗತ್ಯವಿದೆ ಎಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.[೪೦]

ಕೆ. ಮಂಜಪ್ಪನವರು ದಲಿತ ಶಿಕ್ಷಣದ ಪರಿಸ್ಥಿತಿ ಎಂಬ ಪಿ.ಎಚ್.ಡಿ ಮಹಾಪ್ರಬಂಧದಲ್ಲಿ ಬಡತನ ಸಮಸ್ಯೆಯಿಂದ ಅನೇಕ ಸಂಖ್ಯೆಯ ಮಕ್ಕಳು ಉತ್ತಮವಾದ ಬಟ್ಟೆ ಧರಿಸದೆ ಕೆಳದರ್ಜೆಯ ಬಟ್ಟೆಯನ್ನು ಧರಿಸಿಕೊಂಡು ಶಾಲೆಗೆ ಬಂದರೆ ಅವರಲ್ಲಿ ಅತೃಪ್ತಿ ಮತ್ತು ಕೀಳರಿಮೆಗಳು ಕಾಡಲಾರಂಬಿಸುತ್ತವೆ. ಈ ಕಾರಣದಿಂದಲೇ ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವಂತಹ ಅಪಾಯಗಳಿರುತ್ತವೆ. ಇದಕ್ಕೆ ಬಹು ಮುಖ್ಯಕಾರಣ ಪೋಷಕರ ಆರ್ಥಿಕ ಕಾರಣ ಇದನ್ನು ಮನಗಂಡು ಸರ್ಕಾರಗಳು ಎಲ್ಲಾ ಮಕ್ಕಳಿಗೆ ಸಮಾನತೆ ಮತ್ತು ಶಿಸ್ತು ಮೂಡಿಸುವ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಬಡಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಶಾಲೆಗಳಲ್ಲಿ ಬಡಮಕ್ಕಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತ ಸಮವಸ್ತ್ರವನ್ನು ವಿತರಿಸುವುದು ಮಕ್ಕಳಿಗೆ ಹೊಸ ಬಟ್ಟೆ ನೀಡಿದಂತಾಗುತ್ತದೆ. ಜೊತೆಗೆ ಪೋಷಕರಿಗೆ ಅವರ ಮಕ್ಕಳ ಶೈಕ್ಷಣಿಕ ಆರ್ಥಿಕ ಭಾರವನ್ನು ಸ್ವಲ್ಪವಾದರೂ ಇಳಿಸಿದಂತಾಗುತ್ತದೆ. ಅದೇ ರೀತಿಯಾಗಿ ಶಾಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಹೆಣ್ಣುಮಕ್ಕಳಿಗೆ ಉಚಿತ ಬ್ಯಾಗ್ ಮತ್ತು ಪಠ್ಯ ಪುಸ್ತಕಗಳು, ನೋಟ್‌ಬುಕ್‌ಗಳು, ವಿತರಿಸುತ್ತಿದ್ದು, ಅಲ್ಲದೇ ಇತ್ತೀಚೆಗೆ ಖಾಸಗಿ ಶಾಲೆಗಳಲ್ಲಿಯೂ ಅದರಲ್ಲಿಯೂ ಅನುದಾನಿತ ಶಾಲೆಗಳಲ್ಲಿ ಉಚಿತ ಬೈಸಿಕಲ್ ವಿತರಣೆ ಮಾಡಲಾಗಿತ್ತಿದ್ದು ಉತ್ತಮ ಬೆಳವಣಿಗೆ ಎಂದಿದ್ದಾರೆ.[೪೧]

ವಿ.ಪಿ. ನಿರಂಜನಾರಾಧ್ಯ ಖ್ಯಾತ ಶಿಕ್ಷಣ ತಜ್ಞರು, ಏಕರೂಪ ಶಿಕ್ಷಣ ನೀತಿ ಎಂಬ ವಿಚಾರ ಸಂಕೀರ್ಣದಲ್ಲಿ ರಾಜ್ಯ ಸರ್ಕಾರ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ ಶೇ ೨೦ ರಷ್ಟು ಮಕ್ಕಳನ್ನು ಖಾಸಗಿ ಶಾಲೆಗೆ ದಾಖಲಿಸಲಿದ್ದು ಅಲ್ಲಿ ಅವರ ಸ್ಥಿತಿಗತಿಯ ಬಗ್ಗೆ ಕಾಳಜಿವಹಿಸುವಂತಿಲ್ಲ ಎಂದು ಶಿಕ್ಷಣ ತಜ್ಞರು ವಿಷಾದ ವ್ಯಕ್ತಪಡಿಸಿದರು. ವ್ಯಾಪಾರಿ ಮನೋಭಾವದ ಶಿಕ್ಷಣ ಸಂಸ್ಥೆಗಳ ನಡುವೆ ಬಡ ಮಕ್ಕಳು ಬೆಳೆಯುತ್ತಿದ್ದಾರೆ. ಈ ಮಕ್ಕಳ ಶಿಕ್ಷಣದ ಸ್ಥಿತಿ ಹೇಗಿದೆ ಎಂಬುದನ್ನು ಸರ್ಕಾರ ಯೋಚಿಸುತ್ತಿಲ್ಲ. ಬಡಮಕ್ಕಳ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಅವರು ಆರೋಪಿಸಿದರು ಸರ್ಕಾರಿ ಶಾಲೆಗಳನ್ನು ಮುಚ್ಚುವ ಬದಲು ಅವುಗಳ ಪುನರ್ ರಚನೆಯ ಬಗ್ಗೆ ಆಲೋಚಿಸಬೇಕಿದೆ. ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಕಾಯ್ದು ಕೊಳ್ಳಲು ಸಾಧ್ಯವಾಗದಿರುವ ಕಾರಣಗಳನ್ನು ಮೊದಲು ಗುರುತಿಸಬೇಕು ಪ್ರತಿಯೊಂದು ವಾರ್ಡ್

ಅಥವ ಒಂದು ಪಂಚಾಯತ್ ಸುಸಜ್ಜಿತವಾದ ಒಂದು ಶಾಲೆ ನಿರ್ಮಾಣಮಾಡಿ ಅವುಗಳ ಗುಣಮಟ್ಟವನ್ನು ಹೆಚ್ಚಿಸಿದರೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಮೇಯವೆ ಬರುವುದಿಲ್ಲ ಎಂದು ಅವರು ಹೇಳಿದ್ದಾರೆ.[೪೨]

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತೆಯ ಪ್ರಮಾಣವು ಶೇ. ೭೫.೬೧ರಷ್ಟು ಕಂಡುಬಂದಿದ್ದು ೨೩ನೇ ಸ್ಥಾನ ಪಡೆದಿದೆ. ಮೊದಲ ೩ ಸ್ಥಾನಗಳಲ್ಲಿ ಕೇರಳ ಶೇ. ೯೪ರಷ್ಟು, ಲಕ್ಷದ್ವೀಪ ಶೇ. ೯೨ರಷ್ಟು ಮಿಜೊರಾಂ ಶೇ. ೯೨ರಷ್ಟು ಸಾಕ್ಷರತೆ ಸಾಧಿಸಿರುವ ರಾಜ್ಯಗಳಾಗಿವೆ. ಕರ್ನಾಟಕದಲ್ಲಿ ಪುರುಷರ ಸಾಕ್ಷರತೆ ಶೇ. ೮೨.೮೪ರಷ್ಟು ಕಂಡುಬಂದರೆ ಮಹಿಳಾ ಸಾಕ್ಷರತೆಯು ಶೇ. ೬೮.೧೫ರಷ್ಟು ಕಂಡುಬಂದಿದೆ. ಒಟ್ಟಾರೆಯಾಗಿ ಯಾದಗಿರಿ ಜಿಲ್ಲೆ ಕೊನೆಯ ಸ್ಥಾನದಲಿದ್ದು, ಇದು ಶೇ. ೫೨.೩೬ರಷ್ಟು ಸಾಕ್ಷರತೆಯನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯು ೮೮.೬೨ರಷ್ಟು ಸಾಕ್ಷರತೆ ಹೊಂದಿ ಪ್ರಥಮ ಸ್ಥಾನದಲ್ಲಿದೆ. ದ್ವಿತೀಯ ಸ್ಥಾನ ಬೆಂಗಳೂರು ನಗರ ಜಿಲ್ಲೆ ಹೊಂದಿದೆ. ಶೇ. ೮೮.೪೮ರಷ್ಟು ಸಾಕ್ಷರತೆ ಸಾಧಿಸಿದೆ. ಕರ್ನಾಟಕದಲ್ಲಿ ಒಟ್ಟು ಸಾಕ್ಷರರ ಪ್ರಮಾಣ ೭೫.೧೦% ಪುರುಷರ ಸಾಕ್ಷರತೆ ಪ್ರಮಾಣವು ಶೇ. ೮೨.೮೪ರಷ್ಟು ಕಂಡುಬಂದು, ಮಹಿಳಾ ಸಾಕ್ಷರರ ಪ್ರಮಾಣ ಶೇ. ೬೮.೧೩ರಷ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯು ೯೩.೩೧ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ರಾಜ್ಯದಲ್ಲಿ ಪ್ರಥಮ ಸ್ಥಾನ ಹೊಂದಿದೆ. ಬೆಂಗಳೂರು ನಗರ ಜಿಲ್ಲೆಯು ಶೇ. ೯೧.೮೩ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ೨ನೇ ಸ್ಥಾನದಲ್ಲಿದೆ. ಯಾದಗಿರಿ ಜಿಲ್ಲೆಯು ಕೊನೆಯ ಸ್ಥಾನದಲ್ಲಿದ್ದು, ಚಾಮರಾಜನಗರ, ರಾಯಚೂರು, ಗುಲ್ಬರ್ಗ, ರಾಮನಗರ ಕಡಿಮೆ ಸಾಕ್ಷರತೆ ಹೊಂದಿದ ಜಿಲ್ಲೆಗಳಾಗಿವೆ. ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಶೇ. ೬೮.೧೫ರಷ್ಟು ಇದೆ. ಜಿಲ್ಲಾವಾರು ಸಾಕ್ಷರತೆಯಲ್ಲಿ ಬೆಂಗಳೂರು ನಗರ ಶೇ. ೮೪.೮೦ರಷ್ಟು ಮಹಿಳಾ ಸಾಕ್ಷರತೆಯನ್ನು ಹೊಂದಿ ಪ್ರಥಮ ಸ್ಥಾನದಲ್ಲಿದ್ದರೆ, ದಕ್ಷಿಣ ಕನ್ನಡ ಜಿಲ್ಲೆ ದ್ವಿತೀಯ ಸ್ಥಾನ ಶೇ. ೮೧.೪೧ರಷ್ಟು ಹೊಂದಿದೆ. ಯಾದಗಿರಿ ಕೊನೆಯ ಸ್ಥಾನದಲ್ಲಿದೆ. ರಾಯಚೂರು, ಚಾಮರಾಜನಗರ, ಗುಲ್ಬರ್ಗ, ಕೊಪ್ಪಳವು ಸಹ ಕೊನೆಯ ಸ್ಥಾನದಲ್ಲಿವೆ. ವಿವಿಧ ಯೋಜನೆಗಳ ಅನುಷ್ಠಾನಗೊಳಿಸುತ್ತಿದ್ದರೂ ಶಿಕ್ಷಣದ ಹಿಂದುಳಿಕೆಗೆ ಆರ್ಥಿಕ, ಸಾಮಾಜಿಕ ಸಂಗತಿಗಳು ಕಾರಣವಾಗಿದೆ.[೪೩]

ವಿಶ್ವೇಶ್ವರ ಹೆಗಡೆ ಕಾಗೇರಿ (೨೦೧೨) ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಏಕರೂಪ ಶಿಕ್ಷಣ ನೀತಿ ವಿಷಯ ಕುರಿತು ವಿಚಾರ ಸಂಕಿರಣದಲ್ಲಿ ಬ್ರಿಟಿಷರ ಕಾಲದ ಮೆಕಾಲೆ ಶಿಕ್ಷಣ ನೀತಿಯ ಪಳೆಯುಳಿಕೆಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಅವರು ಇನ್ನೂ ಇದುವರೆಗೂ ಅದೇ ಶಿಕ್ಷಣ ನೀತಿಗಳನ್ನೇ ಪ್ರತಿಪಾದಿಸುತ್ತಿದ್ದಾರೆ. ಶಿಕ್ಷಣವು ಹಕ್ಕು ಹೊರತು ಸವಲತ್ತಲ್ಲ.

ಅದು ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರೂ ಪಡೆಯಬೇಕಾದ ಹಕ್ಕಾಗಿದೆ. ಆದರೆ ಜೀವನಾವಶ್ಯಕವಾದ ಶಿಕ್ಷಣದಿಂದ ಅನೇಕ ಮಂದಿ ವಂಚಿತರಾಗಿದ್ದಾರೆ ಎಂಬುದು ಐತಿಹಾಸಿಕ ಸತ್ಯವಾಗಿದೆ.[೪೪]

ಹರ್ಟಗೊ(Hartog Committe Report) **ಸಮಿತಿ ವರದಿಯು**(೧೯೨೯) ಸ್ವತಂತ್ರ ಪೂರ್ವದಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ತೆರೆಯುವುದು. ಅವಶ್ಯಕತೆಗೆ ಅನುಗುಣವಾಗಿ ಪಠ್ಯಪುಸ್ತಕವನ್ನು ರೂಪಿಸುವುದು. ಮಹಿಳಾ ಶಿಕ್ಷಕಿಯರನ್ನು ಹಾಗೂ ಮಹಿಳಾ ತನಿಖಾಧಿಕಾರಿಗಳನ್ನು ನೇಮಕ ಮಾಡುವುದು. ಜೊತೆಗೆ ಸ್ತ್ರೀಯರ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಸಮರ್ಪಕವಾದ ಪಿಠೋಪಕರಣಗಳಿರುವುದಿಲ್ಲ. ಹಳ್ಳಿಯ ವಾತಾವರಣಕ್ಕೆ ಹೊಂದಿಕೆಯಾಗುವ ಪಠ್ಯಕ್ರಮಗಳು ತರಬೇತಿ ಹೊಂದಿದ ಶಿಕ್ಷಕರ ಕೊರತೆ, ನೀರಸ ಹಾಗೂ ಪರಿಣಮಕಾರಿಯಲ್ಲಾದ ಭೋದನಾ ಪದ್ಧತಿ, ಪಾಲಕರ ಅನಕ್ಷರತೆ ಸ್ಥಳಿಯ ಪರಿಸರ ಮತ್ತು ಅವಶ್ಯಕತೆಗೆ ಹೊಂದಾಣಿಕೆಯಾಗದ ರಜಾದಿನಗಳು ಅಸಮಧಾನಕರ ರೀತಿಯಲ್ಲಿ ಜಾರಿಗೊಳಪಟ್ಟ ಕಡ್ಡಾಯ ಶಿಕ್ಷಣ ನೀತಿ ಮುಂತಾದವು ಗಳನ್ನು ಈ ಸಮಿತಿಯಲ್ಲಿ ಉಲ್ಲೇಖಿಸಿದ್ದಾರೆ.[೪೫]

ಶಿವಶಂಕರ್ ಹೆಚ್.ವಿ. (೧೯೭೦) ಅವರು **ಭಾರತೀಯ ಶಿಕ್ಷಣ** ಎಂಬ ಪುಸ್ತಕದಲ್ಲಿ ಆಗಿನ ಮೈಸೂರು ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಅಧ್ಯಯನ ಮಾಡಿದರು. ಮೈಸೂರು ರಾಜ್ಯದ ಶಾಲೆಗಳ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಾಧನೆ ಈ ವಿದ್ಯಾರ್ಥಿಗಳ ಶಾಲೆಯ ವಾತಾವರಣ ಕುಟುಂಬದ ಪರಿಸರ ಪೋಷಕರ ನಡವಳಿಕೆ ಸಂಸ್ಕೃತಿ, ಸಮುದಾಯದ ಪ್ರಭಾವ ಬೀರಿದೆ ಎಂಬುದರ ಅಧ್ಯಯನ ಮಾಡಿ ಈ ಕೆಳಕಂಡ ಫಲಿತಗಳನ್ನು ಪಡೆದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರುಗಳಿಗೆ ಒದಗಿಸುತ್ತಿರುವ ಸಮವಸ್ತ್ರ ಪುಸ್ತಕಗಳು ಸರಿಯಾದ ಸಮಯಕ್ಕೆ ದೊರೆಯದಿರುವ ಕಾರಣದಿಂದ ಕುಟುಂಬದ ವರಮಾನ ಕಡಿಮೆ ಇರುವ ಕಾರಣದಿಂದ ಸಮವಸ್ತ್ರ ಮತ್ತು ಪುಸ್ತಕಗಳನ್ನು ಖರೀದಿಸಲು ಆಗದೆ ಕಷ್ಟವಾಗುತ್ತಿತ್ತು. ತಮ್ಮ ಮಕ್ಕಳು ಶಾಲೆಗೆ ಹೋಗುವ ಬದಲು ಪ್ರತಿದಿನ ಸಂಪಾದನೆ ಮಾಡಿದರೆ ಉತ್ತಮ ಎಂಬ ಭಾವನೆ ಜನರಲ್ಲಿತ್ತು. ಪ್ರಾಥಮಿಕ ಶಾಲಾ ಹಂತದಲ್ಲಿ ಖಾಸಗಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದಾರ್ಥಿನಿಯರು ದಾಖಲಾತಿಯಾಗಲು ಶಾಲೆಗಳಲ್ಲಿರುವ ಆಟದ ಶುಲ್ಕ ಗ್ರಂಥಾಲಯ ಶುಲ್ಕ ವಂತಿಗೆ ಮತ್ತು ಪರಿಶಿಷ್ಠ ಜಾತಿಯವರು ವಾಸಿಸುತ್ತಿರುವ ಪ್ರದೇಶಗಳಿಂದ ದೂರದಲ್ಲಿ ಸ್ಥಾಪನೆಯಾಗಿರುವುದು ಕಾರಣವಾಗಿದೆ. ಮಾಧ್ಯಮಿಕ ಶಾಲೆಗಳಿಗೆ ತಮ್ಮ ಮಕ್ಕಳು ಶಾಲೆಗೆ

ಹೋಗಲು ಒಲವಿರಲಿಲ್ಲ. ತಮ್ಮ ಹೆಣ್ಣುಮಕ್ಕಳು ಮನೆಯ ಕೆಲಸದಲ್ಲಿ ತೊಡಗಿಸಲು ಪೋಷಕರಿಗೆ ಹೆಚ್ಚು ಆಸಕ್ತಿಯಿತ್ತು.[೪೬]

ಷಾಹ ಜೆ.ಎಚ್. (೧೯೭೯) ಅವರು **ಓದುಗಾರಿಕೆ ಗ್ರಹಿಕೆ ಮತ್ತು ಕೆಲವು ಆಯ್ದ ವೈಯಕ್ತಿಕ ಹಾಗೂ ಮನೋವೈಜ್ಞಾನಿಕ ಚಲಕಗಳ ಅಧ್ಯಯನ** ಎಂಬ ತಮ್ಮ ಪಿಎಚ್.ಡಿ ಪ್ರಬಂಧದಲ್ಲಿ ಆಂಗ್ಲ ಮಾಧ್ಯಮಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರ ಆಂಗ್ಲ ಭಾಷೆಯ ಕೀಳರಿಮೆ ಬಗ್ಗೆ ಭಾವನಗರದ ೮ ಮತ್ತು ೯ನೇ ತರಗತಿಯ ೪೧೨ ವಿದ್ಯಾರ್ಥಿಗಳ ಪ್ರತಿಶತ ತೆಗೆದುಕೊಂಡು ನಡೆಸಿದ ಅಧ್ಯಯನದಲ್ಲಿ ಕಂಡುಬಂದಂತಹ ಪ್ರಮುಖ ಅಂಶವೆಂದರೆ ಓದುಗಾರಿಕೆ ಗ್ರಹಿಕೆಯಲ್ಲಿ ನಗರ ಮತ್ತು ಗ್ರಾಮೀಣಗಳ ನಡುವೆ ಸಾಮಾಜಿಕ ಆರ್ಥಿಕ ಮಟ್ಟದಲ್ಲಿನ ವ್ಯತ್ಯಾಸ ಕಂಡುಬಂದಿದೆ. ನಗರ ಪ್ರದೇಶದ ಪೋಷಕರಲ್ಲಿ ಆರ್ಥಿಕ ಸ್ವಾವಲಂಬನೆ ಇದು ಖಾಸಗಿ ಶಾಲೆಗಳಲ್ಲಿ ವ್ಯಾಸಂಗಕ್ಕೆ ಹೆಚ್ಚೆಚ್ಚು ಪ್ರೋತ್ಸಾಹವಿದ್ದು, ಮೂಲ ಸೌಲಭ್ಯ ಸುಸಜ್ಜಿತವಾದ ವಾಚನಾಲಯ, ಆಂಗ್ಲ ಭಾಷೆಯ ಬಗ್ಗೆ ಅರಿವಿರುತ್ತದೆ. ಗ್ರಾಮೀಣ ಭಾಗದಲ್ಲಿ ಶಾಲೆಗಳು ಮತ್ತು ಇತರೆ ಮೂಲಭೂತ ಸಮಸ್ಯೆಗಳು ಕಂಡುಬಂದು ಆಂಗ್ಲ ಬಾಷೆಯ ಬಗ್ಗೆ ತಿಳುವಳಿಕೆ ಮತ್ತು ಕೀಳರಿಮೆಗೆ ಕಾರಣ ಪೋಷಕರಿಗೆ ನಿರಾಸಕ್ತಿ ಇನ್ನಿತರೆ ಅಂಶಗಳು ಅಧ್ಯಯನದಿಂದ ತಿಳಿದುಬಂದಿದೆ.[೪೭]

ಜೆ.ಪಿ. ನಾಯಕ್ (೧೯೭೫) ಅವರು **ಭಾರತೀಯ ಶಿಕ್ಷಣದಲ್ಲಿ ಸಮತಾಗುಣ ಮತ್ತು ಪರಿಮಾಣ** ಎಂಬ ಪುಸ್ತಕದಲ್ಲಿ ವಸಾಹತು ಮತ್ತು ಸಾಮ್ರಾಜ್ಯಶಾಹಿ ಉದ್ದೇಶಗಳಿಗಾಗಿ ೧೮೧೩ರಿಂದ ೧೯೨೧ರ ಅವಧಿಯಲ್ಲಿ ಬ್ರಿಟಿಷ್ ಆಡಳಿತಗಾರರು ಆಧುನಿಕ ಶಿಕ್ಷಣ ಪದ್ಧತಿಯ ಅಡಿಪಾಯವನ್ನು ಹಾಕಿದ್ದಲ್ಲದೆ ಮೇಲ್ವರ್ಗಗಳಿಗಾಗಿ ಶಿಕ್ಷಣ ಪದ್ಧತಿ ಕಟ್ಟಲು ಯತ್ನಿಸಿದರು. ಅದೇ ಅವಧಿಯಲ್ಲಿ ಶಿಕ್ಷಣ ಕ್ರಮದಲ್ಲಿ ತೀರ ಅಸಹ್ಯಕರವಾದ ಅಸಮಾನ ಅಂಶಗಳನ್ನು ಅವರು ತೆಗೆದು ಹಾಕಿದರು. ಆದುದರಿಂದ ಶಿಕ್ಷಣದಲ್ಲಿ ಸಹಮತೆಗೆ ಕೊಟ್ಟ ಅವರ ಕೊಡುಗೆ ಒಳಿತು ಕೆಡುಕುಗಳೆರಡರಿಂದ ಕೂಡಿತ್ತು. ಆದರೆ ಒಳಿತಿಗಿಂತ ಕೆಡುಕೆ ಹೆಚ್ಚು. ಸಾರ್ವಜನಿಕ ನಿಧಿಯಿಂದ ನಡೆಸಿದ ಅಥವಾ ಪೋಷಿಸಿದ ಶೈಕ್ಷಣಿಕ ಸಂಸ್ಥೆಗಳ ಪ್ರಜೆಗಳಿಗೂ ಮುಕ್ತ ಪ್ರವೇಶ ಕೊಟ್ಟದ್ದು ಬ್ರಿಟಿಷ್ ಆಡಳಿತಗಾರರ ಬೆಳವಣಿಗೆಗಳನ್ನು ಉಲ್ಲೇಖಿಸಬಹುದು ಎಂದಿದ್ದಾರೆ.[೪೮]

ಜಿನ್ ಡ್ರೇಜ್ ಮತ್ತು ಅಮರ್ತ್ಯಸೇನ್ (೧೯೯೫) **ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅವಕಾಶ** ಎಂಬ ಪುಸ್ತಕದಲ್ಲಿ ಶಿಕ್ಷಣವು ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ.

ಶ್ರೀಲಂಕಾದಲ್ಲಿ ಆರ್ಥಿಕ ಬೆಳವಣಿಗೆಗಿಂತ ಶಿಕ್ಷಣ ಸುಧಾರಣೆಯ ಮೂಲಕ ಜನರ ಜೀವನದ ಗುಣಮಟ್ಟವನ್ನು ಸುಧಾರಿಸಿದೆ. ಭಾರತದ ಮಟ್ಟಗೆ ಕೇರಳದಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ಕಂಡುಬಂದರೂ, ಅರ್ಥಿಕ ಸಾಧನೆಯು ಕಡಿಮೆ ಇದೆ. ಥೈಲೆಂಡ್ ಮತ್ತು ದಕ್ಷಿಣ ಕೊರಿಯಾ ಇತ್ತೀಚಿಗೆ ಚೀನಾ ದೇಶಗಳ ರೀತಿಯಲ್ಲಿ ತ್ವರಿತ ಅರ್ಥಿಕ ಸಾಧನೆಯಲ್ಲಿ ಮುಂದುವರಿದಿವೆ. ಕೇವಲ ಶಿಕ್ಷಣವಲ್ಲದೆ ಇತರೆ ಸಾಮಾಜಿಕ ಅಂಶಗಳು ಸಹ ಇಲ್ಲಿ ಮುಖ್ಯವಾಗುತ್ತವೆ. ಆದರಿಂದ ಕೇರಳದಂತೆ ಇತರ ರಾಜ್ಯಗಳು ಕೂಡ ಶಿಕ್ಷಣದಲ್ಲಿ ಮುಂದುವರಿಯಬೇಕೆನ್ನುವುದು ಅನಿಸಿಕೆಯಾಗಿದೆ.[೪೯]

ಚಂದ್ರಶೇಖರ್ ಸಿ.ಪಿ. (೨೦೦೨) ಅವರ **ವಿಫಲಗೊಂಡ ಮಾರುಕಟ್ಟೆ ಭಾರತದಲ್ಲಿ ನವ ಉದಾರೀಕರಣದ ಆರ್ಥಿಕ ಸುಧಾರಣೆಗಳು** ಎಂಬ ಪುಸ್ತಕದಲ್ಲಿ ಗ್ರಾಮೀಣ ಭಾಗದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭೂ ಒಡೆತನ ಕುಟುಂಬ, ಗಾತ್ರ ಜಾತಿ, ಲಿಂಗ, ಶಿಕ್ಷಣಕ್ಕೆ ಸಾಕ್ಷರತೆ, ವೃತ್ತಿ ಇತ್ಯಾದಿಗಳು ಬಡತನದ ಮೇಲೆ ಪರಿಣಾಮ ಬೀರುತ್ತವೆ. ಯಾವುದೇ ರೀತಿಯ ಅಸ್ತಿಗಳು ಇಲ್ಲದೆ ಶಿಕ್ಷಣವಿಲ್ಲದೆ ಕೂಲಿ ಅಧಾರಿತ ಉದ್ಯೋಗಗಳಲ್ಲಿ ತೊಡಗಿರುವುದನ್ನು ಗಮನಿಸಿದರೆ ಭಾರತದಲ್ಲಿ ಬಡತನ ಎಷ್ಟಿದೆ ಎಂಬುದು ತಿಳಿದುಬರುತ್ತದೆ. ಸಮಾಜದ ಕೆಲವು ವರ್ಗಗಳಲ್ಲಿ ಬಡತನದ ಪ್ರಮಾಣ ಹೆಚ್ಚು. ಅಂತಹ ವರ್ಗಗಳೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳು. ಸಂಪನ್ಮೂಲ ಅಥವಾ ಆಸ್ತಿಯಲ್ಲಿನ ಅಸಮಾನತೆ ಇದು ಮಹಿಳೆಯರ ಮತ್ತು ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು.[೫೦]

ಜಾರ್ಜ್ (೨೦೦೨) ಅವರ **"ರೀಡರ್ ಇನ್ ಎಜುಕೇಶನ್ ನ್ಯಾಷನಲ್ ಕಾಪಿಲ್ ಆಫ್ ಎಜುಕೇಶನ್ ರಿಸರ್ಚ್‌ಟ್ರೈನಿಂಗ್(NCERT) ಡೆವಲಪ್‌ಮೆಂಟ್ ಪ್ರಾಪರ್ಟಿ ಆಫ್ ಇಂಡಿಯನ್ ಎಜುಕೇಶನ್"** ತಮ್ಮ ಪುಸ್ತಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹುಡ್ ಡಿಶ್ ಪ್ಯಾಚ್ ವರದಿ ಮತ್ತು ಬ್ರಿಟಿಷರು ಭಾರತಕ್ಕೆ ಬಂದ ನಂತರದ ದಿನದಿಂದಲು ಸಹ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ರೀತಿಯಲ್ಲಿ ಶಿಕ್ಷಣಕ್ಕೆ ಹಣಕಾಸಿನ ಸಹಾಯ ಯಾವ ಯಾವ ಮೂಲದಿಂದ ಶಿಕ್ಷಣಕ್ಕೆ ಹರಿದು ಬರುತ್ತದೆ ಎಂಬುದನ್ನು ಪ್ರಮುಖವಾಗಿ ಈ ಕೆಳಕಂಡಂತಿವೆ. ರಾಜ್ಯ ಸರ್ಕಾರಗಳು, ವಿದ್ಯಾರ್ಥಿಗಳು ಪಾವತಿಸುವ ಶುಲ್ಕ, ಕೇಂದ್ರ ಸರ್ಕಾರದಿಂದ ಬರುವ ಹಣ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಂದ ಬರುವ ಹಣ, ಗ್ರಾಮೀಣ ಪ್ರದೇಶಗಳಿಗೆ ಜಿಲ್ಲಾ ಬೋರ್ಡ್‌ನಿಂದ ಬರುವ ಹಣ, ಸಂಘ ಸಂಸ್ಥೆಗಳಿಂದ ಬರುವ ಹಣ, ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳಿಂದ ಬರುವ ಹಣ. ಪ್ರಾಥಮಿಕ ಶಿಕ್ಷಣವು ಪಂಚವಾರ್ಷಿಕ ಯೋಜನೆಯಲ್ಲಿ ಯಾವ ರೀತಿ ಅಭಿವೃದ್ಧಿ ಹೊಂದುತ್ತಿವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಧನ ವಿನಿಯೋಗವು

ಈ ರೀತಿ ವಿನಿಯೋಗವಾಗಿದೆ ಎಂಬುದನ್ನು ತಿಳಿಸಿದ್ದಾರೆ. ಶೇ. ೮೫ ವಿನಿಯೋಗಿಸಿ ಶೇ. ೫೬ ಅಭಿವೃದ್ಧಿ ಹೊಂದಿತು. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ. ೯೬ರಷ್ಟು ವಿನಿಯೋಗಿಸಿ ಶೇ. ೮೯ರಷ್ಟು ಪ್ರಾಥಮಿಕ ಶಿಕ್ಷಣ ವಲಯ ಅಭಿವೃದ್ಧಿ ಹೊಂದಿದೆ ಎಂದಿದ್ದಾರ.[೫೧]

ಕೃಷ್ಣಪ್ಪ ಎಸ್. (೨೦೦೨) ಅವರ **ಆಧುನಿಕ ಶಾಲಾ ವ್ಯವಸ್ಥೆ** ಎಂಬ ಪುಸ್ತಕದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ತರುವ ಅನೇಕ ಯೋಜನೆಗಳನ್ನು ರೂಪಿಸುವುದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಈ ಯೋಜನೆಗಳು ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಇವರ ಕುಟುಂಬವು ಎದುರಿಸುವಂತಹ ಪ್ರಮುಖ ನಿರ್ಬಂಧಗಳನ್ನು ನೇರವಾಗಿ ಕೈಗೆತ್ತಿಕೊಳ್ಳುತ್ತಿದೆ. ಈ ವ್ಯವಸ್ಥೆಯ ಯೋಜನೆಗಳೆಂದರೆ ಚಿನ್ನರ ಅಂಗಳ, ರಾತ್ರಿ ಶಾಲೆಗಳು, ಕೊಳೆಗೇರಿ ನಿವಾಸಿಗಳ ಮಕ್ಕಳಿಗಾಗಿ ಬೀದಿಶಾಲೆಗಳು ಹೆಣ್ಣುಮಕ್ಕಳಿಗಾಗಿ ಕಿಶೋರಿ ಕೇಂದ್ರಗಳು, ಬಾ ಬಾಲೆ ಶಾಲೆಗೆ ಯೋಜನೆಗಳು ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಅನೇಕ ಮಕ್ಕಳನ್ನು ಪ್ರಾಥಮಿಕ ಮುಖ್ಯವಾಹಿನಿಗೆ ತರುವಲ್ಲಿ ಸಹಾಯಕವಾಗಿದೆ.[೫೨]

ಕುಮಾರ್ ಬಿ.ಆರ್. (೨೦೦೪) **ಮಕ್ಕಳ ಅಂತರಿಕ ನಿರಕ್ಷರತೆ** ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ರಾಜ್ಯದಲ್ಲಿ ಇನ್ನೂ ೬.೬೬ ಲಕ್ಷ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಿರುವುದು ಗರ ಬಡಿಸುವ ಸಂಗತಿ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಪ್ರಮಾಣದಲ್ಲಿ ಗಣನೀಯ ಇಳಿಮುಖವಾಗಿರುವುದು ಕೊಂಚ ನೆಮ್ಮದಿಯ ವಿಚಾರ. ಕರ್ನಾಟಕದ ಈಶಾನ್ಯ ಜಿಲ್ಲೆಗಳಲ್ಲಿಯೇ ಈಗಲೂ ಇಂಥ ಮಕ್ಕಳ ಸಂಖ್ಯೆ ಜಾಸ್ತಿ ಇದೆ.(ಅರ್ಧಕ್ಕಿಂತ ಹೆಚ್ಚು) ಬಡತನ, ಅಜ್ಞಾನ ನಿಕಟ ಪರಿಸರದಲ್ಲಿ ಶಿಕ್ಷಣದ ಸವಲತ್ತು ಇಲ್ಲದಿರುವುದು ಮುಂತಾದ ಕಾರಣಗಳಿಂದಾಗಿ ಈ ಮಕ್ಕಳು ಕಡ್ಡಾಯ ಶಿಕ್ಷಣದಿಂದ ವಂಚಿತರಾಗಿದ್ದಾರೆ, ಹಾಗೆ ನೋಡಿದರೆ ಕಳೆದ ವರ್ಷದವರೆಗೆ ಈ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ದಿಸೆಯಲ್ಲಿ ಹೇಳಿಕೊಳ್ಳುವಂಥ ಪ್ರಗತಿ ಆಗಿರಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಹುಪಾಲು ಪಾಲಕರು ತಮ್ಮ ಮಕ್ಕಳನ್ನು ದನಗಾಹಿಗಳಾಗಿಯೇ, ಕೂಲಿ ಮಾಡಿಸಿಕೊಂಡು ಬೆಳಿಸಿಬಿಡುತ್ತಾರೆ. ಇದು ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಲ್ಲ. ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿಯೂ ಅನೇಕ ಗ್ಯಾರೇಜ್‌ಗಳಲ್ಲಿ ಪುಟ್ಟ ಮಕ್ಕಳು ಮೆಕ್ಯಾನಿಕ್‌ಗಳಾಗಿ, ಮತ್ತು ಹೆಣ್ಣುಮಕ್ಕಳು ಶ್ರೀಮಂತರ ಮನೆಗಳಲ್ಲಿ ಮನೆಕೆಲಸ ಮಾಡುವುದು ಈಗಲೂ ಸಾಮಾನ್ಯ ದೃಶ್ಯ. ಬಾಲಕಾರ್ಮಿಕ ಪದ್ಧತಿಯನ್ನು ನಿಲ್ಲಿಸಲು ಸರ್ಕಾರ ಕೈಗೊಂಡ ಅನೇಕ ಯೋಜನೆಗಳು ಮಕ್ಕಳ ಬಡತನ, ಸಮಸ್ಯೆಯಿಂದಾಗಿಯೇ ಸಫಲವಾಗಿಲ್ಲ. ಆದ್ದರಿಂದ ಮಕ್ಕಳ ಬದುಕಿನ ಬಗ್ಗೆ ಸರ್ಕಾರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು[೫೩]

ಮಹೇಶ್ ಎಂ. (೨೦೦೫) ಪಟ್ಟಣ ಪ್ರದೇಶಗಳ ಮಕ್ಕಳ ಸ್ಥಿತಿಗತಿ ಎಂಬ ಪುಸ್ತಕದಲ್ಲಿ ಈ ರೀತಿ ಇದೆ. ಲಿಂಗರಾಜಪುರ, ಇಸ್ರೋ ಸ್ಲಂ, ಮಾರ್ಕಂಡೇಯ ಲೇಔಟ್. ರಾಮಕೃಷ್ಣ ನಗರ ಸೇವಾನಗರ, ರಾಜಗೋಪಾಲನಗರಗಳಲ್ಲಿ ನಿರ್ಲಕ್ಷಿತ ಪ್ರದೇಶಗಳ ಸಮೀಕ್ಷೆ ನಡೆಸಿದಾಗ ಕಂಡ ಪರಿಸ್ಥಿತಿಯನ್ನು ವಿಶ್ಲೇಷಣಾತ್ಮಕವಾಗಿ ದಾಖಲಿಸಿದೆ. ವರದಿಯಲ್ಲಿ ಗಮನಾರ್ಹವಾದ ಅಂಶಗಳು ಈ ರೀತಿ ಇರುತ್ತವೆ. ೬ರಿಂದ ೧೪ನೇ ವಯಸ್ಸಿನ ಮಕ್ಕಳು ಹೋಟಲ್ ಅಂಗಡಿ, ಮುಂಗಟ್ಟು ಗ್ಯಾರೇಜ್ ಟೀ. ಕಾಫಿ ಅಂಗಡಿಗಳಲ್ಲಿ ದುಡಿಯುವುದು ಸರ್ವೇ ಸಾಮಾನ್ಯ. ಈ ವಯಸ್ಸಿನ ಮಕ್ಕಳು ಯಾರು ಮತ್ತು ಇಂತಹ ಉದ್ದಿಮೆಗಳಲ್ಲಿ ಉಪಯೋಗಕ್ಕೆ ಬರುವವರು ಅಗಿರುತ್ತಾರೆ ಎಂಬ ಅಭಿಪ್ರಾಯವೇ ಅದಕ್ಕೆ ಕಾರಣ. ಆದರೆ ಬೆಳೆದಂತೆ ಈ ಮಕ್ಕಳು ಅವಿಧೇಯರಾಗಿರುವುದರಿಂದ ಕೆಲಸಕ್ಕೆ ಅನರ್ಹರಾಗಿರುತ್ತಾರೆ. ಇತರ ಉದ್ಯೋಗವೂ ಇಲ್ಲದೇ, ಶಿಕ್ಷಣವೂ ಇಲ್ಲದೆ ಇಂತಹ ಆ ಪ್ರದೇಶಗಳಲ್ಲಿ ಸುಮ್ಮನೆ ಅಡ್ಡಾಡುತ್ತಾರೆ ಎಂದು ಹೇಳಲಾಗಿದೆ.[೫೪]

ಬಂಡೋಪಾಧ್ಯಾಯ (೨೦೦೬) ಅವರು **ಭಾರತದಲ್ಲಿ "ಸರ್ವರಿಗೂ ಶಿಕ್ಷಣ"** ಎಂಬ ನೀತಿಯು ೧೯೪೭ ರಿಂದ ಅನುಷ್ಠಾದಲ್ಲಿದ್ದರೂ ಶಿಕ್ಷಣದ ಸಾರ್ವತ್ರೀಕರಣ ಸಂಪೂರ್ಣವಾಗಿಲ್ಲ ಶಿಕ್ಷಣದ ಸಾರ್ವತ್ರೀಕರಣ ಅನೇಕ ಪ್ರಯತ್ನಗಳ ಫಲವಾಗಿ ೨೦೦೧-೦೨ ರಲ್ಲಿ ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇ. ೪೦.೦೭ ರಿಂದ ಶೇ. ೩೫.೦೬ಕ್ಕೆ ಕಡಿಮೆಯಾಗಿದ್ದರೂ ೬-೧೪ ವರ್ಷದೊಳಗಿನ ಸುಮಾರು ೨೩ ದಶಲಕ್ಷ ಮಕ್ಕಳು ಶಾಲೆಯಿಂದ ಹೊರಗಡೆ ಇದ್ದಾರೆ ಹಾಗೂ ಬಹುಸಂಖ್ಯೆ ಮಕ್ಕಳು ೫ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತಾರೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ೨೦೦೩-೦೪ರ ವರದಿಯಿಂದ ತಿಳಿಯುತ್ತದೆ. ೬-೧೪ ವರ್ಷದ ವಯಸ್ಸಿನ ಶೇ. ೩೦ ಮಕ್ಕಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳೆ ಶಾಲೆಗೆ ಹಾಜರಾಗದಿರುವುದನ್ನು ೧೯೯೬-೯೭ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಗುರುತಿಸಿದೆ.[೫೫]

ನರಸಿಂಹಾಚಾರ್ ಎ.ಎಲ್. (೨೦೦೬) ಅವರ **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ** ಎಂಬ ಪುಸ್ತಕದಲ್ಲಿ ಸೆಕಂಡರಿ ಶಿಕ್ಷಣದ ಸಂಸ್ಥೆಗಳ ವಿಸ್ತರಣೆಯನ್ನು ಮಿತಿಗೊಳಿಸಿ ಹೊಸ ಮಕ್ಕಳನ್ನು ಹೆಣ್ಣುಮಕ್ಕಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಗ್ರಾಮಾಂತರ ಆಧಾರದ ಮೇಲೆ ತಿಳಿಯಲಾಗುವುದು. ಗುಣಮಟ್ಟ ರಕ್ಷಿಸುವುದು(೧೧ರಿಂದ೧೨) ಮುಂದುವರಿಸುವುದು. ಮರು ಪ್ರವೇಶಕ್ಕೆ ಅವಕಾಶ ನೀಡಿ ಉದ್ಯಮ ವಿಶ್ವದೊಡನೆ ಸಂಬಂಧ ಕಲ್ಪಿಸಿ ವಿಷಯಾಧಾರಿತ ಪರೀಕ್ಷೆ ಹಾಗೂ ವೃತ್ತಿ ಶಿಕ್ಷಣದ ಗುಣಮಟ್ಟಗಳಿಗೆ ಬೇಕಾಗುವ ಅಂಶಗಳ ಅಭಿವೃದ್ಧಿಗೆ ಆಂತರಿಕ ವಿಕಾಸ ಸೌಲಭ್ಯ ಕಲ್ಪಿಸಲಾಗುವುದು ಹಾಗೂ ಉತ್ತಮ ಮೌಲ್ಯಗಳನ್ನು ರೂಢಿಸಲಾಗುವುದು. ದೂರಶಿಕ್ಷಣದ ಮೂಲಕ ಸೇವಾ ಶಿಕ್ಷಣ ಕಾರ್ಯಕ್ರಮಗಳ

ಮುಖಾಂತರ ಸ್ತ್ರೀಯರಿಗೆ ಗ್ರಾಮಾಂತರದವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಸಮಾಜದಿಂದ ವಂಚಿತರಾದವರಿಗೆ ಹೊಂದಿಕೆಯಾಗುವ ವೃತ್ತಿ ಶಿಕ್ಷಣಕ್ಕೆ ವ್ಯವಸ್ಥಿತ ಅನೌಪಚಾರಿಕ ವೃತ್ತಿಶಿಕ್ಷಣ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸುವುದು ಹಾಗೂ ಶಿಕ್ಷಣದ ಪ್ರಗತಿ ತಿಳಿಯುವುದು. ರಾಷ್ಟ್ರೀಯ ಮೌಲ್ಯಮಾಪನ ಮಾಡಲಾಗುವುದು ವಿವಿಧ ಪಂಗಡದವರನ್ನು ಶೈಕ್ಷಣಕ್ಕೆ ವಿದ್ಯಾರ್ಥಿ ವೇತನ ಬಹುಮಾನಗಳಿಂದ ಆಕರ್ಷಿಸಲಾಗುವುದು ಅಂಗವಿಕಲರಿಗೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.[೫೬]

ಮಂದಿರ ಕುಮಾರ್ (೨೦೦೬) "ಮಕ್ಕಳ ಆರೋಗ್ಯ ಮತ್ತು ಹಾಜರಾತಿ" ಎಂಬ ಶೀರ್ಷಿಕೆಯಲ್ಲಿ ಈ ರೀತಿಯಾಗಿ ಹೇಳಲಾಗಿದೆ. ೦೬–೧೪ ವರ್ಷದ ಮಕ್ಕಳನ್ನು ಬಿಟ್ಟು ಜನ ಸಂಖ್ಯೆಯಲ್ಲಿ ಶೇ. ೬೦ ಮಕ್ಕಳಿಗೆ ಶಿಕ್ಷಣ ತಲುಪುತ್ತಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಈ ಸೇವೆಯ ಅನುಷ್ಠಾನ ಚೆನ್ನಾಗಿಯೇ ಇದೆಯಾದರೂ ದಾಖಲಾದ ಮಕ್ಕಳ ಸಂಖ್ಯೆಯ ಶೇ. ೫೦ರಷ್ಟು ಶಾಲೆಗೆ ಬರುವುದೆ ಇಲ್ಲ. ಜೊತೆಗೆ ಒಂದು ಶಾಲೆ ತೆರೆಯಲು ಏಳುನೂರರಿಂದ ಒಂದು ಸಾವಿರ ಜನಸಂಖ್ಯೆಯ ಅಗತ್ಯವಿದೆ ಎಂಬ ನಿಯಮದಿಂದಾಗಿ ಕಡಿಮೆ ಜನಸಂಖ್ಯೆ ಇರುವೆಡೆ, ಅದರಲ್ಲಿ ಪರಿಶಿಷ್ಟ ವರ್ಗ–ಪರಿಶಿಷ್ಟ ಪಂಗಡಗಳ ತೀರ ಬಡವರು ವಾಸಿಸುವೆಡೆ ಮಕ್ಕಳ ಅಭಿವೃದ್ಧಿ ಶಿಕ್ಷಣಕ್ಕಿಂತ ಅದರ ಪೌಷ್ಠಿಕತೆ ಆರೋಗ್ಯ ಸಾಧಕಗಳು ಸ್ವಲ್ಪ ಮೇಲು. ಹಾಗೆ ನೋಡಿದರೆ ಶಿಕ್ಷಣಕ್ಕೆ ಮಹತ್ವವನ್ನು ನೀಡಿಲ್ಲ ಎನ್ನಬಹುದು. ಶಿಕ್ಷಕರ ಹುದ್ದೆಗಳಲ್ಲಿ ಕೇವಲ ೫೦೦ ಹುದ್ದೆಗಳನ್ನು ಮಾತ್ರ ತುಂಬಲಾಗಿದ್ದು, ಶಾಲೆಯ ಮೇಲ್ವಿಚಾರಣೆ, ಯಾವುದೇ ಬಗೆಯ ಉಸ್ತುವಾರಿ, ಹಾಜರಾತಿ ಮಕ್ಕಳ ನಿಗಾ ವಹಿಸುವುದು. ಸಮುದಾಯದೊಂದಿಗೆ ಸಮಪರ್ಕ ಇಟ್ಟಕೊಳ್ಳುವುದು ಹೀಗೆ ಬಹು ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಶಿಕ್ಷಕರು ಒತ್ತಡಕ್ಕೆ ಒಳಗಾಗುತ್ತದೆ.[೫೭]

ಕಾಮತ್ ಜ್ಯೋತ್ಸ್ನಾ (೨೦೧೦) ಅವರು. **'ಮಹಿಳೆಯರು: ಒಂದು ಅಧ್ಯಯನ'** ಎಂಬ ಲೇಖನದಲ್ಲಿ ಈ ಶತಮಾನದ ಕೊನೆಯಲ್ಲಿ ಭಾರತೀಯ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯ ಗಂಡಸರಿಗೆ ಸರಿಸಮಾನ ಶಿಕ್ಷಣ ಪಡೆದು ವಿವಿಧ ರಂಗಗಳಲ್ಲಿ ಮುಂದುವರಿಯುತ್ತಿರುವುದನ್ನು ಅಖಂಡ ದೇಶದ ಪ್ರಗತಿಗೆ ಹೋಲಿಸಿದಾಗ ಪ್ರಗತಿಪರ ಮಹಿಳೆಯರ ಸಂಖ್ಯೆ ಅತ್ಯಲ್ಪವೆಂದೇ ಹೇಳಬಹುದಾಗಿದೆ ಎಂದಿದ್ದಾರೆ. ಇತ್ತೀಚಿನ ಸಮೀಕ್ಷೆಯಲ್ಲಿ ಪತಿಯ ಮರಣದಿಂದ ನಿರ್ಗತಿಕ ರಾಗಿರುವ ಹೆಣ್ಣುಮಕ್ಕಳ ಸಂಖ್ಯೆ ವರ್ಷಕ್ಕೆ ೧೦ ಲಕ್ಷದಷ್ಟಿದೆ. ಆಪತ್ಕಾಲಕ್ಕೆ ಮಾಡಿಕೊಳ್ಳುವಂತಹ ಯಾವ ಶಿಕ್ಷಣವೂ ಹುಡುಗಿಯರಿಗೆ ದೊರೆಯುವಂತಿಲ್ಲ. ಸರಕಾರವಾದರೂ ಎಲ್ಲರಿಗೂ ಎಲ್ಲ ಕಾಲಕ್ಕೆ ಬಯಸುವ ನೌಕರಿಗಳನ್ನು ಕೊಡಮಾಡುವ ಸ್ಥಿತಿಯಲ್ಲಿ ಇಲ್ಲ. ಶಿಕ್ಷಣದೊಂದಿಗೆ ಶ್ರಮ,

ಗೌರವದ ಕಲ್ಪನೆ ಸೇರ್ಪಡೆಯಾಗದೆ, ದೈಹಿಕಶ್ರಮದಿಂದ ಜೀವಿಸುವ ವರ್ಗದಂತೆ ಸ್ತ್ರೀಯರು ಅಕ್ಷರಾಭ್ಯಾಸ ದೊರೆತೊಡನೆ ಕೌಟುಂಬಿಕ ವೃತ್ತಿಗಳನ್ನು ಕೈಗೊಳ್ಳುವುದನ್ನು ಕೀಳಾಗಿ ಭಾವಿಸುತ್ತಾರೆ. ಸರ್ಕಾರಿ ನೌಕರಿಯೊಂದೇ ಸಮಾಜದಲ್ಲಿ ಮನ್ನಣೆ ತರುತ್ತದೆಂದು ನಂಬುವವರೇ ಅಲ್ಲದೆ ನಗರ ಮತ್ತು ಗ್ರಾಮಗಳ ಜೀವನದಲ್ಲಿ ಅಪಾರ ತಾರತಮ್ಯವಿದ್ದು ಈಗಲೂ ಅದು ಹೆಚ್ಚುತ್ತಲೇ ಇದೆ. ಆದರೆ ನಗರ ಮಹಿಳೆಯರ ವೃತ್ತಿ ಪ್ರವೃತ್ತಿಗಳು ಅವಕಾಶ ಪಡೆಯುತ್ತಿದ್ದರೆ, ಗ್ರಾಮಸ್ಥ ಮಹಿಳೆಯರಿಗೆ ಅವಕಾಶವೇ ಇಲ್ಲ.[೩೮] ದೇಶದ ಲಕ್ಷಗಟ್ಟಲೆ ಗ್ರಾಮೀಣ ಮಹಿಳೆಯರ ಸ್ಥಾನಮಾನ ಮತ್ತು ಶೈಕ್ಷಣಿಕ ಪ್ರಗತಿ ಅತ್ಯಂತ ನಿರಾಶಾದಾಯಕವಾಗಿಯೇ ಉಳಿದಿದೆ. ಇಂತಹ ಶಿಕ್ಷಣದ ಹಿನ್ನಡೆಯನ್ನು ಸರಿದೂಗಿಸುವ ಪ್ರಯತ್ನ ವಿವಿಧ ವಲಯಗಳಿಂದ ಆಗಬೇಕಾದ ಅಗತ್ಯವಿದೆ.

ಯರ್ರಿಸ್ವಾಮಿ ಅವರು **'ಗ್ರಾಮ ಪಂಚಾಯಿತಿ ಮತ್ತು ಸಬಲೀಕರಣ'** ಎಂಬ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಮಾನವನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭ್ಯುದಯದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾಗಿದೆ ಎಂದಿದ್ದಾರೆ. ಮೂಲಭೂತ ಶಿಕ್ಷಣವನ್ನು ಒದಗಿಸುವುದು ಇಂದು ಸಾಂವಿಧಾನಕ ಹೊಣೆಯಾಗಿದೆ. ಸಂವಿಧಾನದ ೪೫ನೇ ವಿಧಿಯನ್ವಯ ೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಹೇಳಿದ್ದಾರೆ. ಇಂದು ಶಿಕ್ಷಣವು ಮಾನವನ ಅಭಿವೃದ್ಧಿಯ ಮುಖ್ಯ ಸೂಚಕವಾಗಿದೆ. ಶಿಕ್ಷಣ ಅಭಿವೃದ್ಧಿಯ ದೃಷ್ಟಿಯಿಂದ ಸೀಮಿತ ಜವಾಬ್ದಾರಿಗಳನ್ನು ಪಂಚಾಯತ್‌ರಾಜ್‌ಗಳಿಗೆ ವಹಿಸಲಾಗಿದೆ. ಆದ್ದರಿಂದ ಶಿಕ್ಷಣ ಸುಧಾರಣೆಯಲ್ಲಿ ಪಂಚಾಯಿತಿ ಸಂಸ್ಥೆಗಳ ಪಾತ್ರ ಬಹಳ ಅಗತ್ಯವಾಗಿದೆ. ಅದರಲ್ಲೂ ಗ್ರಾಮೀಣ ಶಿಕ್ಷಣ ಸುಧಾರಣೆಯಲ್ಲಿ ಈ ಸಂಸ್ಥೆಗಳ ಪಾತ್ರ ಇನ್ನೂ ಹೆಚ್ಚಿದೆ. ಕಾರಣ ಗ್ರಾಮೀಣ ಸಾಕ್ಷರತೆಯನ್ನು ನಗರ ಸಾಕ್ಷರತೆಗೆ ಹೋಲಿಸಿದರೆ ಬಹಳ ಅಂತರವನ್ನು ಕಾಣುತ್ತೇವೆ. ಈ ಅಂತರಕ್ಕೆ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳ ದಾಖಲಾತಿ, ಶಾಲೆ ಬಿಟ್ಟವರ ಪ್ರಮಾಣ ಇವೆಲ್ಲವೂ ಕಾರಣವಾಗಿವೆ. ಆದ್ದರಿಂದ ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಅನುಷ್ಠಾನಗೊಳಿಸುವುದರೊಂದಿಗೆ ಹೆಣ್ಣುಮಕ್ಕಳಿಗೆ ಸಮರ್ಥ ಅಕ್ಷರ ಕಲಿಕೆಯನ್ನು ಮೂಡಿಸುವ ಅಗತ್ಯವಿದೆ ಎಂದು ತಿಳಿದುಬಂದಿದೆ.[೩೯]

೧೯೯೧ರಲ್ಲಿ ರಚಿತವಾದ ಎಚ್. ನರಸಿಂಹಯ್ಯನವರ ವರದಿಯು ಪ್ರಾಥಮಿಕ ಶಿಕ್ಷಣ ಕುರಿತು ೧ರಿಂದ ನಾಲ್ಕನೇ ತರಗತಿವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಫಾರಸ್ಸು ಮಾಡಿತು. ಆದರೆ ಸರಕಾರ ಅಂಗೀಕರಿಸಿದರೂ ಅನುದಾನ ಸಂಹಿತೆ ೧೨ಎ ಪ್ರಕಾರ ಆಂಗ್ಲ ಮಾಧ್ಯಮ ಶಾಲೆಗೆ ಅನುಮತಿ ನೀಡಬಹುದೆಂದು ತಿಳಿಸಿತು. ಅಂದರೆ, ಇಂತಹ ವಿಭಿನ್ನ ನಿಲುವುಗಳಡಿಯಲ್ಲಿ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲಾಗದೆ ಶಿಕ್ಷಣ

ಸಂಸ್ಥೆಗಳನ್ನು ನಿಯಮಿತವಾಗಿ ನಡೆಸಿಕೊಂಡು ಹೋಗುವ ತುರ್ತು ಅಗತ್ಯವಿದೆ ಎಂದು ತಿಳಿದುಬಂದಿದೆ.[೬೦]

ಪ್ರಸ್ತುತ ಶಿಕ್ಷಣವನ್ನು ನಮ್ಮ ಸಂವಿಧಾನದ ಸಹಕಾರಿ ನೀತಿಯ ನಿರ್ದೇಶಕ ಸೂತ್ರಗಳಲ್ಲಿ ಕಲ್ಯಾಣರಾಷ್ಟ್ರ ಪರಿಕಲ್ಪನೆಯ ಭಾಗವಾಗಿ ಸೇರ್ಪಡೆಗೊಳಿಸಲಾಗಿದೆ. ಹೀಗಾಗಿ ಭಾರತ ಸರ್ಕಾರವು ೧೪ ವರ್ಷಗಳವರೆಗಿನ ಪ್ರಾಯದ ಎಲ್ಲಾ ಮಕ್ಕಳಿಗೂ ಶಿಕ್ಷಣ ನೀಡುವ ಸಾರ್ವತ್ರಿಕ ಉದ್ದೇಶ ಹೊಂದಿದೆ. ಈ ಮಾತು ನಮ್ಮ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. ಹೀಗೆ ಭಾರತೀಯ ಸಂವಿಧಾನವು ಮೊಟ್ಟಮೊದಲ ಸಲಕ್ಕೆ ಲಿಂಗತಾರತಮ್ಯವಿಲ್ಲದೆ ಶಿಕ್ಷಣ ಅವಕಾಶಗಳನ್ನು ಗಂಡು ಹೆಣ್ಣು ಮಕ್ಕಳೀರ್ವರಿಗೂ ಕಲ್ಪಿಸಿತು. ಭಾರತೀಯ ಶಿಕ್ಷಣಪದ್ಧತಿಯಲ್ಲಿ ಪುರುಷರಿಗೆ ನೀಡಿದ ಶಿಕ್ಷಣಕ್ಕೆ ಪ್ರೋತ್ಸಾಹದ ಮಟ್ಟವನ್ನು ಇಂದಿಗೂ ಮಹಿಳೆಯರು ತಲುಪದಿರುವುದರಿಂದ ಶಿಕ್ಷಣದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣದೆ ಮಹಿಳೆಯರು ಇಂದಿಗೂ ಸಬಲೀಕರಣಗೊಳ್ಳದಿರುವುದನ್ನು ನೋಡಲಾಗಿದೆ. ಆದ್ದರಿಂದ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ ಎಂದು ತಿಳಿದುಬಂದಿದೆ.

ಥೇಕೆಡತ್ ಕೆ.ಕೆ. (೧೯೯೮) (ಅನು) ಕೆ.ಎಲ್. ಗೋಪಾಲಕೃಷ್ಣಯ್ಯ ಶತಮಾನದ ಸಂಚಿಕೆಯಲ್ಲಿ ಶಿಕ್ಷಣ ನಮ್ಮ ಜನಗಳಿಗೆ ಧರ್ಮಸೆರೆ, ವೈಜ್ಞಾನಿಕ ಪ್ರಜಾತಾಂತ್ರಿಕ ಶಿಕ್ಷಣ ಬೇಕೆಂದು ನಾವು ಒಪ್ಪಿಕೊಂಡಿದ್ದು, ಒಂದು ಶತಮಾನಕ್ಕೂ ಹೆಚ್ಚು ಅವಧಿಯ ಚಳುವಳಿಯ ಮೂಲಕ ಅಂದರೆ ೧೯೫೦ರ ಸಂವಿಧಾನ ಸಭೆಯಲ್ಲಿ ನಮ್ಮ ಸಂವಿಧಾನದ ೪೫ನೇ ವಿಧಿಯನ್ನು ಅಳವಡಿಸಿದ್ದು, ಈ ಸುದೀರ್ಘ ಹೋರಾಟದ ಫಲಶೃತಿಯಾಗಿ ಇವತ್ತು ದೆಹಲಿಯಲ್ಲಿ ಕುಳಿತ ಆಡಳಿತಗಾರರು ಮತ್ತು ಅಧಿಕಾರಿಶಾಹಿಗಳು ಆಡುವ ಸುತ್ತು ಬಳಸಿನ ಮಾತುಗಳನ್ನು ಬಿಟ್ಟು ನೇರವಾಗಿ, ಸರಳವಾಗಿ ಹೇಳುವುದಾದರೆ, ೪೫ನೇ ವಿಧಿಯು "ಜನ ಸಾಮಾನ್ಯರಿಗೆ ಶಿಕ್ಷಣವನ್ನು ದೊರಕಿಸುವುದೇ ಪ್ರಜಾತಾಂತ್ರಿಕ ಶಿಕ್ಷಣದ ಸಾರ" ಎನ್ನುತ್ತದೆ. ಅದೇ ರೀತಿ ಶಿಕ್ಷಣದ ಸವಾಲುಗಳು (೧೯೮೫ ಆಗಸ್ಟ್) ಎಂಬ ದಸ್ತಾವೇಜಿನಲ್ಲಿ "ಶಿಕ್ಷಣದ ಎಲ್ಲಾ ಹಂತಗಳಲ್ಲಿ ಗಂಡು-ಹೆಣ್ಣು ಎರಡೂ ವರ್ಗಗಳ ದಾಖಲಾತಿಯಲ್ಲಿ ಸರ್ವತೋಮುಖ ಬೆಳವಣಿಗೆಯಾಗಿದೆ. ೧೯೫೦-೫೧ರಲ್ಲಿ ೨-೮ ಕೋಟಿಯಷ್ಟಿದ್ದ, ವಿಧ್ಯಾರ್ಥಿ ಸಂಖ್ಯೆಯು ೧೯೮೨-೮೩ರಲ್ಲಿ ೧೧.೪ ಕೋಟಿಗಳಿಗೆ ಏರಿ ವಾರ್ಷಿಕ ಶೇ. ೪.೫ರಷ್ಟು ಅಭಿವೃದ್ಧಿ ತೋರಿಸಿತ್ತು. ಇದೇ ಅವಧಿಯಲ್ಲಿ ಹೆಣ್ಣುಮಕ್ಕಳ ದಾಖಲಾತಿಯು ಶೇ. ೫.೫ ರ ಮಿಶ್ರ ಸಂಕಲನ ದರದಲ್ಲಿ ಬೆಳೆಯಿತು. ಇದಕ್ಕೆ ಹೋಲಿಸಿದಾಗ ಗಂಡುಮಕ್ಕಳ ಪ್ರಮಾಣವು ವಾರ್ಷಿಕ ಶೇ. ೩.೯ಗೆ ಹೆಚ್ಚಾಗಿರುವುದು ಕಂಡುಬಂದಿದೆ. ಅದರೂ ಸಹ ಆರಂಭದಲ್ಲಿ ಹೆಣ್ಣುಮಕ್ಕಳ ಹಾಗೂ ಗಂಡುಮಕ್ಕಳ ದಾಖಲಾತಿಯಲ್ಲಿದ್ದ

ತಾರತಮ್ಯದಿಂದಾಗಿ ಹೆಣ್ಣುಮಕ್ಕಳ ಪ್ರಮಾಣವು ಗಂಡುಮಕ್ಕಳ ದಾಖಲಾತಿಗಳಿಗಿಂತ ಕಡಿಮೆಯಾಗಿದೆ.[೬೧]

ಲೈಟನ್ ಜಿ.ಕೆ. (೨೦೦೦) ಅವರು **ವಿಲ್ಡ್ರನ್ ವರ್ಕ್ ಆಂಡ್ ಎಜುಕೇಶನ್** ಇ.ಪಿ.ಡಬ್ಲ್ಯೂ ಅಗಸ್ಟ್ (೨೦೦೦) ಲೇಖನದಲ್ಲಿ ವಿಕೇಂದ್ರಿಕರಣ, ಲಿಂಗ ಸಮಾನತೆ, ಶಿಕ್ಷಣ, ಶಿಕ್ಷಕರ ಸಾಮರ್ಥ್ಯ, ಶಿಕ್ಷಣದ ಗುಣಮಟ್ಟ, ತರಗತಿಯ ಚಟುವಟಿಕೆಗಳ ಜೊತೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಮೂಲಕವಾಗಿ ಮಹಿಳೆಯರ ಸಬಲೀಕರಣ ಸಾಧಿಸುವುದು. ಲೋಕ ಜಂಬಿಸ್ ಕಾರ್ಯಕ್ರಮದ ಮೂಲಕ ಹೆಣ್ಣುಮಕ್ಕಳ ಶಾಲಾ ಶಿಕ್ಷಣವನ್ನು ವಿಸ್ತೃತಪಡಿಸಲು ಜಾರಿಗೆ ಬರುತ್ತದೆ. ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಪರೋಕ್ಷವಾಗಿ ಸಾಮಾಜಿಕ ತಾರತಮ್ಯ ಕಂಡುಬರುತ್ತದೆ. ಈ ಯೋಜನೆಯಲ್ಲಿ ಹಿಂದುಳಿದ ಹೆಣ್ಣುಮಕ್ಕಳಿಗೆ ನಿಗದಿತ ಪ್ರಮಾಣದ ಮೀಸಲಾತಿ ಇಲ್ಲದಿರುವುದರಿಂದ ಸಾಮಾಜಿಕವಾಗಿ ಈ ಯೋಜನೆಯಲ್ಲಿ ಮೇಲುಜಾತಿಯ ಹೆಣ್ಣುಮಕ್ಕಳು ಇದರ ಪ್ರಯೋಜನ ಪಡೆಯುತ್ತಾರೆ. ಹೀಗಾಗಿ ಕಾರ್ಯಕ್ರಮದ ಅನುಷ್ಠಾನದಿಂದ ಹಿಂದುಳಿದ ಜಾತಿಯ ಹೆಣ್ಣುಮಕ್ಕಳಿಗೆ ಮಿಸಲಾತಿ ಸೌಲಭ್ಯ ಕಲ್ಪಿಸಿದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆ ಎಂದು ಲೇಖಕರು ಸ್ಪಷ್ಟಪಡಿಸಿದ್ದಾರೆ.[೬೨]

೨೦೦೧ರ ಸೆನ್‌ಸಾರ್ ರಿಪೋರ್ಟ್ ಅನ್ವಯ: ಸಮಾನತೆಯ ದೃಷ್ಟಿಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೋಲಿಕೆ ಮಾಡಿದಾಗ ನಗರ ಭಾಗಕ್ಕಿಂತ ಗ್ರಾಮೀಣ ಭಾಗದಲ್ಲಿ ಮಹಿಳೆಯರ ಶಿಕ್ಷಣ ಮಟ್ಟವು ಕಡಿಮೆ ಕಂಡುಬಂದು, ಇದನ್ನು ಸರಿದೂಗಿಸಲು ಹಲವು ಸರ್ಕಾರಿ ಯೋಜನೆಗಳನ್ನು ಹಾಕಿಕೊಂಡು ಉಚಿತ ಶಿಕ್ಷಣ ಮತ್ತು ವಿಶೇಷ ಸೌಲಭ್ಯಗಳಾದ "ಸರ್ವಶಿಕ್ಷಣ ಅಭಿಯಾನ, ನಲಿ–ಕಲಿ, ಶಾಲಾ ಕಟ್ಟಡಗಳ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಉಪಗ್ರಹ ಪ್ರಸಾರ ಶಿಕ್ಷಣ, ವಿಧ್ಯಾರ್ಥಿನಿಯರಿಗೆ ಉಚಿತ ಸೈಕಲ್ ವಿತರಣೆ ಮತ್ತು ಶಿಷ್ಯ ವೇತನಗಳನ್ನು ಗ್ರಾಮೀಣ ಭಾಗದಲ್ಲಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಶಿಕ್ಷಣ ಇಲಾಖೆ ಜಾರಿಗೆ ತಂದಿದೆ. ೨೦೦೧ರ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಪುರುಷರ ಸಂಖ್ಯೆ ಶೇ. ೭೬.೧೦ ರಷ್ಟಿದ್ದರೆ, ಮಹಿಳೆಯರ ಸಂಖ್ಯೆಯೆ ಶೇ. ೫೬.೮೭ರಷ್ಟಿತ್ತು. ಗ್ರಾಮೀಣ ಭಾಗವನ್ನು ತೆಗೆದುಕೊಂಡರೆ ಪುರುಷರ ಸಂಖ್ಯೆ ಶೇ. ೭೦.೪೫ರಷ್ಟು ಕಂಡುಬಂದರೆ, ಮಹಿಳೆಯರ ಸಂಖ್ಯೆ ಶೇ. ೪೮.೦೧ರಷ್ಟು ಕಂಡುಬಂದು, ನಗರ ಪ್ರದೇಶದಲ್ಲಿ ಸಾಕ್ಷರತರ ಸಂಖ್ಯೆ ೮೬.೬೬ರಷ್ಟು ಪುರುಷರು ಸಾಕ್ಷರರಾಗಿದ್ದರೆ, ಮಹಿಳೆಯರ ಸಂಖ್ಯೆ ಶೇ. ೭೪.೧೨ರಷ್ಟು ಕಂಡುಬಂದಿದೆ. ಈ ರೀತಿ ಹೋಲಿಸಿದಾಗ ನಗರಕ್ಕಿಂತ ಗ್ರಾಮೀಣ ಭಾಗದ ಮಹಿಳೆಯರು ಹಿಂದೆ ಬಿದ್ದಿದ್ದಾರೆ.

ಆದ್ದರಿಂದ ಶಿಕ್ಷಣ ಇಲಾಖೆ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣದ ಬಗ್ಗೆ ನೀಡಿರುವ ವರದಿಗಳ ಅನ್ವಯ ಯೋಜನೆಗಳನ್ನು ಜಾರಿಗೆ ತರುತ್ತಿದ್ದಾರೆ.[೬೩]

ನಿರಂಜನಾರಾಧ್ಯ ವಿ.ಪಿ. ಅವರ **ಮುಚ್ಚಿದರೇನಾಗುತ್ತದೆ?** ಎಂಬ ಪುಸ್ತಕದಲ್ಲಿ ಶಾಲೆಗಳನ್ನು ಮುಚ್ಚುವ ಅಥವ ವಿಲೀನಗೊಳಿಸುವ ವಿಚಾರದಲ್ಲಿ ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ (ಎನ್.ಎಲ್.ಎಸ್.ಡಿ.ಯು) ಮುಚ್ಚಬೇಕಾದ ಒಟ್ಟು ಶಾಲೆಗಳ ಸಂಖ್ಯೆ ೨೧ ಇದರಲ್ಲಿ ೧೪ ಕಿರಿಯ ಪ್ರಾಥಮಿಕ ಶಾಲೆ ಮತ್ತು ೭ ಹಿರಿಯ ಪ್ರಾಥಮಿಕ ಶಾಲೆಗಳು ಮುಚ್ಚುತ್ತಿರುವ ಶಾಲೆಗಳ ಪರಿಸರದಲ್ಲಿ ವಾಸಿಸುತ್ತಿರುವ ಜನ ಕಡು ಬಡವರಾಗಿದ್ದು ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗಗಳು ಹಾಗೂ ಇತರೆ ವರ್ಗಗಳಿಗೆ ಸೇರಿದವರು. ಮುಚ್ಚುತ್ತಿರುವ ೨೧ ಶಾಲೆಗಳಲ್ಲಿ ಒಟ್ಟು ೧೪೯ ಮಕ್ಕಳು ಪ್ರಾಥಮಿಕ ಶಿಕ್ಷಣದ ಮೂಲಭೂತ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಇನ್ನೂ ಆಘಾತಕಾರಿ ವಿಷಯ ಎಂದರೆ ಇವರಲ್ಲಿ ಬಹುತೇಕರು ಹೆಣ್ಣುಮಕ್ಕಳು ಇಲ್ಲಿನವರು ಗಂಡುಮಕ್ಕಳನ್ನು ಹತ್ತಿರದ ಖಾಸಗಿ ಆಂಗ್ಲ ಮಾದ್ಯಮ ಶಾಲೆಗೆ ಕಳುಹಿಸಿ ಕೊಟ್ಟರೆ ಹೆಣ್ಣುಮಕ್ಕಳನ್ನು ಮಾತ್ರ ಗ್ರಾಮಾಂತರ ಸರ್ಕಾರಿ ಕನ್ನಡ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ತೊಡೆದು ಹಾಕಲಾಗಿದೆ ಎನ್ನಲಾದ ಲಿಂಗ ತಾರತಮ್ಯ ಇಲ್ಲಿ ಇನ್ನೂ ಜೀವಂತವಾಗಿದೆ. ಇಂತಹ ತಾರತಮ್ಯವು ಜಾಗತೀಕರಣದ ಸಂದರ್ಭದಲ್ಲಿಯೂ ವಿಭಿನ್ನ ನೆಲೆಯಲ್ಲಿ ನೀರ್ಮಾಣಗೊಂಡಿರುವುದನ್ನು ಕಾಣಲಾಗಿದೆ. ಇಂತಹ ಲಿಂಗತಾರತಮ್ಯವನ್ನು ಹೊಡೆದೊಡಿಸುವುದರ ಮೂಲಕ ಸಮಾನತೆಯ ಶಿಕ್ಷಣವನ್ನು ಕೊಡುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.[೬೪]

ಅನ್ನಪೂರ್ಣೇಶ್ವರಿ (೨೦೧೧) ಅವರ **'ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿ'** ಎಂಬ ಕೃತಿಯಲ್ಲಿ ಶಿಕ್ಷಣವು ಮಹಿಳೆಯರು ತಮ್ಮ ಹಕ್ಕುಗಳನ್ನು ಮತ್ತು ಜವಾಬ್ದಾರಿಗಳನ್ನು ಚಲಾಯಿಸುವ ಮತ್ತು ನಿರ್ವಹಿಸುವ ಸಾಮರ್ಥ್ಯವನ್ನು ವೃದ್ಧಿಪಡಿಸುವುದು ಎಂಬ ಅಂಶವಿದೆ. ಭೂಮಾಲೀಕತ್ವದ ಹಕ್ಕು ಅನಕ್ಷರತೆಯಂತಹ ತೊಡಕುಗಳಿಂದ ಕ್ಷೀಣಿಸಬಹುದು. ಮಹಿಳೆಯರು ಸಮಾಕಾಲೀನ ವಿಷಯವನ್ನು ತಿಳಿಯದಿದ್ದರೆ ಮತದಾನದ ಹಕ್ಕಿಗೆ ಅರ್ಥವಿರುವುದಿಲ್ಲ. ಕುಟುಂಬದೊಳಗಿನ ಅಥವಾ ಬೀದಿಗಳಲ್ಲಿ ಮಹಿಳೆಯರ ವಿರುದ್ಧದ ಹಿಂಸೆಯು ಕೇವಲ ಬಡತನದೊಂದಿಗೆ ಬೆಸೆದುಕೊಂಡಿಲ್ಲ. ಅದು ಅನಕ್ಷರತೆಯೊಂದಿಗೆ ಸಂಬಂಧ ಪಡೆದಿದೆ. ಇದು ಮಹಿಳೆಯರು ತಮ್ಮ ಹಕ್ಕುಗಳನ್ನು ಚಲಾಯಿಸಲು ಅಡ್ಡಿಪಡಿಸುವುದು ಮತ್ತು ಕಾನೂನು ಪ್ರಕಾರ ನೆರವು

ಪಡೆದು ಸಂರಕ್ಷಿಸಿಕೊಳ್ಳಲು ಅನಕ್ಷರತೆ ತೊಡಕಾಗುವುದು. ಇಂತಹ ಅನುಕೂಲತೆಗಳು ಕೂಡ ಮಹಿಳೆಯರಿಗೆ ಅಗತ್ಯವಾಗಿದೆ ಎಂದು ತಿಳಿದುಬಂದಿದೆ.[೬೫]

ಎಸ್. ಎ. ರುಹಿಲಾ (೧೯೯೬) ಅವರು ಕಡಿಮೆ ತಲಾವರಮಾನವಿರುವ ಹಲವಾರು ದೇಶಗಳಲ್ಲಿ ಶಿಕ್ಷಣದ ಕಳೆದ ೧೫ ವರ್ಷಗಳಿಂದ ನೋಡಿದಾಗ ತುಂಬಾ ನಿರಾಶಾದಾಯಕವಾಗಿದೆ. ನಮ್ಮ ಭಾರತದಲ್ಲಿಯೂ ಸಹ ಅಕ್ಷರ ಮಟ್ಟಿಗೆ ವೇಗದ ಬೆಳವಣಿಗೆ ಇರುವುದಿಲ್ಲ. ಭಾರತವು ಬಾಲಕಾರ್ಮಿಕರನ್ನು ಶಾಲೆಗಳತ್ತ ತರಲು ಹೆಚ್ಚಿನ ಶ್ರಮವನ್ನು ವಹಿಸುತ್ತಿಲ್ಲ. ಅದಕ್ಕಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಜಾಸ್ತಿ ಇದೆ. ಸರಕಾರ ಮಕ್ಕಳ ಪಾಲಕರಿಗೆ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡದಿರುವುದರಿಂದ ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲ. ಮತ್ತು ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಕಡ್ಡಾಯ ಮತ್ತು ಉಚಿತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದಿಲ್ಲ. ಶಿಕ್ಷಣದ ನೀತಿಗೆ ಅಧಿಕಾರಿಗಳು ರಾಜಕಾರಣಿಗಳು ಜೊತೆಗೂಡಿ ಹೆಚ್ಚಿನ ಹಣಕಾಸನ್ನು ಒದಗಿಸುತ್ತಿಲ್ಲ. ಹಾಗಾಗಿ ವೇಗದ ಬೆಳವಣಿಗೆ ಆಗುತ್ತಿಲ್ಲ.[೬೬]

ಜನ್ ದಿಯಾಲ್ ಮತ್ತು ಬಿ. ಜಿ. ತಿಲಕ್ (೨೦೦೩) ಅವರು ಭಾರತದಂತಹ ಅಭಿವೃದ್ಧಿ ಶೀಲದೇಶದಲ್ಲಿ ಮೂಲ ಶಿಕ್ಷಣವು ಇನ್ನೂ ಆದಾಯಕವಾಗಿ ಅಭಿವೃದ್ಧಿ ಕಾಣುತ್ತಿಲ್ಲ. ಅದರಲ್ಲೂ ಹೆಣ್ಣುಮಕ್ಕಳ ಭಾಗವಹಿಸುವಿಕೆ ಪ್ರಮಾಣವು ಗಂಡುಮಕ್ಕಳಿಗಿಂತ ತುಂಬಾ ಕಡಿಮೆ ಇದೆ. ಮತ್ತು ನಮ್ಮ ದೇಶದ ಶಿಕ್ಷಣದ ನೀತಿಗಳು ಆದರ್ಶವಾಗಿಲ್ಲ. ನೀತಿಗಳಲ್ಲಿ ಕೂಡ ವ್ಯತ್ಯಾಸವನ್ನು ದೇಶದಲ್ಲಿ ಮಾಡಲಾಗುತ್ತಿದೆ. ಆದುದರಿಂದ ಅನುದಾನದ ವಿತರಣೆ ತಾರತಮ್ಯದ ಜೊತೆಗೆ ಶಿಕ್ಷಣದ ದಾರಿ ಸುಗಮವಾಗಿ ನಡೆಯುತ್ತಿಲ್ಲ.[೬೭]

ಜಾರ್ಜ ಮತ್ತು ಮೌರಿನ್ ವರ್ಲ್ಡ್ ಹಾಲ್ (೧೯೮೫) ಶಿಕ್ಷಣವು ಅಭಿವೃದ್ಧಿಯ ಕೇಂದ್ರ ಬಿಂದು. ಅದಕ್ಕಾಗಿ ಶಿಕ್ಷಣದ ಮೇಲೆ ಸರಕಾರವು ಹೂಡಿಕೆ ಮಾಡಬೇಕು ಅಂದಾಗ ಮಾನವರ ಜೀವನ ಸುಧಾರಿಸಿ ಬಡತನ ನಿವಾರಣೆ ಆಗಿ ಮಾನವ ಬಂಡವಾಳವನ್ನಾಗಿ ನಿರ್ಮಾಣ ಮಾಡುತ್ತದೆ. ಉತ್ಪಾದಕತೆ ಹೆಚ್ಚಾಗಿ ಉತ್ಪಾದನೆ ಸಾಮರ್ಥ್ಯ ಕೂಡ ಹೆಚ್ಚಾಗಿ ಮೂಲ ಸೌಕರ್ಯ ಹೆಚ್ಚಾಗಿ ದೇಶಗಳ ಅಭಿವೃದ್ಧಿ ತಾನಾಗೆ ಆಗುತ್ತದೆ.[೬೮]

ದೇವಿ (೧೯೮೩) ಅವರು ತಮ್ಮ ಲೇಖನದಲ್ಲಿ ಪ್ರಾಬ್ಲಮ್ ಆಫ್ ಡ್ರಾಪ್ ಔಟ್ಸ್ ಇನ್ ಪ್ರೈಮರಿ ಸ್ಕೂಲ್ ಆಫ್ ಮಣಿಪುರರಲ್ಲಿ ಕಂಡುಕೊಂಡಿದ್ದೇನೆಂದರೆ. ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಹೆಣ್ಣುಮಕ್ಕಳೆ ಗಂಡುಮಕ್ಕಳಿಗಿಂತ ಜಾಸ್ತಿ. ಮತ್ತು ಶಾಲೆಯಿಂದ ಹೊರಗಿರುವುದಕ್ಕೆ ಬಡತನ. ವಸತಿ ವರ್ಗಾವಣೆ. ಅನುತ್ತೀರ್ಣತೆ ಮತ್ತು ಪಾಲಕರ ಅಲಕ್ಷ್ಯನವೇ ಪ್ರಮುಖ

ಕಾರಣಗಳಾಗಿವೆ ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಅದು ನಿಜವಾದ ಕಾರಣಗಳಲ್ಲ. ಇನ್ನೇನಾದರೂ ಕಾರಣಗಳು ಇರಬಹುದು.[೬೯]

ಅನಿತಾ ಬಿ.ಕೆ.(೨೦೦೧) ಅವರ "ವಿಲೇಜ್ ಕ್ಯಾಸ್ಟ ಆಂಡ್ ಎಜ್ಯುಕೇಷನ್" ಎಂಬ ಗ್ರಂಥವು ಕ್ಷೇತ್ರ ಆಧಾರಿತ ಮಾಹಿತಿಯ ವಿಶ್ಲೇಷಣೆಯನ್ನು ಹೊಂದಿದೆ. ಇವರು ತಮ್ಮ ಅಧ್ಯಯನದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಮಕ್ಕಳ ಶಿಕ್ಷಣದ ವ್ಯತ್ಯಾಸವನ್ನು ಗುರುತಿಸುವಂತಹ ಪ್ರಯತ್ನ ಮಾಡಿದ್ದಾರೆ. ಆ ಪ್ರಯತ್ನದಲ್ಲಿ ಶೈಕ್ಷಣಿಕ ಸಮಾಜಶಾಸ್ತ್ರೀಯ ದೃಷ್ಟಿಕೋನದ ವಿವರಣೆಯು ಎದ್ದು ಕಾಣುತ್ತದೆ. ನಿರ್ದಿಷ್ಟವಾಗಿ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಪ್ರಕ್ರಿಯೆಗಳು ಮತ್ತು ಶಾಲೆ ನೆಲೆಗೊಂಡಿರುವ ಸ್ಥಳೀಯವಾದಂತಹ ಸಾಮಾಜಿಕ ರಚನೆಯನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ. ಮುಂದುವರೆದಂತೆ ಲೇಖಕರು ಶಾಲೆಗಳ ಮೂಲಭೂತ ಸೌಲಭ್ಯಗಳು ಮಕ್ಕಳ ಆರೋಗ್ಯ ಸ್ಥಿತಿ, ಶಿಕ್ಷಕರ ಬೋಧನಾ ವಿಧಾನ ಇತ್ಯಾದಿ ಅಂಶಗಳು ಮಕ್ಕಳ ಕಲಿಕೆ ಮತ್ತು ಶಿಕ್ಷಕರ ಬೋಧನಾ ವಿಧಾನ ಇತ್ಯಾದಿ ಅಂಶಗಳು ಮಕ್ಕಳ ಕಲಿಕೆ ಮತ್ತು ಶೀಕ್ಷಕರ ಬೋಧನಾ ಸಾಮರ್ಥ್ಯಗಳನ್ನು ನಿರ್ಧರಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಕರ್ನಾಟಕ ರಾಜ್ಯದ ಸಾಕ್ಷರತೆಯನ್ನು ಕೇರಳ ರಾಜ್ಯದ ಸಾಕ್ಷರತೆಯೊಂದಿಗೆ ಹೋಲಿಕೆ ಮಾಡುತ್ತಾ, ಕೇರಳ ರಾಜ್ಯದಲ್ಲಿ ಯಾವ ಯಾವ ಯೋಜನೆಗಳನ್ನು ಅಳವಡಿಕೊಳ್ಳಲಾಗಿದೆ ಎಂಬುದನ್ನು ಲೇಖಕರು ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಲೇಖಕರು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣವು ಏಕೆ ಹಿಂದುಳಿದಿದೆ? ಮತ್ತು ಶಾಲೆಗಳಲ್ಲಿನ ಕಲಿಕಾ ಗುಣಮಟ್ಟವು ಹೇಗಿದೆ ಎಂಬುದನ್ನೂ ಕೂಡಾ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನಕಾರರು ಮೂಲಭೂತ ಸೌಲಭ್ಯಗಳು, ಆದಾಯ, ಜಾತಿ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಶೈಕ್ಷಣಿಕ ಹಿಂದುಳಿದಿರುವಿಕೆಗೆ ಪ್ರಮುಖ ಕಾರಣಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೭೦]

ರೇಖಾ ವಾಜೀರ್(೨೦೦೧) ಅವರು "ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜ್ಯುಕೇಷನ್, ಎನ್.ಜಿ.ಓ ಆಂಡ್ ಚೇಂಜ್ ಏಜನ್ಸಿ" ಎಂಬ ತಮ್ಮ ಪುಸ್ತಕದಲ್ಲಿ ಶಾಲಾ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳು ಪಠ್ಯ ರೂಪಿಸುವಲ್ಲಿ, ಶಾಲಾ ದಾಖಲಿಸುವಲ್ಲಿ, ಜನರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ.[೭೧]

ಆರ್ ಇಂದಿರಾ(೨೦೦೨) ಅವರು "ಮಹಿಳೆ ಮತ್ತು ಸಂಸ್ಕೃತಿ" ಎಂಬ ಗ್ರಂಥದಲ್ಲಿ ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ ಲಿಂಗಬೇಧವನ್ನು ನಿವಾರಿಸಿದರೂ ವಾಸ್ತವವಾಗಿ

ಅಂದುಕೊಂಡಷ್ಟು ಪ್ರಗತಿಯನ್ನು ಸಾಧಿಸಲಾಗಲಿಲ್ಲ ಎಂಬುದನ್ನು ಗುರುತಿಸಿದ್ದಾರೆ. ಮುಂದುವರೆದು ಆರ್ ಇಂದಿರಾ ಇವರು ಕಡ್ಡಾಯ ಮತ್ತು ಉಚಿತ ಶಿಕ್ಷಣ ಎನ್ನುವುದು ಘೋಷಣೆಯ ಮಟ್ಟದಲ್ಲಿಯೆ ಉಳಿದುಕೊಂಡಿರುವದು ಶೋಚನಿಯ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಈ ಶೋಚನಿಯ ಸ್ಥಿತಿಗೆ ಸಾಮಾಜಿಕ ಸಂರಚನೆಯೊಳಗಿನ ಆಚರಣೆಗಳೇ ಕಾರಣವಾಗಿದ್ದು ಇವುಗಳನ್ನು ಸ್ಥಳೀಯ ಮಟ್ಟದಲ್ಲಿ ಅರ್ಥ ಮಾಡಿಕೊಂಡು ಜಾಗೃತಿ ಮೂಡಿಸುವಲ್ಲಿ ಬಹುತೇಕ ಕಾರ್ಯಕ್ರಮಗಳು ವಿಫಲವಾಗಿವೆ. ಹೀಗೆ ವಿಫಲವಾಗುವ ಕಾರ್ಯಕ್ರಮಗಳನ್ನು ರೂಪಿಸುವ ಯೋಜನಾಕಾರರು ಹೊಂದಿರುವಂತಹ ಟಾಪ್-ಡೌನ್ ಅಪ್ರೋಚ್ ಮನೋಪ್ರವೃತ್ತಿಯು ಕಾರಣವಾಗುತ್ತದೆ ಎಂಬ ನಿರ್ದಿಷ್ಟ ಅಂಶಗಳನ್ನು ಲೇಖಕರು ಸ್ಪಷ್ಟಪಡಿಸುತ್ತಾರೆ. ಮತ್ತೇ ಮುಂದುವರೆದು ಸಾಕ್ಷರತೆ ಮತ್ತು ಶಾಲಾ ದಾಖಲಾತಿಗಳಲ್ಲಿ ಹೆಚ್ಚಳವಾಗಿರುವದು ನಿಜವಾದರೂ ದೇಶದ ವಿವಿಧ ಬಾಗಗಳಲ್ಲಿ ಸಮಾನವಾಗಿ ಹಂಚಿಕೆಯಾಗಿಲ್ಲ. ಅಷ್ಟೇ ಅಲ್ಲದೆ ಗ್ರಾಮ-ನಗರಗಳ ನಡುವೆ, ಜಾತಿ-ವರ್ಗ, ಲಿಂಗವಾರುಗಳ ಮದ್ಯದಲ್ಲಿ ಶೈಕ್ಷಣಿಕ ಅಭಿವೃದ್ಧಿ ಹೊಂದಿದ ಮತ್ತು ಹೊಂದದೆ ಇರುವವರ ಅಂತರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಎಂಬ ತೀವ್ರವಾದ ಆತಂಕ ಆರ್. ಇಂದಿರಾ ಅವರದ್ದಾಗಿದೆ. ಇದನ್ನು ಸ್ಥಳೀಯ ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದರೆ ಈ ವ್ಯತ್ಯಾಸವು ಮತ್ತಷ್ಟು ಎದ್ದು ಕಾಣುತ್ತದೆ ಎಂಬ ಲೇಖಕರ ಮಾತಿನಲ್ಲಿ ಅವರಿಗಿರುವ ಸಾಮಾಜಿಕ ಕಾಳಜಿಯು ಕಂಡು ಬರುತ್ತದೆ.[೨]

ಶಿವಶಂಕರ್ ಹೆಚ್.ವಿ. (೧೯೭೦) ಅವರು **ಭಾರತೀಯ ಶಿಕ್ಷಣ** ಎಂಬ ಪುಸ್ತಕದಲ್ಲಿ ಆಗಿನ ಮೈಸೂರು ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಅಧ್ಯಯನ ಮಾಡಿದರು. ಮೈಸೂರು ರಾಜ್ಯದ ಶಾಲೆಗಳ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಾಧನೆ ಈ ವಿದ್ಯಾರ್ಥಿಗಳ ಶಾಲೆಯ ವಾತಾವರಣ ಕುಟುಂಬದ ಪರಿಸರ ಪೋಷಕರ ನಡವಳಿಕೆ ಸಂಸ್ಕೃತಿ, ಸಮುದಾಯದ ಪ್ರಭಾವ ಬೀರಿದೆ ಎಂಬುದರ ಅಧ್ಯಯನ ಮಾಡಿ ಈ ಕೆಳಕಂಡ ಫಲಿತಗಳನ್ನು ಪಡೆದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರುಗಳಿಗೆ ಒದಗಿಸುತ್ತಿರುವ ಸಮವಸ್ತ್ರ ಪುಸ್ತಕಗಳು ಸರಿಯಾದ ಸಮಯಕ್ಕೆ ದೊರೆಯದಿರುವ ಕಾರಣದಿಂದ ಕುಟುಂಬದ ವರಮಾನ ಕಡಿಮೆ ಇರುವ ಕಾರಣದಿಂದ ಸಮವಸ್ತ್ರ ಮತ್ತು ಪುಸ್ತಕಗಳನ್ನು ಖರೀದಿಸಲು ಆಗದೆ ಕಷ್ಟವಾಗುತ್ತಿತ್ತು. ತಮ್ಮ ಮಕ್ಕಳು ಶಾಲೆಗೆ ಹೋಗುವ ಬದಲು ಪ್ರತಿದಿನ ಸಂಪಾದನೆ ಮಾಡಿದರೆ ಉತ್ತಮ ಎಂಬ ಭಾವನೆ ಜನರಲ್ಲಿತ್ತು. ಪ್ರಾಥಮಿಕ ಶಾಲಾ ಹಂತದಲ್ಲಿ ಖಾಸಗಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದಾರ್ಥಿನಿಯರು ದಾಖಲಾತಿಯಾಗಲು ಶಾಲೆಗಳಲ್ಲಿರುವ ಆಟದ ಶುಲ್ಕ ಗ್ರಂಥಾಲಯ ಶುಲ್ಕ

ವಂತಿಗೆ ಮತ್ತು ಪರಿಶಿಷ್ಟ ಜಾತಿಯವರು ವಾಸಿಸುತ್ತಿರುವ ಪ್ರದೇಶಗಳಿಂದ ದೂರದಲ್ಲಿ ಸ್ಥಾಪನೆಯಾಗಿರುವುದು ಕಾರಣವಾಗಿದೆ. ಮಾಧ್ಯಮಿಕ ಶಾಲೆಗಳಿಗೆ ತಮ್ಮ ಮಕ್ಕಳು ಶಾಲೆಗೆ ಹೋಗಲು ಒಲವಿರಲಿಲ್ಲ. ತಮ್ಮ ಹೆಣ್ಣುಮಕ್ಕಳು ಮನೆಯ ಕೆಲಸದಲ್ಲಿ ತೊಡಗಿಸಲು ಪೋಷಕರಿಗೆ ಹೆಚ್ಚು ಆಸಕ್ತಿಯಿತ್ತು.[೭೩]

ಷಾಹ ಜೆ.ಎಚ್. (೧೯೭೯) ಅವರು **ಓದುಗಾರಿಕೆ ಗ್ರಹಿಕೆ ಮತ್ತು ಕೆಲವು ಆಯ್ದ ವೈಯಕ್ತಿಕ ಹಾಗೂ ಮನೋವೈಜ್ಞಾನಿಕ ಚಲಕಗಳ ಅಧ್ಯಯನ** ಎಂಬ ತಮ್ಮ ಪಿಎಚ್.ಡಿ ಪ್ರಬಂಧದಲ್ಲಿ ಆಂಗ್ಲ ಮಾಧ್ಯಮಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರ ಆಂಗ್ಲ ಭಾಷೆಯ ಕೀಳರಿಮೆ ಬಗ್ಗೆ ಭಾವನಗರದ ೮ ಮತ್ತು ೯ನೇ ತರಗತಿಯ ೪೧೨ ವಿದ್ಯಾರ್ಥಿಗಳ ಪ್ರತಿಶತ ತೆಗೆದುಕೊಂಡು ನಡೆಸಿದ ಅಧ್ಯಯನದಲ್ಲಿ ಕಂಡುಬಂದಂತಹ ಪ್ರಮುಖ ಅಂಶವೆಂದರೆ ಓದುಗಾರಿಕೆ ಗ್ರಹಿಕೆಯಲ್ಲಿ ನಗರ ಮತ್ತು ಗ್ರಾಮೀಣಗಳ ನಡುವೆ ಸಾಮಾಜಿಕ ಆರ್ಥಿಕ ಮಟ್ಟದಲ್ಲಿನ ವ್ಯತ್ಯಾಸ ಕಂಡುಬಂದಿದೆ. ನಗರ ಪ್ರದೇಶದ ಪೋಷಕರಲ್ಲಿ ಆರ್ಥಿಕ ಸ್ವಾವಲಂಬನೆ ಇದು ಖಾಸಗಿ ಶಾಲೆಗಳಲ್ಲಿ ವ್ಯಾಸಂಗಕ್ಕೆ ಹೆಚ್ಚೆಚ್ಚು ಪ್ರೋತ್ಸಾಹವಿದ್ದು, ಮೂಲ ಸೌಲಭ್ಯ ಸುಸಜ್ಜಿತವಾದ ವಾಚನಾಲಯ, ಆಂಗ್ಲ ಭಾಷೆಯ ಬಗ್ಗೆ ಅರಿವಿರುತ್ತದೆ. ಗ್ರಾಮೀಣ ಭಾಗದಲ್ಲಿ ಶಾಲೆಗಳು ಮತ್ತು ಇತರೆ ಮೂಲಭೂತ ಸಮಸ್ಯೆಗಳು ಕಂಡುಬಂದು ಆಂಗ್ಲ ಬಾಷೆಯ ಬಗ್ಗೆ ತಿಳುವಳಿಕೆ ಮತ್ತು ಕೀಳರಿಮೆಗೆ ಕಾರಣ ಪೋಷಕರಿಗೆ ನಿರಾಸಕ್ತಿ ಇನ್ನಿತರೆ ಅಂಶಗಳು ಅಧ್ಯಯನದಿಂದ ತಿಳಿದುಬಂದಿದೆ.[೭೪]

ಗೋವಿಂದೇಗೌಡ ಎಚ್.ಜಿ. (೧೯೯೬) ಖ್ಯಾತ ಶಿಕ್ಷಣ ತಜ್ಞ(ಮಾಜಿ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ) ದಿನದಿಂದ ದಿನಕ್ಕೆ ಸಾಮಾನ್ಯರಲ್ಲಿ ಸರ್ಕಾರಿ ಶಾಲೆಗಳ ಮೇಲಿನ ಭರವಸೆ ಕುಸಿಯುತ್ತ ಬರುತ್ತಿದೆ. ಪರಿಣಮಕಾರಿಯಾದ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಪಡೆಯಲು ಸಾದ್ಯವೆ ಇಲ್ಲ ಎನ್ನುವ ನಿರಾಶಾವಾದ ಹಲವರಲ್ಲಿ ಮೂಡಿದೆ. ಹಾಗಾಗಿಯೇ ಆದಾಯದ ಒಂದು ಭಾಗ ಕಳೆದು ಕೊಂಡರೂ ಸರಿಯೇ ತಮ್ಮ ಮಕ್ಕಳು ಖಾಸಗಿ ಶಾಲೆಯ ಶಿಕ್ಷಣ ಪಡೆಯಬೇಕು ಎಂದು ಪೋಷಕರು ಹಾತೊರೆಯುತ್ತಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಖಾಸಗಿ ಶಾಲೆಗಳು ಹೆಚ್ಚಾಗುತ್ತಾ ಹೋಗುತ್ತಿವೆ ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ.

ಬಿಸಿಯೂಟ, ಪುಸ್ತಕ, ಸಮವಸ್ತ್ರ, ಚಪ್ಪಲಿ, ಬ್ಯಾಗುಗಳನ್ನು ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವಂತೆಯೇ ಹಲವು ಖಾಸಗಿ ಶಾಲೆಗಳು ತಾವು ತೆಗೆದುಕೊಳ್ಳುವ ಶುಲ್ಕದಲ್ಲಿ ಉತ್ತಮ ಪುಸ್ತಕಗಳು, ಸಮವಸ್ತ್ರ, ಬ್ಯಾಗುಗಳನ್ನು ನೀಡುತ್ತಿವೆ. ರಾಜ್ಯದಲ್ಲಿ ೪೫೬೭೭ ಪ್ರಾಥಮಿಕ ಶಾಲೆಗಳಿದ್ದು

೪೪೫೪೫ ಶಾಲೆಗಳನ್ನು ಸರ್ಕಾರಿ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ. ೬೮೩ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿದ್ದು ೨೦೦ಕ್ಕಿಂತ ಹೆಚ್ಚು ಶಾಲೆಗಳಿಗೆ ಕಟ್ಟಡವಿಲ್ಲ. ಕೇವಲ ಶೇ.೫೪ ರಷ್ಟು ಶಾಲೆಗಳಲ್ಲಿ ಆಟದ ಮೈದಾನಗಳಿದ್ದು ಶೇ.೭೪ರಷ್ಟು ಶಾಲೆಗಳಲ್ಲಿ ಮಾತ್ರ ಬಾಲಕಿಯರಿಗೆ ಶೌಚಾಲಯ ವ್ಯವಸ್ಥೆ ಕುಡಿಯುವ ನೀರು ಗ್ರಂಥಾಲಯ ಮತ್ತು ವಿದ್ಯುತ್ ಸಮಸ್ಯೆಗಳಿವೆ ಖಾಸಗಿ ಶಾಲೆಗಳು ಮೂಲಭೂತ ಸೌಲಭ್ಯಗಳ ಕಡೆಗೆ ವಿಶೇಷ ಗಮನ ನೀಡುತ್ತಿವೆ. ಸರ್ಕಾರಿ ಶಾಲೆಯ ಭೋಧನೆಯ ಗುಣಮಟ್ಟದ ಬಗೆಗೆ ಹಲವರು ಮೂಗು ಮುರಿಯುತ್ತಾರೆ ಸ್ಪರ್ಧಾತ್ಮಕ ಮತ್ತು ಕ್ರಿಯಾತ್ಮಕ ಕಲಿಕೆ ಸರ್ಕಾರಿ ಶಾಲೆಗಳಲ್ಲಿ ಸಾಧ್ಯವಾಗುತ್ತಿಲ್ಲ ಎಂಬ ದೂರಿದೆ. ಬೋಧನೆ ಬಗೆಗೆ ದೂರುಗಳು, ಖಾಸಗಿ ಶಾಲೆ ಮೇಲೆ ಆ ದೂರುಗಳಿಲ್ಲ.

ಪ್ರಾಯೋಗಿಕ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಲಭ್ಯವಾಗುತ್ತಿಲ್ಲ ಹಾಗೆಯೇ ಇಂಗ್ಲಿಷ್ ಮತ್ತು ಕಂಪ್ಯೂಟರ್ ಕಲಿಕೆಯಲ್ಲಿ ಸರ್ಕಾರಿ ಶಾಲೆಗಳು ಹಿಂದುಳಿದಿವೆ. ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಸಾಮರ್ಥ್ಯ ಖಾಸಗಿ ಶಾಲೆ ಮಕ್ಕಳ ಸಾಮರ್ಥ್ಯಕಿಂತ ಹೆಚ್ಚಿದ್ದರೂ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ವರ್ಧೆಗಳಲ್ಲಿ ಖಾಸಗಿ ಶಾಲೆ ಮಕ್ಕಳೆ ಗೆಲ್ಲುತ್ತಾರೆ. ನುರಿತ ಶಿಕ್ಷಕರ ಸಲಹೆ ಪ್ರೋತ್ಸಾಹ, ಸೌಲಭ್ಯ, ಸೂಕ್ತ ವೇದಿಕೆ ಕಲ್ಪಿಸಲು ಶಿಕ್ಷಣ ಇಲಾಖೆ ವಿಫಲವಾಗಿದ್ದೇ ಇದಕ್ಕೆ ಕಾರಣ ಎಂದು ಎನ್ನುತ್ತಾರೆ ತಜ್ಞರು.[೭೫]

ಕೃಷ್ಣಮೂರ್ತಿ (೧೯೯೮) ಅವರು **ಭಾರತೀಯ ನಾರಿ ಸಮಾನತೆ** ಎಂಬ ಪುಸ್ತಕದಲ್ಲಿ ಕಡಿಮೆ ಶಿಕ್ಷಣ ಪಡೆದವರಿಗಿಂತ ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ಹೆಚ್ಚು ವೇತನದ ಕೆಲಸ ಪಡೆಯುವರು. ಅಲ್ಲದೆ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವರು. ಆದರೆ ವಿವಾಹಿತ ಮಹಿಳೆಯರು ಗರ್ಭಧಾರಣೆ, ಮಗುವಿನ ಜನನ, ಮಕ್ಕಳ ಲಾಲನೆ, ಪಾಲನೆ ಕರ್ತವ್ಯಗಳು ಅವರನ್ನು ಗಣನೀಯ ಅವಧಿಗೆ ಅಥವಾ ಕೆಲವೊಮ್ಮೆ ಶಾಶ್ವತವಾಗಿ ಉದ್ಯೋಗದಿಂದ ಹೊರದೂಡುವುವು. ಅಲ್ಲದೆ ಈ ಸ್ವರೂಪಗಳು ಉದ್ಯಮಪತಿಯ ಕೂಲಿ ತೀರ್ಮಾನಗಳ ಮೇಲೆ ಪ್ರಭಾವ ಬೀರುವವು. ಹೀಗೆ ಪುರುಷರಿಗಿಂತ ಮಹಿಳೆಯರ ದುಡಿಮೆಗೆ ಕಡಿಮೆ ಮೌಲ್ಯ ಕಟ್ಟಕೊಡಲಾಗುತ್ತದೆ. ಆದರೆ ವಿವಾಹಿತ ಮಹಿಳೆಯರ ಕಾರ್ಮಿಕ ಪೇಟೆಯಿಂದ ಓಂದೆ ಸರಿಯಲು ಬೇರೊಂದು ಕಾರಣ ಕೂಡ ಇದೆ. ಶಿಕ್ಷಣದ ಹೆಚ್ಚಳವು ಮಾರುಕಟ್ಟೇತರ ಚಟುವಟಿಕೆಗಳಲ್ಲಿ ಮಹಿಳೆಯರ ಉತ್ಪತ್ತಿಯನ್ನು ವೃದ್ಧಿಸುವುದು. ಹೀಗಾಗಿ ಬಹಳ ಆಕರ್ಷಕವಾದ ಉದ್ಯೋಗಗಳು ಕುಟುಂಬದಿಂದ ಹೊರಗೆ ದೊರಕದಿದ್ದರೆ ಆಗ ಮಾದ್ಯಮಿಕ ಶಿಕ್ಷಣವುಳ್ಳ ವಿವಾಹಿತ ಮಹಿಳೆಯರಿಗೆ ಮನೆಯೊಳಗೆ ಉಳಿಯುವುದೇ ಹೆಚ್ಚು. ಆಕರ್ಷಕ ಆಯ್ಕೆಯಾಗಿ ತೋರುವುದು. ಪುರುಷರಿಗಿಂತ ಮಹಿಳಾ ಶಿಕ್ಷಣವು ಕುಟುಂಬದ ಕಲ್ಯಾಣದ ಮೇಲೆ ಅಪಾರ

ಪ್ರಭಾವ ಬೀರುವುದು. ಜನಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ, ವೈದ್ಯಕೀಯ ವಿಜ್ಞಾನ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳು ತಾಯಂದಿರ ಶಿಕ್ಷಣ ಮತ್ತು ಶಿಶುಗಳ ಮರಣ ಉಳಿತಾಯ ನಡುವಿನ ನಿಕಟ ಸಂಬಂಧವನ್ನು ಗುರುತಿಸಿದೆ. ಈ ಸಂಬಂಧವು ವಿಕಾಸಶೀಲ ದೇಶಗಳಲ್ಲಿ ಬಹಳ ಶಕ್ತಿಯುತವಾಗಿ ತೋರುತ್ತದೆ. ತಾಯಂದಿರ ಶಾಲಾ ಶಿಕ್ಷಣವು ಒಂದು ವರ್ಷ ಹೆಚ್ಚಿದರೆ ಅದು ಶಿಶು ಮರಣವನ್ನು ಶೇ. ೫ ರಿಂದ ೧೦ರಷ್ಟು ಕಡಿಮೆಗೊಳಿಸುವುದು. ಹೆಚ್ಚು ಶಿಕ್ಷಣ ಪಡೆದ ತಾಯಂದಿರು ಉತ್ತಮ ಶುಚಿತ್ವ, ಉತ್ತಮಗೊಂಡ ಪೌಷ್ಠಿಕಾಂಶಗಳು, ಕುಟುಂಬದ ಆಚರಣೆಗಳು, ಕುಟುಂಬದ ಆರೋಗ್ಯ ಕುರಿತು ಹೆಚ್ಚು ಪರಿಣಾಮಕಾರಿ ಪಾತ್ರವಹಿಸುವಿಕೆ ಸಾಧಿಸುವರು. ಶಿಕ್ಷಣವು ಆರೋಗ್ಯ ಪರಿಕರಗಳನ್ನು ಹೆಚ್ಚಾಗಿ ಬಳಸಲು ಉತ್ತೇಜಿಸುತ್ತ ತಾಯಿ ಮತ್ತು ಮಗುವಿನ ಆರೋಗ್ಯ ಉತ್ತಮವಾಗಿರುತ್ತದೆ. ನೈಜಿರಿಯಾದ ತಾಯಂದಿರಿಗೆ ಶಿಕ್ಷಣವು ಸ್ಥಳೀಯ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಚೆನ್ನಾಗಿ ಬಳಸುವುದನ್ನು ಕಲಿಸಿತು. ಕೊಳವೆ ನೀರು ಪೂರೈಕೆ ಮತ್ತು ನೀರು ಬಳಸುವ ವಿಧಾನವನ್ನು ಫಿಲಿಪೈನ್ಸನ ತಾಯಂದಿರಿಗೆ ಹೆಚ್ಚು ಶಿಕ್ಷಣದಿಂದ ಮಕ್ಕಳ ಆರೋಗ್ಯ ಸಂರಕ್ಷಣೆಯನ್ನು ಕಲಿಸಿದೆ. ಸಾಮಾನ್ಯವಾಗಿ ಶಿಕ್ಷಣ ಮನೆಯಲ್ಲಿ ಹೆಚ್ಚು ಪರಿಣಾಮಕಾರಿ ಪಾತ್ರ ನಿರ್ವಹಿಸುವಂತೆ ಅವಶ್ಯಕವಿರುವ ಜ್ಞಾನ ನೀಡುವುದು. ವಿವಿಧ ದೇಶಗಳಲ್ಲಿ ಮೂಡಿ ಬಂದಿರುವ ಶಿಕ್ಷಣದ ಅರಿವಿನ ಮಹತ್ವವನ್ನು ತಿಳಿಯುವ ಅಗತ್ಯವಿದೆ ಎಂದು ತಿಳಿದು ಬಂದಿದೆ.[೭೬]

ನಾರಾಯಣ ಡಿ.ಎಸ್., (೨೦೦೬) ಅವರು ಇಂಗ್ಲಿಷ್ ಕನ್ನಡ ಸಂಬಂಧ ಕುರಿತು ಚಿಂತನೆಗಳು ಎಂಬ ಎಂ.ಫಿಲ್ ಪ್ರಬಂಧದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಮಿಷನರಿಗಳು ಪ್ರಾದೇಶಿಕ ಭಾಷೆಯಲ್ಲಿ ಶಾಲೆಗಳನ್ನು ತೆರೆದರು. ಜೊತೆಗೆ ಮಿಷನ್ ಸ್ಕೂಲ್‌ಗಳು, ಕಾನ್ವೆಂಟ್ ಶಾಲೆಗಳನ್ನು ತೆರೆದರು. ಈ ರೀತಿಯಲ್ಲಿ ಪ್ರಾದೇಶಿಕ ಭಾಷೆ, ಮಾಧ್ಯಮ ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು ಎಂದು ಎರಡು ರೀತಿಯಲ್ಲಿ ಶಿಕ್ಷಣ ಬೆಳೆದುಬರಲು ಪ್ರಾರಂಭವಾಯಿತು. ಈ ಬಗೆಯ ಶಿಕ್ಷಣದಿಂದಾಗಿ ಜನರ ಮನೋಭಾವನೆಗಳಲ್ಲಿಯೂ ಸಹ ಬದಲಾವಣೆ ಕಂಡುಬರತೊಡಗಿದವು. ಆಧುನಿಕ ತಂತ್ರಜ್ಞಾನ ವಿಜ್ಞಾನ ಮತ್ತು ಇನ್ನಿತರ ಜ್ಞಾನಶಾಖೆಗಳ ಅಧ್ಯಯನಕ್ಕೆ ಇಂಗ್ಲಿಷ್ ಭಾಷೆ ತಿಳಿಯುವಿಕೆ ಅನಿವಾರ್ಯ. ಆದರೆ ಅಗತ್ಯವಿದ್ದಲ್ಲಿ ಮಾತ್ರ ಇಂಗ್ಲಿಷ್ ಬಳಕೆ ಮಾಡಬೇಕು. ಉಳಿದಂತೆ ಕನ್ನಡ ಮಾಧ್ಯಮ ಬಳಕೆ ಉತ್ತಮ ಎಂದು ತಿಳಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡೂ ಮುಖ್ಯ. ಆದರೆ ಪ್ರಾಥಮಿಕ ಹೆಣ್ಣು ಮಕ್ಕಳಿಗೆ ಅವರ ಭವಿಷ್ಯಕ್ಕಾಗಿ ಯಾವುದು ಉಪಯುಕ್ತ ಮಾಧ್ಯಮವೆಂದು ತಿಳಿದು ಆ ಭಾಷೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು ಎಂದು ತಿಳಿದು ಬಂದಿದೆ.[೭೭]

ಚಂದ್ರಶೇಖರ್ ಟಿ.ಆರ್. (೨೦೧೦) ಅವರು **ಕರ್ನಾಟಕದಲ್ಲಿ ಲಿಂಗಸಂಬಂಧಿ ಸ್ವರೂಪ** ಎಂಬ ತಮ್ಮ ಲೇಖನದಲ್ಲಿ ಅಮರ್ತ್ಯಸೇನ್, ಮೆಹಬೂಬ್‌ಉಲ್‌ಹಕ್ ಅವರು ಸಾಕ್ಷರತೆಯು ಅಭಿವೃದ್ಧಿಯ ಪ್ರಧಾನ ಸಾಧನ ಮತ್ತು ಪ್ರಾಥಮಿಕ ಗುರಿ ಎಂದು ಸಾಕ್ಷರತೆಯ ಮಹತ್ವವನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆಂದು ನಿರೂಪಿಸಿದ್ದಾರೆ. ಅಕ್ಷರಜ್ಞಾನ ಮತ್ತು ಶಿಕ್ಷಣ ಅವುಗಳಷ್ಟಕ್ಕೆ ಅವು ಮಹತ್ವ ಪಡೆದಿರುವ ಸಂಗತಿಗಳಾಗಿವೆ. ಸಾಕ್ಷರತೆಯು ಒದಗಿಸುವ ಅವಕಾಶಗಳನ್ನು ಪಡೆಯುವುದರ ಮೂಲಕ ಜನರು ತಮ್ಮ ಸಾಧಾರಣ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಬಹುದು. ತಮ್ಮ ಸ್ವತಂತ್ರದ ವ್ಯಾಪ್ತಿಯನ್ನು ವಿಸ್ತೃತಗೊಳಿಸಿಕೊಳ್ಳಬಹುದು. ಶಿಕ್ಷಣವು ಜನರ ಸ್ವಾಭಿಮಾನವನ್ನು, ಆತ್ಮಗೌರವವನ್ನು ಮತ್ತು ಸಾಮಾಜಿಕ ಸಹಭಾಗಿತ್ವವನ್ನು ಉತ್ತಮಪಡಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿಯಾಗಿ ಮಹಿಳೆಗೆ ಅಕ್ಷರ ಸಂಸ್ಕೃತಿಯಿಂದ ಘನತೆ ಮತ್ತು ಮನ್ನಣೆ ದೊರೆಯುತ್ತದೆ. ಇಂತಹ ಮಹತ್ವವಾದ ಶಿಕ್ಷಣ ದಕ್ಕಿಸಿಕೊಳ್ಳುವಲ್ಲಿ ನಗರದ ಮಹಿಳೆಯರು ಒಂದು ಸಾಧನೆಗೈದಿದ್ದಾರೆಂದು ಹೇಳಬಹುದು. ಆದರೆ ಬಹುಸಂಖ್ಯಾತರಾದ ಗ್ರಾಮೀಣ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕರ್ನಾಟಕದ ಗ್ರಾಮೀಣ ಮತ್ತು ನಗರ ಮಹಿಳೆಯರ ಶಿಕ್ಷಣದ ಪ್ರಮಾಣ ನೋಡಿದಾಗ ಇದು ಸ್ಪಷ್ಟವೆನಿಸುತ್ತದೆ.

೨೦೦೧ರಂತೆ ನಗರ ಮಹಿಳೆಯರ ಶಿಕ್ಷಣ ಪ್ರಮಾಣ ೭೪.೧೩ ಇದೆ. ಗ್ರಾಮೀಣ ಮಹಿಳೆಯರ ಶಿಕ್ಷಣ ೪೮ರಷ್ಟಿದೆ. ಗ್ರಾಮೀಣ ಮಹಿಳೆಯರಿಗೆ ಶಿಕ್ಷಣವು ಅಗತ್ಯವಾಗಿದೆ. ಮಹಿಳಾ ಜನಸಂಖ್ಯೆಯಲ್ಲಿ ಶೇ. ೭೦ರಷ್ಟು ಗ್ರಾಮೀಣ ಮಹಿಳೆಯರಿದ್ದಾರೆ. ಇತ್ತೀಚೆಗೆ ಭಾರತೀಯ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮಹಿಳೆಯರಿಗೆ ೩೩ರಷ್ಟು ಮೀಸಲಾತಿ ನೀಡಲಾಗಿದೆ. ಗ್ರಾಮೀಣ ಮಹಿಳೆಯರು ಇಂದು ಈ ಮೀಸಲಾತಿ ಮೀರಿ ಪಂಚಾಯತಿಗಳಿಗೆ ಆಯ್ಕೆಯಾಗುತ್ತಿದ್ದಾರೆ. ಮಕ್ಕಳ ಶಿಕ್ಷಣ, ಕೃಷಿ, ಪಶುಪಾಲನೆ, ಆರೋಗ್ಯ ಮುಂತಾದವುಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಮಹಿಳೆಯರಿಗೆ ಶಿಕ್ಷಣ ಮಹತ್ವವಾಗಿದೆ. ಇಂತಹ ಶಿಕ್ಷಣದಿಂದ ಸಮೃದ್ಧಿ ಜೀವನ ನಡೆಸಲು ಮಹಿಳೆಯರಿಗೆ ಅಕ್ಷರ ಸಂಸ್ಕೃತಿ ಬೇಕು. ತನ್ನ ವ್ಯಕ್ತಿತ್ವ ಕಟ್ಟಿಕೊಳ್ಳಲು ಅಕ್ಷರಜ್ಞಾನ ಬೇಕು. ತನ್ನ ಹಿತಾಸಕ್ತಿಗಳಾಗುವುವು ಎಂಬುದನ್ನು ಕಂಡುಕೊಳ್ಳಲು ಕುಟುಂಬದಲ್ಲಿ ನಿರ್ಣಯ ತೆಗೆದುಕೊಳ್ಳಲು ಮಹಿಳೆಯರಿಗೆ ಶಿಕ್ಷಣ ಅಗತ್ಯವಾಗಿದೆ ಎಂದು ತಿಳಿದುಬಂದಿದೆ.

ಪ್ರಾಥಮಿಕ ಶಿಕ್ಷಣ, ಆರೋಗ್ಯ, ಆಹಾರ, ಭದ್ರತೆ, ದೈಹಿಕ ಘನತೆ, ಸ್ವಾಯತ್ತತೆಗಳಿಂದ ಮಹಿಳೆಯರು ವ್ಯವಸ್ಥಿತವಾಗಿ ವಂಚಿತರಾಗುತ್ತಿದ್ದಾರೆ. ಅಮರ್ತ್ಯ ಸೇನ್ ಪ್ರಕಾರ ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ ಇದ್ದಿದ್ದರೆ, ಅಭಿವೃದ್ಧಿಯ ಪ್ರಾಥಮಿಕ

ಸಂಗತಿಗಳಾದ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಪೌಷ್ಟಿಕತೆ, ಉದ್ಯೋಗ, ಕೂಲಿ ಮುಂತಾದ ಸಂಗತಿಗಳಲ್ಲಿ ಮಹಿಳೆಯರು ತಾರತಮ್ಯ ಎದುರಿಸಬೇಕಾಗಿರಲಿಲ್ಲ. ಯು.ಎನ್.ಡಿ.ಪಿ.ಯ ೧೯೯೦ರಿಂದ ಪ್ರಕಟಿಸುತ್ತಿರುವ ಮಾನವ ಅಭಿವೃದ್ಧಿ ವರದಿಯಲ್ಲಿ ಕಂಡುಬರುವಂತಹ ಪ್ರಪಂಚದ ಯಾವುದೇ ದೇಶದಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣವು ಪುರುಷರ ಸಾಕ್ಷರತೆ ಪ್ರಮಾಣಕ್ಕೆ ಸಮನಾಗಿಲ್ಲ. ಮಹಿಳೆಯರು ಮನೆಯೊಳಗೆ ಮತ್ತು ಮನೆಯ ಹೊರಗೂ ದುಡಿಮೆ ಮಾಡಬೇಕಾಗಿರುವುದರಿಂದ ಉದ್ಯೋಗದಲ್ಲಿ ವೃತ್ತಿ ನೈಪುಣ್ಯತೆಯನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಮಹಿಳೆಯರು ತಮ್ಮ ಗೃಹಣಿಯ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಸಂಬಂಧಿಗಳಿಗೆ ಬಿಟ್ಟುಕೊಡುತ್ತಾರೆ.

'ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು' ಎಂಬುದು ಒಂದು ಅಖಂಡವಾದ ಮತ್ತು ವಿಭಿನ್ನವಾದ ಗುಂಪಲ್ಲಿ ಅದನ್ನು ಭಿನ್ನವಾಗಿ ಪರಿಗಣಿಸಲು ಬರುವುದಿಲ್ಲ. ಒಂದು ವೇಳೆ ಅವರು ಒಂದು ವರ್ಗವಾಗಿದ್ದರೆ, ದಲಿತ ಮತ್ತು ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸವಿರಲು ಯಾವುದೇ ಕಾರಣಗಳಿಲ್ಲ. ಒಟ್ಟು ಜನಸಂಖ್ಯೆಯನ್ನು ತೆಗೆದುಕೊಂಡರೆ ಲಿಂಗಸಂಬಂಧಿ ಸಾಕ್ಷರತಾ ಅಂತರ ಶೇ. ೧೯.೨ ಅಂಶ ಗಳಷ್ಟಾಗುತ್ತದೆ. ಆದರೆ ಅದು ದಲಿತರಿಗೆ ಸಂಬಂಧಿಸಿದಂತೆ ಶೇ. ೨೨.೩೫ ಅಂಶಗಳಷ್ಟಿದ್ದರೆ, ದಲಿತೇತರರಿಗೆ ಸಂಬಂಧಿಸಿದಂತೆ ಅದು ಶೇ. ೧೬.೭೯ ಅಂಶಗಳಷ್ಟಿದೆ. ಅಂದರೆ ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಂತರ ದಲಿತೇತರರಲ್ಲಿರುವುದಕ್ಕಿಂತ ಅಧಿಕವಾಗಿದೆ. ಇದರ ಇನ್ನೊಂದು ಆಯಾಮವೆಂದರೆ ದಲಿತ ಮಹಿಳೆಯರು ಮತ್ತು ದಲಿತೇತರ ಮಹಿಳೆಯರ ನಡುವಿನ ಸಾಕ್ಷರತಾ ಅಂತರವಾಗಿದೆ ಎಂದಿದ್ದಾರೆ.[೨೮]

ಪ್ರಶಾಂತ್ ಎಚ್.ಡಿ. (೨೦೧೦) ಅವರ **ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು** ಎಂಬ ಪುಸ್ತಕದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸುವವರು ಕೂಡ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ನಕಾರಾತ್ಮಕ ಧೋರಣೆಯನ್ನು ತಾಳಿದ್ದಾರೆ. ಅತ್ಯಧಿಕ ಸಂಖ್ಯೆಯ ಪೋಷಕರು ತಮ್ಮ ಗಂಡುಮಕ್ಕಳು ಓದುವ ತನಕ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ. ಆದರೆ ಬಹುತೇಕ ಪೋಷಕರು ಹೆಣ್ಣಮಕ್ಕಳ ಶಿಕ್ಷಣ ಕುರಿತು ಇಂತಹ ಮನೋಭಾವನೆಯನ್ನು ಹೊಂದಿರುವುದಿಲ್ಲ. ಸ್ವಲ್ಪ ಪ್ರಮಾಣದ ಹೆಣ್ಣುಮಕ್ಕಳು ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣ ಪಡೆಯುವುದನ್ನು ವಾಸ್ತವಿಕವಾಗಿ ಒಪ್ಪಿಕೊಳ್ಳುವ ಸ್ಥಿತಿಯಲಿಲ್ಲ. ಇವಕ್ಕೆ ಪ್ರಮುಖ ಕಾರಣ ತಮ್ಮ ಹಳ್ಳಿಗಳಿಂದ ಸ್ವಲ್ಪ ದೂರದಲ್ಲಿ ಶಾಲೆಗಳಿರುವುದು ಮತ್ತೊಂದು ಗ್ರಾಮದ ಶಾಲೆಗೆ ಹೆಣ್ಣುಮಕ್ಕಳು ಹೋಗುವುದು ಕೆಲವೇ ಪೋಷಕರಿಗೆ ಇಷ್ಟವಿಲ್ಲದಿರುವುದು.

ಇದು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳು ದೊರೆಯದೆ ಇರುವ ಸಮಸ್ಯೆಯನ್ನು ಎತ್ತಿತೋರಿಸುತ್ತದೆ. ಪೋಷಕರು ಉನ್ನತ ಶಿಕ್ಷಣ ಪಡೆದ ಹೆಣ್ಣುಮಕ್ಕಳಿಗೆ ಮದುವೆ ಮಾಡುವುದು ಕಷ್ಟವಾಗುತ್ತದೆ.[೬]

ಶಾರದ ಜೈನ್, ಅಲೋಕ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಪಾ (೧೯೯೯), ಅವರ **ಚಿಲ್ಡ್ರನ್ ವರ್ಕ್ಸ್ ಆ್ಯಂಡ್ ಎಜುಕೇಶನ್, ರಿ ಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್** ಎಂಬ ಕೃತಿಯಲ್ಲಿ ಬಾಲ ಕಾರ್ಮಿಕ ಪದ್ಧತಿಯಿಂದ ಮಕ್ಕಳ ಮೇಲಾಗುವ ಪರಿಣಾಮಗಳು, ಅದಕ್ಕಿರುವ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳ ಕುರಿತು ವಿವೇಚಿಸಿದ್ದಾರೆ. ಶಾಲೆಯಿಂದ ಮಕ್ಕಳಿಗಾಗಿ ಪೋಷಕರು ಹಾಗೂ ಸರ್ಕಾರಗಳು ಯಾವ ನಿಟ್ಟಿನಲ್ಲಿ ಕಾರ್ಯ ತತ್ಪರಗೊಳ್ಳಬೇಕೆಂಬುದನ್ನು ತುಂಬಾ ಮಾರ್ಮಿಕವಾಗಿ ವಿವರಿಸಲಾಗಿದೆ.

ಎನ್.ಸಿ.ಇ.ಆರ್.ಟಿ. ವರದಿಗಳ ಮಾಹಿತಿಯನ್ನಾಧರಿಸಿ ಕುಲಕರ್ಣಿಯವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಜಾತಿಯ ವಿವಿಧ ವಯೋಗುಂಪಿನ ಮಕ್ಕಳು ಶಾಲಾ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುವ ಪ್ರಮಾಣವನ್ನು ವಿವರಿಸಿದ್ದಾರೆ. ಕುಲಕರ್ಣಿಯವರ ವಿವರಣೆಯಂತೆ ಕಡಿಮೆ ಸಾಕ್ಷರತೆಯ ರಾಜ್ಯಗಳಾದ ಬಿಹಾರ, ರಾಜಸ್ಥಾನ ಮತ್ತು ಉತ್ತರಪ್ರದೇಶಗಳಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಿಕೆಯ ಪ್ರಮಾಣ ವಿವಿಧ ಸಾಮಾಜಿಕ ಜಾತಿವರ್ಗಗಳಲ್ಲಿ ಅತ್ಯಂತ ಹೆಚ್ಚಾಗಿ ಕಂಡುಬರುತ್ತದೆ. ಈ ಸಂಗತಿಯು ಕಡಿಮೆ ಸಾಕ್ಷರತೆಯ ರಾಜ್ಯಗಳಲ್ಲಿ ಇತರೆ ಜಾತಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನಡುವಿನ ಶೈಕ್ಷಣಿಕ ಅಂತರ ಹೆಚ್ಚುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಈ ಅಂತರ ಕಡಿಮೆ ಸಾಕ್ಷರತೆಯನ್ನು ಹೊಂದಿದ ರಾಜ್ಯಗಳ ಮಹಿಳೆಯರಲ್ಲಿ ಬಹಳ ಅಧಿಕವಾಗಿದೆ. ಈ ಅಂತರವು ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತದ ಶಿಕ್ಷಣ ಪೂರ್ಣಗೊಳಿಸುವುದರಲ್ಲಿ ಅತಿಯಾಗಿದೆ. ಇದನ್ನು ಇತರೆ ಜಾತಿ ವರ್ಗಗಳಿಗೆ ಹೋಲಿಸಿದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಲಿಯುವ ಸಾಮಾಜಿಕ ಅವಕಾಶ ಕಡಿಮೆ ಇರುವುದೇ ಕಾರಣವೆಂಬುದು ಕುಲಕರ್ಣಿಯವರ ವಾದ. ಆದರೆ ಹಿಮಾಚಲ ಪ್ರದೇಶ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಜಾತಿಗಳ ನಡುವಿನ ಸಾಕ್ಷರತೆ ಹಾಗೂ ಶಾಲಾ ಭಾಗವಹಿಸುವಿಕೆಗಳ ಅಂತರ ಗಣನೀಯವಾಗಿ ಇಳಿಕೆಯಾಗಿದೆ ಎಂದು ತಿಳಿಸಲಾಗಿದೆ.

ಕರ್ನಾಟಕದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಮೀಕ್ಷೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುವುದಕ್ಕೆ ಅವರು ಅನುಭವಿಸುತ್ತಿರುವ ಸಾಮಾಜಿಕ ಅಸಮಾನತೆಯೇ ಗಂಭೀರವಾದುದು ಎಂಬುದನ್ನು ತಿಳಿಸುತ್ತದೆ.

ಶಾಲೆ ಬಿಟ್ಟ ಮಕ್ಕಳಲ್ಲಿ ಶೇಕಡ ೩೬ರಷ್ಟು ಮಕ್ಕಳು ಶಿಕ್ಷಣಕ್ಕೆ ತಗುಲಬಹುದಾದ ಖಾಸಗಿ ವೆಚ್ಚವನ್ನು ಪೋಷಕರು ಭರಿಸಲಾಗದಿದ್ದ ಕಾರಣದಿಂದ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುತ್ತಾರೆ. ಅದರಂತೆಯೇ ಶೇಕಡ ೩೨ರಷ್ಟು ಮಕ್ಕಳು ಅವರ ಮನೆಯಲ್ಲಿನ ಕೆಲಸಗಳಲ್ಲಿ ತಮ್ಮ ಪೋಷಕರಿಗೆ ನೆರವಾಗುವ ಕಾರಣದಿಂದಾಗಿ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹೆಣ್ಣುಮಕ್ಕಳ ವಿಷಯವಾಗಿ ಸ್ಪಷ್ಟವಾಗಿಲ್ಲ. ಆದರೆ ಈ ಹೆಣ್ಣುಮಕ್ಕಳು ತಮ್ಮ ಮನೆಯಲ್ಲಿನ ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಕಾರಣಕ್ಕಾಗಿ ಮಧ್ಯದಲ್ಲಿಯೇ ಶಾಲೆ ಬಿಡುವುದು ದೃಢಪಟ್ಟಿದೆ. ಅಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಬಡಕುಟುಂಬಗಳು ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿರುವುದರಿಂದ ಮಕ್ಕಳನ್ನು ಶಾಲೆಯ ಬದಲಿಯಾಗಿ ದುಡಿಮೆಗೆ ಕಳಿಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಈ ಕಾರಣದಿಂದಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಾರೆ. ನಮ್ಮ ಅಧ್ಯಯನಕ್ಷೇತ್ರದಲ್ಲಿಯೂ ಕೂಡ ಈ ಮೇಲೆ ಹೇಳಿದ ಎಲ್ಲಾ ರೀತಿಯಾದ ಲಕ್ಷಣಗಳು ಕಂಡುಬರುತ್ತವೆ. ಅಧ್ಯಯನ ಕ್ಷೇತ್ರದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಖಾಸಗಿ ವೆಚ್ಚ, ಮನೆ ಕೆಲಸ, ಚಿಕ್ಕಮಕ್ಕಳ ಪಾಲನೆ, ಬಡತನ ಇತ್ಯಾದಿ ಅಂಶಗಳು ಕಾರಣವಾಗಿವೆ ಎಂಬುದನ್ನು ವಿಶ್ಲೇಷಿಸಿದ್ದಾರೆ.[೮೦]

ರುಕ್ಮಿಣಿ ಬ್ಯಾನರ್ಜಿ(೨೦೦೦), ಅವರ **ಪಾವರ್ಟಿ ಆ್ಯಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರಮ್ ಮುಂಬೈ ಆ್ಯಂಡ್ ದೆಹಲಿ** ಎನ್ನುವ ಕೃತಿಯಲ್ಲಿ ಮುಂಬೈ ಮತ್ತು ದೆಹಲಿಯಂತಹ ಮಹಾನಗರಗಳಲ್ಲಿರುವ ಸರ್ಕಾರಿ ಶಾಲೆಗಳು, ಅವುಗಳ ಪರಿಸರ, ಶಾಲೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳ ಆರ್ಥಿಕ ಹಿನ್ನೆಲೆ ಮುಂತಾದವುಗಳ ಕುರಿತು ತುಲನಾತ್ಮಕವಾಗಿ ವಿವರಿಸಿದ್ದಾರೆ. ಈ ಕೃತಿಯಲ್ಲಿ ಮುಖ್ಯವಾಗಿ ಸರ್ಕಾರಿ ಶಾಲೆಗೆ ಹೋಗುವ ಮಕ್ಕಳು ಹಾಗೂ ಖಾಸಗಿ ಶಾಲೆಗಳಿಗೆ ಹೋಗುವ ಮಕ್ಕಳ ಮಧ್ಯದಲ್ಲಿರುವ ಅಂತರಗಳ ಕುರಿತು ವಿವರಿಸಿದ್ದಾರೆ.[೮೧]

ಕರೂರ ಎನ್.ಜಿ.(೨೦೦೨), ಅವರು **ಶಿಕ್ಷಣ ಮಾರ್ಗ** ಎನ್ನುವ ಕೃತಿಯಲ್ಲಿ ಶಿಕ್ಷಣದ ಭಾಷಿಕ ಸಮಸ್ಯೆಗಳತ್ತ ಬೆಳಕು ಚೆಲ್ಲಿದ್ದಾರೆ. ಗುಣಮಟ್ಟದ ಶಿಕ್ಷಣ ದೊರೆಯಬೇಕಾದರೆ ಅನುಸರಿಸಬೇಕಾದ ಕ್ರಮಗಳಾವುವು, ಅದಕ್ಕಿರುವ ಅಡಚಣೆಗಳೇನು ಎಂಬುದನ್ನು ವಿಸ್ತೃತವಾಗಿ ವಿವರಿಸಿದ್ದಾರೆ. ಮುಖ್ಯವಾಗಿ ಮಕ್ಕಳು ತಮ್ಮದಲ್ಲದ ಪರಕೀಯ ಭಾಷೆಯನ್ನು ಕಲಿಯುವಾಗ ಅನುಭವಿಸುವ ಅಡಚಣೆಗಳಾವುವು ಎಂಬುದನ್ನು ವಿವರಿಸುತ್ತ ಪರಿಹಾರಗಳನ್ನೂ ಸೂಚಿಸಿದ್ದಾರೆ.[೮೨]

ಮುಜಾಮಿಲ್ ಜಾನ್ ಅವರು **ಇನ್‌ಫ್ಯಾಕ್ಟ್ ಆಫ್ ಎಜುಕೇಷನ್** ಎಂಬ ಕೃತಿಯಲ್ಲಿ ಶಿಕ್ಷಣವು ಸಮಾಜ, ಇತಿಹಾಸ, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಂತ್ರಜ್ಞಾನ

ಮುಂತಾದ ಎಲ್ಲಾ ಅಂಶಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತದೆ. ಶಿಕ್ಷಣ ವ್ಯಕ್ತಿಗೆ ಜ್ಞಾನ ಹಾಗೂ ತಿಳಿವಳಿಕೆಯನ್ನು ನೀಡುತ್ತದೆ. ಮುಖ್ಯವಾಗಿ ವ್ಯಕ್ತಿ ತನ್ನನ್ನು ತಾನು ತಿಳಿಯಲು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು, ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅತ್ಯಗತ್ಯ. ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಾಮರಸ್ಯ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಲು ಶಿಕ್ಷಣ ಅಗತ್ಯ ಹಾಗೂ ಅನಿವಾರ್ಯ ಎಂದು ತಿಳಿಯಲಾಗಿದೆ.[೮೩]

ಪದ್ಮಾರಾಮಚಂದ್ರನ್ ಮತ್ತು ವಸಂತಕುಮಾರ್(೨೦೦೫), ಅವರು **ಎಜುಕೇಷನ್ ಇನ್ ಇಂಡಿಯಾ** ಎಂಬ ಕೃತಿಯು ಇಂಗ್ಲೀಷಿನಲ್ಲಿದ್ದು ಅದು ಭಾರತದ ಪ್ರಾಚೀನ ಶಿಕ್ಷಣಪದ್ಧತಿಯಿಂದ ತೊಡಗಿ ಆಧುನಿಕ ಶಿಕ್ಷಣದಪದ್ಧತಿ ಜಾರಿಗೆ ಬಂದ ಬಗೆಯ ಕುರಿತು ತಿಳಿಸುವುದರೊಂದಿಗೆ ಆಧುನಿಕ ಶಿಕ್ಷಣದಲ್ಲಿ ಉಂಟಾಗುತ್ತಿರುವ ಪಲ್ಲಟಗಳ ಕುರಿತು ವಿವರಿಸುತ್ತದೆ.[೮೪]

ರಾಜ ಎಂ.(೧೯೯೦), ಅವರು **ಎಜುಕೇಶನ್ ಡೆವಲಪ್‌ಮೆಂಟ್ ಆ್ಯಂಡ್ ಸೊಸೈಟಿ** ಕೃತಿಯಲ್ಲಿ ಸಮಾಜದ ವಿವಿಧ ಹಂತದ ಜಾತಿ, ಸಮುದಾಯಗಳು ಹೇಗಿವೆ, ಅವುಗಳ ಅಭಿವೃದ್ಧಿಗೆ ಶಿಕ್ಷಣ ಹೇಗೆ ಪೂರಕವಾಗಿದೆ, ಹಾಗೆಯೇ ಶಿಕ್ಷಣದ ಬೆಳವಣಿಗೆಗೆ ಜಾತಿಯಾಧಾರಿತ ಸಂಸ್ಥೆಗಳು ಪೂರಕವಾಗಿ ಹೇಗೆ ಕಾರ್ಯವೆಸಗುತ್ತಿಯೆಂಬುದನ್ನು ತುಂಬಾ ವಿಸ್ತಾರವಾಗಿ ವಿವೇಚಿಸಿದ್ದಾರೆ.[೮೫]

ಮುಜುಂಮದಾರ್, ಮನಾಬಿ(೧೯೯೭), ಅವರು **ರೂರಲ್ ಲಿಟ್ರಸಿ ಸೀನ್ ಇನ್ ತಮಿಳುನಾಡು ಆ್ಯಂಡ್ ರಾಜಸ್ಥಾನ್** ಎನ್ನುವ ಕೃತಿಯು ತಮಿಳುನಾಡು ಮತ್ತು ರಾಜಸ್ಥಾನಗಳ ಗ್ರಾಮೀಣ ಶಿಕ್ಷಣದ ಸ್ಥಿತಿಗತಿಯನ್ನು ತೌಲನಿಕವಾಗಿ ನೋಡಲಾಗಿದ್ದು ತಮಿಳುನಾಡಿಗಿಂತ ರಾಜಸ್ಥಾನದ ಗ್ರಾಮೀಣ ಜನರು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣಗಳೇನಿರಬಹುದು ಎಂಬುದನ್ನು ವಿವರಿಸಲಾಗಿದೆ.[೮೬]

ವೈದ್ಯನಾಥನ್ ಎ., ಪಿ.ಆರ್.ಜಿ. ನಾಯರ್(೨೦೦೦), ಅವರು **ಎಲಿಮೆಂಟರಿ ಎಜುಕೇಶನ್ ಇನ್ ರೂರಲ್ ಇಂಡಿಯಾ: ಎ ಗ್ರಾಸ್ ರೂಟ್ ವ್ಯೂ**–ಕೃತಿಯಲ್ಲಿ ಗ್ರಾಮಭಾರತದ ಶೈಕ್ಷಣಿಕ ಸ್ಥಿತಿಗತಿಗಳು ಹೇಗಿವೆ. ಅದರ ಮೂಲ ಬೇರುಗಳು ಎತ್ತ ಸಾಗಿವೆ. ಶಿಕ್ಷಣವು ಗ್ರಾಮಭಾರತಕ್ಕೆ ಎಷ್ಟು ಪ್ರಮುಖ ಎಂಬುದನ್ನು ಕೃತಿಯು ತಿಳಿಸುತ್ತದೆ.[೮೭]

ಅರುಣ್ ಸಿ. **ಮೆಹತಾ**(೨೦೦೬) ಅವರ **ಎಲೆಮೆಂಟರಿ ಎಜುಕೇಶನ್ ಇನ್ ಇಂಡಿಯಾ.** ಕೃತಿಯಲ್ಲಿ ಭಾರತದ ಪ್ರಾಥಮಿಕ ಶಿಕ್ಷಣವು ಯಾವ ದಿಕ್ಕಿನಲ್ಲಿ ನಡೆಯುತ್ತಿದೆ. ಪ್ರಾಥಮಿಕ

ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಗಳು ಹಾಕಿಕೊಂಡಿರುವ ಯೋಜನೆಗಳ ಸ್ವರೂಪ, ಅವುಗಳ ಪ್ರಸ್ತುತತೆ, ಪ್ರಾಥಮಿಕ ಶಿಕ್ಷಣದ ಕುರಿತು ನಡೆಯುತ್ತಿರುವ ಪ್ರಯೋಗಗಳ ಕುರಿತಾದ ವಿವರಗಳು ದೊರೆಯುತ್ತವೆ.[೮೮]

ಮಹಾಬಲೇಶ್ವರರಾವ್(೨೦೧೨) ಅವರ **ಪ್ರೌಢ ಶಿಕ್ಷಣ ಸಮಸ್ಯೆಗಳು–ಸವಾಲುಗಳು** ಕೃತಿಯು ಪ್ರಾಥಮಿಕ ಹಂತವನ್ನು ದಾಟಿ ಪ್ರೌಢಶಿಕ್ಷಣಕ್ಕೆ ಕಾಲಿರಿಸುವ ಮಕ್ಕಳ ಸಮಸ್ಯೆಗಳೇನು, ವಿಶೇಷವಾಗಿ ಹೆಣ್ಣುಮಕ್ಕಳು ಪ್ರೌಢಹಂತದ ಶಿಕ್ಷಣದಿಂದ ವಂಚನೆಗೊಳಗಾಗಲು ಇರುವ ಕಾರಣಗಳೇನು, ಪರಿಹಾರೋಪಾಯಗಳೇನು ಎಂಬುದನ್ನು ತಿಳಿಸುತ್ತದೆ.[೮೯]

ಮಹಬಲೇಶ್ವರರಾವ್(೨೦೧೨) ಅವರ **ಪ್ರೌಢ ಶಿಕ್ಷಣ ಮತ್ತು ಶಿಕ್ಷಕನ ಕರ್ತವ್ಯಗಳು** ಕೃತಿಯಲ್ಲಿ ಪ್ರೌಢಶಿಕ್ಷಣದಲ್ಲಿ ಮಕ್ಕಳು ಕಲಿಕಾಹಂತದಲ್ಲಿ ಅನುಭವಿಸುವ ತೊಂದರೆಗಳು, ವಿಶೇಷವಾಗಿ ಭಾಷಾ ಶುದ್ಧತೆ, ಗಣಿತ ಮತ್ತು ವಿಜ್ಞಾನಗಳ ಕಲಿಕೆಯಲ್ಲಿ ಗ್ರಾಮೀಣ ಮಕ್ಕಳ ಅಸಾಮರ್ಥ್ಯತೆ, ಈ ಹಂತದ ಮಕ್ಕಳಿಗೆ ಶಿಕ್ಷಕನು ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ತಿಳಿಸಲಾಗಿದೆ.[೯೦]

ಶಾಕುಂತಲಾ ಸಿ. ಶೆಟ್ರ ಮತ್ತು ಗಣಪತಿ ನಾಯಕ್ (೨೦೧೪) ಅವರ **ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ** ಲೇಖನದಲ್ಲಿ ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಯಾವುದೇ ರಾಷ್ಟ್ರವು ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಸಾಮರ್ಥ್ಯ ಮತ್ತು ಕೌಶಲ್ಯವನ್ನು ಬಳಸಿಕೊಳ್ಳುವಲ್ಲಿ ವಿಫಲವಾದಲ್ಲಿ ಅಭಿವೃದ್ಧಿ ಹೊಂದುವುದಿಲ್ಲ. ಭಾರತದಲ್ಲಿ ಒಟ್ಟು ಜನಸಂಖ್ಯೆಯ ೪೮೩ರಷ್ಟಿರುವ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿದ್ಯಾವಂತರನ್ನಾಗಿಸಲು ಸರ್ಕಾರಗಳು ಬದ್ದವಾಗಿವೆ. ಏಷ್ಯಾದಲ್ಲಿಯೆ ಭಾರತದ ಮಹಿಳಾ ಸಾಕ್ಷರತೆಯು ಅತ್ಯಂತ ಕಡಿಮೆ ಇದೆ. ಹೆಣ್ಣುಮಕ್ಕಳ ಶಿಕ್ಷಣದ ಕಾರ್ಯತಂತ್ರ (೨೦೦೨) ತಿಳಿಸುವುದೇನೆಂದರೆ "ಹೆಣ್ಣುಮಕ್ಕಳ ಶಿಕ್ಷಣದ ಮೇಲಿನ ಧನ ವಿನಿಯೋಗವು ವ್ಯಕ್ತಿ ಕುಟುಂಬಗಳನ್ನು ಒಳಗೊಂಡು ಇಡೀ ಸಮಾಜಕ್ಕೆ ಅತ್ಯಧಿಕ ಆರ್ಥಿಕ ಪ್ರತಿಫಲವನ್ನು ಮತ್ತು ಸಾಮಾಜಿಕ ಉಪಯುಕ್ತತೆಯನ್ನು ಬಂಡವಾಳವು ತಂದಿಟ್ಟಿದೆ.[೯೧]

ರೇಖಾ ಕೌಲ್(೧೯೯೩) ಅವರು **ಕಾಸ್ಟ್, ಕ್ಲಾಸ್ ಆ್ಯಂಡ್ ಎಜುಕೇಶನ್** ಕೃತಿಯಲ್ಲಿ ಶಿಕ್ಷಣ ಮತ್ತು ಜಾತಿ, ವರ್ಗಗಳ ಮಧ್ಯದ ಸಂಬಂಧ ಅಂತರಗಳು ಹೇಗೆ ಏರ್ಪಟ್ಟಿವೆ. ಶಿಕ್ಷಣ ಪಡೆಯುವುದರಿಂದ ತಳಜಾತಿ, ವರ್ಗಗಳು ಹೇಗೆ ಹೊಸ ದಿಕ್ಕಿನತ್ತ ಸಾಗಬಲ್ಲವು ಎಂಬುದನ್ನು ವಿವರಿಸಿದ್ದಾರೆ.[೯೨]

ಭಾರತದ ಮಾನವ ಅಭಿವೃದ್ಧಿ ವರದಿ (೨೦೧೧) ಹೆಣ್ಣುಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರವು ಆರಂಭಿಸಿರುವ ಅನೇಕ ಯೋಜನೆಗಳು ಫಲ ನೀಡಿರುವುದರಿಂದ ಶಿಕ್ಷಣ ಪಡೆಯುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಏರಿದೆ. ಗ್ರಾಮಾಂತರ ಪ್ರದೇಶದಲ್ಲಿ ಹೆಣ್ಣುಮಕ್ಕಳನ್ನು ದುಡಿಸಿಕೊಳ್ಳುತ್ತಿರುವುದು ಜಾಸ್ತಿ. ಆದರೆ ಇತ್ತೀಚಿನ ಸಮೀಕ್ಷೆಯ ಪ್ರಕಾರ ಈ ವರ್ಗದ ಬಾಲ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಇಳಿದಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ. ೨.೨ರಷ್ಟು ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಶೇ. ೩ರಷ್ಟು ಗಂಡುಮಕ್ಕಳು ದುಡಿಯುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವಯಂ ಸೇವಾ ಸಂಸ್ಥೆಗಳ ನೇರವಿನೊಂದಿಗೆ ಸರ್ವಶಿಕ್ಷಣ ಅಭಿಯಾನದಂತಹ ಯೋಜನೆಗಳನ್ನು ಜಾರಿ ಮಾಡಿರುವುದರಿಂದ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಾಕ್ಷರರಾಗುತ್ತಿದ್ದಾರೆ.[೯೩]

ವಿರಭದ್ರನಾಯ್ಕ ಪಿ. (೨೦೧೦) ಅವರ ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು ಎಂಬ ಮಂಟಪ ಮಾಲೆ (೧೯೪) ಪುಸ್ತಕದಲ್ಲಿ ಎರಡು ಪೋಡುಗಳ ಸಮುದಾಯದ ಮಕ್ಕಳು ಕಾಡಿನಲ್ಲಿ ಆಟ ಆಡಿಕೊಂಡು ಕಾಲಕಳೆಯುತ್ತಿದ್ದಾರೆ. ಶಿಕ್ಷಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳೆರಡು ನಮ್ಮ ಮಕ್ಕಳಿಗೆ ಅನ್ಯಾಯ ಮಾಡುತ್ತಿವೆ. ಎರಡು ಪೋಡುಗಳ ನಡುವೆ ಶಾಲೆ ತೆರೆದು ಎರಡು ಪೋಡುಗಳಿಂದ ಇಬ್ಬರು ಅಡುಗೆಯವರನ್ನು ನೇಮಿಸಿಕೊಂಡರೆ ಮಕ್ಕಳನ್ನು ಕರೆದುಕೊಂಡು ಬರಲು ಸಹಕಾರಿಯಾಗುತ್ತದೆ. ಶಾಲೆ ಮುಗಿದ ಮೇಲೆ ಮಕ್ಕಳನ್ನು ವಾಪಸ್ಸು ಕರೆದುಕೊಂಡು ಹೋಗಲು ಸಹಕಾರಿಯಾಗುತ್ತದೆ. ನಾವು ನಮ್ಮ ಪೋಡುಗಳಲ್ಲಿ ಇರುವ ಎಲ್ಲಾ ಮಕ್ಕಳನ್ನು ಶಾಲೆಗೆ ವ್ಯವಸ್ಥಿತವಾಗಿ ಹೋಗುವಂತೆ ನೋಡಿ ಕೊಳ್ಳುತ್ತೇವೆ ಎಂದು ತಿಳಿಸಿದ್ದಾರೆ. ಒಟ್ಟಾರೆ ಈ ಪ್ರದೇಶದಲ್ಲಿ ಯಾವುದೇ ಮೂಲಸೌಕರ್ಯಗಳು, ಸಾರಿಗೆ ಸಂಪರ್ಕ ಇಲ್ಲದ ಕಾರಣ ಇಲ್ಲಿ ಕೆಲಸ ಮಾಡುವವರು ಬಹಳ ಬದ್ದತೆಯಿಂದ ನಮ್ಮಲ್ಲೇ ವಾಸವಿದ್ದು ಕಲಿಸಬೇಕಾಗುತ್ತದೆ.[೯೪]

ಕೊನೆ ಟಿಪ್ಪಣಿಗಳು

೧. ಟಿ.ಆರ್.ಚಂದ್ರಶೇಖರ. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ. ಪ್ರಸಾರಾಂಗ ವಿಶ್ವ ವಿದ್ಯಾಲಯ ಹಂಪಿ.. ೨೦೦೮.

೨. ವಿಠೋಬ ಮತ್ತು ಇತರರು. ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ. ೨೦೦೫.

೩. ರತನ್ ನಬೀಸ್ ಮತ್ತು ತಾನಿತಾ ಚಟರ್ಜಿ. ಎನ್‌ರೋಲಿಂಗ್ ಅಂಡ್ ರಿಟೈನಿಂಗ್

ಸ್ಲಮ್ ಚಿಲ್ಡ್ರನ್ ಇನ್ ಪಾರ್ಮಲ್ ಸ್ಕೂಲ್ಸ್, ಎ ಪಿಲ್ಟ್ ಸರ್ವೇ ಇನ್ ಈಸ್ಟನ್ ಸ್ಲಮ್ ಆಪ್ ಕೋಲ್ಕತ್ತ, ೨೦೦೭,

೪. ರೇಖಾ ಕೌಲ್, ಅಸ್ಸೆಸಿಂಗ್ ಪ್ರೈಮರಿ ಎಜ್ಯುಕೇಷನ್ ಗೋಯಿಂಗ್ ಬಿಯಾಂಡ್ ದಿ ಕ್ಲಾಸ್ ರೂಮ್, ಎಕನಾಮಿಕ್ಸ್ ಆಫ್ ಎಜ್ಯುಕೇಷನ್ ರಿವ್ಯೂವ್, ೨೦೦೧, ೬೫೧–೬೬೧.

೫. ಸಾರಥಿ ಆಚಾರ್ಯ, ಆಸ್ಸಿಂಗ್ ಟು ಪ್ರೈಮರಿ ಎಜ್ಯುಕೇಷನ್: ರೂರಲ್ ಮಾಹಾರಾಷ್ಟ್ರ ಅಂಡ್ ಮಧ್ಯ ಪ್ರದೇಶ, ೨೦೦೦.

೬. ಎನ್. ಕೃಷ್ಣಾಜೀ., ಪಾವರ್ಟಿ ಜೆಂಡರ್ ಆ್ಯಂಡ್ ಸ್ಕೂಲಿಂಗ್: ಎ ಸ್ಟಡಿ ಆಫ್ ಟೂ ಡಿಸ್ಟ್ರಿಕ್ಟ್ ಇನ್ ಆಂದ್ರಪ್ರದೇಶ:, ೨೦೦೦, ರಾವತ್ ಪಬ್ಲಿಕೇಶನ್ ನ್ಯೂಡೆಲ್ಲಿ.

೭. ವಿಲ್‌ಫ್ರೆಡ್ ಡಿಸೋಜ, ರೈತರಿಗೆ ಆಸೆ, ಕಂಪನಿಗಳಿಗೆ ಲಾಭದ ದಾಹ, ಶಿಕ್ಷಣದಿಂದ ವಂಚಿತರಾಗುತ್ತಿರುವ ಕಂದಮ್ಮಗಳು, ೨೦೦೬,

೮. ಶಾಂತಾ ಸಿನ್ಹ,, ೨೦೦೬,

೯. ಶ್ರೀವಾಸ್ತವ, ಅಮರೇಶ ದುಬೆ ಮತ್ತು ಇತರರು, ೨೦೦೨,

೧೦. ಎಸ್. ಮಧು., ಎಜ್ಯುಕೇಶನ್ ಸೊಸಾಯಿಟಿ ಆ್ಯಂಡ್ ಡೆವಲಪ್‌ಮೆಂಟ್, ಎ.ಪಿ. ಹೆಚ್. ಪಂಬ್ಲಿಷಿಂಗ್ ಕಾರ್ಪೂರೇಷನ್, ನ್ಯೂಡೆಲ್ಲಿ, ೨೦೦೭.

೧೧. ಗೋವಿಂದೆಗೌಡ ಎಚ್.ಜಿ., ೧೯೯೬, ಮಾಜಿ ಶಿಕ್ಷಣ ಮಂತ್ರಿಗಳು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನಾ, ಸೆಪ್ಟೆಂಬರ್, ಮಾಸಪತ್ರಿಕೆ, ಬೆಂಗಳೂರು, ಪು. ೧೨

೧೨. ಎಸ್. ಮಧು., ಎಜ್ಯುಕೇಶನ್ ಸೊಸಾಯಿಟಿ ಆ್ಯಂಡ್ ಡೆವಲಪ್‌ಮೆಂಟ್, ಎ.ಪಿ. ಹೆಚ್. ಪಂಬ್ಲಿಷಿಂಗ್ ಕಾರ್ಪೂರೇಷನ್, ನ್ಯೂಡೆಲ್ಲಿ, ೨೦೦೭.

೧೩. ಉಷಾ ರಾಮ್ ಕುಮಾರ್, ವುಮೆನ್ಸ್ ಎಜ್ಯುಕೇಷನ್ ಇನೆ ವೆಸ್ಟ್ರನ್ ಗಾಟ್ಸ್ ರೀಜನ್ಸ್ ಆಫ್ ಕರ್ನಾಟಕ, ೨೦೦೨,

೧೪. ಶಿವರಾಜ ಮತ್ತು ಇತತರು, ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ, ೨೦೦೫,

೧೫. ಮಾಲಿನಿ ಭಟ್ಟಾಚಾರ್ಯ, ಭಾರತದಲ್ಲಿ ಶಿಕ್ಷಣ ಮತ್ತು ಮಹಿಳೆ, ೨೦೦೩,

೧೬. ಜ್ಯೋತಿ. ಎಂ, ಮಹಿಳಾ ಸಾಮಾಜಿಕತೆ, ೨೦೦೭,

೧೭. ನಂಜುಂಡಸ್ವಾಮಿ. ಎಂ, ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು, ೨೦೦೭,

೧೮. ಗೋವಿಂದ ಮತ್ತು ವರ್ಗೀಸ್, ಕ್ವಾಲಿಟಿ ಆಫ್ ಪ್ರೈಮರಿ ಸ್ಕೂಲಿಂಗ್ ಇನ್ ಇಂಡಿಯಾ: ಎ ಕೆಸ್ ಸ್ಟಡಿ ಆಫ್ ಮಧ್ಯಪ್ರದೇಶ, ೧೯೯೩,

೧೯. ವಿಶ್ವಬ್ಯಾಂಕ್, ೧೯೯೦,

೨೦. ಆರ್.ಸಿ. ಶರ್ಮಾ ಮತ್ತು ಸಿ.ಎಲ್. ಸಫರಾ, ೧೯೬೬,

೨೧. ಕನ್ನಡಪ್ರಭ ದಿನಪತ್ರಿಕೆ, ೦೪.೦೧.೨೦೧೧,

೨೨. ಅಂಜು. ಜಿ., ಭಾರತದಲ್ಲಿ ಲಿಂಗ-ಸಮಾನತೆ" ಇ.ಪಿ.ಡಬ್ಲೂ ವಾಲ್ಯೂಮ ನಂ: ಪಿ.ಪಿ, ೨೦೦೨, ೩೮-೪೨.

೨೩. ರತನ್ ನಬೀಸ್ ಮತ್ತು ತಾನಿತಾ ಚಟರ್ಜಿ, ಎನ್‌ರೋಲಿಂಗ್ ಆ್ಯಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಪಾರ್ಮಲ್ ಸ್ಕೂಲ್ ಎ ಪಿಲ್ಡ್ ಸರ್ವೆ ಇನ್ ಇಸ್ಟನ್ ಸ್ಲಮ್ ಆಫ್ ಕೊಲ್ಕತ್ತ" ಇ.ಪಿ.ಡಬ್ಲೂ ವೊ.ನಂಎಕ್ಸ್.ಎಲ್.ವಿ.ಐ ನಂ೧೧. ೨೦೦೭, ಪು. ೩೩-೩೯

೨೪. ಭಾರತ ಸರ್ಕಾರ, ವರ್ಲ್ಡ್ ಬ್ಯಾಂಕ್ ವರದಿ, ೧೯೯೭.

೨೫. ಹೆಗ್ಡೆ ಡಿ.ವಿ., ಮಕ್ಕಳ ಅಭಿವೃದ್ಧಿ ಎಲ್ಲರ ಹೊಣೆ, ಯೋಜನಾ ಮಾಸಪತ್ರಿಕೆ (೨೦೦೪), ನವೆಂಬರ್ ಸಮಾಚಾರ ಮತ್ತು ಪ್ರಚಾರ ಸಚಿವಾಲಯ ಭಾರತ ಸರ್ಕಾರ, ಬೆಂಗಳೂರು, ಪು. ೮

೨೬. ಪ್ರಶಾಂತ್ ಎಚ್.ಡಿ., ಶೈಕ್ಷಣಿಕ ಪ್ರೇರಕಾಶಗಳ ಸಾಮಾಜಿಕ ಆಯಾಮಗಳು ಪ್ರಸಾರರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦.

೨೭. ಚಂದ್ರಶೇಖರ್ ಟಿ.ಆರ್., ಲಿಂಗ ಸಂಬಂಧಿ ಅಭಿವೃದ್ದಿ ಅಧ್ಯಯನ ಪ್ರಬಂದಗಳು ಮಂಟಪ ಮಾಲೆ (೧೬೦) ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦.

೨೮. ಚಂದ್ರಶೇಖರ್ ಟಿ.ಆರ್., ಕರ್ನಾಟಕದ ಪ್ರಾಥಮೀಕ ಶಿಕ್ಷಣದ ಸ್ಥಿತಿಗತಿ, ಅಭಿವೃದ್ದಿ ಅಧ್ಯಾಯನ ಸಮಾಜ ವಿಜ್ಞಾನ ಪತ್ರಿಕೆ ಪ್ರಸಾರರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೯. ಪ್ರಶಾಂತ್ ಎಚ್.ಡಿ., ಹೆಣ್ಣುಮಕ್ಕಳ ಶಿಕ್ಷಣದ ಒಂದು ಸ್ಥೂಲನೋಟ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೦. ಜೋಷಿ ಜಿ.ಎಸ್. ಎಜುಕೇಶನ್ ಪ್ರಾಬ್ಲಮ್ ಆಫ್ ಸೆಡ್ಯೂಲ್ ಕ್ಯಾಸ್ಟ್ ಆಂಡ್ ಸೆಡ್ಯೂಲ್ ಟ್ರೈಬಲ್ ಆಪ್ ಬರೋಡ ಯುನಿವರ್ಸಿಟಿ ಆಪ್ ಬರೋಡ ವಾಲ್ಯೂ ನಂ ೨ ೧೯೮೦ ಪಿಪಿ ೧೮೬-೧೯

೩೧. ಕೇಲು ಪಿ., ಕೇರಳ ಪ್ರೌಡಶಾಲಾ ವಿದ್ಯಾರ್ಥಿನಿಯರ ಮಾತೃಭಾಷೆಯಲ್ಲಿನ ಮೂಲಭಾಷೆ ಕೌಶಲ್ಯಗಳು ಎಂಬ ಪಿಎಚ್.ಡಿ ಪ್ರಬಂದ ೧೯೯೦ ಕಲ್ಕತಾ ವಿಶ್ವವಿದ್ಯಾಲಯ

೩೨. ಅಗರ್ ವಾಲ್, ಆ್ಯನ್ ಅಸೆಸ್ ಮೆಂಟ್ ಆಪ್ ಟ್ರೆಂಡ್ ಇನ್ ಆಕ್ಸೆಸ್ ಆಂಡ್ ರಿಟೆಸ್ಷನ್ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಪ್ಲನಿಂಗ್ ಆಂಡ್ ಆಡ್ಮಿನಿಸ್ಟ್ರೆಷನ್ ನ್ಯೂಡೆಲ್ಲಿ ೨೦೦೧.

೩೩. ಶಶಿಧರ್ ಕೆ.ಆರ್., ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಎಂ.ಎಸ್ ಬಿಲ್ಡಿಂಗ್ ಬೆಂಗಳೂರು ಕರ್ನಾಟಕ ಸರ್ಕಾರ.

೩೪. ಕುಮಾರ್ ಟಿ.ಎಚ್., ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ, ಶ್ರೀದೇವಿ ಪ್ರಕಾಶನ ಬಿ.ಟಿ.ಎಂ. ಲೇಹೌಟ್ ಬೆಂಗಳೂರು

೩೫. ನಾಯಕ್ ಜೆ.ಪಿ., ಭಾರತೀಯ ಶಿಕ್ಷಣದಲ್ಲಿ ಸಮತಾಗುಣ ಮತ್ತು ಪರಿಮಾಣ ಕನ್ನಡ ಭಾಷಾಂತರ ಜಯಕುಮಾರು ಹಾನಗೋಳ್ ಎಂ.ಬಿ.ಎಚ್ ಪ್ರಕಾಶನ ಬೆಂಗಳೂರು.

೩೬. ವಾಸು ಎ.ಅರ್., ತಮ್ಮ ಶಿಕ್ಷಣ ರೂಪಾಂಕುರ ಕರ್ನಾಟಕ ಪಬ್ಲಿಕೇಶನ್ ಎಂಬಿಸಿ ಸೇಂಟರ್ ಬೆಂಗಳೂರು.

೩೭. ೧೯೨೯ರ ಹಾವಾಗ ಸಮಿತಿ (೧೯೨೯) ವರದಿ ಶಾಸನ ಸಭೆ ವಿಧಾನಸೌಧ ಗ್ರಂಥಾಲಯ ಬೆಂಗಳೂರು.

೩೮. ರಫೀಕ್ ಅಹ್ಮದ್ ಅಕ್ಷರಶಕ್ತಿ ಲೇಖನ ಉದಯವಾಣಿ ದಿನಪತ್ರಿಕೆ, ಸೆಪ್ಟೆಂಬರ್ ೮ ೨೦೦೨.

೩೯. ಚಂದ್ರಶೇಖರಯ್ಯ ಅವರ "ಪರಿಶಿಷ್ಟ ಜಾತಿ ಶೈಕ್ಷಣಿಕ ಸಮಸ್ಯೆಗಳು ಎಂಬ ಪಿ.ಎಚ್.ಡಿ ಅಧ್ಯಾಯನ ಮಾರ್ಗದರ್ಶಕರು ಪ್ರಹ್ಲಾದ್ ಮೈಸೂರು ವಿಶ್ವವಿದ್ಯಾಲಯ.

೪೦. ಲೈಟನ್ ಜೆ.ಕೆ., ವಿಲ್ಸನ್ ವರ್ಕ್ ಆಂಡ್ ಎಜುಕೇಶನ್ (೨೦೦೦) ಇ.ಪಿ.ಡಬ್ಲ್ಯೂ ಹಿತಕಾರಿ ಹೌಸ್ ಸಾಹಿಭಗತ್ ಸಿಂಗ್ ರೋಡ್ ಮುಂಬೈ.

೪೧. ಮಂಜಪ್ಪ, ದಲಿತ ಶಿಕ್ಷಣ ಪರಿಸ್ಥಿತಿ ಪ್ರಕಟಿತ ಪಿ.ಎಚ್.ಡಿ ಪ್ರಬಂಧ ಅಭಿವೃದ್ಧಿ ಅಧ್ಯಾಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೪೨. ನಿರಂಜನಾರಾಧ್ಯ ವಿ.ಪಿ., ಏಕರೂಪ ಸಮಾಣ ಶಿಕ್ಷಣ ನೀತಿ ವಿಚಾರ ಸಂಕೀರ್ಣ ಬೆಂಗಳೂರು. ೧೭ ಸೆಪ್ಟೆಂಬರ್ ೨೦೦೨.

೪೩. ೨೦೧೧ರ ಕರ್ನಾಟಕ ಜಣಗಣತಿ ವರದಿ, ಭಾರತದ ಸಾಂಖ್ಯಿಕ ಇಲಾಖೆ, ಭಾರತ ಸರ್ಕಾರ, ನವದೆಹಲಿ, ವ್ಯಾಲ್ಯೂಮ್-೧, ಪು. ೮

೪೪. ವಿಶ್ವೇಶ್ವರ ಹೆಗಡೆ ಕಾಗೇರಿ, ೨೦೧೨, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಏಕರೂಪ ಸಮಾನ ಶಿಕ್ಷಣ ನೀತಿ, ವಿಚಾರಸಂಕಿರಣ ಬೆಂಗಳೂರು, ೧೭ ಸೆಪ್ಟೆಂಬರ್.

೪೫. Horlog Commette Report, 1929, ಕುರುಕ್ಷೇತ್ರ, ಮಾಸಪತ್ರಿಕೆ, ಆಗಸ್ಟ್ ೧೨, ಬೆಂಗಳೂರು, ಪು. ೧೮

೪೬. ಶಿವಶಂಕರ, ೧೯೭೦, ಭಾರತೀಯ ಶಿಕ್ಷಣ, ಗಾಯತ್ರಿ ಪ್ರಕಾಶನ, ಮೈಸೂರು, ಪು. ೧೬

೪೭. ಷಾಹ ಎಚ್., ೧೯೭೯, ಓದುಗಾರಿಕೆ, ಗ್ರಹಿಕೆ ಮತ್ತು ಮನೋವೈಜ್ಞಾನಿಕ ಚಲಕಗಳ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು. ೨೫

೪೮. ನಾಯಕ್ ಜೆ.ಪಿ., (ಮೂಲ) ೧೯೯೪, ಭಾರತೀಯ ಶಿಕ್ಷಣದಲ್ಲಿ ಸಮತಾಗುಣ ಮತ್ತು ಪರಿಮಾಣ, ಜಯಕುಮಾರು ಹಾನಗೋಳ್ (ಅನು), ಎಂ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪು. ೧೩೦

೪೯. Jean drez and Amarthya sen (1999) Indian Economic Development and Social Oppartunity, Oxford University Press, New Delhi, P. 163

೫೦. ಚಂದ್ರಶೇಖರ ಸಿ.ಪಿ., ೨೦೦೭, ವಿಫಲಗೊಂಡ ಮಾರುಕಟ್ಟೆಯಲ್ಲಿ ಭಾರತದಲ್ಲಿನ ನವ ಉದಾರಿಕರಣ ಆರ್ಥಿಕ ಸುಧಾರಣೆಗಳು, ಗಣೇಶ ಪ್ರಕಾಶನ, ಬೆಂಗಳೂರು, ಪು. ೮೯

೫೧. ಜಾರ್ಜ್, ೨೦೦೨, "ರೀಡರ್ ಎಜುಕೇಶನ್ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನ್ ರಿಸರ್ಚ್ ಟ್ರೈನಿಂಗ್(NCERT) ಡವಲಪ್‌ಮೆಂಟ್ ಪ್ರಾಪರ್ಟಿ ಆಫ್ ಇಂಡಿಯನ್ ಎಜುಕೇಶನ್" ಮೆಟ್ರೊಪಾಲಿಟನ್ ನ್ಯೂಡೆಲ್ಲಿ, ಪು. ೨೯೧

೫೨. ಕೃಷ್ಣಪ್ಪ ಎಸ್., ೨೦೦೭, ಆಧುನಿಕ ಶಾಲಾ ವ್ಯವಸ್ಥೆ, ರಾಧಕೃಷ್ಣ ಪ್ರಕಾಶನ, ಬೆಂಗಳೂರು, ಪು. ೪೨

೫೩. ಕುಮಾರ್ ಬಿ.ಆರ್., ೨೦೦೪, ಮಕ್ಕಳ ಆತಂಕಕಾರಿ ನಿರಕ್ಷರತೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೨೬

೫೪. ಮಹೇಶ್ ಎಂ., ೨೦೦೫, ಪಟ್ಟಣ ಪ್ರದೇಶದಲ್ಲಿ ಮಕ್ಕಳ ಸ್ಥಿತಿಗತಿ, ಅಂಕಿತ ಪ್ರಕಾಶನ, ಗಾಂಧಿ ಬಜಾರ್, ಬೆಂಗಳೂರು, ಪು. ೧೬

೫೫. ಬಂಡೋಪದ್ಯಾಯ, ೨೦೦೬, ಭಾರತದಲ್ಲಿ "ಸರ್ವರಿಗೂ ಶಿಕ್ಷಣ", ಐಬಿಎಚ್ ಪ್ರಕಾಶನ, ಬೆಂಗಳೂರು, ಪು. ೧೬೮

೫೬. ನರಸಿಂಹಾಚಾರ್, ೨೦೦೬, ಉದೋಯನ್ಮುಖ ಭಾರತದಲ್ಲಿ ಶಿಕ್ಷಣ, ಸಪ್ನ ಬುಕ್‌ಹೌಸ್, ಬೆಂಗಳೂರು, ಪು. ೧೨೬

೫೭. ಮಂದಿರ ಕುಮಾರ್, ೨೦೦೬, ಆರೋಗ್ಯ ಮತ್ತು ಹಾಜರಾತಿ, ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೮೦

೫೮. ಕಾಮತ್ ಜೋತ್ಸ್ನಾ, ಮಹಿಳೆಯರ ಒಂದು ಅಧ್ಯಯನ (ಲೇಖನ), (ಇಪಿಡಬ್ಲ್ಯು) ಎಕನಾಮಿಕ್ ಪೊಲಿಟಿಕಲ್ ವಿಕ್ಲೀ, ಪು. ೨೬–೩೦

೫೯. ಯರ್ರಿಸ್ವಾಮಿ ಎಂ., ಗ್ರಾಮ ಪಂಚಾಯಿತಿ ಮತ್ತು ಸಬಲೀಕರಣ, ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ನರಸಿಂಹಯ್ಯ ಎಚ್., ೧೯೯೧, ಪ್ರಾಥಮಿಕ ಶಿಕ್ಷಣದ ವರದಿ, ವ್ಯಾ–೧, ಶಾಸನಸಭೆ, ಗ್ರಂಥಾಲಯ, ಬೆಂಗಳೂರು, ಪು. ೧೮

೬೧. ಥೇಕೆಡತ್ ಕೆ.ಕೆ., (ಅನು) ಕೆ.ಎಲ್., ಗೋಪಾಲಕೃಷ್ಣಯ್ಯ ೧೯೯೮, ಶತಮಾನದ ಅಂಚಿನಲ್ಲಿ ಶಿಕ್ಷಣ, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು, ಪು. ೬೩

೬೨. ಲೈಟನ್ ಜಿ.ಕೆ., ವಿಲ್ಡ್ರನ್ ವರ್ಕ್ ಆಂಡ್ ಎಜುಕೇಶನ್, ೨೦೦೦, ಇ.ಪಿ.ಡಬ್ಲ್ಯೂ, ಹಿತಕಾರಿಹೌಸ್, ಮುಂಬೈ, ಪು. ೯೫

೬೩. ೨೦೧೧ರ ಕರ್ನಾಟಕ ಜಣಗಣತಿ ವರದಿ, ರಿಜಿಸ್ಟ್ರಾರ್ ಜನರಲ್ ಆ್ಯಂಡ್ ಸೆನ್ಸಸ್ ಕಮಿಷನರ್ ಆಫ್ ಇಂಡಿಯಾ, ಪು. ೩

೬೪. ನಿರಂಜನಾರಾಧ್ಯಾ ವಿ.ಪಿ., ೨೦೧೧, ಉದಯವಾಣಿ ಅಂಕಣಕಾರ. (ಲೇ) ಅಕ್ಟೋಬರ್ ೩೧ ಸೋಮವಾರ, ಪು. ೮

೬೫. ಅನ್ನಪೂರ್ಣೇಶ್ವರಿ, ಮಹಿಳಾ ಮತ್ತು ಅಭಿವೃದ್ಧಿ, ಅಂಕಿತ ಪ್ರಕಾಶನ, ಗಾಂಧಿನಗರ, ಬೆಂಗಳೂರು, ಪು. ೬೯

೬೬. ಎಸ್.ವಿ. ರುಹಿಲಾ, ೧೯೯೬, ಎಜ್ಯುಕೇಷನ್ ಇಂಡಿಯಾ,

೬೭. ಜನ್ ದಿಯಾಲ್ ಮತ್ತು ಬಿ.ಜಿ. ತಿಲಕ್, ೨೦೦೩, ಎಜ್ಯುಕೇಷನ್ ಇನ್ ದ ಯು.ಪಿ.ಎ. ಗೌರ್ನಮೆಂಟ್ ಕಾಮನ್ ಮಿನಿಮಮ್ ಪ್ರೋಗ್ರಾಂ, ಇಪಿಡಬ್ಲ್ಯೂ, ಅಕ್ಟೋಬರ್

೬೮. ಜಾರ್ಜ ಮತ್ತು ಮೌರಿನ್ ವರ್ಲ್ಡ್ ಹಾಲ್, ೧೯೮೫, ಎಲಿಮೆಂಟ್ರಿ ಎಜ್ಯುಕೇಷನ್ ಆ್ಯಂಡ್ ಇಂಡಿಯಾ,

೬೯. ದೇವಿ, ೧೯೮೩, ಪ್ರಾಬ್ಲಮ್ಸ್ ಆಫ್ ಡ್ರಾಪ್ ಔಟ್ ಇನ್ ಪ್ರೈಮರಿ ಸ್ಕೂಲ್,

೭೦. ಅನಿತಾ ಬಿ.ಕೆ., ೨೦೦೧,

೭೧. ರೇಖಾ ವಾಜೀರ್, ೨೦೦೧,

೭೨. ಇಂದಿರಾ ಆರ್., ೨೦೦೨,

೭೩. ಶಿವಶಂಕರ, ೧೯೭೦, ಭಾರತೀಯ ಶಿಕ್ಷಣ, ಗಾಯತ್ರಿ ಪ್ರಕಾಶನ, ಮೈಸೂರು, ಪು. ೧೬

೭೪. ಷಾಹ ಎಚ್., ೧೯೭೬, ಓದುಗಾರಿಕೆ ಗ್ರಹಿಕೆ ಮತ್ತು ಮನೋವೈಜ್ಞಾನಿಕ ಚಲಕಗಳ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು. ೨೫

೭೫. ಗೋವಿಂದೆಗೌಡ ಎಚ್.ಜಿ., ೧೯೯೬, ಮಾಜಿ ಶಿಕ್ಷಣ ಮಂತ್ರಿಗಳು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನಾ, ಸೆಪ್ಟೆಂಬರ್, ಮಾಸಪತ್ರಿಕೆ, ಬೆಂಗಳೂರು, ಪು. ೧೨

೭೬. ಕೃಷ್ಣಮೂರ್ತಿ, ೧೯೯೮, ಭಾರತೀಯ ನಾರಿ ಸಮಾನತೆ, ಆಧುನಿಕ ಸಾಲ ವ್ಯವಸ್ಥೆ, ಚೇತನ ಬುಕ್‌ಹೌಸ್, ಮೈಸೂರು, ಪು. ೨೮-೨೯

೭೭. ನಾರಾಯಣ ಡಿ.ಎಸ್., ೨೦೦೬, ಇಂಗ್ಲಿಷ್-ಕನ್ನಡ ಸಂಬಂಧ ಕುರಿತು ಚಿಂತನೆಗಳು, ಎಂ.ಫಿಲ್. ಸಂಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಪು. ೨೯

೭೮. ಟಿ.ಆರ್. ಚಂದ್ರಶೇಖರ್, ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೭

೭೯. ಪ್ರಶಾಂತ್ ಎಚ್.ಡಿ., ೨೦೧೦, ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೪೮

೮೦. ಶಾರದ ಜೈನ್, ಅಲೋಕ ಮತೂರ್, ರೋಭಿತ ರಾಜ ಗೋಪಾಲ್ ಜ್ಯೂಹಿಷಾ(೧೯೯೯), ಅವರ ಚಿಲ್ಡ್ರನ್ ವರ್ಕ್ಸ್ ಆ್ಯಂಡ್ ಎಜುಕೇಶನ್, ರಿ ಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್ ಆರ್ಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ.

೮೧. ರುಕ್ಮಣಿ ಬ್ಯಾನರ್ಜಿ (೨೦೦೦), ಪಾವರ್ಟಿ ಆ್ಯಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರೈಮ್ ಮುಂಬೈ ಆ್ಯಂಡ್ ದೆಹಲಿ. ಸೇಜ್ ಪಬ್ಲಿಕೇಶನ್. ಡೆಲ್ಲಿ.

೮೨. ಕರೂರ ಎನ್.ಜಿ., ೨೦೦೨, ಶಿಕ್ಷಣ ಮಾರ್ಗ, ಕದಂಬ ಪ್ರಕಾಶನ, ಧಾರವಾಡ

೮೩. ಮುಜಾಮಿಲ್ ಜಾನ್, ಇನ್ ಫ್ಯಾಕ್ಟ್ ಆಫ್ ಎಜುಕೇಷನ್, ನ್ಯಾಷನಲ್ ಬುಕ್ ಹೌಸ್ ನವದೆಹಲಿ, ಪು. ೨೧೩

೮೪. ಪದ್ಮಾರಾಮಚಂದ್ರನ್ ಮತ್ತು ವಸಂತಕುಮಾರ್, (೨೦೦೫), ಎಜುಕೇಷನ್ ಇನ್ ಇಂಡಿಯಾ, ಏಷಿಯನ್ ಪಬ್ಲಿಕೇಶನ್, ನ್ಯೂಡೆಲ್ಲಿ.

೮೫. ರಾಜ ಎಂ., ೧೯೯೦, ಎಜುಕೇಶನ್ ಡೆವೆಲಪ್‌ಮೆಂಟ್ ಅಂಡ್ ಸೊಸೈಟಿ, ವಿಕಾಸ್ ಪಬಿಕೇಶನ್ ಹೌಸ್, ನ್ಯೂಡೆಲ್ಲಿ.

೮೬. ಮುಜುಮದಾರ್, ಮನಾಬಿ, ೧೯೯೭, ರೂರಲ್ ಲಿಟ್ರಸಿ ಸೀನ್ ಇನ್ ತಮಿಳ್ನಾಡು ಅಂಡ್ ರಾಜಸ್ಥಾನ್, ಸೇಜ್ ಪಬ್ಲಿಕೇಶನ್ ನ್ಯೂಡೆಲ್ಲಿ.

೮೭. ವೈದ್ಯನಾಥನ್ ಎ., ಪಿ.ಆರ್.ಜಿ. ನಾಚಿಯರ್, ೨೦೦೦, ಎಲಿಮೆಂಟರಿ ಎಜುಕೇಶನ್ ಇನ್ ರೂರಲ್ ಇಂಡಿಯಾ: ಎ ಗ್ರಾಸ್ ರೂಟ್ ವ್ಯೂ, ಸೇಜ್ ಪಬ್ಲಿಕೇಶನ್, ನ್ಯೂಡೆಲ್ಲಿ

೮೮. ಅರುಣ್ ಸಿ ಮೆಹತಾ, ೨೦೦೬, ಎಲೆಮೆಂಟರಿ ಎಜುಕೇಶನ್ ಇನ್ ಇಂಡಿಯಾ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರಸ್, ಡೆಲ್ಲಿ

೮೯. ಮಹಾಬಲೇಶ್ವರರಾವ್, ೨೦೧೨, ಪ್ರೌಢ ಶಿಕ್ಷಣ ಸಮಸ್ಯೆಗಳು–ಸವಾಲುಗಳು, ಪ್ರಗತಿ ಗ್ರಂಥಾಲಯ, ಮೈಸೂರು.

೯೦. ಮಹಾಬಲೇಶ್ವರರಾವ್, ೨೦೧೨, ಪ್ರೌಢ ಶಿಕ್ಷಣ ಮತ್ತು ಶಿಕ್ಷಕನ ಕರ್ತವ್ಯಗಳು, ಪ್ರಗತಿ ಗ್ರಂಥಾಲಯ, ಮೈಸೂರು.

೯೧. ಶಕುಂತಲಾ ಸಿ. ಶೆಟ್ಟರು ಗಣಪತಿ ನಾಯ್ಕ್, ೨೦೧೪, ಮಹಿಳಾ ದಿನಾಚರಣೆ ವಿಶೇಷ ಯೋಜನಾ ಮಾಸಪತ್ರಿಕೆ, ಪು. ೧೬

೯೨. ರೇಖಾ ಕೌಲ್, ೧೯೯೩, ಕಾಸ್ಟ್, ಕ್ಲಾಸ್ ಅಂಡ್ ಎಜುಕೇಶನ್, ಸೇಜ್ ಪಬ್ಲಿಕೇಶನ್, ನ್ಯೂಡೆಲ್ಲಿ.

೯೩. ಭಾರತದ ಮಾನವ ಅಭಿವೃದ್ಧಿ ವರದಿ, ೨೦೧೧. ಭಾರತದ ಸಾಂಖ್ಯಿಕ ಇಲಾಖೆ, ಭಾರತ ಸರ್ಕಾರ, ನವದೆಹಲಿ, ಪು. ೬೨

೯೪. ವಿರಭದ್ರನಾಯ್ಕ ಪಿ., ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೩

ಅಧ್ಯಾಯ ಎರಡು

ಅಧ್ಯಯನದ ಕ್ಷೇತ್ರ ಪರಿಚಯ

ಚಾರಿತ್ರಿಕ ಹಿನ್ನೆಲೆ

ಭೌಗೋಳಿಕ ಅಂಶಗಳು ಮತ್ತು ಹವಾಮಾನ

ನೈಸರ್ಗಿಕ ಸಂಪನ್ಮೂಲ

ಜಿಲ್ಲೆಯ ಜನಸಂಖ್ಯೆ

ಜಿಲ್ಲೆಯ ಆಡಳಿತ

ಜಿಲ್ಲೆಯ ಆರ್ಥಿಕ ವ್ಯವಸ್ಥೆ

ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆ

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರ ಪರಿಚಯ

ಪ್ರಬಂಧದ ಮೊದಲ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ಅಧ್ಯಯನಗಳನ್ನ ಸಮೀಕ್ಷೆಯನ್ನ ಕೈಗೊಂಡು ವಿವಿಧ ಅಧ್ಯಯನಗಳಿಗೆ ಬೇಕಾದ ಮಾಹಿತಿಯನ್ನ ದ್ವಿತೀಯ ಮೂಲಗಳಿಂದ ಪಡೆದುಕೊಂಡು ಅಧ್ಯಯನವನ್ನ ವಿವರಣೆಗೆ ಒಳಪಡಿಸಲಾಗಿದೆ. ಕೇಂದ್ರದ ಕ್ರಮಗಳನ್ನು ರಾಜ್ಯವು ಅನುಸರಿಸಿ ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗಳನ್ನ ಸುಧಾರಣೆಗಾಗಿ ನೀಡಿದ ಸಲಹೆಗಳನ್ನ ನೋಡಿದ್ದೇವೆ. ಅಧ್ಯಯನ ಕ್ಷೇತ್ರ ಪರಿಚಯವನ್ನು ಮಾಡಿಸುವ ಉದ್ದೇಶವಿಟ್ಟುಕೊಂಡಿರುವ ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರದ ಜಿಲ್ಲೆ, ತಾಲೂಕುಗಳ ಮತ್ತು ಗ್ರಾಮೀಣ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿವರಗಳನ್ನು ಕೊಡಲಾಗಿದೆ. ಗ್ರಾಮೀಣ ಪ್ರಾಥಮಿಕ ಶಾಲೆಗಳ ಆಯ್ಕೆಯ ನಮೂನೆಯನ್ನು ಅಂಕಿ ಅಂಶಗಳ ಮೂಲಕ ವಿವರವಾಗಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಾಯವು ಅದ್ಯಯನ ಕ್ಷೇತ್ರದ ಒಟ್ಟು ಚಿತ್ರಣವನ್ನು ಕೊಡುತ್ತದೆ.

೨.೧. ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಬಳ್ಳಾರಿ ಜಿಲ್ಲೆಯು ನೈರುತ್ಯ ಮತ್ತು ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದೆ. ಇದು ಸರಿಯಾಗಿ ಕರ್ನಾಟಕದ ಮಧ್ಯಭಾಗದಲ್ಲಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ ನೈರುತ್ಯ ದಿಕ್ಕಿನ ಹಗರಿಬೊಮ್ಮನಹಳ್ಳಿ ತಾಲೂಕು ಕಲ್ಲಹಳ್ಳಿ ಎಂಬ ಗ್ರಾಮದಿಂದ ಈಶಾನ್ಯ ದಿಕ್ಕಿನ ಸಿರಗುಪ್ಪ ತಾಲೂಕಿನ ಸಲ್ಲಕುದಲೂರು ಎಂಬ ಗ್ರಾಮದವರೆಗೆ ೧೮೭ ಕಿ.ಮೀ. ಉದ್ದವಾಗಿ. ಪೂರ್ವ ಪಶ್ಚಿಮವಾಗಿ ಬಳ್ಳಾರಿ ತಾಲೂಕಿನ ಕಾರೇಕಲ್ಲು ವೀರಾಪುರದಿಂದ

ಹಡಗಲಿ ತಾಲೂಕಿನ ಹಿರೇಬನ್ನಿ ಹಟ್ಟಿಯವರಿಗೆ ೧೬೧ ಕಿ.ಮೀ. ಅಗಲವಾಗಿ ಹರಡಿಕೊಂಡಿದೆ. ಈ ಜಿಲ್ಲೆಯು ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಬಹುದೊಡ್ಡ ಜಿಲ್ಲೆಯಾಗಿತ್ತು.೧ ೧೯೫೩ಕ್ಕೆ ಮೊದಲು ಜಿಲ್ಲೆಯು ೧೨ ತಾಲೂಕುಗಳನ್ನು ಹೊಂದಿತ್ತು. ಅವುಗಳಲ್ಲಿ ಬಳ್ಳಾರಿ, ಸಿರಗುಪ್ಪ, ಸಂಡೂರು, ಹೊಸಪೇಟೆ, ಹರಪನಹಳ್ಳಿ, ಹೂವಿನ ಹಡಗಲಿ, ಕೂಡ್ಲಿಗಿ, ಮಲ್ಲಾಪುರ ಮತ್ತು ಈಗಿನ ಆಂದ್ರಪ್ರದೇಶದ ಆಲೂರು, ಆದೋನಿ, ರಾಯದುರ್ಗ ತಾಲೂಕುಗಳನ್ನು ಹೊಂದಿತ್ತು. ೧೯೫೬ರ ರಾಜ್ಯ ಪುನರ್‌ವಿಂಗಡಣೆ ಸಂದರ್ಭದಲ್ಲಿ ಪ್ರಾಂತ್ಯವಾಗಿ ಪ್ರತ್ಯೇಕಗೊಂಡಾಗ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆಲೂರು, ಆದೋನಿ ಮತ್ತು ರಾಯದುರ್ಗ ತಾಲೂಕುಗಳು ಆಂಧ್ರಪ್ರದೇಶ ರಾಜ್ಯಕ್ಕೆ ಸೇರಿಸಲಾಯಿತು. ಕರ್ನಾಟಕದಲ್ಲಿ ೧೯೯೭ರಲ್ಲಿ ಹೊಸ ಜಿಲ್ಲೆಗಳ ರಚನೆಯ ಸಂದರ್ಭದಲ್ಲಿ ಜಿಲ್ಲೆಗೆ ಸೇರಿದ್ದ ಮತ್ತೊಂದು ತಾಲೂಕು ಹರಪನಹಳ್ಳಿಯನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಹಾಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆಯು ೭ ತಾಲೂಕುಗಳನ್ನು ಹೊಂದಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೮೪೫೦ ಚ.ಕಿ.ಮೀ. ಇದ್ದು, ರಾಜ್ಯದ ವಿಸ್ತೀರ್ಣದಲ್ಲಿ ಶೇ. ೪.೪೦ರಷ್ಟು ಪಾಲನ್ನು ಹೊಂದಿದೆ. ಇದು ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ೮ನೇ ಸ್ಥಾನದಲ್ಲಿದೆ.೨ ಜಿಲ್ಲೆಯ ಉತ್ತರಕ್ಕೆ ಕೊಪ್ಪಳ, ದಕ್ಷಿಣಕ್ಕೆ ಚಿತ್ರದುರ್ಗ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶ ರಾಜ್ಯವಿದೆ. ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲವಾಗಿದೆ. ಜಿಲ್ಲೆಯು ಹವಾಮಾನ ದೃಷ್ಟಿಯಿಂದ ಅತಿ ಉಷ್ಣವಲಯವಾಗಿದೆ. ಮಳೆಯ ಪ್ರಮಾಣವು ತೀರಾ ಕಡಿಮೆ, ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ, ಈ ಭಾಗದಲ್ಲಿ ತುಂಗಭದ್ರಾ ನದಿ ಇರುವುದರಿಂದ ಪೂರ್ವ ತಾಲೂಕುಗಳಿಗೆ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ನದಿಯು ಜಿಲ್ಲೆಯಲ್ಲಿ ೩೨೦ ಕಿ.ಮೀ.ನಷ್ಟು ದೂರ ಹರಿಯುತ್ತದೆ.೩ ನೀರಾವರಿ ಕೃಷಿ ಅಭಿವೃದ್ಧಿಗೆ ಈ ನದಿಯು ಬೆನ್ನೆಲುಬಾಗಿದೆ. ಈ ನದಿಯನ್ನು ಬಿಟ್ಟರೆ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕೆಲವು ಸಣ್ಣ ಪುಟ್ಟ ಜಲಾಶಯ, ಕೆರೆ ಮತ್ತು ಕಟ್ಟೆಗಳಿವೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೬.೨೫.೯೪೪ ಇದ್ದು ರಾಜ್ಯದ ಜನಸಂಖ್ಯೆಯಲ್ಲಿ ಶೇ. ೨೭.೪೩ರಷ್ಟು ಪ್ರಮಾಣವನ್ನು ಹೊಂದಿದೆ. ಜನಸಂಖ್ಯೆಯಲ್ಲಿ ರಾಜ್ಯದ ಆರನೆಯ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆಯು ೩,೦೮,೭೨೮(೪೯.೩೫%)ರಷ್ಟು ಹೊಂದಿರುವುದನ್ನು ಕಾಣಬಹುದಾಗಿದೆ.[೪](**ಕೊಷ್ಟಕ–೨.೧ ನೋಡಿ**)

೨.೨. ಜಿಲ್ಲೆಯ ಆಡಳಿತ ಮತ್ತು ಆರ್ಥಿಕ ವ್ಯವಸ್ಥೆ

ಜಿಲ್ಲೆಯ ಆಡಳಿತ

ಜಿಲ್ಲೆಯ ಆಡಳಿತ ಕೇಂದ್ರ ಸ್ಥಳವು ಬಳ್ಳಾರಿಯಾಗಿದೆ. ಏಳು ತಾಲ್ಲೂಕುಗಳಿರುವ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕು ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಒಟ್ಟು ಎರಡು ನಗರ ಸಭೆಗಳು, ಕಂಪ್ಲಿಯಲ್ಲಿ ಏಕೈಕ ಪುರಸಭೆ, ಸಿರುಗುಪ್ಪ, ತೆಕ್ಕಲಕೋಟೆ, ಸಂಡೂರು, ಕೂಡ್ಲಿಗಿ. ಕೊಟ್ಟೂರು, ಹಡಗಲಿ ಮತ್ತು ಕಮಲಾಪುರಗಳಲ್ಲಿ ಒಂದರಂತೆ ಏಳು ಪಟ್ಟಣ ಪಂಚಾಯತಿಗಳು ಇವೆ. ಜಿಲ್ಲೆಯ ಒಟ್ಟು ೫೪೨ ಗ್ರಾಮಗಳಲ್ಲಿ ೫೧೨ ಜನವಸತಿ ಗ್ರಾಮಗಳಿದ್ದು ಉಳಿದ ೨೫ ಗ್ರಾಮಗಳಲ್ಲಿ ಜನವಸತಿ ಇಲ್ಲ.

ಜಿಲ್ಲೆಯ ಆರ್ಥಿಕ ವ್ಯವಸ್ಥೆ

ಬಳ್ಳಾರಿ ಅಕ್ಷರಶಃ ಬಡಜನರಿಂದ ಕೂಡಿದ ಶ್ರೀಮಂತ ಜಿಲ್ಲೆಯಾಗಿದೆ. ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಶೇಕಡಾ ೭೦ರಷ್ಟು ಜನ ವಂಶಪಾರಂಪರ್ಯದಿಂದಲೂ ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳನ್ನೇ ಪ್ರಧಾನವಾಗಿ ಅವಲಂಬಿಸಿದ್ದಾರೆ. ತುಂಗಭದ್ರಾ ನದಿಯನ್ನು ಹೊರತುಪಡಿಸಿದಂತೆ ಹೆಚ್ಚಾಗಿ ಮಳೆಯನ್ನೇ ನಂಬಿರುವ ಜಿಲ್ಲೆಯ ಕೃಷಿ ಕ್ಷೇತ್ರವು ಅನಿಶ್ಚಿತವಾಗಿರುವದರಿಂದ, ಉದ್ಯೋಗ ಮತ್ತು ಆದಾಯಗಳು ಏರುಪೇರಿನಿಂದ ಕೂಡಿರುತ್ತವೆ. ಜಿಲ್ಲೆಯ ಏಕೈಕ ದೊಡ್ಡ ಕೈಗಾರಿಕೆಯಾದ ಜಿಂದಾಲ್ ಮತ್ತು ಸಣ್ಣ-ಪುಟ್ಟ ಕೈಗಾರಿಕೆಗಳಂತೂ ಸಧ್ಯದ ಮಟ್ಟಿಗೆ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ನಲುಗಾಡುತ್ತಿವೆ. ಅಲ್ಲದೆ ಆಧುನೀಕರಣದ ಪ್ರಭಾವದಿಂದ ಗೃಹ ಕೈಗಾರಿಕೆಗಳು ಮತ್ತು ಗ್ರಾಮೀಣ ಕುಶಲಕರ್ಮಿಗಳು ಭಾರಿ ದುರ್ಬಲತೆ ಹೊಂದಿವೆ ಎನ್ನಬಹುದು. ಅಭಿವೃದ್ಧಿಗೆ ಪೂರಕವಾದ ಮಾನವ ಶ್ರಮ, ಶಕ್ತಿ ಮತ್ತು ಬಂಡವಾಳಗಳ ವಿನಿಯೋಗಗಳು ಏರುಪೇರಿನಿಂದ ಕೂಡಿದ್ದರೂ ಕಡೆಗಣಿಸುವಂತೆ ಇರುವದಿಲ್ಲ. ಒಟ್ಟಿನಲ್ಲಿ ಜಿಲ್ಲೆಯ ಕೃಷಿ, ಕೈಗಾರಿಕೆ, ಸಾರಿಗೆ-ಸಂಪರ್ಕ ಮತ್ತು ಇತರೆ ಸೇವಾ ಕ್ಷೇತ್ರಗಳ ಸ್ಥಿತಿ ಉತ್ತಮವಾಗಿಲ್ಲ. ವಿಪರಿತ ಬೆಲೆ ಏರಿಕೆಯ ಬಿಸಿಯಿಂದಾಗಿ ಜಿಲ್ಲೆಯ ಜನಜೀವನ ಮಟ್ಟವು ಸುಧಾರಣೆಯಾಗದೆ ಸ್ಥಿರವಾಗಿದ್ದು, ಕೇವಲ ಕೆಲವೇ ಜನರ ಅಧೀನವಾಗಿರುವ ಸಂಪತ್ತು ಜನಸಾಮಾನ್ಯರಿಗೆ ದೊರಕದಂತಾಗಿದೆ. ರಾಜ್ಯದ ಒಟ್ಟು ಆದಾಯದಲ್ಲಿ ಜಿಲ್ಲೆಯ ಆದಾಯ ರಾಜ್ಯದ ಒಟ್ಟು ಆದಾಯದ ೩.೬೫ ರಷ್ಟು ಪಾಲನ್ನು ನೀಡುವ ಜಿಲ್ಲೆಗೆ ರಾಜ್ಯದಲ್ಲಿ ೧೪ನೇ ಸ್ಥಾನವಿದೆ. ಅದೆ ರೀತಿಯಾಗಿ ಜಿಲ್ಲೆಯ ತಲಾ ಆದಾಯವು ೧೮೧೪೫ ರೂಪಾಯಿಗಳಾಗಿರುತ್ತದೆ. (ಬಳ್ಳಾರಿ ಜಿಲ್ಲೆಯ ಅಂಕಿ ಅಂಶಗಳ ನೋಟ).

೨.೩. ಜಿಲ್ಲೆಯ ಸಾಮಾಜಿಕ ಮತ್ತು ರಾಜಕೀಯ ವಿವರಗಳು

ಸಾಮಾಜಿಕವಾಗಿ ಜಿಲ್ಲೆಯನ್ನು ನೋಡುವುದಾದರೆ, ಜಿಲ್ಲೆಯು ವಿವಿಧ ಜಾತಿ ವರ್ಗಗಳನ್ನು ಹೊಂದಿದೆ. ಇವುಗಳಲ್ಲಿ ಮುಖ್ಯವಾಗಿ ಲಿಂಗಾಯತ, ಕುರುಬ, ಮುಸ್ಲಿಂ, ವಾಲ್ಮೀಕಿ ಮತ್ತು ಮಾದಿಗ ಜನಾಂಗಗಳನ್ನು ಹೊಂದಿದೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೩,೭೩,೦೩೪(೧೮.೭೪%) ಕುಟುಂಬಗಳಿವೆ. ರಾಜ್ಯದ ಒಟ್ಟು ಕುಟುಂಬಗಳಲ್ಲಿ ಜಿಲ್ಲೆಯ ಪಾಲು ಶೇ. ೧೮.೭೪ ರಷ್ಟಿದೆ. ೨೦೧೧ರ ಜನಗಣತಿಯ ಅನ್ವಯ ಜಿಲ್ಲೆಯ ಸಾಕ್ಷರರ ಸಂಖ್ಯೆ ೩,೧೮,೦೩೯(೧೦೦%)ರಷ್ಟಿದೆ. ಹೀಗಾಗಿ ಸಾಕ್ಷರತೆಯಲ್ಲಿ ಹಿಂದುಳಿದಿರುವ ಜಿಲ್ಲೆಗಳಲ್ಲಿ ಕೂಡ್ಲಿಗಿಯ ಮತ್ತು ಹಗರಿಬೊಮ್ಮನಹಳ್ಳಿ ಗ್ರಾಮಗಳು ಅಲ್ಲದೇ ಬಳ್ಳಾರಿಯ ಗ್ರಾಮಗಳು ಒಂದಾಗಿದೆ. ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಜಿಲ್ಲೆಯಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಮತ್ತು ನಿರಂತರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಸಾಕ್ಷರತೆಗಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿರುವುದನ್ನು ನೋಡಬಹುದಾಗಿದೆ. ಯಾವುದೇ ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಆರ್ಥಿಕ ಚಟುವಟಿಕೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿನ ಖನಿಜ ಸಂಪತ್ತು ಔದ್ಯೋಗಿಕ ಪ್ರಗತಿಗೆ ಬೆನ್ನೆಲುಬಾಗಿದೆ. ಜಿಲ್ಲೆಯು ಉತ್ಕೃಷ್ಟ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳಿಗೆ ವಿಶ್ವ ವಿಖ್ಯಾತಿ ಗಳಿಸಿದೆ. ಕಬ್ಬಿಣ ನಿಕ್ಷೇಪದ ಪ್ರಮಾಣ ೧೦೩೨.೪೦ ದಶಲಕ್ಷ ಟನ್ ಲಭ್ಯವಿದ್ದು, ಮ್ಯಾಂಗನೀಸ್ ಅದಿರಿನ ನಿಕ್ಷೇಪದ ಪ್ರಮಾಣ ೧೮.೮೧ ದಶಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ. ೧೯೯೧ರ ಮಧ್ಯ ಭಾಗದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಖಾಸಗೀಕರಣ ಪ್ರಕ್ರಿಯೆಯ ಪರಿಣಾಮವಾಗಿ ಜಿಲ್ಲೆಯಲ್ಲಿ ಬೃಹತ್ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆ ಮೇಲೆ ಬಂಡವಾಳ ತೊಡಗಿಸಿವೆ. ಜಿಲ್ಲೆಯಲ್ಲಿ ಪ್ರಸ್ತುತ ನಾಲ್ಕು ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳು ಉತ್ಪಾದನೆಯಲ್ಲಿ ತೊಡಗಿವೆ.೫ ಹೀಗಾಗಿ ರಾಷ್ಟ್ರದ ಉಕ್ಕು ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಜಿಲ್ಲೆಯಲ್ಲಿ ಜರುಗುತ್ತಿರುವ ಈ ಕೈಗಾರೀಕರಣ ಪ್ರಕ್ರಿಯೆಯು ಜಿಲ್ಲೆಯು ಕೆಲವೇ ಭಾಗಗಳಲ್ಲಿ ನೆಲೆಗೊಂಡಿದೆ. ಜಿಲ್ಲೆಯಲ್ಲಿ ದುಡಿಮೆದವರು ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ೬೩,೯೯೧(೭೩%)ರಷ್ಟು ಕೃಷಿಯನ್ನು ಅವಲಂಬಿಸಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದರೆ ಶೇ. ೧೦ರಷ್ಟು ಕೃಷಿ ಅವಲಂಬಿತ ಸಂಖ್ಯೆ ಹೆಚ್ಚಿದೆ. ವಲಯವಾರು ದುಡಿಮೆ ವರ್ಗವನ್ನು ನೋಡಿದಾಗ ಪ್ರಾಥಮಿಕ ವಲಯ ೩.೭೭.೮೫೫(೭೬.೧೮%) ರಷ್ಟು, ದ್ವಿತೀಯ ವಲಯ ೩೧.೪೨.೨೫೩(೭.೧) ರಷ್ಟು ಮತ್ತು ತೃತೀಯ ವಲಯ ೩.೭೭.೮೫೫(೧೬.೦೯%)ರಷ್ಟಿದೆ. ಈ ಪ್ರಮಾಣವು ರಾಜ್ಯಕ್ಕೆ ಹೋಲಿಸಿದರೆ ಕ್ರಮವಾಗಿ ೧೩. ೧೬ ಮತ್ತು ೧೨ನೇ ಸ್ಥಾನವನ್ನು ಪಡೆದಿವೆ. ರಾಜ್ಯದ ದುಡಿಮೆಗಾರ ವರ್ಗಕ್ಕೆ ಹೋಲಿಸಿದರೆ ಪ್ರಾಥಮಿಕ ವಲಯದಲ್ಲಿ ಶೇ.

೯ರಷ್ಟು ಹೆಚ್ಚು ದ್ವಿತೀಯ ವಲಯ ಶೇ. ೫.೭ರಷ್ಟು ಮತ್ತು ತೃತೀಯ ವಲಯದಲ್ಲಿ ಶೇ. ೨.೫ರಷ್ಟು ಕಡಿಮೆ ಇರುವುದನ್ನು ಗಮನಿಸಬಹುದು.೬ ಜಿಲ್ಲೆಯ ಒಟ್ಟು ಶ್ರಮಶಕ್ತಿಯ ವಲಯವಾರು ವಿತರಣೆ ಮತ್ತು ಆ ವಿತರಣೆಯಲ್ಲಿ ೧೯೮೧ರಿಂದ ೧೯೯೧ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿ ದೃಷ್ಟಿಯಿಂದ ಅನುಕೂಲಕರವಾಗಿಲ್ಲ. ಪ್ರಾಥಮಿಕ ವಲಯ ಅಂದರೆ ಕೃಷಿ, ಗಣಿಗಾರಿಕೆ ಮತ್ತು ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿಕೊಂಡಿರುವ ಜನರ ಪ್ರಮಾಣ ಶೇ. ೮೭.೦೧ರಿಂದ ಶೇ. ೮೭.೮೭ಕ್ಕೆ ಏರಿದೆ. ಇದನ್ನು ಅಭಿವೃದ್ಧಿಯ ಮುಖ್ಯ ಸಾಧನವಾದ ಶಿಕ್ಷಣದ ಪ್ರಮುಖ ಚಲನೆ ಎಂದು ಹೇಳಲಾಗಿದೆ. ಇದೇ ಸಮಯದಲ್ಲಿ ಅಂದರೆ ಕೈಗಾರಿಕೆ, ಯಂತ್ರೋದ್ಯಮ ಇತ್ಯಾದಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣವು ಶೇ. ೭.೧೧ರಿಂದ ಶೇ. ೪.೮೬ಕ್ಕೆ ಇಳಿದಿದೆ. ಅತ್ಯಂತ ಆತಂಕಕಾರಿ ಸಂಗತಿಯೆಂದರೆ ಗಣಿಗಾರಿಕೆ ಬಳ್ಳಾರಿ ಜಿಲ್ಲೆಯ ಮುಖ್ಯ ಕಸುಬು. ಆದರೆ ಈ ವೃತ್ತಿಯನ್ನು ಅವಲಂಬಿಸಿಕೊಂಡಿರುವ ಶ್ರಮಶಕ್ತಿಯ ಪ್ರಮಾಣ ಇದೇ ಅವಧಿಯಲ್ಲಿ ಶೇ. ೨.೪೪ರಿಂದ ಶೇ. ೧.೬೮ಕ್ಕೆ ಇಳಿದಿದೆ. ೧೯೮೧–೧೯೯೧ರ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ದ್ವಿತೀಯ ವಲಯ ಬೆಳೆದಿದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಶ್ರಮಶಕ್ತಿಯನ್ನು ತೊಡಗಿಸಿಕೊಂಡಿಲ್ಲ.೭ ಈ ಎಲ್ಲ ಅಂಕಿ–ಅಂಶಗಳು ಜಿಲ್ಲೆಯು ಹಿಂದುಳಿದಿರುವುದನ್ನು ಸೂಚಿಸುವುದು. ಯಾವ ಪ್ರದೇಶ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಅ ಪ್ರದೇಶವನ್ನು ಹಿಂದುಳಿದಿರುವ ಪ್ರದೇಶ ಎಂದು ಗ್ರಹಿಸಲಾಗಿದೆ. ಅಭಿವೃದ್ಧಿ ದೃಷ್ಟಿಯಿಂದ ದ್ವಿತೀಯ ಮತ್ತು ತೃತೀಯ ವಲಯದಲ್ಲಿ ಹೆಚ್ಚು ಅವಲಂಬಿತವಾಗಿದ್ದರೆ ಉತ್ತಮ ಬೆಳವಣಿಗೆ ಎಂದು ಹೇಳಬಹುದು. ಹೀಗೆ ಬಳ್ಳಾರಿ ಜಿಲ್ಲೆಯು ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಒಂದಾಗಿದೆ. ಜಿಲ್ಲೆಯ ಕೃಷಿಗೆ ತುಂಗಭದ್ರಾ ನದಿಯು ಪ್ರಮುಖವಾದ ನೀರಾವರಿಯ ಮೂಲವಾಗಿದೆ. ಈ ನದಿಯು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಮೇರೆಯಾಗಿದೆ. ಈ ನದಿಯಿಂದ ಇಡೀ ಜಿಲ್ಲೆಯು ನೀರಾವರಿ ಸಮಸ್ಯೆಗೆ ಪರಿಹಾರವಾಗಿಲ್ಲ. ಜಿಲ್ಲೆಯ ಕೆಲವೇ ತಾಲೂಕುಗಳಿಗೆ ನೀರಾವರಿ ದೊರಕಿದೆ. ಇದು ಜಿಲ್ಲೆಯ ಪೂರ್ವ ತಾಲ್ಲೂಕುಗಳಿಗೆ ಮಾತ್ರ ಸೀಮಿತವಾಗಿದೆ. ಈ ತಾಲೂಕುಗಳು ಕೃಷಿಯಿಂದ ಅಭಿವೃದ್ಧಿಯ ಪಥದಲ್ಲಿವೆ. ಪಶ್ಚಿಮ ಭಾಗದ ತಾಲೂಕುಗಳು ಪೂರ್ತಿ ಒಣಭೂಮಿ ಕೃಷಿಯನ್ನು ಅವಲಂಬಿಸಿವೆ. ಆರ್ಥಿಕವಾಗಿ ಜಿಲ್ಲೆಯ ವರಮಾನವು ೧೯೯೫–೯೬ರ ಅವಧಿಯಲ್ಲಿ ಶೇ. ೮,೫೪೪ ರೂ.ಗಳನ್ನು ರಾಜ್ಯದ ಸರಾಸರಿಗಿಂತ ರೂ. ೮೪೦ ಕಡಿಮೆ ಇದೆ. ಅಂತೆಯೇ, ವರಮಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ೮ನೇ ಸ್ಥಾನವನ್ನು ಹೊಂದಿರುವುದು ಹಲವು ಅಧ್ಯಯನಗಳಿಂದ ಕಂಡು ಬಂದಿದೆ. ಮುಂದುವರಿದು, ರಾಜ್ಯ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನಮಾನವಿದೆ. ಸ್ವಾತಂತ್ರ್ಯ ನಂತರ ನಡೆದ ಎಲ್ಲಾ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುತ್ತಾ ಬಂದಿದೆ. ಇದೊಂದು

ಐತಿಹಾಸಿಕ ದಾಖಲೆಯಾಗಿದೆ. ಜಿಲ್ಲೆಯು ಒಟ್ಟು ೮ ವಿಧಾನಸಭಾ ಕ್ಷೇತ್ರಗಳನ್ನು, ಒಂದು ಲೋಕಸಭಾ ಕ್ಷೇತ್ರವನ್ನು ಹೊಂದಿದೆ. ಜಿಲ್ಲೆಯ ಹೊಸಪೇಟೆ ತಾಲೂಕು ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಜಿಲ್ಲೆಯನ್ನು ಆಡಳಿತಾತ್ಮಕವಾಗಿ ೨ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಬಳ್ಳಾರಿ, ಇನ್ನೊಂದು ಹೊಸಪೇಟೆಯಾಗಿದೆ. ಬಳ್ಳಾರಿ ವಿಭಾಗವು ಮೂರು ತಾಲ್ಲೂಕುಗಳನ್ನು ಮತ್ತು ಹೊಸಪೇಟೆ ವಿಭಾಗವು ೪ ತಾಲೂಕುಗಳನ್ನು ಹೊಂದಿದೆ. ಜಿಲ್ಲೆಯಲ್ಲಿರುವ ಇಂತಹ ಹಲವಾರು ವಿದ್ಯಮಾನಗಳನ್ನ ನೋಡಿದಾಗ ಜಿಲ್ಲೆಯ **ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್ ಈ ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನ ನೋಡುವ ಇಚ್ಛೆಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.**

ಪ್ರಸ್ತುತ ಅಧ್ಯಯನವು ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶಗಳ ಬಗ್ಗೆ ಕೈಗೊಂಡಿರುವುದರಿಂದ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಜಿಲ್ಲೆಯಲ್ಲಿ ಸ್ವಾತಂತ್ರ್ಯ ನಂತರ ಗ್ರಾಮೀಣ ಪ್ರಾಥಮಿಕ ಶಾಲೆಗಳ ಶಿಕ್ಷಕರ ಪ್ರಮಾಣವನ್ನ ನೋಡಿದಾಗ ಜನಸಂಖ್ಯೆಯು ಕಡಿಮೆಯಾಗಿದ್ದು ಶಾಲೆಗಳಿಗೆ ಸೌಲಭ್ಯಗಳ ಪ್ರಮಾಣವು ಕಡಿಮೆಯಾಗಿರುವುದನ್ನ ಹಲವು ಅಧ್ಯಯನಗಳ ಮೂಲಕ ತಿಳಿಯಲಾಗಿದೆ. ಮಕ್ಕಳ ಪ್ರಮಾಣ ಹೆಚ್ಚಾಗಿದ್ದು ಶಿಕ್ಷಕರ ಪ್ರಮಾಣವು ಕಡಿಮೆಯ ಪ್ರವೃತ್ತಿಯನ್ನ ನಾವು ನೋಡಲಾಗುತ್ತಿತ್ತು ಆದರೆ, ಈಗಾಲೂ ಸಹ ಅಂತಹ ಒಂದು ವಿದ್ಯಮಾನವನ್ನ ಸಹ ನೋಡಲಾಗುತ್ತದೆ. ಆದರೂ ೩೨ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನಂತೆ ನೇಮಿಸುವಂತಹ ಕೆಲಸ ನಡೆಯುತ್ತದೆ. ಅಂತಹ ಶಿಕ್ಷಕರನ್ನ ವಿವಿಧ ಪರೀಕ್ಷಾಗಳ ಮೂಲಕ ಆಯ್ಕೆಯನ್ನ ಮಾಡಲಾಗುತ್ತಿದೆ. ಆಯ್ಕೆಯಾದ ಶಿಕ್ಷಕರಲ್ಲಿ ಲಿಂಗವಾರು ನೋಡಿದಾಗ ಪುರುಷ ಮತ್ತು ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯವನ್ನ ನೀಡುತ್ತಾ ಬರಲಾಗುತ್ತಿದೆ. ಮತ್ತು ಜಾತಿಯ ಲೆಕ್ಕವನ್ನ ಹಾಕಿದಾಗ ಆಯಾಯ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರದ ಅಡಿಯಲ್ಲಿ ಮೀಸಲಾತಿಯನ್ನ ನೀಡುತಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗದಡಿಯಲ್ಲಿ ಆಯ್ಕೆಯನ್ನ ಮಾಡಲಾಗುತ್ತಿದೆ. ಮುಂದುವರಿದು, ಆಯ್ಕೆಯಾದ ಶಿಕ್ಷಕರಿಗೆ ಕೆಲವು ಕಾರ್ಯಗಳನ್ನು ವಹಿಸಲಾಗಿತ್ತು. ಶಾಲೆಗೆ ನೇಮಿಸುವ ಮೊದಲೇ ಅವರಿಗೆ ಶಿಕ್ಷಣದ ಬಗ್ಗೆ ತರಬೇತಿಯನ್ನ ನೀಡುವಂತಹದ್ದು ಅದರಲ್ಲಿ ಮಕ್ಕಳ ಕಲಿಕೆಗಾಗಿ ಯಾವೆಲ್ಲಾ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳುವುದು ಎನ್ನುವಂತಹ ಹಲವಾರು ವಿಷಯಗಳನ್ನ ಪರಿಗಣಿಸಲಾಗುತ್ತದೆ. ಪ್ರಾಥಮಿಕ ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿರುವುದರಿಂದ ಅಲ್ಲಿಯ ಮಕ್ಕಳು ವಯಸ್ಸಿನಲ್ಲಿ ಚಿಕ್ಕವರಾಗಿದ್ದರಿಂದ ಶಿಕ್ಷಣದ ಪ್ರಮಾಣ ಸೀಮಿತವಾಗಿರುತ್ತದೆ ಎನ್ನಲಾಗಿದೆ. ಆದರೂ ಶಿಕ್ಷಣವು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯ ಸಂಕೇತವಾಗಿರುವುದರ ಸಲುವಾಗಿ ಗ್ರಾಮೀಣ ಶಾಲೆಗಳ ಬಗ್ಗೆ ಅಧ್ಯಯನ ಪ್ರೇರಣೆಯಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು ಅದರಲ್ಲಿ ಐದು ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗಳನ್ನ ಆಯ್ಕೆ ಮಾಡಿಕೊಂಡಿದ್ದೇನೆ. ಹೀಗೆ ಬಳ್ಳಾರಿ ಜಿಲ್ಲೆಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿವರಗಳನ್ನು ನೋಡಿದಾಗ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಜಿಲ್ಲೆಯು ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಜಿಲ್ಲೆಯಲ್ಲಿಯೂ ಸಹ ಪ್ರಾಥಮಿಕ ಶಾಲೆಗಳ ವ್ಯವಸ್ಥೆಯು ಕೆಳಸ್ತರವಾಗಿರುವುದರಿಂದ ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶಗಳನ್ನ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಜಿಲ್ಲೆಯಲ್ಲಿ ತಾಲೂಕುಗಳ ಮತ್ತು ಅಧ್ಯಯನಕ್ಕೊಳಗಾದ ಸ್ಥಳೀಯ ಸಂಸ್ಥೆಗಳ ವಿವರಣೆ ಮತ್ತು ಆಯ್ಕೆ ಮಾದರಿಯನ್ನು ಕುರಿತು ಮುಂದೆ ಚರ್ಚಿಸಲಾಗಿದೆ

೨.೪. ಅಧ್ಯಯನ ವ್ಯಾಪ್ತಿಯ ಗ್ರಾಮಗಳ ವಿವರಣೆ ಮತ್ತು ಆಯ್ಕೆ

ಮೇಲಿನ ಅಂಶಗಳನ್ನ ಪರಿಗಣಿಸುತ್ತಾ ಜಿಲ್ಲೆಯ ಗ್ರಾಮಗಳನ್ನು ಭೌಗೋಳಿಕ, ಪ್ರಾದೇಶಿಕ, ಆರ್ಥಿಕ ಮತ್ತು ಸಾಮಾಜಿಕ ಅಂಕಿಅಂಶಗಳ ಮೂಲಕ **ಬಲಕುಂದಿ, ತಾಳೂರು, ಮತ್ತು ರಾವಿಹಾಳ್** ನೀರಾವರಿ ಪ್ರದೇಶ ಹೊಂದಿದ ಅಭಿವೃದ್ಧಿ ಗ್ರಾಮೀಣ ಪ್ರದೇಶಗಳು ಮತ್ತು **ರಾರಾವಿ, ಅಚ್ಚಳ್ಳಿ** ಒಣಭೂಮಿ ಪ್ರದೇಶ ಹೊಂದಿದ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳನ್ನ ಪರಿಗಣಿಸಿ ಅಧ್ಯಯನಕ್ಕೆ ಐದು ಗ್ರಾಮೀಣ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ವಿವರಣೆಯನ್ನು ಕೆಳಗೆ ವಿವರಿಸಲಾಗಿದೆ.

೨.೫. ಗ್ರಾಮೀಣ ಪ್ರದೇಶಗಳ ವಿವರ

ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಜಿಲ್ಲೆಯಲ್ಲಿ ಹೆಚ್ಚು ನೀರಾವರಿ ಪ್ರದೇಶವನ್ನು ಹೊಂದಿದ್ದು. ಕೆಲವು ಗ್ರಾಮೀಣ ಪ್ರದೇಶಗಳು ನೀರಾವರಿ ಪ್ರದೇಶಗಳಿಂದ ಕೂಡಿದ್ದು, ಈ ಭಾಗದಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳು ಅಧಿಕವಾಗಿದೆ. ಇದರಿಂದ ಜಿಲ್ಲೆಯ ಮಾರುಕಟ್ಟೆ ವ್ಯವಹಾರವನ್ನು ಹೆಚ್ಚಿಸಿದೆ. ಜಿಲ್ಲೆಯಲ್ಲಿ ನೀರಾವರಿ ಪ್ರದೇಶ ಕೆಲವೇ ಪ್ರದೇಶಕ್ಕೆ ಸೀಮಿತವಾಗಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಜಿಲ್ಲೆಯ ತುಂಗಭದ್ರಾ ನದಿ ನೀರಾವರಿಯ ಪ್ರಮುಖ ಮೂಲವಾಗಿದೆ. ಈ ನದಿಯಿಂದ ಈಶಾನ್ಯದಲ್ಲಿ ಸಿರುಗುಪ್ಪ, ಪೂರ್ವದಲ್ಲಿ ಬಳ್ಳಾರಿ, ದಕ್ಷಿಣದಲ್ಲಿ ಸಂಡೂರು, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ, ಗಂಗಾವತಿ ತಾಲೂಕುಗಳನ್ನು ಸುತ್ತುವರಿದಿದೆ. ಹೊಸಪೇಟೆ ಉಪವಿಭಾಗವು ನಾಲ್ಕು ತಾಲೂಕುಗಳನ್ನು ಹೊಂದಿದೆ. ತಾಲೂಕು ಒಟ್ಟು ೭೮(೧,೫೩,೪೯೧) ಗ್ರಾಮಗಳನ್ನು ಹೊಂದಿದೆ. ಇದಲ್ಲದೇ, ತಾಲೂಕಿನಲ್ಲಿ ಹೋಬಳಿ ಮತ್ತು ಪಂಚಾಯಿತಿಗಳನ್ನ ಸಹ ನೋಡಲಾಗುತ್ತದೆ. ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಮತ್ತು ಹಿಂದುಳಿದ

ಪ್ರದೇಶಗಳನ್ನಲಾಗಿದೆ. ಮುಂದುವರಿದು ಕೃಷಿ ಗ್ರಾಮೀಣ ಪ್ರದೇಶಗಳು ಪ್ರಗತಿಪಥದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ನೋಡಲಾಗುತ್ತದೆ.

ತಾಳೂರು : ಗ್ರಾಮದಲ್ಲಿ ಒಟ್ಟು ೩೯೭೦ ಜನಸಂಖ್ಯೆ ಇದ್ದು, ಅದರಲ್ಲಿ ೧೧೫೦ ಕುಟುಂಬಗಳಿರುವುದನ್ನ ನೋಡಲಾಗಿದೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಮುಸ್ಲಿಂ, ಲಿಂಗಾಯತ ಮತ್ತು ಕುರುಬ ಜನಾಂಗದ ಜನರು ವಾಸವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೬೦ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಶೇಕಡಾ ೩೦ರಷ್ಟು ಲಿಂಗಾಯತ ಮತ್ತು ಕುರುಬ ಜನಾಂಗಕ್ಕೆ ಸೇರಿದ್ದಾರೆ. ಶೇಕಡಾ ೧೦ರಷ್ಟು ಮುಸ್ಲಿಂರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು. ೭೮೦ಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳಿದ್ದು, ೬೫ ಕ್ಕೂ ಹೆಚ್ಚು ಅಂತ್ಯೋದಯ ಕಾರ್ಡುಗಳಿವೆ. ೭೦ ಎಪಿಎಲ್ ಕಾರ್ಡುಗಳಿವೆ. ೨ ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವಿದೆ. ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಸಣ್ಣ ರೈತರಿದ್ದಾರೆ. ಅಲ್ಲದೇ, ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಜನರು ಕೃಷಿ ಕಾರ್ಮಿಕರಿದ್ದು, ಭೂ ರಹಿತ ಕಾರ್ಮಿಕರು ಇದ್ದಾರೆ. ಕುರುಬರು, ಪರಿಶಿಷ್ಟ ಪಂಗಡಕ್ಕೆ ಭೂ ರಹಿತ ಕಾರ್ಮಿಕರು ಸೇರಿದ್ದಾರೆ. ಬೇಸಿಗೆಗಾಲ ಬಂದಿತು ಎಂದರೆ ಹೊಟ್ಟೆಪಾಡಿಗೆಗಾಗಿ ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕೇಳಿದಾಗ ಬಂದ ಮಾಹಿತಿಯಿದು. ಹಾಗಾಗಿ ಗ್ರಾಮೀಣ ಜನರು ತಮ್ಮ ಮನೆಯನ್ನೆ ತೊರೆದು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಯಿತು. ಅಭಿವೃದ್ದಿಯ ಸೌಲಭ್ಯಗಳನ್ನ ಪಡೆದು ಅಭಿವೃದ್ಧಿ ಪ್ರಕ್ರಿಯೆ ಪಾಲ್ಗೊಳ್ಳುವ ಬದಲು ಈ ಪ್ರಕ್ರಿಯೆಯಿಂದ ಹೊರಗುಳಿದು ದಿಕ್ಕಿಲ್ಲದೆ ಬದುಕನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜನರು ಇನ್ನೂ ಶಿಕ್ಷಿತರಾಗಿ ತಮ್ಮ ಸಮಾಜದಲ್ಲಿ ಯೋಗ್ಯ ಬದುಕನ್ನು ಕಟ್ಟಿಕೊಳ್ಳಲು ಶಿಕ್ಷಣವನ್ನ ಪಡೆದಾಗ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನ ಹೇಳಲಾಗಿದೆ.

ರಾವಿಹಾಳ್ : ಈ ಗ್ರಾಮದಲ್ಲಿ ೧೮೯೦ ಜನಸಂಖ್ಯೆ ಇದೆ. ೪೫೦ ಕುಟುಂಬಗಳಿವೆ. ಗ್ರಾಮದಲ್ಲಿ ವಿವಿಧ ಜಾತಿಯ ಜನಗಳು ವಾಸಿಸುತ್ತಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ, ಲಿಂಗಾಯತರು, ಬಡಿಗೇರ ಮುಸ್ಲೀಮ್ ಸಮುದಾಯದವರಿದ್ದಾರೆ. ಇದರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಶೇಕಡಾ ೬೦ ರಷ್ಟಿದ್ದಾರೆ. ಶೇಕಡಾ ೩೦ ರಷ್ಟು ಜನಸಂಖ್ಯೆ ಇತರೇ ಸಮುದಾಯಗಳಿಗೆ ಸೇರಿದವರೂ ಇರುವುದನ್ನ ಕಾಣಲಾಗಿದೆ. ಹಾಗೆಯೇ, ಶೇಕಡಾ ೧೦ರಷ್ಟು ಪರಿಶಿಷ್ಟ ಜಾತಿಗೆ

ಸೇರಿದವರು ಇದ್ದರೆ, ಇನ್ನೂಳಿದ ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿದ್ದಾರೆ. ಪ್ರಾಥಮಿಕ ಶಾಲೆಯನ್ನ ಮಾತ್ರ ಹೊಂದಿದ್ದು, ಬಿಪಿಎಲ್ ಕಾರ್ಡುಗಳ ಜೊತೆಗೆ ಅಂತ್ಯೋದಯ ಕಾರ್ಡುಗಳನ್ನ ಹೊಂದಿರುವುದನ್ನ ಕೇಳಲಾಗಿದೆ. ಆರೋಗ್ಯ ಸೇವೆಗಳಿಗೆ ಇಲ್ಲಿಂದ ೫-೬ ಕಿಮೀ ಪಕ್ಕದ ಪಟ್ಟಣಕ್ಕೆ ಹೋಗುತ್ತಿರುವುದನ್ನ ಸಂದರ್ಶನದ ಸಮಯದಲ್ಲಿ ಕಾಣಲಾಗುತ್ತಿತ್ತು.

ಬಲಕುಂದಿ : ಬಲಕುಂದಿ ಗ್ರಾಮೀಣ ಪ್ರದೇಶವು ೧೬,೦೭೦ ಜನಸಂಖ್ಯೆ ಇದ್ದ ೫೦೨೦ ಸಾವಿರಕ್ಕೂ ಹೆಚ್ಚಿನ ಕುಟುಂಬಗಳಿವೆ. ಇಡೀ ಜಾಲಹಳ್ಳಿ ಪ್ರದೇಶ ನೀರಾವರಿಗೆ ಒಳಪಟ್ಟಿದ್ದು ನಿರಂತರ ಕೃಷಿ ಚಟುವಟಿಕೆಗಳು ನಡೆಯುತ್ತಿರುತ್ತವೆ. ಭತ್ತ, ಹತ್ತಿ, ಶೇಂಗಾ, ಸೂರ್ಯಕಾಂತಿ ಮತ್ತು ಕಬ್ಬು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಪರಿಶಿಷ್ಟ ಜಾತಿ, ಪಂಗಡ, ಕುರುಬರು, ಬ್ರಾಹ್ಮಣರು, ಲಿಂಗಾಯತರು ಪತ್ತಾರ್, ಕಬ್ಬೇರು, ವಡ್ಡರು, ಉಪ್ಪಾರರು, ಇತ್ಯಾದಿ ಸಮುದಾಯಗಳ ಜನರು ವಾಸಿಸುತ್ತಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೫೦ ರಷ್ಟು ಪರಿಶಿಷ್ಟ ಜನಾಂಗದವರಿದ್ದಾರೆ. ಶೇಕಡಾ ೨೦% ರಷ್ಠು ಲಿಂಗಾಯತರು, ಶೇಕಡಾ ೧೫ರಷ್ಟು ಮುಸ್ಲಿಂರು, ಶೇಕಡಾ ೧೫ರಷ್ಟು ಪರಿಶಿಷ್ಟ ಜಾತಿಯವರು ಶೇಕಡಾ ೧೦ರಷ್ಟು ಇತರೇ ಸಮುದಾಯವರಿದ್ದಾರೆ. ಸರ್ಕಾರಿ ಪ್ರಾಥಮಿಕ ಶಾಲೆಗಳನ್ನ ಒಳಗೊಂಡಿದೆ. ಇಲ್ಲಿಯೂ ಕೂಡ ಬಿಪಿಎಲ್ ಕಾರ್ಡುಗಳು, ಎಪಿಎಲ್ ಕಾರ್ಡುಗಳು ಮತ್ತು ಅಂತ್ಯೋದಯ ಕಾರ್ಡುಗಳು ವಿತರಣೆಯಾಗುತ್ತಿರುವುದನ್ನ ಅಧ್ಯಯನಗಳಲ್ಲಿ ತಿಳಿದು ಬಂದಿದೆ.

ರಾರಾವಿ : ಈ ಗ್ರಾಮವು ಒಣ ಭೂಮಿ ಪ್ರದೇಶವಾಗಿದ್ದು, ಮಳೆಯಾಶ್ರಿತ ಬೆಳೆಗಳನ್ನ ಬೆಳೆಯಲಾಗುತ್ತದೆ. ಹೋಬಳಿ ಕೇಂದ್ರದಿಂದ ೫ ಕಿಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ೧,೫೦೦ ಜನಸಂಖ್ಯೆ ಇದ್ದು ೩೦೦ ಕುಟುಂಬಗಳಿವೆ. ಮುಸ್ಲಿಂರು, ಪರಿಶಿಷ್ಟ ಜಾತಿ, ಕಬ್ಬೇರು, ಲಿಂಗಾಯತ ಸಮುದಾಯಗಳು ಗ್ರಾಮದಲ್ಲಿ ನೆಲೆಸಿವೆ. ಶೇಕಡಾ ೫೫ರಷ್ಟು ಲಿಂಗಾಯತ ಸಮುದಾಯವರಿದ್ದಾರೆ. ಶೇಕಡಾ ೨೦ರಷ್ಟು ಪರಿಶಿಷ್ಟ ಜಾತಿಯವರಿದ್ದಾರೆ. ಶೇಕಡಾ ೫ರಷ್ಟು ಮುಸ್ಲೀಮ್ ಜನರಿದ್ದಾರೆ. ಗ್ರಾಮದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿವೆ. ೨ ಅಂಗನವಾಡಿ ಕೇಂದ್ರಗಳಿವೆ. ಆಸ್ಪತ್ರೆ ಸೌಲಭ್ಯಗಳಿಗಾಗಿ ಇಲ್ಲಿನ ಜನರು ಜಾಲಹಳ್ಳಿಗೆ ಬರುತ್ತಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಗಿದೆ.೧೭ ಇಲ್ಲಿಯೂ ಸಹ ಕಾರ್ಮಿಕರು ಮತ್ತು ಭೂ ರಹಿತ ಕಾರ್ಮಿಕರು ಉದ್ಯೋಗಕ್ಕಾಗಿಯೇ ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿರುವುದನ್ನ ಅಧ್ಯಯನಗಳಿಂದ ತಿಳಿಯಬಹುದಾಗಿದೆ.

ಅಚ್ಚಳ್ಳಿ : ಈ ಗ್ರಾಮದಲ್ಲಿ ೨೦೬೦ ಜನಸಂಖ್ಯೆ ಇದೆ. ೬೫೦ ಕುಟುಂಬಗಳಿವೆ. ಗ್ರಾಮದಲ್ಲಿ ವಿವಿಧ ಜಾತಿಯ ಜನಗಳು ವಾಸಿಸುತ್ತಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ, ಲಿಂಗಾಯತರು,

ಬಡಿಗೇರ ಮುಸ್ಲೀಮ್ ಸಮುದಾಯದವರಿದ್ದಾರೆ. ಇದರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಶೇಕಡಾ ೬೦ ರಷ್ಟಿದ್ದಾರೆ. ಶೇಕಡಾ ೩೦ರಷ್ಟು ಜನಸಂಖ್ಯೆ ಇತರೇ ಸಮುದಾಯಗಳಿಗೆ ಸೇರಿದವರೂ ಇರುವುದನ್ನ ಕಾಣಲಾಗಿದೆ. ಹಾಗೆಯೇ, ಶೇಕಡಾ ೧೦ರಷ್ಟು ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರೆ, ಇನ್ನೂಳಿದ ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿದ್ದಾರೆ. ಪ್ರಾಥಮಿಕ ಶಾಲೆಯನ್ನ ಮಾತ್ರ ಹೊಂದಿದ್ದು, ಬಿಪಿಎಲ್ ಕಾರ್ಡುಗಳ ಜೊತೆಗೆ ಅಂತ್ಯೋದಯ ಕಾರ್ಡುಗಳನ್ನ ಹೊಂದಿರುವುದನ್ನ ಕೇಳಲಾಗಿದೆ. ಆರೋಗ್ಯ ಸೇವೆಗಳಿಗೆ ಇಲ್ಲಿಂದ ೫ ಕಿಮೀ ಪಕ್ಕದ ಪಟ್ಟಣಕ್ಕೆ ಹೋಗುತ್ತಾರೆ.

೨.೬. ಜನಸಂಖ್ಯೆ, ಸಾಕ್ಷರತೆ ಇತ್ಯಾದಿ ವಿವರಗಳು

ಜಿಲ್ಲೆಯ ಗ್ರಾಮೀಣ ಪ್ರದೇಶಗಳು ೨೦೧೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೩,೯೪೯ರಷ್ಟು ಹೊಂದಿದ್ದು, ಇದರಲ್ಲಿ ಪುರುಷರು ೨,೬೭೪(೫೦.೫೮%) ಮತ್ತು ಮಹಿಳೆಯರು ೧೨೭೫(೪೯.೪೧%)ರಷ್ಟಿದ್ದಾರೆ. ೧೭ ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಪಾಲು ಶೇ. ೧೩, ೧೭, ೨೧, ೨೨ ಮತ್ತು ೨೩ರಷ್ಟಿದೆ. ಸರಿಸುಮಾರು ಜನಸಂಖ್ಯೆಯನ್ನು ಹೊಂದಿದ್ದು, ಜಿಲ್ಲೆಯಲ್ಲಿ ತಕ್ಕಮಟ್ಟಿನ ಜನಸಂಖ್ಯೆಯನ್ನ ಹೊಮದಿರುವುದನ್ನ ಕಾಣಲಾಗಿದೆ. ಜಾತಿವಾರು ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಶೇ. ೧೮.೪೪ರಷ್ಟು ಹೊಂದಿದ್ದು, ಜಿಲ್ಲೆಯಲ್ಲಿ ೨೭ನೇ ಸ್ಥಾನದಲ್ಲಿದೆ. ಜಿಲ್ಲೆಯ ಸರಾಸರಿಗಿಂತ ಶೇ. ೯.೦೩ರಷ್ಟು ಕಡಿಮೆಯಿದೆ. ತಾಲೂಕಿನ ಸಾಕ್ಷರರ ವಿವರವನ್ನು ನೋಡಿದಾಗ ಜಿಲ್ಲೆಯಲ್ಲಿ ಕಡಿಮೆ ಎಂದರೆ ಶೇ. ೪೦.೯೧ರಷ್ಟು ಸಾಕ್ಷರತೆಯನ್ನು ಹೊಂದಿದೆ.೮ ಜಿಲ್ಲೆಯ ಸರಾಸರಿಗಿಂತ ಶೇ. ೩ರಷ್ಟು ಹೆಚ್ಚು ಸಾಕ್ಷರರನ್ನು ಹೊಂದಿದೆ. ಸಾಕ್ಷರತೆಯ ದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳು ಜಿಲ್ಲೆಯ ಸರಾಸರಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಗ್ರಾಮಗಳ ವಿಸ್ತೀರ್ಣ ೨೦೪.೧೭ ಚ.ಕಿ.ಮೀ.ಗಳಷ್ಟಿದ್ದು ವಿಸ್ತೀರ್ಣದಲ್ಲಿ ಒಟ್ಟು ಜಿಲ್ಲೆಯ ಗ್ರಾಮಗಳ ಪಾಲು ಶೇ. ೬.೭೦ ರಷ್ಟು ಪ್ರಮಾಣವನ್ನು ಹೊಂದಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಒಟ್ಟು ೭೮೯ ಕುಟುಂಬಗಳನ್ನು ಹೊಂದಿದೆ.೯ ತಾಲೂಕಿನಲ್ಲಿ ಪ್ರಮುಖ ಜಾತಿಗಳ ಜನರೆ ಲಿಂಗಾಯತರು, ನಾಯಕರು, ಮಾದಿಗರು, ಮುಸ್ಲಿಮರು ಮತ್ತು ಕುರುಬರು ಇದ್ದಾರೆ. ರಾಜಕೀಯವಾಗಿ ಗ್ರಾಮೀಣ ಪ್ರದೇಶಗಳನ್ನ ನೋಡುವುದಾದರೆ ಗ್ರಾಮಗಳು ತನ್ನದೇ ಆದ ಪಂಚಾಯಿತಿಯನ್ನ ಹೊಂದಿದೆ. ಅದರಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನ ನೀಡುತ್ತಾ ಗ್ರಾಮದ ಜನರು ಪಂಚಾಯಿತಿಗಳಲ್ಲಿ ಪ್ರತಿನಿಧಿಕರಣಗೊಂಡಿದ್ದಾರೆ. ಅಲ್ಲದೇ, ಮಹಿಳಾ ಪ್ರಾತಿನಿಧ್ಯದಲ್ಲಿ ಮೀಸಲಾತಿ ಮೀರಿ ಪ್ರತಿನಿಧೀಕರಣಗೊಂಡಿದ್ದಾರೆ. ಆ ಕಾರಣಕ್ಕೂ ಸಹ ಗ್ರಾಮಗಳ ವಿಶೇಷವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

೨.೭. ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿವರಗಳು

ಗ್ರಾಮಗಳ ವಿವರಣೆ ಮತ್ತು ಆಯ್ಕೆ ನಂತರ ಪ್ರಸ್ತುತ ಜಿಲ್ಲೆಯು ಐದು ಗ್ರಾಮಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಿದ್ದು, ಪ್ರಾದೇಶಿಕವಾಗಿ ಈ ಗ್ರಾಮಗಳನ್ನ ಎರಡು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ಪ್ರಾಕೃತಿಕವಾಗಿ ಮತ್ತು ಆರ್ಥಿಕವಾಗಿ ಮೂರು ಗ್ರಾಮೀಣ ಪ್ರದೇಶಗಳು ಸಮೃದ್ಧಿಯಾದ ಪ್ರದೇಶಗಳಾಗಿದ್ದು ಈ ಗ್ರಾಮಗಳು ಅಭಿವೃದ್ಧಿಯ ಎಲ್ಲಾ ಸವಲತ್ತುಗಳನ್ನು ಅಧಿಕವಾಗಿ ಪಡೆದುಕೊಂಡಿವೆ. ಉಳಿದ ಎರಡು ಗ್ರಾಮಗಳು ಬಯಲುಪ್ರದೇಶ ಮತ್ತು ಒಣಭೂಮಿ ಕೃಷಿಯನ್ನು ಹೊಂದಿದ ಪ್ರದೇಶಗಳಾಗಿವೆ. ಮೂರು ಗ್ರಾಮಗಳು ಜಿಲ್ಲಾ ಕೇಂದ್ರಕ್ಕೆ ಹತ್ತಿರವಾಗಿದ್ದು ಮತ್ತು ಹೆಚ್ಚು ನೀರಾವರಿ ಕೃಷಿಯನ್ನು ಹೊಂದಿವೆ. ಇದಕ್ಕೆ ವಿರುದ್ಧವಾಗಿ ಉಳಿದ ಗ್ರಾಮಗಳು ಜಿಲ್ಲೆಯಿಂದ ದೂರವಿದ್ದು, ಹೆಚ್ಚು ಒಣಭೂಮಿ ಕೃಷಿಯನ್ನು ಹೊಂದಿವೆ. ಇಲ್ಲಿ ಯಾವುದೇ ಗಣಿಗಾರಿಕೆ ಚಟುವಟಿಕೆಗಳು ಇರುವುದಿಲ್ಲ. ಅಂದರೆ ಗ್ರಾಮಗಳಲ್ಲಿ ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ. ಈ ಎಲ್ಲಾ ವಿವರಗಳನ್ನು ನೋಡಿದಾಗ ಮೂರು ಗ್ರಾಮಗಳು ಅಭಿವೃದ್ಧಿಯ ಪ್ರದೇಶಗಳೆಂದು ಉಳಿದ ಎರಡು ಗ್ರಾಮಗಳು ಹಿಂದುಳಿದ ಪ್ರದೇಶಗಳೆಂದು ಗುರುತಿಸಬಹುದು. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಅಭಿವೃದ್ಧಿ ಮತ್ತು ಹಿಂದುಳಿದ ಗ್ರಾಮೀಣ ಪ್ರದೇಶಗಳೆಂದು ಮನಗಂಡು ಪ್ರಸ್ತುತ ಅಧ್ಯಯನಕ್ಕ ಆಯ್ಕೆ ಮಾಡಿಕೊಳ್ಳಲಾಗಿದೆ.


೨.೮. ಗ್ರಾಮೀಣ ಪ್ರದೇಶಗಳಲ್ಲಿ ದುಡಿಮೆವರ್ಗ

ಒಂದು ಪ್ರದೇಶದ ಅಭಿವೃದ್ಧಿಯು ಅಲ್ಲಿ ವಾಸಿಸುತ್ತಿರುವ ಜನತೆಯ ದುಡಿಮೆಯ ಮೇಲೆ ನಿರ್ಧಾರಿತವಾಗುತ್ತದೆ. ಜಿಲ್ಲೆಯ ಹೆಚ್ಚು ಶ್ರಮಶಕ್ತಿಯು ಪ್ರಾಥಮಿಕ ವಲಯವನ್ನು ಅವಲಂಬಿಸಿರುವುದರಿಂದ ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಇದು ಒಂದಾಗಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಹಾಗೆಯೇ ಜಿಲ್ಲೆಯ ಗ್ರಾಮಗಳಲ್ಲಿ ಶ್ರಮಶಕ್ತಿ ಗ್ರಾಮವಾರು ರಚನೆ ಮತ್ತು ದುಡಿಮೆ ವರ್ಗಗಳ ವಿವರಗಳನ್ನು ನೋಡಿದಾಗ ಯಾವ ಗ್ರಾಮಗಳು ಅಭಿವೃದ್ಧಿ ಹೊಂದಿವೆ ಮತ್ತು ಹಿಂದುಳಿದಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ದುಡಿಮೆವರ್ಗವನ್ನು ಅಂಕಿಅಂಶಗಳ ಮೂಲಕ ನೋಡಿದಾಗ ಜಿಲ್ಲೆಯಲ್ಲಿ ಕೃಷಿಯು ಪ್ರಧಾನ ಕಸುಬುದಾಗಿದೆ. ಜಿಲ್ಲೆಯ **ಬಲಕುಂದಿ, ತಾಳೂರು, ಮತ್ತು ರಾವಿಹಾಳ್ ಉತ್ತಮ ಕೃಷಿಯನ್ನ ಮತ್ತು ಕಾರ್ಮಿಕರನ್ನ ಒಳಗೊಂಡಿದೆ.**[೧೦] ರಾರಾವಿ ಮತ್ತು ಅಚ್ಚಳ್ಳಿ ಗ್ರಾಮಗಳು ಒಣಭೂಮಿಯನ್ನ ಹೊಂದಿರುವ ಈ ಗ್ರಾಮಗಳು ಕೃಷಿ ಅವಲಂಬನೆಯನ್ನು ನೋಡಿದರೆ ಸ್ಪಷ್ಟವಾಗಿ ಈ ಗ್ರಾಮಗಳು ಜಿಲ್ಲೆಯಲ್ಲಿ ಹಿಂದುಳಿದಿರುವ ತಾಲೂಕುಗಳೆಂದು ಗುರುತಿಸಬಹುದು. ಮೂರು ಗ್ರಾಮಗಳಲ್ಲಿ ಕೃಷಿ ಅವಲಂಬನೆ ಇದ್ದರೂ ನೀರಾವರಿ ಪ್ರದೇಶವಾಗಿದ್ದರಿಂದ ಹೆಚ್ಚು ಆದಾಯ ಬರುತ್ತದೆ. ಐದು ಗಾಮಗಳು ಪ್ರಾಥಮಿಕ ವಲಯದಲ್ಲಿ ಹೆಚ್ಚು ಅವಲಂಬಿತರಾಗಿರುವುದು ಪ್ರಾಥಮಿಕ ಅಧ್ಯಯನದ ಮೂಲಕ ತಿಳಿಯುತ್ತದೆ.

೨.೮. ತಾಲೂಕುಗಳ ಸಾಕ್ಷರತಾ ಅಂಕಿ ಅಂಶಗಳು

ಒಂದು ಪ್ರದೇಶದ ಅಭಿವೃದ್ಧಿಯನ್ನು ನಿರ್ಧರಿಸುವ ಬಹುಮುಖ್ಯ ಅಂಶವೆಂದರೆ ಸಾಕ್ಷರತೆ ಪ್ರಮಾಣ. ಜಿಲ್ಲೆಯ ತಾಲೂಕುಗಳಲ್ಲಿ ಅತಿ ಹೆಚ್ಚು ಸಾಕ್ಷರತೆಯನ್ನು ಬಳ್ಳಾರಿ ತಾಲೂಕು ಹೊಂದಿದ್ದರೆ, ಅತಿ ಕಡಿಮೆ ಸಾಕ್ಷರತೆಯನ್ನು ಸಿರುಗುಪ್ಪ ತಾಲೂಕಿನ ಗ್ರಾಮೀಣ ಪ್ರದೇಶಗಳು ಹೊಂದಿದೆ. ಸಿರುಗುಪ್ಪ ತಾಲೂಕು ನೀರಾವರಿ ಪ್ರದೇಶವಾದರೂ ಸಾಕ್ಷರತೆಯಲ್ಲಿ ಜಿಲ್ಲೆಯಲ್ಲೇ ಕೊನೆಯ ಸ್ಥಾನದಲ್ಲಿದೆ. ಜಿಲ್ಲೆಯ ಸಾಕ್ಷರತೆ ಪ್ರಮಾಣದ ಸರಾಸರಿಗಿಂತ ಹೊಸಪೇಟೆ ಮತ್ತು ಬಳ್ಳಾರಿ ತಾಲೂಕುಗಳು ಹೆಚ್ಚಿದ್ದು, ಸಾಕ್ಷರತೆಯಲ್ಲಿ ಈ ತಾಲೂಕುಗಳು ಉತ್ತಮ ಸ್ಥಿತಿಯಲ್ಲಿವೆ. ಕೂಡ್ಲಿಗಿ ತಾಲೂಕು ಜಿಲ್ಲೆಯ ಸಾಕ್ಷರತಾ ಸರಾಸರಿಗಿಂತ ಸ್ವಲ್ಪ ಕಡಿಮೆ ಹೊಂದಿದೆ. ಉಳಿದ ತಾಲೂಕುಗಳು ಜಿಲ್ಲೆಯ ಸರಾಸರಿಗಿಂತ ಬಹಳ ಕಡಿಮೆ ಹೊಂದಿದೆ. ೨೦೧೧ರ ಜನಗಣತಿ ಅನ್ವಯ ತಾಲೂಕುವಾರು ಸಾಕ್ಷರತೆ ಪ್ರಮಾಣದಲ್ಲಿ ಹೊಸಪೇಟೆ ಒಂದನೇ ಸ್ಥಾನ, ಬಳ್ಳಾರಿ ಎರಡನೇ ಸ್ಥಾನ, ಮೂರನೇ ಸ್ಥಾನ ಕೂಡ್ಲಿಗಿ, ನಾಲ್ಕನೇ ಸ್ಥಾನ ಹಗರಿಬೊಮ್ಮನಹಳ್ಳಿ, ಐದನೇ ಸ್ಥಾನ ಹಡಗಲಿ, ಆರನೇ ಸ್ಥಾನ ಸಂಡೂರು ಮತ್ತು ಸಿರುಗುಪ್ಪ ಕೊನೆಯ ಏಳನೇ ಸ್ಥಾನವನ್ನು ಹೊಂದಿದೆ.[೧೧] ಒಟ್ಟಾರೆ ಜಿಲ್ಲೆಯ ತಾಲೂಕುಗಳ ಸಾಕ್ಷರತೆ ಅಂಕಿಅಂಶಗಳನ್ನು ನೋಡಿದಾಗ ಪೂರ್ವತಾಲೂಕುಗಳು ಸಾಕ್ಷರತೆಯ ಪ್ರಮಾಣದಲ್ಲಿ ಸುಸ್ಥಿತಿಯಲ್ಲಿವೆ. ಪಶ್ಚಿಮತಾಲೂಕುಗಳು ಸಾಕ್ಷರತೆಯ ದೃಷ್ಟಿಯಿಂದ ಪ್ರಗತಿ ಸಾಧಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹಿಂದುಳಿದ ತಾಲೂಕಿನ ಗ್ರಾಮೀಣ ಪ್ರದೇಶಗಳ ಶಾಲೆಗಳನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಲಂಬಚಿತ್ರ-೨.೧. ಬಳ್ಳಾರಿ ಜಿಲ್ಲೆಯ ತಾಲೂಕುವಾರು ಜನಸಂಖ್ಯೆ ಮತ್ತು ಸಾಕ್ಷರರ ಲಿಂಗವಾರು ಪ್ರಮಾಣ



	ಬಳ್ಳಾರಿ	ಹಡಗಲಿ	ಹೆಚ್.ಬಿ.ಹಳ್ಳಿ	ಹೊಸಪೇಟೆ	ಕೂಡ್ಲಿಗಿ	ಸಂಡೂರು	ಸಿರುಗುಪ್ಪ
ಜನಸಂಖ್ಯೆ ಗಂಡು	೩೧೯೦೦೮	೮೫೦೫೧	೮೦೭೭೦	೧೮೯೬೭೪	೧೩೯೨೦೨	೯೮೨೭೮	೧೧೭೭೩೧
ಜನಸಂಖ್ಯೆ ಹೆಣ್ಣು	೩೦೬೪೮೬	೮೩೦೬೭	೭೯೧೧೬	೧೮೫೨೭೫	೧೩೨೯೮೧	೯೨೮೮೮	೧೧೭೬೧೩
ಸಾಕ್ಷರರು ಗಂಡು	೧೯೧೯೬೮	೫೨೧೩೨	೪೭೩೭೯	೧೧೫೩೩೨	೮೩೯೭೩	೫೩೪೪೦	೫೪೯೧೩
ಸಾಕ್ಷರರು ಹೆಣ್ಣು	೧೨೬೦೭೧	೮೬೧೬೮	೨೯೯೭೪	೭೮೯೨೮	೫೧೬೮೬	೩೧೧೩೮	೨೯೫೬೭



ಕೋಷ್ಟಕ-೨.೧. ಬಳ್ಳಾರಿ ಜಿಲ್ಲೆಯ ತಾಲೂಕುವಾರು ಜನಸಂಖ್ಯೆ ಮತ್ತು ಸಾಕ್ಷರರ ಲಿಂಗವಾರು ವಿವರ ೨೦೧೧

ಕ್ರ.ಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			ಒಟ್ಟು ಸಾಕ್ಷರರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧.	ಬಳ್ಳಾರಿ	೩,೧೯,೦೦೮	೩,೦೬,೪೮೬	೬,೨೫,೪೯೪	೧,೯೧,೯೬೮	೧,೨೬,೦೭೧	೩,೧೮,೦೩೯
		(೫೧.೦೦)	(೪೮.೯೯)	(೧೦೦)	(೬೦.೩೫)	(೩೯.೬೪)	(೧೦೦)
೨.	ಹಡಗಲಿ	೮೫,೦೫೧	೮೩೦೬೭	೧,೬೮,೧೧೮	೫೨,೧೩೨	೮೬,೧೬೮	೧,೩೮,೩೦೦
		(೫೦.೫೯)	(೪೯.೪೦)	(೧೦೦)	(೩೭.೬೯)	(೬೨.೩೦)	(೧೦೦)
೩.	ಹೆಚ್.ಬಿ.ಹಳ್ಳಿ	೮೦,೭೭೦	೭೯೧೧೬	೧,೫೯,೮೮೬	೪೭,೩೭೯	೨೯,೯೭೪	೭೭೩೫೩
		(೫೦.೫೧)	(೪೯.೪೮)	(೧೦೦)	(೬೧.೨೫)	(೩೮.೭೪)	(೧೦೦)
೪.	ಹೊಸಪೇಟೆ	೧,೮೯,೬೭೪	೧೮೫೨೭೫	೩,೭೪,೯೪೯	೧,೧೫,೩೩೨	೭೮,೯೨೮	೧,೯೪,೨೬೦
		(೫೦.೫೮)	(೪೯.೪೧)	(೧೦೦)	(೫೯.೩೬)	(೪೦.೬೩)	(೧೦೦)
೫.	ಕೂಡ್ಲಿಗಿ	೧,೩೯,೨೦೨	೧,೩೨,೯೮೧	೨,೭೨,೧೮೩	೮೩,೯೭೩	೫೧,೬೮೬	೧,೩೫.೬೫೯
		(೫೧.೧೪)	(೪೮.೮೫)	(೧೦೦)	(೬೧.೯೦)	(೩೮.೦೯)	(೧೦೦)

೬.	ಸಂಡೂರು	೯೮,೨೭೮	೯೨,೮೮೮	೧,೯೧,೧೬೬	೫೩,೪೪೦	೩೧,೧೩೮	೮೪,೫೭೮
		(೫೧.೪೦)	(೪೮.೫೯)	(೧೦೦)	(೬೩.೧೮)	(೩೬.೮೧)	(೧೦೦)
೭.	ಸಿರಗುಪ್ಪ	೧,೧೭,೭೩೧	೧,೧೭,೬೧೩	೨,೩೫,೩೪೪	೫೪,೯೧೩	೨೯,೫೬೭	೮೪,೪೮೦
		(೫೦.೦೨)	(೪೯.೯೭)	(೧೦೦)	(೬೫.೦೦)	(೩೪.೯೯)	(೧೦೦)
	ಬಳ್ಳಾರಿ ಜಿಲ್ಲೆ	೧೦,೨೯,೭೧೪	೯,೯೭,೪೨೬	೨೦,೨೭,೧೪೦	೫,೯೯,೧೩೭	೩,೮೧,೩೪೬	೯,೮೦,೪೮೩
		(೫೦.೭೯)	(೪೯.೨೦)	(೧೦೦)	(೬೧.೧೦)	(೩೮.೮೯)	(೧೦೦)

ಸೂಚನೆ: ೦-೬ ವಯೋಮಾನದ ಜನಸಂಖ್ಯೆ ಹೊರತುಪಡಿಸಿ ಗಣನೆ ಮಾಡಿದ ಸಾಕ್ಷರತೆ, ಆವರಣದಲ್ಲಿರುವುದು ಒಟ್ಟು ಜನಸಂಖ್ಯೆಯ ಸಾಕ್ಷರತೆಯನ್ನು ಶೇಕಡವಾರು ಪ್ರಮಾಣದಲ್ಲಿ ಸೂಚಿಸುತ್ತದೆ.

ಮೂಲ: ಗವರ್ನ್‌ಮೆಂಟ್ ಆಫ್ ಕರ್ನಾಟಕ, ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಜಿಲ್ಲಾ ಪಂಚಾಯತ್, ಬಳ್ಳಾರಿ; ೨೦೧

ಕೋಷ್ಟಕ-೨.೨.

ಜಿಲ್ಲೆ, ತಾಲೂಕುಗಳ ಕೆಲವು ಸಾಮಾನ್ಯ ಅಂಕಿ ಅಂಶಗಳು ೨೦೦೧ ಮತ್ತು ೨೦೧೧

ಕ್ರ.ಸಂ.	ವಿವರಗಳು	ತಾಲೂಕುಗಳು							ಜಿಲ್ಲೆ
		ಬಳ್ಳಾರಿ	ಹಡಗಲಿ	ಹೆಚ್.ಬಿ.ಹಳ್ಳಿ	ಹೊಸಪೇಟೆ	ಕೂಡ್ಲಿಗಿ	ಸಂಡೂರು	ಸಿರುಗುಪ್ಪ	ಬಳ್ಳಾರಿ
೧. ೧	ವಿಸ್ತೀರ್ಣ (ಚ.ಕಿ.ಮೀ.)	೧೬೮೮.೮೩ (೨೦.೨೯)	೯೪೭.೮೫ -೧೧.೩೮	೯೭೩.೯೫ -೧೧.೭	೯೦೪.೧೭ -೧೦.೮೬	೧೬೧೮.೮೭ -೧೯.೪೫	೧೧೫೨.೪೨ -೧೩.೮೪	೧೦೩೬.೧೭ -೧೨.೪೫	೮೩೨೨.೨೬ -೧೦೦
೨. ೨	ಗ್ರಾಮಗಳ ಸಂಖ್ಯೆ	೧೮೬ -೧೭.೮೫	೧೧೨ -೧೦.೭೪	೧೪೪ -೧೩.೮೧	೧೨೭ -೧೨.೧೮	೨೧೭ -೨೦.೮೨	೧೧೪ -೧೦.೯೪	೧೪೨ -೧೩.೬೨	೧೦೪೨ -೧೦೦
೩ ೩	ಕುಟುಂಬಗಳ ಸಂಖ್ಯೆ	೧,೧೭,೨೩೩ -೩೧.೪೨	೩೧,೦೮೪ -೮.೩೩	೨೮,೮೭೧ -೭.೭೩	೭೦,೭೧೯ -೧೮.೯೫	೪೭೮೧೧ -೧೨.೮	೩೫,೨೧೮ -೯.೪೪	೪೨,೦೯೮ -೧೧.೨೮	೩,೭೩,೦೩೪ -೧೦೦
೪. ೪	ಪರಿಶಿಷ್ಟರ ಪ್ರಮಾಣ	೨,೦೩,೦೧೨ -೨೭.೪೭	೫೦,೬೯೨ -೬.೮೬	೫೧,೬೫೭ -೬೯೯	೧,೩೬,೨೭೧ -೧೮.೪೪	೧,೨೫,೮೬೨ -೧೭.೦೩	೮೩,೮೪೨ -೧೧.೩೪	೮೭,೫೨೦ -೧೧.೮೪	೭,೩೮,೮೫೬ -೧೦೦
೫. ೫	ಸಾಕ್ಷರತೆ ಪ್ರಮಾಣ	೩,೧೭,೯೮೫ (೩೫.೧೫)	೮೬,೧೬೮ (೯.೫೨)	೭೭,೩೫೩ (೮.೫೫)	೧,೯೪,೨೬೦ (೨೧.೪೭)	೧,೩೫,೬೮೯ (೧೫.೦೦)	೮,೪೭೮ (೦.೯೩)	೮೪,೪೮೦ (೯.೩೪)	೯,೦೪,೪೧೩ (೧೦೦)

ಮೂಲ: ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್‌ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್-ಬೆಂಗಳೂರು, ಗವರ್ನ್‌ಮೆಂಟ್ ಆಫ್ ಕರ್ನಾಟಕ, ೨೦೧೧

ರಾಯಚೂರು ಜಿಲ್ಲಾ ವಿವರ

ಬಳ್ಳಾರಿ ಜಿಲ್ಲೆಯ ಜೊತೆಗೆ ರಾಯಚೂರು ಜಿಲ್ಲೆಯನ್ನ ಅಧ್ಯಯನಕ್ಕೆ ಒಳಪಡಿಸಿಕೊಂಡ ಹಿನ್ನೆಲೆಯಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಈ ಅಂಶದ ಪರಿಣಾಮವಾಗಿ ಮಾನವ ಅಭಿವೃದ್ಧಿಯಲ್ಲಿ ಕೆಳಸ್ಥಾನದಲ್ಲಿರುವುದನ್ನ ಕಾಣಬಹುದಾಗಿದೆ. ಶಿಕ್ಷಣದಲ್ಲಿ ೨೭ನೇ ಸ್ಥಾನವನ್ನ ಹೊಂದಿದೆ. ಅಂದರೆ, ಜನರ ಬದುಕನ್ನ ಸುಸ್ಥತಿಯಲ್ಲಿಡಲು ವಲಸೆಯ ಮೇಲೆ ಅವಲಂಬನೆಯಾಗಿದ್ದು ಅದರ ಪ್ರಮಾಣ ಹೆಚ್ಚಾಗಿರುವುದನ್ನ ಕಾಣಲಾಗಿದೆ.[೨] ನಂಜುಂಡಪ್ಪರವರ ಪ್ರಾದೇಶಿಕ ಅಸಮಾನತೆ ವರದಿ ಪ್ರಕಾರ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಕೊನೆಯ ಸ್ಥಾನ ಪಡೆದಿದೆ. ಈ ವರದಿಯನ್ವಯ ಅಭಿವೃದ್ಧಿ ಸೂಚ್ಯಾಂಕದ ಆಧಾರದ ಮೇಲೆ ಕರ್ನಾಟಕ ರಾಜ್ಯದ ೧೭೫ ತಾಲ್ಲೂಕುಗಳಿಲ್ಲಿ ದೇವದುರ್ಗ ತಾಲ್ಲೂಕು ಕನಿಷ್ಟ ಸ್ಥಾನವನ್ನ ಪಡೆದಿರುವುದನ್ನ ನೋಡಲಾಗಿದೆ. ಮುಂದುವರಿದು ಹೈದರಾಬಾದ್ ಕರ್ನಾಟಕ ಪ್ರದೇಶದ ಭಾಗವಾದ ರಾಯಚೂರು ಜಿಲ್ಲೆಯಲ್ಲಿ ಅಪೌಷ್ಠಿಕತೆ ತೀವ್ರವಾಗಿರುವುದನ್ನ ಕಾಣಲಾಗಿದೆ. ಅಪೌಷ್ಠಕತೆಯು ಜಿಲ್ಲೆಯ ಸಾಕ್ಷರತೆ ಕನಿಷ್ಟವಾಗಿರುವಂತೆ ಆರೋಗ್ಯ ಸೌಲಭ್ಯಗಳು ಕನಿಷ್ಠವಾಗಿರುವುದನ್ನ ಕಾಣಲಾಗಿದೆ. ರಾಯಚೂರು ಜಿಲ್ಲೆಯ ಪ್ರದೇಶದಲ್ಲಿ ಕೃಷಿ ಕೂಲಿ ಕಾರ್ಮಿಕರು ಹೆಚ್ಚಾಗಿದ್ದಾರೆ. ಕೃಷಿ ಕೂಲಿ ಕಾರ್ಮಿಕರ ಬುದುಕು ದುಸ್ಥಿತಿಯಲ್ಲಿದೆ. ಕೃಷಿ ಕೂಲಿ ಕಾರ್ಮಿಕರಲ್ಲಿ ಸಾಕ್ಷರತೆ ಪ್ರಮಾಣ ಹಾಗೂ ಆದಾಯ ಕಡಿಮೆ ಇದ್ದು ಅಪೌಷ್ಠಿಕತೆ ಮತ್ತು ಬಡತನ ಹೆಚ್ಚಾಗಿದೆ. ಹೀಗೆ ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶಗಳು ಬಡತನ, ಹಸಿವು, ಅನಕ್ಷರತೆ, ಅಪೌಷ್ಠಿಕತೆ, ವಲಸೆ ಎಂಬಿತ್ಯಾದಿ ಸವಾಲುಗಳನ್ನ ಎದರಿಸುತ್ತಿರುವುದನ್ನ ಅಧ್ಯಯನದ ಸಂದರ್ಭದಲ್ಲಿ ಕಾಣಲಾಗುತ್ತದೆ. ಇಂತಹ ಹಲವಾರು ಸಮಸ್ಯೆಗಳು ಜಿಲ್ಲೆಯ ಸಾಮಾಜಿಕ ಆರ್ಥಿಕ ಸ್ಥಿತಿ–ಗತಿಯನ್ನ ಎದರು ನೋಡುತ್ತಿವೆ.

೨.೯. ಜಿಲ್ಲೆಯ ವಿವರ

ರಾಯಚೂರು ಜಿಲ್ಲೆಯು ರಾಜ್ಯದ ಈಶಾನ್ಯ ಭಾಗದಲ್ಲಿದೆ. ಉತ್ತರಕ್ಕೆ ಯಾದಗಿರಿ ಜಿಲ್ಲೆ, ವಾಯುವ್ಯಕ್ಕೆ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳು, ಪಶ್ಚಿಮಕ್ಕೆ ಕೊಪ್ಪಳ, ದಕ್ಷಿಣಕ್ಕೆ ಬಳ್ಳಾರಿ ಪೂರ್ವಕ್ಕೆ ಆಂಧ್ರಪ್ರದೇಶದ ಮೆಹಬೂಬ್ ನಗರ ಮತ್ತು ಕರ್ನೂಲ್ ಜಿಲ್ಲೆಗಳನ್ನು ಒಳಗೊಂಡಿದೆ. ೧೪,೦೧೩ ಚ.ಕಿ.ಮೀ.ನಷ್ಟು ಭೌಗೋಳಿಕ ಪ್ರದೇಶ ಹೊಂದಿದೆ. ಇದು ವಿಸ್ತೀರ್ಣದಲ್ಲಿ ರಾಜ್ಯದ ಎರಡನೇ ದೊಡ್ಡ ಜಿಲ್ಲೆ. ಈ ಜಿಲ್ಲೆಯು ಐದು ತಾಲ್ಲುಕುಗಳನ್ನು ಒಳಗೊಂಡಿದೆ. ದೇವದುರ್ಗ, ಮಾನ್ವಿ, ಸಿಂಧನೂರು, ಲಿಂಗಸಗೂರು ಹಾಗೂ ರಾಯಚೂರು ತಾಲ್ಲೂಕುಗಳಾಗಿವೆ. ಜಿಲ್ಲೆಯ ಐದು ತಾಲೂಕುಗಳಲ್ಲಿರುವ ಗ್ರಾಮೀಣ ಪ್ರದೇಶಗಳು ತುಂಗಾಭದ್ರ ಹಾಗೂ ಕೃಷ್ಣಾ ನದಿಯ

ಮೂಲಕ ನೀರಿನ ವ್ಯವಸ್ಥೆಯನ್ನ ಪಡೆಯುತ್ತಿವೆ. ಈ ಜಿಲ್ಲೆಯಾದ್ಯಾಂತ ಕೃಷಿಯನ್ನ ಹೆಚ್ಚಿನ ಪ್ರಮಾಣದಲ್ಲಿ ಅವಲಂಬಿಸಿದ್ದು ಅದರಲ್ಲಿ ಭತ್ತವನ್ನ ಯತೇಚ್ಛವಾಗಿ ಬೆಳೆಯುತ್ತಾರೆ. ರಾಯಚೂರನ್ನ ಕರ್ನಾಟಕದ ಭತ್ತದ ಕಣಜ ಎನ್ನಲಾಗುತ್ತದೆ. ಭಾರತದಲ್ಲೇ ಚಿನ್ನದ ಖನಿಜ ಸಂಪತ್ತನ್ನು ಹೊಂದಿರುವ ಕೆಲವೇ ಸ್ಥಳಗಳಲ್ಲಿ ರಾಯಚೂರು ಒಂದು.[೧೫] ಹೀಗಾಗಿ ನೀರಾವರಿ ಪ್ರದೇಶಗಳು ಸಾಕ್ಷರತೆಯಲ್ಲಿ ಯಾವ ಮಟ್ಟವನ್ನ ಕಂಡುಕೊಂಡಿದ್ದಾವೆ ಎಂಬದನ್ನ ಮನಗಾಣಲು ಗ್ರಾಮೀಣ ಪ್ರದೇಶಗಳನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

೨.೧೦ ಭೌಗೋಳಿಕ ಹಿನ್ನೆಲೆ

ಜಿಲ್ಲೆಯು ವರ್ಷದ ಹೆಚ್ಚಿನ ಅವಧಿಯು ಹವಾಮಾನದಿಂದ ಕೂಡಿದ್ದು, ಬೇಸಿಗೆಯಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ಹಾಗೆಯೇ ಮಳೆ ಪ್ರಮಾಣ ತುಂಬಾ ಏರಿಳಿತದಿಂದ ಕೂಡಿದ್ದು ರಾಯಚೂರನ್ನ ಬರಪೀಡಿತ ಪ್ರದೇಶವನ್ನಾಗಿಸಿದೆ.

೨.೧೧. ಕೃಷಿಯ ವಿವರ

ಜಿಲ್ಲೆಯಲ್ಲಿ ಹಲವು ರೀತಿಯ ವಾಣಿಜ್ಯ ಬೆಳೆಗಳನ್ನ ಬೆಳೆಯುವುದರ ಜೊತೆಗೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ಆಹಾರ ಸಂಸ್ಕರಣೆ ಪ್ರಮುಖ ಚಟುವಟಿಕೆಗಲಾಗಿವೆ. ಮುಂದುವರಿದು, ಸೂರ್ಯಕಾಂತಿ, ಶೇಂಗಾ ಮತ್ತು ಹತ್ತಿ ಇತ್ಯಾದಿಗಳನ್ನ ಬೆಳೆಲಾಗುತ್ತದೆ. ಹತ್ತಿ ತಂಬಾಕು ಮತ್ತು ಗೋದಿ ಬೆಳೆಯಲಾಗುತ್ತದೆ. ಬೇಸಿಗೆ ಅವಧಿಯಲ್ಲಿ ಭತ್ತ, ಹತ್ತಿ, ಜೋಳ, ಶೇಂಗಾ ಸಹಾ ಬೆಳೆಯಲಾಗುತ್ತದೆ. ತೋಟಗಾರಿಕೆಯ ಬೆಳೆಗಳೆಗಳಾದ ನಿಂಬೆ, ಮಾವು, ದಾಳಿಂಬೆ ಮತ್ತು ಪರಂಗಿ ಹಣ್ಣನ್ನು ಬೆಳೆಯಲಾಗುತ್ತದೆ. ಮೊಸಂಬಿ ಹಣ್ಣಿನ ಉತ್ಪಾದನೆಯಲ್ಲಿ ರಾಯಚೂರು ಜಿಲ್ಲೆ ರಾಜ್ಯದಲ್ಲೇ ಪ್ರಥಮ. ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ತರಕಾರಿಗಳೆಂದರೆ ಟೊಮೆಟೋ, ಬದನೆಕಾಯಿ ಹಾಗೂ ಹಸಿರು ಮೆಣಸಿನಕಾಯಿ. ಹಾಲು ಉತ್ಪಾದನೆ ಮತ್ತು ಕೋಳಿ ಸಾಗಾಣಿಕೆಯನ್ನು ಇಲ್ಲಿ ಕಾಣಬಹುದು. ಅಲ್ಲದೇ ಪಕ್ಕದ ಆಂದ್ರ ಮೂಲದಿಂದ ಬಂದ ಕೃಷಿಕರು ವಲಸೆ ಬಂದು ಭೂಮಿ ಖರೀದಿಸಿ ಅಪಾರ ಪ್ರಮಾಣದ ಭತ್ತ ಉತ್ಪಾದನೆ ಮಾಡುತ್ತಿದ್ದಾರೆ. ಇವರು ಇಲ್ಲಿಯೇ ವಾಸಿಸುತ್ತಿದ್ದು ಸ್ವಂತ ಮನೆಗಳನ್ನು ಮಾಡಿಕೊಂಡಿದ್ದಾರೆ ಹಾಗೂ ಮತದಾನದ ಹಕ್ಕನ್ನು ಪಡೆದಿದ್ದಾರೆ. ಮತದಾರರ ಪಟ್ಟಿಯಲ್ಲಿ ಇವರು ಹೆಸರುಗಳು ಸೇರ್ಪಡೆಗೊಂಡಿವೆ. ರಾಜಕೀಯ ಲಾಭಕ್ಕಾಗಿ ಸ್ಥಳೀಯ ಜನಪ್ರತಿನಿಧಿಗಳೇ ಇದನ್ನು ಪ್ರೋತ್ಸಾಹಿಸುತ್ತಿದ್ದಾರೆ. ರಾಯಚೂರು ಜಿಲ್ಲೆಯ ಭತ್ತ ಬೆಳೆಯುವ ಪ್ರದೇಶಗಳಲ್ಲಿ ಸ್ಥಳೀಯ ಜಮೀನ್ದಾರರು ಕಾರ್ಮಿಕರಾಗಿದ್ದಾರೆ ದೂರದ ಆಂಧ್ರದಿಂದ ಬಂದ ಕಾರ್ಮಿಕರು ಜಮೀನ್ದಾರರಾಗಿದ್ದಾರೆ ಎಂಬ ಅಂಶವನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಬಹುದಾಗಿದೆ.

೨.೧೨. ಭೂಮಿಯ ಒಡೆತನದ ವಿವರ

ಜಿಲ್ಲೆಯಲ್ಲಿ ಅಧ್ಯಯನಕ್ಕೆ ಹೋದ ಸಂದರ್ಭದಲ್ಲಿ ಪ್ರಾಥಮಿಕ ಮಾಹಿತಿಯ ಮೂಲಕ ಮಾಹಿತಿಯನ್ನ ಸಂಗ್ರಹಿಸಿದಾಗ ಬಂದ ಅಂಶಗಳ ಹಿನ್ನೆಲೆಯಲ್ಲಿ ಒಟ್ಟು ೭,೧೦೪ ದೊಡ್ಡ ಭೂ ಹಿಡುವಳಿದಾರರಲ್ಲಿ ಪರಿಶಿಷ್ಟ ಜಾತಿಯ ಪುರುಷ ಮಹಿಳೆ ಇಬ್ಬರೂ ಸೇರಿ ೧೩೩ ಜನರಿದ್ದಾರೆ. ಇದೇ ಅತ್ಯಂತ ಕಡಿಮೆ ದೊಡ್ಡ ಭೂ ಹಿಡುವಳಿ ಹೊಂದಿರುವ ವರ್ಗವಾಗಿದೆ. ಅದೇ ರೀತಿ ಪರಿಶಿಷ್ಟ ಪಂಗಡದಲ್ಲಿ ೪೩೫ ಜನರಿದ್ದಾರೆ. ದೊಡ್ಡ ಭೂ ಹಿಡುವಳಿದಾರರಲ್ಲಿ ಇತರೇ ಜನಾಂಗಕ್ಕೆ ಸೇರಿದ ಒಟ್ಟು ೩೩೭೧ ಜನರಿದ್ದು ಒಟ್ಟು ೫.೧೩ ಲಕ್ಷ ಹೆಕ್ಟರ್ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ. ಜಿಲ್ಲೆಯ ಬಹುತೇಕ ಭೂಮಿ ಇತರೆ ಜನಾಂಗದವರ ಹಿಡಿತದಲ್ಲಿದೆ. ಇಲ್ಲಿ ಇರತೇ ವರ್ಗಗಳಲ್ಲಿ ಲಿಂಗಾಯತ ಪ್ರಬಲ ಮತ್ತು ಪ್ರಮುಖ ಜಾತಿಯಾಗಿದ್ದು ಅತೀ ಹೆಚ್ಚು ದೊಡ್ಡ ಭೂ ಹಿಡುವಳಿಗಳನ್ನು ಹೊಂದಿದ್ದಾರೆ. ಜಿಲ್ಲೆಯಲ್ಲಿ ಅತೀಸಣ್ಣ ಮತ್ತು ಸಣ್ಣ ಹಿಡುವಳಿದಾರರು ಅಧಿಕ ಸಂಖ್ಯೆಯಲ್ಲಿದ್ದು ಕಡಿಮೆ ಭೂ ಒಡೆತನ ಹೊಂದಿದ್ದಾರೆ. ಇದು ಭೂಮಿಯಂತಹ ಸಂಪತ್ತಿನ ಅಸಮಾನ ಹಂಚಿಕೆಯನ್ನು ಸೂಚಿಸುತ್ತದೆ. ಒಂದು ಹೆಕ್ಟರ್‌ಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿಯ ಅತೀಸಣ್ಣ ಹಿಡುವಳಿದಾರರಲ್ಲಿ ದೇವದರ್ಗ ತಾಲ್ಲೂಕಿನಲ್ಲಿ ೪೭೬೫ ಪುರುಷರಿದ್ದು ೨೭೮೮ ಹೆಕ್ಟರ್ ಭೂಮಿಯನ್ನು ಹೊಂದಿದ್ದಾರೆ. ಅದೇರೀತಿ ೭೫೨ ಮಹಿಳೆಯರು ೪೬೩ ಹೆಕ್ಟರ್ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ. ಸಿಂದನೂರು ತಾಲ್ಲೂಕಿನಲ್ಲಿ ೨೦೫೩ ಪುರುಷರಿದ್ದು ೧೨೪೫ ಹೆಕ್ಟರ್ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ. ೭೨೨ ಮಹಿಳೆಯರು ೪೩೪ ಹೆಕ್ಟರ್ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ. ಜಿಲ್ಲೆಯ ೫ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಹೆಚ್ಚು ಅತೀಸಣ್ಣ ಹಿಡುವಳಿದಾರರಿರುವುದು ಕರ್ನಾಟಕ ರಾಜ್ಯದಲ್ಲೇ ಅತೀ ಹಿಂದುಳಿದದ್ದು ಎಂದು ಹೇಳಲ್ಪಡುವ ದೇವದುರ್ಗ ತಾಲ್ಲೂಕಿನಲ್ಲಿ. ಜಿಲ್ಲೆಯ ೫ ತಾಲ್ಲೂಕುಗಳ ಪರಿಶಿಷ್ಟ ಜಾತಿಯ ಸಣ್ಣ ಹಿಡುವಳಿದಾರರು ಹೆಚ್ಚಾಗಿರುವುದು ದೇವದುರ್ಗ ತಾಲ್ಲೂಕಿನಲ್ಲಿ (೩೧೫೫). ಅದೇರೀತಿ ಪರಿಶಿಷ್ಟ ಪಂಗಡದ ಸಣ್ಣ ಹಿಡುವಳಿದಾರರು ಹೆಚ್ಚಾಗಿರುವುದು ದೇವದುರ್ಗ ತಾಲ್ಲೂಕಿನಲ್ಲಿ (೫೨೮೬).[೧೪]

೨.೧೩. ಜನಸಂಖ್ಯೆ ವಿವರ

೨೦೧೧ರ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧೯.೨೮ ಲಕ್ಷವಿದ್ದು ಇದರಲ್ಲಿ ಗ್ರಾಮೀಣ ಜನಸಂಖ್ಯೆ ೧೨.೪೮ ಲಕ್ಷದಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ನಗರದಲ್ಲಿ ಶೇಕಡಾ ೩೫.೨೪ ರಷ್ಟಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೬೪.೭೫ರಷ್ಟಿದೆ. ನಗರ ಮತ್ತು ಗ್ರಾಮೀಣ ಎರಡೂ ಸೇರಿ ಒಟ್ಟು ೨.೯೮ ಲಕ್ಷ ಕುಟುಂಬಗಳಿವೆ. ಮುಂದುವರಿದು, ಕೆಳಗೆ ನೀಡಲಾಗಿರುವ ಕೊಷ್ಟಕದ ಮೇರಿಗೆ ಅಂಶವನ್ನ ಪರಿಗಣಿಸಿದಾಗ ೧೯೯೧ರಿಂದ ೨೦೧೧ರ ಜಿಲ್ಲೆಯ ಜನಸಂಖ್ಯೆ

ಬೆಳವಣಿಗೆಯ ದರ ದಾಖಲೆಯ ಶೇಕಡಾ ೨೩.೯೩ ರಷ್ಟಿದ್ದು ಅಲ್ಲದೇ, ೨೦೦೧ ರಿಂದ ೨೦೧೧ ರದ ಬೆಳವಣಿಗೆ ದರ ಶೇಕಡಾ ೧೫.೫೧ ರಷ್ಟಿದೆ ಅದರಂತೆ ೨೦೧೧ ರ ಜಿಲ್ಲೆಯ ಜನಸಂಖ್ಯೆ ೧೯೨೮೮೧೨ ರಷ್ಟಿದ್ದು ಗ್ರಾಮೀಣ ಜನಸಂಖ್ಯೆ ೧೨೪೮೯೨೫ ರಷ್ಟಿದೆ.[೫] ಹಾಗೂ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ರಾಯಚೂರು ಜಿಲ್ಲೆಯ ಪ್ರಮಾಣ ೩.೧೬ ರಷ್ಟಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಂಡುಕೊಳ್ಳಲಾಯಿತು.

ಪ್ರದೇಶ		೨೦೦೧	
	ಪುರುಷ	ಮಹಿಳೆ	ಒಟ್ಟು
ಗ್ರಾಮೀಣ	೬೧೭೩೩೨	೬೧೧೮೭೧	೧೨೨೯೨೦೩
ನಗರ	೨೧೫೦೨	೨೩೯೮೯	೪೧೯೦೦೯
ಒಟ್ಟು	೮೩೨೩೫೨	೬೩೫೮೬೦	೧೬೪೮೨೧೨
		೨೦೧೧	
ಗ್ರಾಮೀಣ	-	-	೧೨೪೮೯೨೫
ನಗರ	-	-	೬೭೯೮೮೭
ಒಟ್ಟು	-	-	೧೯೨೮೮೧೨

ಮೂಲ: ರಾಯಚೂರು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧-೨೦೧೨

೨.೧೪. ಜಿಲ್ಲೆಯ ಜನಸಾಂದ್ರತೆ ಮತ್ತು ಲಿಂಗಾನುಪಾತ

೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಾಂದ್ರತೆ ಪ್ರತಿ ಚದರ ಕಿಲೋ ಮೀಟರ್‌ಗೆ ೨೨೮ ಜನರಿದ್ದಾರೆ.

ಇದು ೨೦೦೧ರ ಜನಗಣತಿ ಪ್ರಕಾರ ೧೯೮ ಇತ್ತು. ಲಿಂಗಾನುಪಾತದಲ್ಲಿ ಸ್ವಲ್ಪ ಹೆಚ್ಚಳವಾಗಿದೆ. ೧೯೯೧ರ ಜನಗಣತಿ ಪ್ರಕಾರ ೯೭೯, ೨೦೦೧ರ ಜನಗಣತಿ ಪ್ರಕಾರ ೯೮೩, ೨೦೧೧ರ ಜನಗಣತಿ ಪ್ರಕಾರ ೧೦೦೦ ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ಮಕ್ಕಳ ಲಿಂಗಾನುಪಾತ ೯೫೦ ಇದ್ದು ೨೦೦೧ರ ಜನಗಣತಿ ಪ್ರಕಾರ ಇದು ೯೬೪ ರಷ್ಟಿತ್ತು. ಒಟ್ಟು ಜನ ಸಂಖ್ಯೆಯಲ್ಲಿ ೦-೦೬ ವರ್ಷದ ಮಕ್ಕಳ ಸಂಖ್ಯೆ ಶೇಕಡಾ ೧೪.೭೧ ರಷ್ಟಿದ್ದು ಇದು ೨೦೦೧ರ ಜನಗಣತಿ ಪ್ರಕಾರ ಶೇ ೧೬.೯೫ ರಷ್ಟಿದ್ದು, ಶೇಕಡಾ ೨.೨೪% ಕಡಿಮೆಯಾಗಿದೆ.[೬]


೨.೧೫ ಶಿಕ್ಷಣದ ವಿವರ

ಕೆಳಗೆ ನೀಡಲಾಗಿರುವ ಜಿಲ್ಲಾ ಶಿಕ್ಷಣದ ವಿವರ

ವರ್ಗೀಕರಣ	೨೦೦೧	೨೦೧೧	ದಶಕವಾರು ಹೆಚ್ಚಳ
ಪುರುಷ	೬೧.೫	೭೦.೪೭	೧೫.೨೭
ಮಹಿಳೆ	೩೫.೯೦	೪೮.೭೩	೧೫.೧೪
ಒಟ್ಟು	೪೮.೮	೫೯.೫೬	೧೫.೨೦

ಮಾಹಿತಿಯ ಮೂಲ: ರಾಯಚೂರು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧-೧೨.

ಲಂಬಚಿತ್ರ ೨.೨. ಜಿಲ್ಲಾ ಶಿಕ್ಷಣದ ಲಿಂಗವಾರು ವರ್ಗೀಕರಣ ಪ್ರಮಾಣ



ಮೇಲಿನ ಅಂಕಿಅಂಶಗಳನ್ನ ನೋಡಿದಾಗ ಜಿಲ್ಲೆಯಲ್ಲಿ ೨೦೧೦-೧೧ಕ್ಕೆ ಪ್ರಾಥಮಿಕ ಶಾಲೆಗಳು ೧೮೦೬ ಇದ್ದು, ಅದರಲ್ಲಿ ೨೦೦೧ರ ಜನಗಣತಿ ಪ್ರಕಾರ ಜಿಲ್ಲೆಯ ಗ್ರಾಮೀಣ ಸಾಕ್ಷರತೆ ನೋಡುವುದಾದರೆ ಒಟ್ಟು ಗ್ರಾಮೀಣ ಸಾಕ್ಷರತೆ ಶೇಕಡಾ ೪೨.೫ ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಶೇಕಡಾ ೫೬.೧ ರಷ್ಟಿದ್ದರೆ ಮಹಿಳೆಯರದ್ದು ಕೇವಲ ಶೇಕಡಾ ೨೮.೯ ರಷ್ಟಿದೆ. ರಾಯಚೂರು ಜಿಲ್ಲೆಯ ಸಾಕ್ಷರತೆ ರಾಜ್ಯದ ಮತ್ತು ರಾಷ್ಟ್ರದ ಸರಾಸರಿಗಿಂತ ಕಡಿಮೆ ಇರುವುದನ್ನ ಅಧ್ಯಯನಗಳಿಂದ ತಿಳಿಯಬಹುದಾಗಿದೆ. ೨೦೦೧ ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತೆ ಶೇಕಡಾ ೬೩.೪೨ ರಷ್ಟಿತ್ತು.




ತಾಲ್ಲೂಕುವಾರು ಸಾಕ್ಷರತೆ ದೇವದುರ್ಗ ಮತ್ತು ಸಿಂಧನೂರು ತಾಲ್ಲೂಕುಗಳ ಮಾಹಿತಿ ಮಾತ್ರ ನೀಡಲಾಗಿದೆ.

ತಾಲ್ಲೂಕು	೨೦೦೧			
	ಪ್ರದೇಶ	ಪುರುಷ	ಮಹಿಳೆ	ಒಟ್ಟು
ದೇವದುರ್ಗ	ಗ್ರಾಮೀಣ	೪೧.೬೯	೨೦.೮೯	೩೧.೩೭
	ನಗರ	೫೦.೧೨	೩೬.೩೦	೪೩.೪೦
ಸಿಂದನೂರು	ಗ್ರಾಮೀಣ	೫೨.೧೫	೨೯.೨೦	೪೦.೯೬
	ನಗರ	೬೨.೬೯	೪೪.೨೦	೫೩.೬೯

ಮೂಲ: ರಾಯಚೂರು ಅಂಕಿ ಅಂಶ ನೋಟ ೨೦೧೧-೧೨

ಲಂಬಚಿತ್ರ ೨.೩. ತಾಲೂಕುವಾರು ಗ್ರಾಮೀಣ, ನಗರ ಸಾಕ್ಷರತೆ ಪ್ರಮಾಣ



ಮೇಲಿನ ಕೋಷ್ಟಕದಲ್ಲಿ ನೋಡುವಂತೆ ಜಿಲ್ಲೆಯಲ್ಲಿ ದೇವದುರ್ಗ ತಾಲ್ಲೂಕಿನ ಸಾಕ್ಷರತೆ ಪ್ರಮಾಣ ಅತ್ಯಂತ ಕಡಿಮೆ ಇದೆ. ವಿಶೇಷವಾಗಿ ಮಹಿಳಾ ಸಾಕ್ಷರತೆ ಪ್ರಕಾರ ತುಂಬಾ ಕಡಿಮೆ ಇದೆ. ಅದೇ ರೀತಿ ಜಿಲ್ಲೆಯಾದ್ಯಂತ ಮಹಿಳಾ ಸಾಕ್ಷರತೆ ಕಡಿಮೆ ಇದ್ದು, ಶಿಕ್ಷಣ ಸೌಲಭ್ಯ ಹಕ್ಕಿನಿಂದ ವಂಚಿತರಾಗಿರುವುದನ್ನು ಅಧ್ಯಯನಗಳು ದೃಢಪಡಿಸುತ್ತವೆ.[೧೭]



೨.೧೬. ಅಧ್ಯಯನ ಗ್ರಾಮಗಳ ಪರಿಚಯ

ರಾಯಚೂರು ಜಿಲ್ಲೆಯಿಂದ ಐದು ಗ್ರಾಮಗಳ ಪ್ರಾಥಮಿಕ ಶಾಲೆಯನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಮುಂದುವರಿದು, ಹಲವು ಅಧ್ಯಯನಗಳ ಪ್ರಕಾರ ದೇವದುರ್ಗ ಏಷ್ಯಾದಲ್ಲೆ ಅತೀ ಹಿಂದುಳಿದ ತಾಲ್ಲೂಕಾಗಿದೆ. ಮಾನವ ಅಭಿವೃದ್ಧಿ ಸೂಚ್ಯಾಂಕ, ಸಾಕ್ಷರತೆ ಸೂಚೆಗಳಲ್ಲಿ ಹಿಂದುಳಿದಿದ್ದು ಅತೀ ಹೆಚ್ಚು ಕೃಷಿ ಕಾರ್ಮಿಕರನ್ನು ಹೊಂದಿದೆ. ಜಿಲ್ಲೆಯ ಒಟ್ಟು ಕೆಲಸಗಾರಲ್ಲಿ ಶೇಕಡಾ ೭೦ರಷ್ಟು ಜನರು ಕೃಷಿ ಕಾರ್ಮಿಕರಾಗಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೧೯.೦ರಷ್ಟು ಜನರು ಪರಿಶಿಷ್ಟ ಜಾತಿಗೆ ಸೇರಿದ್ದು ಶೇಕಡಾ ೧೮.೫ ರಷ್ಟು ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಇದರಲ್ಲಿ ದೇವದುರ್ಗ ತಾಲ್ಲೂಕಿನ ಶೇಕಡಾ ೩೩.೦೫ ರಷ್ಟು ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಜಿಲ್ಲೆಯಲ್ಲಿ ಅತೀ ಹೆಚ್ಚು ಪರಿಶಿಷ್ಟ ಪಂಗಡದ ಜನರನ್ನು ಹೊಂದಿರುವ ತಾಲ್ಲೂಕು ದೇವದುರ್ಗ. ಹೀಗೆ ದೇವದುರ್ಗ ಅತ್ಯಂತ ಹಿಂದುಳಿದಿದ ತಾಲ್ಲೂಕಿನಲ್ಲಿರುವ ಗ್ರಾಮೀಣ ಪ್ರದೇಶದ ಶಾಲೆಗಳನ್ನ ಹಾಗೂ ನೀರಾವರಿ ಪ್ರದೇಶವಾಗಿರುವ ಸಿಂಧನೂರು ತಾಲ್ಲೂಕಿನಲ್ಲಿರುವ ಗ್ರಾಮೀಣ ಪ್ರದೇಶಗಳನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಸಿಂದನೂರು ತಾಲ್ಲೂಕಿನ ರಾಗಲಪರ್ವಿ ಮತ್ತು ಯಾಪಲಪರ್ವಿ ಗ್ರಾಮಗಳನ್ನು ಅಧ್ಯಯನಕ್ಕೆ ಅಯ್ಕೆ ಮಾಡಿಕೊಳ್ಳಲಾಗಿದೆ. ಅದೇ ರೀತಿ ದೇವದುರ್ಗ ತಾಲ್ಲೂಕಿನ ಹೇರಂಡೆ ಮತ್ತು ಜಾಲಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಐದು ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಶಾಲೆಗಳ ಮಕ್ಕಳ ಪಾಲಕರನ್ನ ಮತ್ತು ಶಿಕ್ಷಕರನ್ನ ಸಂದರ್ಶನಕ್ಕೆ ಒಳಪಡಿಸಲಾಯಿತು. ಸಿಂಧನೂರು ೧೫೯೯ ಚ.ಕಿ. ಭೂ ವಿಸ್ತೀರ್ಣ ಹೊಂದಿದೆ. ಸಿಂಧನೂರು ತಾಲ್ಲೂಕಿನಲ್ಲಿ ೨ ನಾಡ ಕಛೇರಿಗಳಿದ್ದು ೧೪ ಹೋಬಳಿಗಳಿಂದ ೩೪ ಗ್ರಾಮ ಪಂಚಾಯಿತಿಗಳಿವೆ. ೧೬೦ ಜನ ವಸತಿ ಇರುವ ೧೩ ಜನ ವಸತಿ ಇಲ್ಲದ ಒಟ್ಟು ೧೭೩ ಕಂದಾಯ ಗ್ರಾಮಗಳಿವೆ. ೨೦೧೧ರ ಜನಗಣತಿ ಪ್ರಕಾರ ತಾಲ್ಲೂಕಿನಲ್ಲಿ ೩.೯೨ ಲಕ್ಷ ಜನ ಸಂಖ್ಯೆ ಇದ್ದು ೨೦೦೧ರ ಜನಗಣತಿ ಪ್ರಕಾರ ೬೫ ಸಾವಿರ ಕುಟುಂಬಗಳಿವೆ. ಸಿಂಧನೂರು ತಾಲ್ಲೂಕಿನಲ್ಲಿ ೨೦೦೧ರ ಜನಗಣತಿ ಪ್ರಕಾರ ೫೯,೦೦೦ ಪರಿಶಿಷ್ಟ ಪಂಗಡದ ಜನರಿದ್ದು ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಪ.ಜನಾಂಗದವರು ಶೇಕಡಾ ೧೩ರಷ್ಟು ಇದ್ದಾರೆ. ಇನ್ನು ೫೪,೧೧೭ ರಷ್ಟು ಪರಿಶಿಷ್ಟ ಜಾತಿಯವರಿದ್ದು ಶೇಕಡಾ ೧೬.೬೦ ರಷ್ಟಿದ್ದಾರೆ. ೨೦೧೧ರ ಜನಗಣತಿ ಪ್ರಕಾರ ೨೨೫ ರಷ್ಟು ಜನಸಾಂದ್ರತೆ ಇದ್ದು ೯೮ ಲಿಂಗಾನುಪಾತವಿದೆ. ಸಾಕ್ಷರತೆ ೨೦೦೧ ಪ್ರಕಾರ ನಗರ ಗ್ರಾಮೀಣ ಒಟ್ಟಾಗಿ ಪರುಷರಲ್ಲಿ ಶೇಕಡಾ ೬೪.೬ ರಷ್ಟು ಸಾಕ್ಷರತೆ ಇದ್ದರೆ, ಮಹಿಳೆಯರಲ್ಲಿ ಶೇಕಡಾ ೩೭.೧ ರಷ್ಟು ಸಾಕ್ಷರತೆ ಇದೆ. ಗ್ರಾಮೀಣ ಭಾಗದಲ್ಲಿ ಪುರುಷರಲ್ಲಿ ಶೇಕಡಾ ೪೮.೪ ರಷ್ಟು ಸಾಕ್ಷರತೆ ಇದ್ದರೆ, ಮಹಿಳೆಯರಲ್ಲಿ ಶೇಕಡಾ ೩೪.೩ರಷ್ಟು ಸಾಕ್ಷರರು ಇದ್ದಾರೆ. ಸಿಂಧನೂರು

ತಾಲ್ಲೂಕಿನಲ್ಲಿ ೨೦೧೧ರ ಜನಗಣತಿ ಪ್ರಕಾರ ಒಟ್ಟು ೫೫,೮೬೫ ಕೃಷಿ ಸಾಗುವಳಿದಾರರಿದ್ದಾರೆ. ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೨೯.೫೩ ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿದ್ದಾರೆ. ೩೦೦೨ ರಷ್ಟು ಗೃಹ ಕೈಗಾರಿಕೆ ಕೆಲಸಗಾರರಿದ್ದಾರೆ. ೩೧,೧೦೮ ಇತರೆ ಕೆಲಸಗಾರರಿದ್ದಾರೆ. ೧.೬೦ ಲಕ್ಷ ಒಟ್ಟು ಕೆಲಸಗಾರರಿದ್ದಾರೆ. ಇದರಲ್ಲಿ ೭೭,೯೬೦ ರಷ್ಟು ಕೃಷಿ ಕಾರ್ಮಿಕರಿದ್ದಾರೆ ಮತ್ತು ೩೪,೧೧೦ ಕೃಷಿಯೇತರ ಕೆಲಸಗಾರರಿದ್ದಾರೆ. ೧.೬೦ ಲಕ್ಷ ಹೆಕ್ಟರ್ ಭೌಗೋಳಿಕ ವಿಸ್ತೀರ್ಣದಲ್ಲಿ ೧೦೭೫ ಹೆಕ್ಟರ್ ಅರಣ್ಯವಿದೆ. ೩೯೦೫ ಹೆಕ್ಟರ್ ವ್ಯವಸಾಯೇತರ ಭೂಮಿ ಇದೆ. ಅದರಲ್ಲಿ ಜಿಲ್ಲೆಯ ಒಟ್ಟು ೮೪೪೨ ಚದರ ಕಿ.ಮೀ ಭೂ ವಿಸ್ತೀರ್ಣದಲ್ಲಿ ದೇವದುರ್ಗ ತಾಲ್ಲೂಕು ೧೫೦೮ ಚ.ಕಿ.ಮಿ ಹೊಂದಿದೆ. ಇದು ೨ ನಾಡಕಛೇರಿಗಳು, ೪ ಹೋಬಳಿಗಳು ೩೯ ಗ್ರಾಮ ಲೆಕ್ಕಿಗರ ವೃತ್ತಗಳನ್ನು ೨೮ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದೆ. ೦೧ ಪಟ್ಟಣ, ೨೦೧೧ರ ಜನಗಣತಿ ಪ್ರಕಾರ ೧೭೩ ಜನ ವಸತಿ ಇರುವ, ೧೫ ಜನ ವಸತಿ ಇಲ್ಲದ ಒಟ್ಟು ೧೮೮ ಗ್ರಾಮಗಳಿವೆ. ೧೮೮ ಗ್ರಾಮಗಳಲ್ಲಿ ಎಲ್ಲವುಕ್ಕೂ ವಿದ್ಯುಚ್ಚಕ್ತಿ ಸಂಪರ್ಕವಿದೆ. ಈ ತಾಲ್ಲೂಕಿನ ೧೨ ಉಪಗ್ರಾಮಗಳು ಅಥವ ಹ್ಯಾಮ್ಲಟ್‌ಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ತಾಲ್ಲೂಕಿಲ್ಲಿ ಒಟ್ಟು ೨೦೧೧ರ ಜನಗಣತಿ ಪ್ರಕಾರ ೨.೮೧ ಲಕ್ಷ ಜನರಿದ್ದಾರೆ. ಇವರಲ್ಲಿ ೧.೪೦ ಲಕ್ಷ (೧೪೮೯೧೯) ಪುರುಷರು, ೧.೪೦ ಲಕ್ಷ (೧೪೦೦೨೦) ಮಹಿಳೆಯರಿದ್ದಾರೆ. ೨೦೧೧ರ ಜನಗಣತಿ ಪ್ರಕಾರ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ೩೩೪೯೬ ಹಾಗೂ ನಗರ ಪ್ರದೇಶದಲ್ಲಿ ೩೬೫೬ ಒಟ್ಟು ೩೭೧೫೨ ಕುಟುಂಬಗಳಿವೆ. ೨೦೦೧ ಜನಗಣತಿ ಪ್ರಕಾರ ದೇವದುರ್ಗ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ೨೦೦೪೬೩ ಹಾಗೂ ನಗರ ಪ್ರದೇಶದಲ್ಲಿ ೨೧೯೪ ಜನ ಸಂಖ್ಯೆ ಇದೆ. ೨೦೦೧ ಜನಗಣತಿ ಪ್ರಕಾರ ದೇವದುರ್ಗ ತಾಲ್ಲೂಕಿನಲ್ಲಿ ನಗರ, ಗ್ರಾಮೀಣ ಎರಡನ್ನು ಸೇರಿಸಿ ಒಟ್ಟು ೪೦೬೮೯ ಜನ ಪರಿಶಿಷ್ಟ ಜಾತಿಗೆ ಸೇರಿದ್ದು ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ ಶೇಕಡಾ ೧೯.೯ ರಷ್ಟು ಜನರಿದ್ದಾರೆ. ಅದೇ ರೀತಿ ೨೦೦೧ರ ಜನಗಣತಿ ಪ್ರಕಾರ ಈ ತಾಲ್ಲೂಕಿನಲ್ಲಿ ನಗರ ಗ್ರಾಮೀಣ ಎರಡನ್ನು ಸೇರಿಸಿ ಒಟ್ಟು ೯೧೩೧ ಪರಿಶಿಷ್ಟ ಪಂಗಡದ ಜನ ಸಂಖ್ಯೆ ಇದ್ದ ಒಟ್ಟು ಜನಸಂಖ್ಯೆಗೆ ಪ್ರತಿಶತ ಪರಿಶಿಷ್ಟ ಪಂಗಡದ ಜನಸಂಖ್ಯೆ ಶೇಕಡ ೩೩%. ೨೦೧೧ರ ಜನಗಣತಿ ಪ್ರಕಾರ ೧೪೮ ಸಾಂದ್ರತೆ ಮತ್ತು ೯೮೨ರ ಲಿಂಗಾನುಪಾತವಿದೆ. ೦-೬ ವಯೋಮಾನದ ಅನುಪಾತ ೯೭೦ ಇದೆ. ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡಾ ೩೮.೩ರಷ್ಟಿದೆ. ಇದರಲ್ಲಿ ಪುರುಷ ಸಾಕ್ಷರತೆ ಶೇಕಡಾ ೫೦.೧ ರಷ್ಟಿದ್ದ ಮಹಿಳಾ ಸಾಕ್ಷರತೆ ಕೇವಲ ೨೬.೩ರಷ್ಟಿದೆ. ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಅತ್ಯಂತ ಕಡಿಮೆ ಸಾಕ್ಷರತೆ ಇರುವ ತಾಲ್ಲೂಕು ದೇವದುರ್ಗ. ಲಿಂಗಸಗೂರು ೫೧.೦ ಮಾನವಿ ೫೩. ರಾಯಚೂರು ೫೫.೬. ಸಿಂಧನೂರು ೫೦.೮. ಮಹಿಳಾ ಸಾಕ್ಷರತೆ ಉಳಿದ ಎಲ್ಲಾ ತಾಲ್ಲೂಕಿಗಿಂತ ಕಡಿಮೆ

ಇದೆ. ಈ ಅಂಕಿ ಅಂಶಗಳು ದೇವದುರ್ಗ ತಾಲ್ಲೂಕಿನ ಶೈಕ್ಷಣಿಕ ಸ್ಥಿತಿಗತಿಯನ್ನು ಸೂಚಿಸುತ್ತಾ ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಪ್ರತಿಬಿಂಬಿಸುತ್ತದೆ. ಗ್ರಾಮೀಣ ಸಾಕ್ಷರತೆ ಒಟ್ಟು ೩೬.೬ ರಷ್ಟಿದ್ದು ಇದರಲ್ಲಿ ಪುರುಷ ಸಾಕ್ಷರತೆ ೪೮.೭ ಮಹಿಳಾ ಸಾಕ್ಷರತೆ ಕೇವಲ ೨೪.೪ ರಷ್ಟಿದೆ.೧೬

ಅಧ್ಯಯನ ಗ್ರಾಮಗಳು:

ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಗ್ರಾಮಗಳು	ತಾಲ್ಲೂಕು	ಜಿಲ್ಲೆ
ಅಂಕುಶದೊಡ್ಡಿ	ಲಿಂಗಸೂರು	ರಾಯಚೂರು
ಕೈರವಾಡಗಿ	ಲಿಂಗಸೂರು	ರಾಯಚೂರು
ಬೈಯಾಪುರ	ಲಿಂಗಸೂರು	ರಾಯಚೂರು
ಮಾವಿನಬಾವಿ	ಲಿಂಗಸೂರು	ರಾಯಚೂರು
ಸಂತೆಕಲ್ಲೂರು	ಲಿಂಗಸೂರು	ರಾಯಚೂರು

ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಶಾಲೆಗಳ ಅಧ್ಯಯನ ಸಂದರ್ಭದಲ್ಲಿ ಪ್ರಶ್ನಾವಳಿ ವಿಧಾನವನ್ನ ಅನುಸರಿಸಲಾಯಿತು. ಅಧ್ಯಯನ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಶಾಲೆಯಲ್ಲಿರುವ ಮಕ್ಕಳ ಪಾಲಕರು ಮತ್ತು ಶಿಕ್ಷಕರನ್ನ ವ್ಯವಸ್ಥಿತವಾದ ಸಂದರ್ಶನ ನಡೆಸಲಾಯಿತು. ಇವರನ್ನು ಮನೆಗಳಲ್ಲಿ ವೈಯಕ್ತಿಕವಾಗಿ ಹಾಗೂ ಗುಂಪು ಚರ್ಚೆಗಳ ಮೂಲಕ ಸಂದರ್ಶಿಸಲಾಯಿತು. ಅದೇ ರೀತಿ ಗ್ರಾಮಗಳಲ್ಲಿ ಯಾದೃಚ್ಛಿಕ ವಿಧಾನದ ಮೂಲಕ ಮನೆಗಳನ್ನು ಆಯ್ಕೆ ಮಾಡಿಕೊಂಡು ಮನೆ ಮನೆ ಭೇಟಿ ಮಾಡಲಾಯಿತು. ಸಂದರ್ಶನದೊಂದಿಗೆ ಅವಲೋಕನ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಗ್ರಾಮೀಣ ಪ್ರದೇಶಗಳನ್ನ ನೀರಾವರಿ ಸೌಲಭ್ಯವಿರುವ ಹಾಗೂ ಇನ್ನೊಂದು ಒಣ ಭೂಮಿಯನ್ನ ಹೊಂದಿದಂತಹ ಪ್ರದೇಶದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಯಿತು. ನೀರಾವರಿಯಿಂದ ಅಭಿವೃದ್ಧಿಯನ್ನ ಹೊಂದಿರುವುದು ಮತ್ತು ಹಿಂದುಳಿದ ಪ್ರದೇಶಗಳನ್ನ ವಿಶೇಷವಾಗಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಈ ಅಧ್ಯಯನದಲ್ಲಿ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನ ಎರಡನ್ನು ಅನುಸರಿಸಲಾಗಿದೆ. ಅದರಲ್ಲಿ ಈ ಅಧ್ಯಯನದ ಮಾಹಿತಿಗಳ ಮೂಲಕ ಕೈಗೊಳ್ಳುವ ವಿಶ್ಲೇಷಣೆ ಸ್ಥಳೀಯ ಶಾಲಾ ವ್ಯವಸ್ಥೆ, ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಕಂಡುಬರುವ ಫಲಿತಾಂಶಗಳನ್ನು ಸಾರ್ವತ್ರಿಕವಾಗಿ ಎಲ್ಲ ಕ್ಷೇತ್ರಗಳಲ್ಲಿ ಇದೇ ಪರಿಸ್ಥಿತಿ ಇರುತ್ತದೆ ಎಂದು ಹೇಳುವುದು ಸರಿಯಿಲ್ಲ. ಅದ್ದರಿಂದ

ಅಧ್ಯಯನದ ಫಲಿತಾಂಶ ಮತ್ತು ಪರಿಣಾಮಗಳು ಈ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ. ಆದರೂ ಈ ಅಧ್ಯಯನದ ಫಲಿತಾಂಶಗಳ ಆಧಾರದ ಮೇಲೆ ಪ್ರಾಥಮಿಕ ಶಾಲೆಗಳ ವ್ಯವಸ್ಥೆ, ನೀತಿ ನಿಯಮಗಳು, ಧೋರಣೆಗಳ ಮೂಲಕ ಈ ವ್ಯವಸ್ಥೆಯ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಇಂತಹ ಸಂಗತಿಗಳ ಮೂಲಕ ವ್ಯವಸ್ಥೆಯ ಸಮಸ್ಯೆಗಳನ್ನು ಗುರುತಿಸಲು ಈ ಅಧ್ಯಯನ ಸಹಾಯಕಾರಿಯಾಗುತ್ತದೆ. ಅದಕ್ಕೆ ಪರಿಹಾರವನ್ನು ಕಂಡುಕೊಳ್ಳವಲ್ಲಿ ನೆರವಾಗುತ್ತದೆ ಎಂಬ ಆಶಯ ಇಟ್ಟುಕೊಳ್ಳಲಾಗಿದೆ.

೨.೧೭. ಅಧ್ಯಯನ ಗ್ರಾಮಗಳ ಸಾಮಾಜಿಕ, ಆರ್ಥಿಕ ವಿವರ

ಅಂಕುಶದೊಡ್ಡಿ: ಗ್ರಾಮದಲ್ಲಿ ಒಟ್ಟು ೩೦೦೦ ಜನಸಂಖ್ಯೆ ಇದ್ದು, ಅದರಲ್ಲಿ ೬೫೦ ಕುಟುಂಬಗಳಿರುವುದನ್ನ ನೋಡಲಾಗಿದೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಮುಸ್ಲಿಂ, ಲಿಂಗಾಯತ ಮತ್ತು ಕುರುಬ ಜನಾಂಗದ ಜನರು ವಾಸವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೬೦ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಶೇಕಡಾ ೩೦ರಷ್ಟು ಲಿಂಗಾಯತ ಮತ್ತು ಕುರುಬ ಜನಾಂಗಕ್ಕೆ ಸೇರಿದ್ದಾರೆ. ಶೇಕಡಾ ೧೦ರಷ್ಟು ಮುಸ್ಲಿಂರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು. ೫೦೦ಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳಿದ್ದು, ೪೫ ಕ್ಕೂ ಹೆಚ್ಚು ಅಂತ್ಯೋದಯ ಕಾರ್ಡುಗಳಿವೆ. ೭೦ ಎಪಿಎಲ್ ಕಾರ್ಡುಗಳಿವೆ. ೨ ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವಿದೆ. ಗ್ರಾಮದಲ್ಲಿ ೩೦೦ಕ್ಕೂ ಹೆಚ್ಚು ಸಣ್ಣ ರೈತರಿದ್ದಾರೆ. ಅಲ್ಲದೇ, ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಜನರು ಕೃಷಿ ಕಾರ್ಮಿಕರಿದ್ದು, ಭೂ ರಹಿತ ಕಾರ್ಮಿಕರು ಇದ್ದಾರೆ. ಕುರುಬರು, ಪರಿಶಿಷ್ಟ ಪಂಗಡಕ್ಕೆ ಭೂ ರಹಿತ ಕಾರ್ಮಿಕರು ಸೇರಿದ್ದಾರೆ. ಬೇಸಿಗೆಗಾಲ ಬಂದಿತು ಎಂದರೆ ಹೊಟ್ಟೆಪಾಡಿಗೆಗಾಗಿ ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕೇಳಿದಾಗ ಬಂದ ಮಾಹಿತಿಯಿದು. ಹಾಗಾಗಿ ಗ್ರಾಮೀಣ ಜನರು ತಮ್ಮ ಮನೆಯನ್ನೆ ತೊರೆದು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಯಿತು. ಅಭಿವೃದ್ದಿಯ ಸೌಲಭ್ಯಗಳನ್ನ ಪಡೆದು ಅಭಿವೃದ್ಧಿ ಪ್ರಕ್ರಿಯೆ ಪಾಲ್ಗೊಳ್ಳುವ ಬದಲು ಈ ಪ್ರಕ್ರಿಯೆಯಿಂದ ಹೊರಗುಳಿದು ದಿಕ್ಕಿಲ್ಲದೆ ಬದುಕನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜನರು ಇನ್ನೂ ಶಿಕ್ಷಿತರಾಗಿ ತಮ್ಮ ಸಮಾಜದಲ್ಲಿ ಯೋಗ್ಯ ಬದುಕನ್ನು ಕಟ್ಟಕೊಳ್ಳಲು ಶಿಕ್ಷಣವನ್ನ ಪಡೆದಾಗ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನ ಹೇಳಲಾಗಿದೆ.

ಕೈರವಾಡಗಿ: ಈ ಗ್ರಾಮದಲ್ಲಿ ೧೦೦೦ ಜನಸಂಖ್ಯೆ ಇದೆ. ೩೫೦ ಕುಟುಂಬಗಳಿವೆ. ಗ್ರಾಮದಲ್ಲಿ ವಿವಿಧ ಜಾತಿಯ ಜನಗಳು ವಾಸಿಸುತ್ತಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ, ಲಿಂಗಾಯತರು, ಬಡಿಗೇರ ಮುಸ್ಲೀಮ್ ಸಮುದಾಯದವರಿದ್ದಾರೆ. ಇದರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಶೇಕಡಾ ೬೦ ರಷ್ಟಿದ್ದಾರೆ. ಶೇಕಡಾ ೩೦ ರಷ್ಟು ಜನಸಂಖ್ಯೆ ಇತರೇ ಸಮುದಾಯಗಳಿಗೆ ಸೇರಿದವರೂ ಇರುವುದನ್ನ ಕಾಣಲಾಗಿದೆ. ಹಾಗೆಯೇ, ಶೇಕಡಾ ೧೦ರಷ್ಟು ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರೆ, ಇನ್ನೂಳಿದ ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿದ್ದಾರೆ. ಪ್ರಾಥಮಿಕ ಶಾಲೆಯನ್ನ ಮಾತ್ರ ಹೊಂದಿದ್ದು, ಬಿಪಿಎಲ್ ಕಾರ್ಡುಗಳ ಜೊತೆಗೆ ಅಂತ್ಯೋದಯ ಕಾರ್ಡುಗಳನ್ನ ಹೊಂದಿರುವುದನ್ನ ಕೇಳಲಾಗಿದೆ. ಆರೋಗ್ಯ ಸೇವೆಗಳಿಗೆ ಇಲ್ಲಿಂದ ೫–೬ ಕಿಮೀ ಪಕ್ಕದ ಪಟ್ಟಣಕ್ಕೆ ಹೋಗುತ್ತಾರೆ.

ಸಂತೆಕಲ್ಲೂರು: ಜಾಲಹಳ್ಳಿ ಲಿಂಗಸೂರು ತಾಲ್ಲೂಕಿನ ಹೋಬಳಿ ಕೇಂದ್ರ. ೨೦,೦೦೦ ಜನಸಂಖ್ಯೆ ಇದ್ದ ೫೦೦೦ ಸಾವಿರಕ್ಕೂ ಹೆಚ್ಚಿನ ಕುಟುಂಬಗಳಿವೆ. ಇಡೀ ಜಾಲಹಳ್ಳಿ ಪ್ರದೇಶ ನೀರಾವರಿಗೆ ಒಳಪಟ್ಟಿದ್ದು ನಿರಂತರ ಕೃಷಿ ಚಟುವಟಿಕೆಗಳು ನಡೆಯುತ್ತಿರುತ್ತವೆ. ಭತ್ತ, ಹತ್ತಿ, ಶೇಂಗಾ, ಸೂರ್ಯಕಾಂತಿ ಮತ್ತು ಕಬ್ಬು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಪರಿಶಿಷ್ಟ ಜಾತಿ, ಪಂಗಡ, ಕುರುಬರು, ಬ್ರಾಹ್ಮಣರು, ಲಿಂಗಾಯತರು ಪತ್ತಾರ್, ಕಬ್ಬೇರು, ವಡ್ಡರು, ಉಪ್ಪಾರರು, ಇತ್ಯಾದಿ ಸಮುದಾಯಗಳ ಜನರು ವಾಸಿಸುತ್ತಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೫೦ರಷ್ಟು ಪರಿಶಿಷ್ಟ ಜನಾಂಗದವರಿದ್ದಾರೆ. ಶೇಕಡಾ ೨೦% ರಷ್ಟು ಲಿಂಗಾಯತರು, ಶೇಕಡ ೧೫ರಷ್ಟು ಮುಸ್ಲಿಂರು, ಶೇಕಡ ೧೫ರಷ್ಟು ಪರಿಶಿಷ್ಟ ಜಾತಿಯವರು ಶೇಕಡ ೧೦ರಷ್ಟು ಇತರೇ ಸಮುದಾಯವರಿದ್ದಾರೆ. ಸರ್ಕಾರಿ ಪ್ರಾಥಮಿಕ ಶಾಲೆಗಳನ್ನ ಒಳಗೊಂಡಿದೆ. ಇಲ್ಲಿಯೂ ಕೂಡ ಬಿಪಿಎಲ್ ಕಾರ್ಡುಗಳು, ಎಪಿಎಲ್ ಕಾರ್ಡುಗಳು ಮತ್ತು ಅಂತ್ಯೋದಯ ಕಾರ್ಡುಗಳು ವಿತರಣೆಯಾಗುತ್ತಿರುವುದನ್ನ ಅಧ್ಯಯನಗಳಲ್ಲಿ ತಿಳಿದು ಬಂದಿದೆ.

ಮಾವಿನಬಾವಿ : ಈ ಗ್ರಾಮ ಲಿಂಗಸೂರು ತಾಲ್ಲೂಕಿನ ಜಾಲಹಳ್ಳಿ ಹೋಬಳಿಯ ಒಣ ಭೂಮಿ ಪ್ರದೇಶವಾಗಿದ್ದು, ಮಳೆಯಾಶ್ರಿತ ಬೆಳೆಗಳನ್ನ ಬೆಳೆಯಲಾಗುತ್ತದೆ. ಹೋಬಳಿ ಕೇಂದ್ರದಿಂದ ೧೨ ಕಿಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ೧.೫೦೦ ಜನಸಂಖ್ಯೆ ಇದ್ದು ೩೦೦ ಕುಟುಂಬಗಳಿವೆ. ಮುಸ್ಲಿಂರು, ಪರಿಶಿಷ್ಟ ಜಾತಿ. ಕಬ್ಬೇರು. ಲಿಂಗಾಯತ ಸಮುದಾಯಗಳು ಗ್ರಾಮದಲ್ಲಿ ನೆಲೆಸಿವೆ. ಶೇಕಡಾ ೫೫ರಷ್ಟು ಲಿಂಗಾಯತ ಸಮುದಾಯವರಿದ್ದಾರೆ. ಶೇಕಡಾ ೨೦ರಷ್ಟು ಪರಿಶಿಷ್ಟ ಜಾತಿಯವರಿದ್ದಾರೆ. ಶೇಕಡಾ ೫ರಷ್ಟು ಮುಸ್ಲೀಮ್ ಜನರಿದ್ದಾರೆ. ಗ್ರಾಮದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿವೆ. ೨ ಅಂಗನವಾಡಿ ಕೇಂದ್ರಗಳಿವೆ. ಆಸ್ಪತ್ರೆ ಸೌಲಭ್ಯಗಳಿಗಾಗಿ ಇಲ್ಲಿನ ಜನರು ಜಾಲಹಳ್ಳಿಗೆ ಬರುತ್ತಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಗಿದೆ.[೧೬]

ಇಲ್ಲಿಯೂ ಸಹ ಕಾರ್ಮಿಕರು ಮತ್ತು ಭೂ ರಹಿತ ಕಾರ್ಮಿಕರು ಉದ್ಯೋಗಕ್ಕಾಗಿಯೇ ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿರುವುದನ್ನ ಅಧ್ಯಯನಗಳಿಂದ ತಿಳಿಯಬಹುದಾಗಿದೆ.

ಬೈಯಪೂರ: ಈ ಗ್ರಾಮದಲ್ಲಿ ೯೨೦ ಜನಸಂಖ್ಯೆ ಇದೆ. ೬೫೦ ಕುಟುಂಬಗಳಿವೆ. ಗ್ರಾಮದಲ್ಲಿ ವಿವಿಧ ಜಾತಿಯ ಜನಗಳು ವಾಸಿಸುತ್ತಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ, ಲಿಂಗಾಯತರು, ಬಡಿಗೇರ ಮುಸ್ಲೀಮ್ ಸಮುದಾಯದವರಿದ್ದಾರೆ. ಇದರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಶೇಕಡಾ ೩೬ ರಷ್ಟಿದ್ದಾರೆ. ಶೇಕಡಾ ೬೨ ರಷ್ಟು ಜನಸಂಖ್ಯೆ ಇತರೇ ಸಮುದಾಯಗಳಿಗೆ ಸೇರಿದವರೂ ಇರುವುದನ್ನ ಕಾಣಲಾಗಿದೆ. ಹಾಗೆಯೇ, ಶೇಕಡಾ ೧೦ರಷ್ಟು ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರೆ, ಇನ್ನೂಳಿದ ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿದ್ದಾರೆ. ಪ್ರಾಥಮಿಕ ಶಾಲೆಯನ್ನ ಮಾತ್ರ ಹೊಂದಿದ್ದು, ಬಿಪಿಎಲ್ ಕಾರ್ಡುಗಳ ಜೊತೆಗೆ ಅಂತ್ಯೋದಯ ಕಾರ್ಡುಗಳನ್ನ ಹೊಂದಿರುವುದನ್ನ ಕೇಳಲಾಗಿದೆ.[೧೯] ಆರೋಗ್ಯ ಸೇವೆಗಳಿಗೆ ಇಲ್ಲಿಂದ ೫–೬ ಕಿ.ಮೀ. ಪಕ್ಕದ ಪಟ್ಟಣಕ್ಕೆ ಹೋಗುತ್ತಾರೆ.

ಒಟ್ಟಾರೆಯಾಗಿ ಪ್ರಾದೇಶಿಕವಾಗಿ ಜಿಲ್ಲೆಯನ್ನು ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಂಗಡಿಸಲಾಗಿದೆ. ಪೂರ್ವ ಭಾಗದಲ್ಲಿ ಬಳ್ಳಾರಿ, ಹೊಸಪೇಟೆ, ಸಿರಗುಪ್ಪ ಮತ್ತು ಸಂಡೂರು ತಾಲೂಕುಗಳಿವೆ. ಕೈಗಾರೀಕರಣ ಪ್ರಕ್ರಿಯೆಯಿಂದ ಪೂರ್ವ ತಾಲೂಕುಗಳು ಸಮೃದ್ಧಿಯಾಗಿವೆ. ಪಶ್ಚಿಮ ಭಾಗದ ತಾಲೂಕುಗಳು ಕೈಗಾರೀಕರಣ ಪ್ರಕ್ರಿಯೆಯಿಂದ ಹೊರಗೆ ಉಳಿದಿವೆ. ಅಭಿವೃದ್ಧಿಯ ಕೈಗಾರೀಕರಣ ಸವಲತ್ತುಗಳು ಪೂರ್ತಿಯಾಗಿ ಪೂರ್ವಭಾಗದ ತಾಲೂಕುಗಳಲ್ಲಿ ನೆಲೆಗೊಂಡಿವೆ. ಹೀಗಾಗಿ ಈ ಎರಡು ಭಾಗಗಳ ನಡುವೆ ಆರ್ಥಿಕ ಅಸಮಾನತೆ ಹೆಚ್ಚು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಮೇಲಿನ ಅಂಶಗಳನ್ನ ಆಧಾರಿಸುವ ಮೂಲಕ ಮೂರು ಜಿಲ್ಲೆಯಲ್ಲಿನ ಸ್ಥಿತಿಯನ್ನ ಅಧ್ಯಯನಗಳ ಮೂಲಕ ನೋಡಲಾಗಿದೆ.

ಕೃಷಿಕೂಲಿಯಲ್ಲಿ ಸ್ತ್ರೀ ಪುರುಷರ ನಡುವೆ ಶೇ. 100ರಷ್ಟು ಅಂತರವಿದ್ದು, ಇದನ್ನು ಸುಧಾರಿಸಲು ಮಹಿಳೆಯರನ್ನು ಸಂಘಟಿಸಿ ಪರ್ಯಾಯ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಅವರು ಭಾಗವಹಿಸುವಂತಹ ವ್ಯವಸ್ಥೆಯನ್ನ ನೋಡಬೇಕಾಗಿದೆ. ಜನಸಂಖ್ಯೆ, ಲಿಂಗಪ್ರಮಾಣ, ಸಾಕ್ಷರತೆ, ಕೆಲಸದಲ್ಲಿ ಭಾಗವಹಿಸುವ ಮತ್ತು ಮುಂತಾದವುಗಳಲ್ಲಿ ಪುರುಷರಿಗಿಂತ ಮಹಿಳೆಯರು ಹಿಂದೆ ಬಿದ್ದಿದ್ದು, ಕಾರಣವೆಂದರೆ ಅವರನ್ನು ರಕ್ತಹೀನತೆ, ಕುಟುಂಬದಲ್ಲಿನ ಸಾಮಾಜಿಕ ಕಾರಣಗಳು ಮುಂತಾದ ಆರೋಗ್ಯ ಸಮಸ್ಯೆಗಳು ಗಂಭೀರವಾಗಿ ಆವರಿಸಿಕೊಂಡಿರುವುದನ್ನ ಕಾಣಲಾಗಿದೆ. ಹಾಗೆಯೇ, ಜಿಲ್ಲೆಯು, ಜನಗಣತಿ ಮಾಹಿತಿ ತೋರಿಸಿರುವಂತೆ ವಸತಿಯ ವಿಷಯದಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದು, ಈ ದಿಶೆಯಲ್ಲಿ ಗಂಭೀರ

ಪ್ರಯತ್ನವಾಗಬೇಕಾಗಿದೆ. ಅಂತೆಯೇ, ಎಲ್ಲರಿಗೂ ವಸತಿ ಮತ್ತು ಇತರೆ ಅನುಕೂಲಗಳನ್ನು ಒದಗಿಸಲು ಮುಖ್ಯವಾಗಿ ಭಾಗವಹಿಸುವಿಕೆಯ ವಿಧಾನವನ್ನು ಅನುಸರಿಸಿಕೊಂಡು, ಸ್ವಯಂಸೇವಾ ಸಂಸ್ಥೆಗಳು ಮತ್ತು ಸ್ಥಳೀಯ ಜನರನ್ನು ಇದರಲ್ಲಿ ಭಾಗವಹಿಸುವಂತೆ ಮಾಡಿ ಅವರಿಗೆ ಸೂಕ್ತ ತಿಳುವಳಿಕೆಯನ್ನು ನೀಡಬೇಕಾಗಿದೆ. ಏಕೆಂದರೆ ಶೇ. ೫೪ ರಷ್ಟು ಕುಟುಂಬಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣವನ್ನ ಹೆಚ್ಚಿನ ಪ್ರಮಾಣದಲ್ಲಿ ಕಲಿಸುವಂತಹ ಕೆಲಸವಾಗಬೇಕಾಗಿದೆ. ಅಷ್ಟೇ ಮುಖ್ಯವಾದ ಅಂಶವೆಂದರೆ ಶಿಕ್ಷಣಕ್ಕೆ ಸಂಬಂಧಿಸದಂತಹ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳನ್ನು- ಇವೆಲ್ಲವುಗಳನ್ನು ಕೈಗೊಂಡಾಗ ಮಾತ್ರ ಜಿಲ್ಲೆಗಳಲ್ಲಿ ಶಿಕ್ಷಣದ ಮೂಲಕ ಸರ್ವಾಂಗೀಣ ಅಭಿವೃದ್ಧಿಯನ್ನ ಮಾಡಲು ಸಾಧ್ಯವಾಗಿದೆ ಎಂದು ಅಧ್ಯಯನಗಳ ಮೂಲಕ ತಿಳಿದು ಬರುತ್ತದೆ.

ಕೊಪ್ಪಳ ಜಿಲ್ಲಾ ವಿವರಗಳು

ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ಜೊತೆಗೆ ಕೊಪ್ಪಳ ಜಿಲ್ಲೆಯನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಅಲ್ಲದೇ ಶಿಕ್ಷಣದಲ್ಲಿ ೨೫ನೇ ಸ್ಥಾನವನ್ನ ಹೊಂದಿದೆ. ಅಂದರೆ, ಜನರ ಬದುಕನ್ನ ಸುಸ್ಥಿತಿಯಲ್ಲಿಡಲು ವಲಸೆಯ ಮೇಲೆ ಅವಲಂಬನೆಯಾಗಿದ್ದು ಅದರ ಪ್ರಮಾಣ ಹೆಚ್ಚಾಗಿರುವುದನ್ನ ಸಹ ಈ ಜಿಲ್ಲೆಯಲ್ಲಿಯೂ ಕಾಣಬಹುದಾಗಿದೆ. ಜಿಲ್ಲೆಯ ಸಾಕ್ಷರತೆ ಕನಿಷ್ಠವಾಗಿರುವಂತೆ ಆರೋಗ್ಯ ಸೌಲಭ್ಯಗಳು ಕನಿಷ್ಠವಾಗಿರುವುದನ್ನ ಕಾಣಲಾಗಿದೆ. ಕೊಪ್ಪಳ ಜಿಲ್ಲೆಯ ಪ್ರದೇಶದಲ್ಲಿ ಒಣ ಭೂಮಿಯನ್ನ ಹೊಂದಿದ್ದು ಕೃಷಿ ಕೂಲಿ ಕಾರ್ಮಿಕರು ಹೆಚ್ಚಾಗಿರುವುದನ್ನ ಅಧ್ಯನಗಳ ಮೂಲಕ ಕಾಣಲಾಗಿದೆ. ಕೃಷಿ ಕೂಲಿ ಕಾರ್ಮಿಕರ ಬದುಕು ಆರ್ಥಿಕವಾಗಿ ಕೆಳಮಟ್ಟದಲ್ಲಿರಲಾಗಿದೆ. ಕೃಷಿ ಕೂಲಿ ಕಾರ್ಮಿಕರಲ್ಲಿ ಸಾಕ್ಷರತೆ ಪ್ರಮಾಣ ಹಾಗೂ ಆದಾಯ ಕಡಿಮೆ ಇದ್ದು ಬಡತನ ಕೂಡಿದ ಗ್ರಾಮೀಣ ಪ್ರದೇಶಗಳನ್ನ ನೋಡಲಾಗಿದೆ. ಹೀಗೆ ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶಗಳು ಬಡತನ, ಹಸಿವು, ಅನಕ್ಷರತೆ, ವಲಸೆ ಎಂಬಿತ್ಯಾದಿ ಸವಾಲುಗಳನ್ನ ಎದರಿಸುತ್ತಿರುವುದನ್ನ ಅಧ್ಯಯನದ ಸಂದರ್ಭದಲ್ಲಿ ಕಾಣಲಾಗುತ್ತದೆ. ಇಂತಹ ಹಲವಾರು ಸಮಸ್ಯೆಗಳು ಜಿಲ್ಲೆಯ ಸಾಮಾಜಿಕ ಆರ್ಥಿಕ ಸ್ಥಿತಿ-ಗತಿಯನ್ನ ಎದರು ನೋಡುತ್ತಿವೆ.

೨.೧೮. ಜಿಲ್ಲೆಯ ವಿವರ

ಕೊಪ್ಪಳ ಜಿಲ್ಲೆಯು ರಾಜ್ಯದ ನೈರುತ್ಯ ಭಾಗದಲ್ಲಿದೆ. ಪೂರ್ವಕ್ಕೆ ಬಳ್ಳಾರಿ ಜಿಲ್ಲೆ, ಉತ್ತರಕ್ಕೆ ಕುಷ್ಟಗಿ, ಬಾಗಲಕೋಟೆ ಜಿಲ್ಲೆಗಳು, ಪಶ್ಚಿಮಕ್ಕೆ ಗದಗ, ದಕ್ಷಿಣಕ್ಕೆ ದಾವಣಗೆರೆ ಜಿಲ್ಲೆಗಳನ್ನು ಒಳಗೊಂಡಿದೆ. ೫೫೭೦ ಚ.ಕಿ.ಮೀ.ನಷ್ಟು ಭೌಗೋಳಿಕ ಪ್ರದೇಶ ಹೊಂದಿದೆ. ಇದು ವಿಸ್ತೀರ್ಣದಲ್ಲಿ ರಾಜ್ಯದ ಆರನೇ ದೊಡ್ಡ ಜಿಲ್ಲೆ. ಈ ಜಿಲ್ಲೆಯು ನಾಲ್ಕು ತಾಲ್ಲುಕುಗಳನ್ನು ಒಳಗೊಂಡಿದೆ.

ಗಂಗಾವತಿ, ಕೊಪ್ಪಳ, ಕುಷ್ಟಗಿ, ಹಾಗೂ ಯಲಬುರ್ಗಾ ತಾಲ್ಲೂಕುಗಳಾಗಿವೆ. ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿರುವ ಗ್ರಾಮೀಣ ಪ್ರದೇಶಗಳು ಕೊಳವೆ ಬಾವಿಗಳ ಮೂಲಕ ನೀರಿನ ವ್ಯವಸ್ಥೆಯನ್ನ ಪಡೆಯುತ್ತಿವೆ. ಈ ಜಿಲ್ಲೆಯಾದ್ಯಾಂತ ಕೃಷಿಯನ್ನ ತಕ್ಕಮಟ್ಟಗೆಯ ಪ್ರಮಾಣದಲ್ಲಿ ಅವಲಂಬಿಸಿದ್ದು ಅದರಲ್ಲಿ ತೋಟಾಗಾರಿಕೆ ಬೆಳೆಗಳನ್ನ ಮತ್ತು ಕೃಷಿ ಬೆಳೆಗಳ ಬೆಳೆಯುತ್ತಾರೆ. ಕೊಪ್ಪಳವನ್ನ ಕರ್ನಾಟಕದ ಧಾರ್ಮಿಕ ನೆಲೆಯನ್ನ ಹೊಂದಿರುವ ಒಂದು ಪುಣ್ಯ ಕ್ಷೇತ್ರ ಎಂದು ಕರೆಯಲಾಗುತ್ತದೆ. ಇಂತಹ ವಿಶೇಷತೆಗಳನ್ನ ಹೊಂದಿರುವ ಜಿಲ್ಲೆಯಲ್ಲಿ ನೀರಾವರಿ ಪ್ರದೇಶಗಳು ತಕ್ಕಮಟ್ಟಗೆ ಇದ್ದು ಅದರಲ್ಲಿಯೂ ಸಾಕ್ಷರತೆಯಲ್ಲಿ ಯಾವ ಮಟ್ಟವನ್ನ ಕಂಡುಕೊಂಡಿದ್ದಾವೆ ಎಂಬುದನ್ನ ಮನಗಾಣಲು ಗ್ರಾಮೀಣ ಪ್ರದೇಶಗಳನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

೨.೧೯. ಭೌಗೋಳಿಕ ಹಿನ್ನೆಲೆ

ಮೇಲಿನ ಅಂಶವನ್ನ ಪರಿಗಣಿಸುತ್ತಾ ಈ ಜಿಲ್ಲೆಯಲ್ಲಯೂ ಸಹ ವರ್ಷದ ಹೆಚ್ಚಿನ ಅವಧಿಯು ಹವಾಮಾನದಿಂದ ಕೂಡಿದ್ದು, ಬೇಸಿಗೆಯಲ್ಲಿ ತಕ್ಕಮಟ್ಟಿನ ಉಷ್ಣಾಂಶ ಹೊಂದಿರುವದನ್ನ ಕಾಣಲಾಗಿದೆ. ಹಾಗೆಯೇ ಮಳೆ ಪ್ರಮಾಣ ಹೆಚ್ಚಾಗಿ ಆಗುತ್ತಿದ್ದರೂ ಬೇಸಿಗೆ ಕಾಲದಲ್ಲಿ ಬರದ ಪರಿಣಾಮವನ್ನ ಎದರಿಸುವಂತಹ ಸಂದರ್ಭವನ್ನ ಕಾಣಲಾಗಿದೆ.

೨..೨೦. ಕೃಷಿಯ ವಿವರ

ಜಿಲ್ಲೆಯಲ್ಲಿ ಹಲವು ರೀತಿಯ ವಾಣಿಜ್ಯ ಬೆಳೆಗಳನ್ನ ಬೆಳೆಯುವುದರ ಜೊತೆಗೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ಆಹಾರ ಸಂಸ್ಕರಣೆ ಪ್ರಮುಖ ಚಟುವಟಿಕೆಗಲಾಗಿವೆ. ಮುಂದುವರಿದು, ಸೂರ್ಯಕಾಂತಿ, ಶೇಂಗಾ ಮತ್ತು ಹತ್ತಿ ಇತ್ಯಾದಿಗಳನ್ನ ಬೆಳೆಲಾಗುತ್ತದೆ. ಹತ್ತಿ ತಂಬಾಕು ಮತ್ತು ಗೋದಿ ಬೆಳೆಯಲಾಗುತ್ತದೆ. ಬೇಸಿಗೆ ಅವಧಿಯಲ್ಲಿ ಭತ್ತ, ಹತ್ತಿ, ಜೋಳ, ಶೇಂಗಾ ಸಹಾ ಬೆಳೆಯಲಾಗುತ್ತದೆ. ತೋಟಗಾರಿಕೆಯ ಬೆಳೆಗಳೆಗಳಾದ ನಿಂಬೆ, ಮಾವು, ದಾಳಿಂಬೆ ಮತ್ತು ಪರಂಗಿ ಹಣ್ಣನ್ನು ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ತರಕಾರಿಗಳೆಂದರೆ ಟೂಮೆಟೋ, ಬದನೆಕಾಯಿ, ಹಾಲು ಉತ್ಪಾದನೆ ಮತ್ತು ಕೋಳಿ ಸಾಗಾಣಿಕೆಯನ್ನು ಅಧ್ಯಯನಗಳ ಸಂದರ್ಭದಲ್ಲಿ ಕಾಣಬಹುದಾಗಿದೆ.


೨.೨೧. ಜನಸಂಖ್ಯೆ ವಿವರ

೨೦೧೧ರ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧೩.೮೯.೨೦ ಲಕ್ಷವಿದ್ದು ಇದರಲ್ಲಿ ಗ್ರಾಮೀಣ ಜನಸಂಖ್ಯೆ ೧೧.೫೬೨.೧೬ ಲಕ್ಷದಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೮೩.೨೫ ರಷ್ಟಿದೆ. ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೨.೮೮ ಲಕ್ಷ ಕುಟುಂಬಗಳಿವೆ. ಮುಂದುವರಿದು. ಕೆಳಗೆ ನೀಡಲಾಗಿರುವ ಕೊಷ್ಟಕದ ಮೇರಿಗೆ ಅಂಶವನ್ನ

ಪರಿಗಣಿಸಿದಾಗ ೧೯೯೧ರಿಂದ ೨೦೦೧ರ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆಯ ದರ ದಾಖಲೆಯ ಶೇಕಡಾ ೨೩.೯೩ ರಷ್ಟಿದ್ದು ಅಲ್ಲದೇ, ೨೦೦೧ ರಿಂದ ೨೦೧೧ ರದ ಬೆಳವಣಿಗೆ ದರ ಶೇಕಡಾ ೧೬.೨೧ರಷ್ಟಿದೆ ಅದರಂತೆ ೨೦೧೧ರ ಜಿಲ್ಲೆಯ ಜನಸಂಖ್ಯೆ ೧೩,೮೯೯.೨೦ ರಷ್ಟಿದ್ದು ಗ್ರಾಮೀಣ ಜನಸಂಖ್ಯೆ ೧೧೫೬೨೧೬ ರಷ್ಟಿದೆ. ಹಾಗೂ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕೊಪ್ಪಳ ಜಿಲ್ಲೆಯ ಪ್ರಮಾಣ ೩.೧೬ರಷ್ಟಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಂಡು ಕೊಳ್ಳಲಾಯಿತು.

ಪ್ರದೇಶ	೨೦೦೧			೨೦೧೧		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಗ್ರಾಮೀಣ	೬೧೭೩೩೨	೬೧೧೮೭೧	೧೨.೨೯.೨೦೩	೭,೮೫೬೬೯	೩೭೦೫೪೭	೧೧೫೬೨೧೬
ನಗರ	೨.೧೫೦೨೦	೨.೩೯೮೯	೪.೧೯೦೦೯	೧೫೨೫೬೫	೮೧೧೩೯	೨೩೩೭೦೪
ಒಟ್ಟು	೮೩೨೩೫೨	೮.೧೫೫೬೦	೧೬,೪೮೨೧೨	೯೩೮೨೩೪	೪೫೧೬೮೬	೧೩೮೯೯೨೦

ಮೂಲ: ಕೊಪ್ಪಳ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧- ೨೦೧೨





೨.೨೨. ಜಿಲ್ಲೆಯ ಜನಸಾಂದ್ರತೆ ಮತ್ತು ಲಿಂಗಾನುಪಾತ

೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಾಂದ್ರತೆ ಪ್ರತಿ ಚದರ ಕಿಲೋ ಮೀಟರ್‌ಗೆ ೨೩೪ ಜನರಿದ್ದಾರೆ. ಇದು ೨೦೦೧ರ ಜನಗಣತಿ ಪ್ರಕಾರ ೧೯೮ ಇತ್ತು. ಲಿಂಗಾನುಪಾತದಲ್ಲಿ ಸ್ವಲ್ಪ ಹೆಚ್ಚಳವಾಗಿದೆ. ೨೦೦೧ ರ ಜನಗಣತಿ ಪ್ರಕಾರ ೯೮೩, ೨೦೧೧ ರ ಜನಗಣತಿ ಪ್ರಕಾರ ೯೮೬ ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ೦-೦೬ ವರ್ಷದ ಮಕ್ಕಳ ಸಂಖ್ಯೆ ೨೦೧೧ರ ಜನಗಣತಿ ಪ್ರಕಾರ ಮಕ್ಕಳ ಲಿಂಗಾನುಪಾತ ೯೫೮ ಇದ್ದು ೨೦೦೧ ರ ಜನಗಣತಿ ಪ್ರಕಾರ ಇದು ೯೫೩ ರಷ್ಟಿತ್ತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ದಶಕವಾರು ಜನಸಂಖ್ಯೆಯನ್ನ ನೋಡಿದಾಹ ಹೆಚ್ಚಾಗಿರುವುದನ್ನ ಕಾಣಲಾಗಿದೆ ಎಂದು ಹೇಳಲಾಗುತ್ತದೆ.


೨.೨೩. ಶಿಕ್ಷಣದ ವಿವರ


ಕೆಳಗೆ ನೀಡಲಾಗಿರುವ ಕೊಪ್ಪಳ ಜಿಲ್ಲಾ ಶಿಕ್ಷಣದ ವಿವರ

ವರ್ಗೀಕರಣ	೨೦೦೧	೨೦೧೧	ದಶಕವಾರು ಹೆಚ್ಚಳ
ಪುರುಷ	೪೮.೫	೫೧.೯೦	೩.೪
ಮಹಿಳೆ	೫೧.೫	೪೯.೧೦	೨.೪
ಒಟ್ಟು	೧೦೦	೧೦೦	೫.೮

ಮಾಹಿತಿಯ ಮೂಲ: ಕೊಪ್ಪಳ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧-೧೨.

ಲಂಬಚಿತ್ರ ೨.೨. ಕೊಪ್ಪಳ ಜಿಲ್ಲಾ ಶಿಕ್ಷಣದ ಲಿಂಗವಾರು ವರ್ಗೀಕರಣ ಪ್ರಮಾಣ





ಮೇಲಿನ ಅಂಕಿಅಂಶಗಳನ್ನ ನೋಡಿದಾಗ ಜಿಲ್ಲೆಯಲ್ಲಿ ೨೦೧೦-೧೧ಕ್ಕೆ ಪ್ರಾಥಮಿಕ ಶಾಲೆಗಳು ೭೯೮೯೪ ಇದ್ದು, ಅದರಲ್ಲಿ ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಗ್ರಾಮೀಣ ಸಾಕ್ಷರತೆ ನೋಡುವುದಾದರೆ ಒಟ್ಟು ಗ್ರಾಮೀಣ ಸಾಕ್ಷರತೆ ಶೇಕಡಾ ೬೬.೦೫ ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಶೇಕಡಾ ೭೭.೧೨ ರಷ್ಟಿದ್ದರೆ ಮಹಿಳೆಯರದ್ದು ಕೇವಲ ಶೇಕಡಾ ೫೪.೮೫ ರಷ್ಟಿದೆ. ಕೊಪ್ಪಳ ಜಿಲ್ಲೆಯ ಸಾಕ್ಷರತೆ ರಾಜ್ಯದ ಮತ್ತು ರಾಷ್ಟ್ರದ ಸರಾಸರಿಗಿಂತ ಕಡಿಮೆ ಇರುವುದನ್ನ ಅಧ್ಯಯನಗಳಿಂದ ತಿಳಿಯಬಹುದಾಗಿದೆ. ೨೦೦೧ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತೆ ಶೇಕಡಾ ೬೩.೪೨ ರಷ್ಟಿತ್ತು.

ತಾಲ್ಲೂಕುವಾರು ಸಾಕ್ಷರತೆ ಮಾಹಿತಿ ಮಾತ್ರ ನೀಡಲಾಗಿದೆ.

ತಾಲ್ಲೂಕು	೨೦೧೧			
	ಪ್ರದೇಶ	**ಪುರುಷ**	**ಮಹಿಳೆ**	**ಒಟ್ಟು**
ಕೊಪ್ಪಳ	ಗ್ರಾಮೀಣ	೭೮.೬೭	೫೬.೭೦	೬೭.೮೨
	ನಗರ	೮೭.೨೮	೭೪.೩೧	೮೦.೮೧
ಗಂಗಾವತಿ	ಗ್ರಾಮೀಣ	೭೪.೨೩	೫೫.೧೭	೬೪.೬೫
	ನಗರ	೮೩.೨೬	೬೭.೧೬	೭೫.೧೭
ಕುಷ್ಟಗಿ	ಗ್ರಾಮೀಣ	೭೭.೨೫	೫೩.೧೬	೬೫.೩೪
	ನಗರ	೮೮.೧೬	೭೫.೫೦	೮೧.೩೩
ಯಲಬುರ್ಗಾ	ಗ್ರಾಮೀಣ	೭೯.೦೪	೫೩.೯೩	೬೬.೫೮
	ನಗರ	೮೮.೫೮	೭೦.೯೦	೭೯.೮೪
ಒಟ್ಟು		೭೮.೫೪	೫೭.೫೫	೬೮.೦೯

ಮೂಲ: ಕೊಪ್ಪಳ ಅಂಕಿ ಅಂಶ ನೋಟ ೨೦೧೧-೧೨

ಲಂಬಚಿತ್ರ ೨.೩. ತಾಲೂಕುವಾರು ಗ್ರಾಮೀಣ, ನಗರ ಸಾಕ್ಷರತೆ ಪ್ರಮಾಣ




	ಕೊಪ್ಪಳ		ಗಂಗಾವತಿ		ಕುಷ್ಟಗಿ		ಯಲಬುರ್ಗಾ	
	ಗ್ರಾಮೀಣ	ನಗರ	ಗ್ರಾಮೀಣ	ನಗರ	ಗ್ರಾಮೀಣ	ನಗರ	ಗ್ರಾಮೀಣ	ನಗರ
೨೦೧೧ ಪುರುಷ	೭೮.೬೭	೮೭.೨೮	೭೪.೨೩	೮೩.೨೬	೭೭.೨೫	೮೮.೧೬	೭೯.೦೪	೮೮.೫೮
೨೦೧೧ ಮಹಿಳೆ	೫೬.೭	೭೪.೩೧	೫೫.೧೭	೬೭.೧೬	೫೩.೧೬	೭೫.೫	೫೩.೯೩	೭೦.೯
೨೦೧೧ ಒಟ್ಟು	೬೭.೮೨	೮೦.೮೧	೬೪.೬೫	೭೫.೧೭	೬೫.೩೪	೮೧.೩೩	೬೬.೫೮	೭೯.೮೪

ಮೇಲಿನ ಕೋಷ್ಟಕದಲ್ಲಿ ನೋಡುವಂತೆ ಜಿಲ್ಲೆಯಲ್ಲಿ ಯಲಬುರ್ಗಾ ತಾಲ್ಲೂಕಿನ ಸಾಕ್ಷರತೆ ಪ್ರಮಾಣ ಅತ್ಯಂತ ಕಡಿಮೆ ಇದೆ. ವಿಶೇಷವಾಗಿ ಮಹಿಳಾ ಸಾಕ್ಷರತೆ ಪ್ರಕಾರ ತುಂಬಾ ಕಡಿಮೆ ಇರುವುದನ್ನ ಕಾಣಲಾಗಿದೆ. ಅದೇ ರೀತಿ ಜಿಲ್ಲೆಯಾದ್ಯಂತ ಮಹಿಳಾ ಸಾಕ್ಷರತೆ ಕಡಿಮೆ ಇದ್ದು, ಶಿಕ್ಷಣ ಸೌಲಭ್ಯದಿಂದ ವಂಚಿತರಾಗಿರುವುದನ್ನು ಅಧ್ಯಯನಗಳು ದೃಢಪಡಿಸುತ್ತವೆ.

೨.೨೪. ಅಧ್ಯಯನ ಗ್ರಾಮಗಳ ಪರಿಚಯ

ಕೊಪ್ಪಳ ಜಿಲ್ಲೆ ನಾಲ್ಕು ತಾಲ್ಲೂಕುಗಳಲ್ಲಿರುವ ಐದು ಗ್ರಾಮಗಳ ಪ್ರಾಥಮಿಕ ಶಾಲೆಯನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಮುಂದುವರಿದು, ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಸಾಕ್ಷರತೆಯು ಹಿಂದುಳಿದಿದ್ದು ಕೃಷಿ ಕಾರ್ಮಿಕರನ್ನು ಹೊಂದಿದ ಜಿಲ್ಲೆಯಾಗಿರುವುದನ್ನ ನೋಡಲಾಗುತ್ತದೆ. ಜಿಲ್ಲೆಯ ಒಟ್ಟು ಕೆಲಸಗಾರರಲ್ಲಿ ಶೇಕಡಾ ೬೭.೦೦ರಷ್ಟು ಜನರು ಕೃಷಿ ಕಾರ್ಮಿಕರಾಗಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೧೮.೬೧ ರಷ್ಟು ಜನರು ಪರಿಶಿಷ್ಟ ಜಾತಿಗೆ ಸೇರಿದ್ದು ಶೇಕಡಾ ೧೧.೮೨ ರಷ್ಟು ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಇದರಲ್ಲಿ ಗಂಗಾವತಿ ತಾಲ್ಲೂಕಿನ ಶೇಕಡಾ ೧೭.೦೯ ರಷ್ಟು ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಜಿಲ್ಲೆಯಲ್ಲಿ ಅತೀ ಹೆಚ್ಚು ಪರಿಶಿಷ್ಟ ಪಂಗಡದ ಜನರನ್ನು ಹೊಂದಿರುವ ತಾಲ್ಲೂಕು ಗಂಗಾವತಿಯಲ್ಲಿರುವುದನ್ನ ಕಾಣಲಾಗಿದೆ. ಹೀಗೆ ಯಲಬುರ್ಗಾ ಹಿಂದುಳಿದಿದ ತಾಲ್ಲೂಕಿನಲ್ಲಿರುವ ಗ್ರಾಮೀಣ ಪ್ರದೇಶದ ಶಾಲೆಗಳನ್ನ ಹಾಗೂ ನೀರಾವರಿ ಪ್ರದೇಶವಾಗಿರುವ ಕೊಪ್ಪಳ ತಾಲ್ಲೂಕಿನಲ್ಲಿರುವ ಗ್ರಾಮೀಣ ಪ್ರದೇಶಗಳನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.



ಜಿಲ್ಲೆಯಲ್ಲಿರುವ ತಾಲೂಕಿನ ಗ್ರಾಮಗಳಾದ ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್ ಗ್ರಾಮಗಳನ್ನು ಅಧ್ಯಯನಕ್ಕೆ ಅಯ್ಕೆ ಮಾಡಿಕೊಳ್ಳಲಾಗಿದೆ. ಐದು ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಶಾಲೆಗಳ ಮಕ್ಕಳ ಪಾಲಕರನ್ನ ಮತ್ತು ಶಿಕ್ಷಕರನ್ನ ಸಂದರ್ಶನಕ್ಕೆ ಒಳಪಡಿಸಲಾಯಿತು. ಗಂಗಾವತಿ, ಕೊಪ್ಪಳ, ಕುಷ್ಠಗಿ ಮತ್ತು ಯಲಬುರ್ಗಾ ತಾಲೂಕುಗಳು ೧೩೩೪, ೧೩೭೭, ೧೩೬೪ ಮತ್ತು ೧೪೯೦ ಚ.ಕಿ. ಭೂ ವಿಸ್ತೀರ್ಣ ಹೊಂದಿದೆ. ನಾಲ್ಕು ತಾಲ್ಲೂಕುಗಳಲ್ಲಿ ೨೦ ನಾಡ ಕಛೇರಿಗಳಿದ್ದು, ೨೦ ಹೋಬಳಿಗಳಿಂದ ೧೩೪ ಗ್ರಾಮ ಪಂಚಾಯಿತಿಗಳಿವೆ. ೫೯೫ ಜನ ವಸತಿ ಇರುವ ೩೪ ಜನ ವಸತಿ ಇಲ್ಲದ ಒಟ್ಟು ೬೨೯ ಕಂದಾಯ ಗ್ರಾಮಗಳಿವೆ. ೨೦೧೧ರ ಜನಗಣತಿ ಪ್ರಕಾರ ತಾಲ್ಲೂಕುಗಳಲ್ಲಿ ೪೫,೯೦೫, ೩೭೭೭೮೧, ೨೮೪೭೯೨ ಮತ್ತು ೨೬೭೪೪೨ ಕ್ರಮವಾಗಿ ತಾಲೂಕುಗಳು ಜನಸಂಖ್ಯೆಯನ್ನ ಹೊಂದಿವೆ. ಹಾಗೆಯೇ, ಸಾಕ್ಷರತೆ ೨೦೧೧ ಪ್ರಕಾರ ನಗರ ಪ್ರದೇಶದಲ್ಲಿ ಒಟ್ಟಾಗಿ ಪರುಷರಲ್ಲಿ ಶೇಕಡಾ ೮೫.೪೮ ರಷ್ಠು ಸಾಕ್ಷರತೆ ಇದ್ದರೆ, ಮಹಿಳೆಯರಲ್ಲಿ ಶೇಕಡಾ ೭೦.೯೦ ರಷ್ಟು ಸಾಕ್ಷರತೆ ಇದೆ. ಗ್ರಾಮೀಣ ಭಾಗದಲ್ಲಿ ಪುರುಷರಲ್ಲಿ ಶೇಕಡಾ ೭೭.೧೨ ರಷ್ಟು ಸಾಕ್ಷರತೆ ಇದ್ದರೆ, ಮಹಿಳೆಯರಲ್ಲಿ ಶೇಕಡಾ ೫೪.೮೫ ರಷ್ಟು ಸಾಕ್ಷರರು ಇದ್ದಾರೆ. ೧.೬೦ ಲಕ್ಷ ಒಟ್ಟು ಕೆಲಸಗಾರರಿದ್ದಾರೆ. ಇದರಲ್ಲಿ ೧,೯೪,೯ರಷ್ಟು ಕೃಷಿ ಕಾರ್ಮಿಕರಿದ್ದಾರೆ ಮತ್ತು ೪೦,೫೯೧ ಕೃಷಿಯೇತರ ಕೆಲಸಗಾರರಿದ್ದಾರೆ. ೫೫೨೪೯೫ ಹೆಕ್ಟರ್ ಭೌಗೋಳಿಕ ವಿಸ್ತೀರ್ಣದಲ್ಲಿ ೨೯೪೫೧ ಹೆಕ್ಟರ್ ಅರಣ್ಯವಿದೆ. ೪೦೫೯೧ ಹೆಕ್ಟರ್ ವ್ಯವಸಾಯೇತರ ಭೂಮಿ ಇದೆ.೧೮

ಅಧ್ಯಯನ ಗ್ರಾಮಗಳ ವಿವರ

ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಗ್ರಾಮಗಳು	**ತಾಲ್ಲೂಕು**	**ಜಿಲ್ಲೆ**
ಗೊಂಡಬಾಳು	ಕೊಪ್ಪಳ	ಕೊಪ್ಪಳ
ಹ್ಯಾಟಿ	ಕೊಪ್ಪಳ	ಕೊಪ್ಪಳ
ಹಿರೆಬಗನಾಳ್	ಕೊಪ್ಪಳ	ಕೊಪ್ಪಳ
ಕಾತರಕಿ	ಕೊಪ್ಪಳ	ಕೊಪ್ಪಳ
ಸಿಂದೋಗಿ	ಕೊಪ್ಪಳ	ಕೊಪ್ಪಳ

ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಶಾಲೆಗಳ ಅಧ್ಯಯನ ಸಂದರ್ಭದಲ್ಲಿ ಪ್ರಶ್ನಾವಳಿ ವಿಧಾನವನ್ನ ಅನುಸರಿಸಲಾಯಿತು. ಅಧ್ಯಯನ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಶಾಲೆಯಲ್ಲಿರುವ

ಮಕ್ಕಳ ಪಾಲಕರು ಮತ್ತು ಶಿಕ್ಷಕರನ್ನ ವ್ಯವಸ್ಥಿತವಾದ ಸಂದರ್ಶನ ನಡೆಸಲಾಯಿತು. ಇವರನ್ನು ಮನೆಗಳಲ್ಲಿ ವೈಯಕ್ತಿಕವಾಗಿ ಹಾಗೂ ಗುಂಪು ಚರ್ಚೆಗಳ ಮೂಲಕ ಸಂದರ್ಶಿಸಲಾಯಿತು. ಅದೇ ರೀತಿ ಗ್ರಾಮಗಳಲ್ಲಿ ಯಾದೃಚ್ಚಿಕ ವಿಧಾನದ ಮೂಲಕ ಮನೆಗಳನ್ನು ಆಯ್ಕೆ ಮಾಡಿಕೊಂಡು ಮನೆ ಮನೆ ಭೇಟಿ ಮಾಡಲಾಯಿತು. ಸಂದರ್ಶನದೊಂದಿಗೆ ಅವಲೋಕನ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಗ್ರಾಮೀಣ ಪ್ರದೇಶಗಳನ್ನ ನೀರಾವರಿ ಸೌಲಭ್ಯವಿರುವ ಹಾಗೂ ಇನ್ನೊಂದು ಒಣ ಭೂಮಿಯನ್ನ ಹೊಂದಿದಂತಹ ಪ್ರದೇಶದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಯಿತು. ನೀರಾವರಿಯಿಂದ ಅಭಿವೃದ್ಧಿಯನ್ನ ಹೊಂದಿರುವುದು ಮತ್ತು ಹಿಂದುಳಿದ ಪ್ರದೇಶಗಳನ್ನ ವಿಶೇಷವಾಗಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಈ ಅಧ್ಯಯನದಲ್ಲಿ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನ ಎರಡನ್ನು ಅನುಸರಿಸಲಾಗಿದೆ. ಅದರಲ್ಲಿ ಈ ಅಧ್ಯಯನದ ಮಾಹಿತಿಗಳ ಮೂಲಕ ಕೈಗೊಳ್ಳುವ ವಿಶ್ಲೇಷಣೆ ಸ್ಥಳೀಯ ಶಾಲಾ ವ್ಯವಸ್ಥೆ, ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಕಂಡುಬರುವ ಫಲಿತಾಂಶಗಳನ್ನು ಸಾರ್ವತ್ರಿಕವಾಗಿ ಎಲ್ಲ ಕ್ಷೇತ್ರಗಳಲ್ಲಿ ಇದೇ ಪರಿಸ್ಥಿತಿ ಇರುತ್ತದೆ ಎಂದು ಹೇಳುವುದು ಸರಿಯಿಲ್ಲ. ಅದ್ದರಿಂದ ಅಧ್ಯಯನದ ಪಲಿತಾಂಶ ಮತ್ತು ಪರಿಣಾಮಗಳು ಈ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ. ಆದರೂ ಈ ಅಧ್ಯಯನದ ಫಲಿತಾಂಶಗಳ ಆಧಾರದ ಮೇಲೆ ಪ್ರಾಥಮಿಕ ಶಾಲೆಗಳ ವ್ಯವಸ್ಥೆ, ನೀತಿ ನಿಯಮಗಳು, ಧೋರಣೆಗಳ ಮೂಲಕ ಈ ವ್ಯವಸ್ಥೆಯ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಇಂತಹ ಸಂಗತಿಗಳ ಮೂಲಕ ವ್ಯವಸ್ಥೆಯ ಸಮಸ್ಯೆಗಳನ್ನು ಗುರುತಿಸಲು ಈ ಅಧ್ಯಯನ ಸಹಾಯಕಾರಿಯಾಗುತ್ತದೆ. ಅದಕ್ಕೆ ಪರಿಹಾರವನ್ನು ಕಂಡುಕೊಳ್ಳವಲ್ಲಿ ನೆರವಾಗುತ್ತದೆ ಎಂಬ ಆಶಯ ಇಟ್ಟುಕೊಳ್ಳಲಾಗಿದೆ.

೨.೨೫. ಅಧ್ಯಯನ ಗ್ರಾಮಗಳ ಸಾಮಾಜಿಕ, ಆರ್ಥಿಕ ವಿವರ

ಗೊಂಡಬಾಳ: ಗ್ರಾಮದಲ್ಲಿ ಒಟ್ಟು ೩೬೦೦ ಜನಸಂಖ್ಯೆ ಇದ್ದು, ಅದರಲ್ಲಿ ೬೮೦ ಕುಟುಂಬಗಳಿರುವುದನ್ನ ನೋಡಲಾಗಿದೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಮುಸ್ಲಿಂ, ಲಿಂಗಾಯತ ಮತ್ತು ಕುರುಬ ಜನಾಂಗದ ಜನರು ವಾಸವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೨೫ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಶೇಕಡಾ ೧೭ರಷ್ಟು ಲಿಂಗಾಯತ ಮತ್ತು ಕುರುಬ ಜನಾಂಗಕ್ಕೆ ಸೇರಿದ್ದಾರೆ. ಶೇಕಡಾ ೧೦ರಷ್ಟು ಮುಸ್ಲಿಂರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು. ೫೦೦ಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳಿದ್ದು, ೪೫ ಕ್ಕೂ ಹೆಚ್ಚು ಅಂತ್ಯೋದಯ ಕಾರ್ಡುಗಳಿವೆ. ೭೦ ಎಪಿಎಲ್ ಕಾರ್ಡುಗಳಿವೆ. ೧ ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ.

ಗ್ರಾಮದಲ್ಲಿ ೩೦೦ಕ್ಕೂ ಹೆಚ್ಚು ಸಣ್ಣ ರೈತರಿದ್ದಾರೆ. ಅಲ್ಲದೇ, ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಜನರು ಕೃಷಿ ಕಾರ್ಮಿಕರಿದ್ದು, ಭೂ ರಹಿತ ಕಾರ್ಮಿಕರು ಇದ್ದಾರೆ. ಕುರುಬರು, ಪರಿಶಿಷ್ಟ ಪಂಗಡದವರು ಭೂ ರಹಿತ ಕಾರ್ಮಿಕರು ಸೇರಿರುವುದನ್ನ ಅಧ್ಯಯನಗಳಲ್ಲಿ ತಿಳಿಯಲಾಗಿದೆ. ಬೇಸಿಗೆಗಾಲ ಬಂದಿತು ಎಂದರೆ ಹೊಟ್ಟೆಪಾಡಿಗೆಗಾಗಿ ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕೇಳಿದಾಗ ಬಂದ ಮಾಹಿತಿಯಿದು. ಹಾಗಾಗಿ ಗ್ರಾಮೀಣ ಜನರು ತಮ್ಮ ಮನೆಯನ್ನೆ ತೊರೆದು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಯಿತು. ಅಭಿವೃದ್ಧಿಯ ಸೌಲಭ್ಯಗಳನ್ನ ಪಡೆದು ಅಭಿವೃದ್ಧಿ ಪ್ರಕ್ರಿಯೆ ಪಾಲ್ಗೊಳ್ಳುವ ಬದಲು ಈ ಪ್ರಕ್ರಿಯೆಯಿಂದ ಹೊರಗುಳಿದು ದಿಕ್ಕಿಲ್ಲದೆ ಬದುಕನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜನರು ಇನ್ನೂ ಶಿಕ್ಷಿತರಾಗಿ ತಮ್ಮ ಸಮಾಜದಲ್ಲಿ ಯೋಗ್ಯ ಬದುಕನ್ನು ಕಟ್ಟಿಕೊಳ್ಳಲು ಶಿಕ್ಷಣವನ್ನ ಪಡೆದಾಗ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನ ಹೇಳಲಾಗಿದೆ.

ಹ್ಯಾಟಿ: ಗ್ರಾಮದಲ್ಲಿ ಒಟ್ಟು ೩೦೦೦ ಜನಸಂಖ್ಯೆ ಇದ್ದು, ಅದರಲ್ಲಿ ೬೫೦ ಕುಟುಂಬಗಳಿರುವುದನ್ನ ನೋಡಲಾಗಿದೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಮುಸ್ಲಿಂ, ಲಿಂಗಾಯತ ಮತ್ತು ಕುರುಬ ಜನಾಂಗದ ಜನರು ವಾಸವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೬೦ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಶೇಕಡಾ ೩೦ರಷ್ಟು ಲಿಂಗಾಯತ ಮತ್ತು ಕುರುಬ ಜನಾಂಗಕ್ಕೆ ಸೇರಿದ್ದಾರೆ. ಶೇಕಡಾ ೧೦ರಷ್ಟು ಮುಸ್ಲಿಂರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು. ೫೦೦ಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳಿದ್ದು, ೪೫ ಕ್ಕೂ ಹೆಚ್ಚು ಅಂತ್ಯೋದಯ ಕಾರ್ಡುಗಳಿವೆ. ೭೦ ಎಪಿಎಲ್ ಕಾರ್ಡುಗಳಿವೆ. ೨ ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಏದೆ. ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಸಣ್ಣ ರೈತರಿದ್ದಾರೆ. ಅಲ್ಲದೇ, ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಜನರು ಕೃಷಿ ಕಾರ್ಮಿಕರಿದ್ದು, ಭೂ ರಹಿತ ಕಾರ್ಮಿಕರು ಇದ್ದಾರೆ. ಕುರುಬರು, ಪರಿಶಿಷ್ಟ ಪಂಗಡಕ್ಕೆ ಭೂ ರಹಿತ ಕಾರ್ಮಿಕರು ಸೇರಿದ್ದಾರೆ. ಬೇಸಿಗೆಗಾಲ ಬಂದಿತು ಎಂದರೆ ಹೊಟ್ಟೆಪಾಡಿಗೆಗಾಗಿ ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕೇಳಿದಾಗ ಬಂದ ಮಾಹಿತಿಯಿದು. ಹಾಗಾಗಿ ಗ್ರಾಮೀಣ ಜನರು ತಮ್ಮ ಮನೆಯನ್ನೆ ತೊರೆದು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಯಿತು. ಅಭಿವೃದ್ಧಿಯ ಸೌಲಭ್ಯಗಳನ್ನ ಪಡೆದು

ಅಭಿವೃದ್ಧಿ ಪ್ರಕ್ರಿಯೆ ಪಾಲ್ಗೊಳ್ಳುವ ಬದಲು ಈ ಪ್ರಕ್ರಿಯೆಯಿಂದ ಹೊರಗುಳಿದು ದಿಕ್ಕಿಲ್ಲದೆ ಬದುಕನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜನರು ಇನ್ನೂ ಶಿಕ್ಷಿತರಾಗಿ ತಮ್ಮ ಸಮಾಜದಲ್ಲಿ ಯೋಗ್ಯ ಬದುಕನ್ನು ಕಟ್ಟಿಕೊಳ್ಳಲು ಶಿಕ್ಷಣವನ್ನ ಪಡೆದಾಗ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನ ಹೇಳಲಾಗಿದೆ.

ಹಿರೆಬಗನಾಳ್: ಗ್ರಾಮದಲ್ಲಿ ಒಟ್ಟು ೩೯೭೦ ಜನಸಂಖ್ಯೆ ಇದ್ದು, ಅದರಲ್ಲಿ ೧೧೫೦ ಕುಟುಂಬಗಳಿರುವುದನ್ನ ನೋಡಲಾಗಿದೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಮುಸ್ಲಿಂ, ಲಿಂಗಾಯತ ಮತ್ತು ಕುರುಬ ಜನಾಂಗದ ಜನರು ವಾಸವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೬೦ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಶೇಕಡಾ ೩೦ರಷ್ಟು ಲಿಂಗಾಯತ ಮತ್ತು ಕುರುಬ ಜನಾಂಗಕ್ಕೆ ಸೇರಿದ್ದಾರೆ. ಶೇಕಡಾ ೧೦ರಷ್ಟು ಮುಸ್ಲಿಂರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು. ೭೮೦ಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳಿದ್ದು, ೬೫ ಕ್ಕೂ ಹೆಚ್ಚು ಅಂತ್ಯೋದಯ ಕಾರ್ಡುಗಳಿವೆ. ೭೦ ಎಪಿಎಲ್ ಕಾರ್ಡುಗಳಿವೆ. ೨ ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವಿದೆ. ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಸಣ್ಣ ರೈತರಿದ್ದಾರೆ. ಅಲ್ಲದೇ, ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಜನರು ಕೃಷಿ ಕಾರ್ಮಿಕರಿದ್ದು, ಭೂ ರಹಿತ ಕಾರ್ಮಿಕರು ಇದ್ದಾರೆ. ಕುರುಬರು, ಪರಿಶಿಷ್ಟ ಪಂಗಡಕ್ಕೆ ಭೂ ರಹಿತ ಕಾರ್ಮಿಕರು ಸೇರಿದ್ದಾರೆ. ಬೇಸಿಗೆಗಾಲ ಬಂದಿತು ಎಂದರೆ ಹೊಟ್ಟೆಪಾಡಿಗೆಗಾಗಿ ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕೇಳಿದಾಗ ಬಂದ ಮಾಹಿತಿಯಿದು. ಹಾಗಾಗಿ ಗ್ರಾಮೀಣ ಜನರು ತಮ್ಮ ಮನೆಯನ್ನೆ ತೊರೆದು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಯಿತು. ಅಭಿವೃದ್ಧಿಯ ಸೌಲಭ್ಯಗಳನ್ನ ಪಡೆದು ಅಭಿವೃದ್ಧಿ ಪ್ರಕ್ರಿಯೆ ಪಾಲ್ಗೊಳ್ಳುವ ಬದಲು ಈ ಪ್ರಕ್ರಿಯೆಯಿಂದ ಹೊರಗುಳಿದು ದಿಕ್ಕಿಲ್ಲದೆ ಬದುಕನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜನರು ಇನ್ನೂ ಶಿಕ್ಷಿತರಾಗಿ ತಮ್ಮ ಸಮಾಜದಲ್ಲಿ ಯೋಗ್ಯ ಬದುಕನ್ನು ಕಟ್ಟಿಕೊಳ್ಳಲು ಶಿಕ್ಷಣವನ್ನ ಪಡೆದಾಗ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನ ಹೇಳಲಾಗಿದೆ.

ಕಾತರಕಿ(ಗೂಡ್ಲನೂರು): ಗ್ರಾಮದಲ್ಲಿ ಒಟ್ಟು ೩೬೦೦ ಜನಸಂಖ್ಯೆ ಇದ್ದು, ಅದರಲ್ಲಿ ೬೮೦ ಕುಟುಂಬ ಗಳಿರುವುದನ್ನ ನೋಡಲಾಗಿದೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಮುಸ್ಲಿಂ, ಲಿಂಗಾಯತ ಮತ್ತು ಕುರುಬ ಜನಾಂಗದ ಜನರು ವಾಸವಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ

ಶೇಕಡಾ ೨೫ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದರೆ, ಶೇಕಡಾ ೧೭ರಷ್ಟು ಲಿಂಗಾಯತ ಮತ್ತು ಕುರುಬ ಜನಾಂಗಕ್ಕೆ ಸೇರಿದ್ದಾರೆ. ಶೇಕಡಾ ೧೦ರಷ್ಟು ಮುಸ್ಲಿಂರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕಾಣಲಾಗಿದೆ. ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು. ೫೦ಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳಿದ್ದು, ೪೫ ಕ್ಕೂ ಹೆಚ್ಚು ಅಂತ್ಯೋದಯ ಕಾರ್ಡುಗಳಿವೆ. ೭೦ ಎಪಿಎಲ್ ಕಾರ್ಡುಗಳಿವೆ. ೧ ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಸಣ್ಣ ರೈತರಿದ್ದಾರೆ. ಅಲ್ಲದೇ, ಗ್ರಾಮದಲ್ಲಿ ೩೦೦ ಕ್ಕೂ ಹೆಚ್ಚು ಜನರು ಕೃಷಿ ಕಾರ್ಮಿಕರಿದ್ದು, ಭೂ ರಹಿತ ಕಾರ್ಮಿಕರು ಇದ್ದಾರೆ. ಕುರುಬರು, ಪರಿಶಿಷ್ಟ ಪಂಗಡದವರು ಭೂ ರಹಿತ ಕಾರ್ಮಿಕರು ಸೇರಿರುವುದನ್ನ ಅಧ್ಯಯನಗಳಲ್ಲಿ ತಿಳಿಯಲಾಗಿದೆ. ಬೇಸಿಗೆಗಾಲ ಬಂದಿತು ಎಂದರೆ ಹೊಟ್ಟೆಪಾಡಿಗೆಗಾಗಿ ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ಕೇಳಿದಾಗ ಬಂದ ಮಾಹಿತಿಯಿದು. ಹಾಗಾಗಿ ಗ್ರಾಮೀಣ ಜನರು ತಮ್ಮ ಮನೆಯನ್ನೆ ತೊರೆದು ಸ್ವತಂತ್ರವಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಹೋಗುವುದನ್ನ ಅಧ್ಯಯನಗಳ ಸಂದರ್ಭದಲ್ಲಿ ತಿಳಿಯಲಾಯಿತು. ಅಭಿವೃದ್ಧಿಯ ಸೌಲಭ್ಯಗಳನ್ನ ಪಡೆದು ಅಭಿವೃದ್ಧಿ ಪ್ರಕ್ರಿಯೆ ಪಾಲ್ಗೊಳ್ಳುವ ಬದಲು ಈ ಪ್ರಕ್ರಿಯೆಯಿಂದ ಹೊರಗುಳಿದು ದಿಕ್ಕಿಲ್ಲದೆ ಬದುಕನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜನರು ಇನ್ನೂ ಶಿಕ್ಷಿತರಾಗಿ ತಮ್ಮ ಸಮಾಜದಲ್ಲಿ ಯೋಗ್ಯ ಬದುಕನ್ನು ಕಟ್ಟಿಕೊಳ್ಳಲು ಶಿಕ್ಷಣವನ್ನ ಪಡೆದಾಗ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನ ಹೇಳಲಾಗಿದೆ.

ಸಿಂದೋಗಿ : ಈ ಗ್ರಾಮದಲ್ಲಿ ೯೭೦ ಜನಸಂಖ್ಯೆ ಇದೆ. ೬೫೦ ಕುಟುಂಬಗಳಿವೆ. ಗ್ರಾಮದಲ್ಲಿ ವಿವಿಧ ಜಾತಿಯ ಜನಗಳು ವಾಸಿಸುತ್ತಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ, ಲಿಂಗಾಯತರು. ಬಡಿಗೇರ ಮುಸ್ಲೀಮ್ ಸಮುದಾಯದವರಿದ್ದಾರೆ. ಇದರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಶೇಕಡಾ ೩೬ ರಷ್ಟಿದ್ದಾರೆ. ಶೇಕಡಾ ೬೭ ರಷ್ಟು ಜನಸಂಖ್ಯೆ ಇತರೇ ಸಮುದಾಯಗಳಿಗೆ ಸೇರಿದವರೂ ಇರುವುದನ್ನ ಕಾಣಲಾಗಿದೆ. ಹಾಗೆಯೇ, ಶೇಕಡಾ ೧೦ರಷ್ಟು ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರೆ. ಇನ್ನೂಳಿದ ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿದ್ದಾರೆ. ಪ್ರಾಥಮಿಕ ಶಾಲೆಯನ್ನ ಮಾತ್ರ ಹೊಂದಿದ್ದು, ಬಿಪಿಎಲ್ ಕಾರ್ಡುಗಳ ಜೊತೆಗೆ ಅಂತ್ಯೋದಯ ಕಾರ್ಡುಗಳನ್ನ ಹೊಂದಿರುವುದನ್ನ ಕೇಳಲಾಗಿದೆ.[೯] ಆರೋಗ್ಯ ಸೇವೆಗಳಿಗೆ ಇಲ್ಲಿಂದ ೫–೬ ಕಿಮೀ ಪಕ್ಕದ ಪಟ್ಟಣಕ್ಕೆ ಹೋಗುತ್ತಾರೆ.

ಒಟ್ಟಾರೆಯಾಗಿ ಪ್ರಾದೇಶಿಕವಾಗಿ ಜಿಲ್ಲೆಯನ್ನು ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಂಗಡಿಸಲಾಗಿದೆ. ಪೂರ್ವ ಭಾಗದಲ್ಲಿ ಬಳ್ಳಾರಿ, ಹೊಸಪೇಟೆ, ಸಿರಗುಪ್ಪ ಮತ್ತು ಸಂಡೂರು ತಾಲೂಕುಗಳಿವೆ. ಕೈಗಾರೀಕರಣ ಪ್ರಕ್ರಿಯೆಯಿಂದ ಪೂರ್ವ ತಾಲೂಕುಗಳು ಸಮೃದ್ಧಿಯಾಗಿವೆ. ಪಶ್ಚಿಮ ಭಾಗದ ತಾಲೂಕುಗಳು ಕೈಗಾರೀಕರಣ ಪ್ರಕ್ರಿಯೆಯಿಂದ ಹೊರಗೆ ಉಳಿದಿವೆ. ಅಭಿವೃದ್ಧಿಯ ಕೈಗಾರೀಕರಣ ಸವಲತ್ತುಗಳು ಪೂರ್ತಿಯಾಗಿ ಪೂರ್ವಭಾಗದ ತಾಲೂಕುಗಳಲ್ಲಿ ನೆಲೆಗೊಂಡಿವೆ. ಹೀಗಾಗಿ ಈ ಎರಡು ಭಾಗಗಳ ನಡುವೆ ಆರ್ಥಿಕ ಅಸಮಾನತೆ ಹೆಚ್ಚು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಮೇಲಿನ ಅಂಶಗಳನ್ನ ಆಧಾರಿಸುವ ಮೂಲಕ ಮೂರು ಜಿಲ್ಲೆಯಲ್ಲಿನ ಸ್ಥಿತಿಯನ್ನ ಅಧ್ಯಯನಗಳ ಮೂಲಕ ನೋಡಲಾಗಿದೆ.

ಕೃಷಿಕೂಲಿಯಲ್ಲಿ ಸ್ತ್ರೀ ಪುರುಷರ ನಡುವೆ ಶೇ. ೧೦೦ರಷ್ಟು ಅಂತರವಿದ್ದು, ಇದನ್ನು ಸುಧಾರಿಸಲು ಮಹಿಳೆಯರನ್ನು ಸಂಘಟಿಸಿ ಪರ್ಯಾಯ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಅವರು ಭಾಗವಹಿಸುವಂತಹ ವ್ಯವಸ್ಥೆಯನ್ನ ನೋಡಬೇಕಾಗಿದೆ. ಜನಸಂಖ್ಯೆ, ಲಿಂಗಪ್ರಮಾಣ, ಸಾಕ್ಷರತೆ, ಕೆಲಸದಲ್ಲಿ ಭಾಗವಹಿಸುವ ಮತ್ತು ಮುಂತಾದವುಗಳಲ್ಲಿ ಪುರುಷರಿಗಿಂತ ಮಹಿಳೆಯರು ಹಿಂದೆ ಬಿದ್ದಿದ್ದು, ಕಾರಣವೆಂದರೆ ಅವರನ್ನು ರಕ್ತಹೀನತೆ, ಕುಟುಂಬದಲ್ಲಿನ ಸಾಮಾಜಿಕ ಕಾರಣಗಳು ಮುಂತಾದ ಆರೋಗ್ಯ ಸಮಸ್ಯೆಗಳು ಗಂಭೀರವಾಗಿ ಆವರಿಸಿಕೊಂಡಿರುವುದನ್ನ ಕಾಣಲಾಗಿದೆ. ಹಾಗೆಯೇ, ಜಿಲ್ಲೆಯು, ಜನಗಣತಿ ಮಾಹಿತಿ ತೋರಿಸಿರುವಂತೆ ವಸತಿಯ ವಿಷಯದಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದು, ಈ ದಿಶೆಯಲ್ಲಿ ಗಂಭೀರ ಪ್ರಯತ್ನವಾಗ ಬೇಕಾಗಿದೆ. ಅಂತೆಯೇ, ಎಲ್ಲರಿಗೂ ವಸತಿ ಮತ್ತು ಇತರೆ ಅನುಕೂಲಗಳನ್ನು ಒದಗಿಸಲು ಮುಖ್ಯವಾಗಿ ಭಾಗವಹಿಸುವಿಕೆಯ ವಿಧಾನವನ್ನು ಅನುಸರಿಸಿಕೊಂಡು, ಸ್ವಯಂಸೇವಾ ಸಂಸ್ಥೆಗಳು ಮತ್ತು ಸ್ಥಳೀಯ ಜನರನ್ನು ಇದರಲ್ಲಿ ಭಾಗವಹಿಸುವಂತೆ ಮಾಡಿ ಅವರಿಗೆ ಸೂಕ್ತ ತಿಳುವಳಿಕೆಯನ್ನು ನೀಡಬೇಕಾಗಿದೆ. ಏಕೆಂದರೆ ಶೇ. ೫೪ರಷ್ಟು ಕುಟುಂಬಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣವನ್ನ ಹೆಚ್ಚಿನ ಪ್ರಮಾಣದಲ್ಲಿ ಕಲಿಸುವಂತಹ ಕೆಲಸವಾಗಬೇಕಾಗಿದೆ. ಅಷ್ಟೇ ಮುಖ್ಯವಾದ ಅಂಶವೆಂದರೆ ಶಿಕ್ಷಣಕ್ಕೆ ಸಂಬಂಧಿಸದಂತಹ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳನ್ನು –ಇವೆಲ್ಲವುಗಳನ್ನು ಕೈಗೊಂಡಾಗ ಮಾತ್ರ ಜಿಲ್ಲೆಗಳಲ್ಲಿ ಶಿಕ್ಷಣದ ಮೂಲಕ ಸರ್ವಾಂಗೀಣಾಭಿವೃದ್ಧಿಯನ್ನ ಮಾಡಲು ಸಾಧ್ಯವಾಗಿದೆ ಎಂದು ಅಧ್ಯಯನಗಳ ಮೂಲಕ ತಿಳಿದು ಬರುತ್ತದೆ.

ಕೊನೆ ಟಿಪ್ಪಣಿಗಳು

೧. ದ ಮೈಸೂರು ಟೌನ್ ಮುನ್ಸಿಪಾಲಿಟೀಸ್ ಆಕ್ಟ್–೧೯೫೧, ಗವರ್ನಮೆಂಟ್ ಪ್ರೆಸ್, ಬೆಂಗಳೂರು, ೨೪ ಅಕ್ಟೋಬರ್ ೧೯೫೫, ಪು. ೨೪೩.

೨. ಭಾರತ ಗೆಜೆಟಿಯರ್, ಮೈಸೂರು, ಬಳ್ಳಾರಿ ಜಿಲ್ಲೆ, ಗವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೭೨, ಪು. ೫೧೫

೩. ಚಂದ್ರಶೇಖರ್ ಟಿ.ಆರ್., ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಗದಗ; ಪ್ರಭು ಪ್ರಿಂಟಿಂಗ್ ಪ್ರೆಸ್, ೧೯೯೪, ಪು. ೯.

೪. ಚಂದ್ರಶೇಖರ್ ಟಿ.ಆರ್.(ಸಂ), ಜಿಲ್ಲಾ ಅಭಿವೃದ್ಧಿ ಮಾಹಿತಿಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪, ಪು. ೬.

೫. ಕರ್ನಾಟಕ ಸರ್ಕಾರ (೨೦೦೨). ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನಾಧಿಕಾರ ಸಮಿತಿಯ ಅಂತಿಮ ವರದಿ ೨೦೦೨. ಕರ್ನಾಟಕ ಸರ್ಕಾರ, ಯೋಜನಾ ಆಯೋಗ, ಬೆಂಗಳೂರು, ಪುಟ. ೩೦೮)

೬. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹೈ ಪವರ್ ಕಮಿಟಿ ಫಾರ್ ರಿ ಅಡ್ರೆಸಲ್ ಆಫ್ ರೀಜನಲ್ ಇಂಬ್ಯಾಲೆನ್ಸ್ ಫೈನಲ್ ರಿಪೋರ್ಟ್, ಪಾರ್ಟ್.೩, ಜೂನ್-೨೦೦೨, ಬೆಂಗಳೂರು; ಪು. ೧೩೦

೭. ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್ಸ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್‌ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು; ಗವರ್ನ್‌ಮೆಂಟ್ ಆಫ್ ಕರ್ನಾಟಕ ೨೦೧೧

೮. ಶೇಷಾದ್ರಿ ಬಿ., ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮, ಪು. ೧

೯. ಚಂದ್ರಶೇಖರ್ ಟಿ.ಆರ್., ಪೂರ್ವೋಕ್ತ, ೧೯೯೯, ಪು. ೪೯

೧೦. ಜಿಲ್ಲಾ ಪಂಚಾಯತ್(೨೦೧೨). ರಾಯಚೂರು ಜಿಲ್ಲಾ ಅಂಕಿಅಂಶಗಳ ನೋಟ, ಕರ್ನಾಟಕ ಸರ್ಕಾರ, ಪು. ೫೧

೧೧. ಅದೇ, ಪು. ೧೫

೧೨. ಮೈಸೂರು ಸ್ಟೇಟ್ ಗೆಜೆಟಿಯರ್, ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್, ಮೈಸೂರು ಸರಕಾರ, ೧೯೭೨, ಬೆಂಗಳೂರು, ಪು. ೯೫

೧೩. ಜಿಲ್ಲಾ ಪಂಚಾಯತ್ (೨೦೧೨). ಕೊಪ್ಪಳ ಜಿಲ್ಲಾ ಅಂಕಿಅಂಶಗಳ ನೋಟ, ಕರ್ನಾಟಕ ಸರ್ಕಾರ, ಪು. ೫೯

೧೪. ಅದೇ, ಪು. ೨೧೩

೧೫. ಅದೇ, ಪು. ೨೧೩

೧೬. ಅದೇ, ಪು. ೨೧೩

೧೭. ಬಳ್ಳಾರಿ ಡಿಸ್ಟ್ರಿಕ್ಟ್ ಹ್ಯಾಂಡ್‌ಬುಕ್, ಪೂರ್ವೋಕ್ತ, ಪು. ೧

೧೮. ಜಿಲ್ಲಾ ಪಂಚಾಯತ್ (೨೦೧೨). ಕೊಪ್ಪಳ ಜಿಲ್ಲಾ ಅಂಕಿಅಂಶಗಳ ನೋಟ, ಕರ್ನಾಟಕ ಸರ್ಕಾರ, ಪು. ೫೯

೧೯. ಕರ್ನಾಟಕ ಸರ್ಕಾರ (೨೦೦೨). ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನಾಧಿಕಾರ ಸಮಿತಿಯ ಅಂತಿಮ ವರದಿ ೨೦೦೨. ಕರ್ನಾಟಕ ಸರ್ಕಾರ, ಯೋಜನಾ ಆಯೋಗ, ಬೆಂಗಳೂರು, ಪು. ೩೦೮

ಅಧ್ಯಾಯ ಮೂರು

ಪ್ರಾಥಮಿಕ ಶಾಲಾ ಶಿಕ್ಷಣಕ್ಕಿರುವ ಕಾರ್ಯಕ್ರಮಗಳು

ಕಾರ್ಯಕ್ರಮಗಳ ಉದ್ದೇಶ

ಕೊಪ್ಪಳ, ಬಳ್ಳಾರಿ, ರಾಯಚೂರು ಪ್ರಾಥಮಿಕ-

ಶಿಕ್ಷಣಗಳ ಕಾರ್ಯಕ್ರಮಗಳ ಪ್ರಕ್ರಿಯೆ

ಸರ್ಕಾರದ ಪ್ರಾಥಮಿಕ ಶಿಕ್ಷಣಕ್ಕಿರುವ ಕಾರ್ಯಕ್ರಮಗಳು

ಅಧ್ಯಾಯ ಮೂರು

ಪ್ರಾಥಮಿಕ ಶಾಲಾ ಶಿಕ್ಷಣಕ್ಕಿರುವ ಕಾರ್ಯಕ್ರಮಗಳ

ದೇಶದ ಅಭಿವೃದ್ಧಿಯನ್ನು ಕಾಣಬೇಕಾದರೆ ಶಿಕ್ಷಣವು ಪ್ರಮುಖವಾದ ಸಾಧನವಾಗಿದೆ. ಶಿಕ್ಷಣವನ್ನು ಪಡೆಯಲಿಕ್ಕೂ ಇವತ್ತಿನ ಸಂದರ್ಭದಲ್ಲಿ ಎರಡು ವರ್ಗಗಳಾಗಿ ನಿರ್ಮಾಣಗೊಂಡಿವೆ. ಅದರಲ್ಲಿ ಒಂದು ಉಳ್ಳವರು ಶಿಕ್ಷಣವನ್ನು ಪಡೆಯಬಹುದು ಮತ್ತೊಂದು ದುರ್ಬಲರು ಶಿಕ್ಷಣವನ್ನು ಪಡೆಯದೆ ಹಾಗೆಯೇ ಅನಕ್ಷರಸ್ಥರಾಗಿ ಉಳ್ಳವರ ಸೇವೆಯನ್ನು ಮಾಡುತ್ತಾ ತಮ್ಮ ಗೌರಾನ್ವಿತ ಜೀವನ ನಡೆಸದೆ ಅಭಿವೃದ್ಧಿಯಿಂದ ವಂಚಿತಗೊಂಡು ಹಿಂದುಳಿದಿದ್ದಾರೆ ಎನ್ನಾಲಾಗಿದೆ. ಇಂತಹ ದೃಷ್ಟಿಯನ್ನು ಇಟ್ಟುಕೊಂಡು ಘನತೆಯತ್ತಾ ಸರ್ಕಾರಗಳು ಬಡವರ ಶಿಕ್ಷನಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಶಿಕ್ಷಣದಿಂದ ವಂಚಿತ ಸಮುದಾಯಗಳಿಗೆ ನಾಲ್ಕು ಅಕ್ಷರ ಕಲಿಸುವ ಹಿನ್ನೆಲೆಯಾಗಿ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಹಾಗಾಗಿ ಕಾರ್ಯಕ್ರಮಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಬೆನ್ನೆಲುಬಾಗಿದೆ. ಅವು ಯೋಜನೆಗಾರ ಮತ್ತು ಸದ್ಯದ ಸ್ಥಿತಿಗಳಡಿಯಲ್ಲಿ ಪೂರ್ವ ನಿರ್ಧಾರಿತ ಗುರಿಯನ್ನು ತಲುಪಲು ಅಥವಾ ಪೂರ್ವ ನಿರ್ಧಾರಿತ ಸಮಯದೊಳಗೆ ಗುರಿಗಳನ್ನು ನಿಯಮಿಸಲು ನಿರ್ದಿಷ್ಟ ಅಂಶಗಳನ್ನು ತಿಳಿಸುತ್ತವೆ. ಕಾರ್ಯಕ್ರಮವು ಒಂದು ಪ್ರಕ್ರಿಯೆ ಆಗಿದ್ದು, ಆರ್ಥಿಕ ಮತ್ತು ಸಾಮಾಜಿಕ ಬೆಲೆ ಮತ್ತು ಲಾಭಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿರುತ್ತದೆ. ಇದರಿಂದ ಬಂಡವಾಳ ಮತ್ತು ಹಲವಾರು ಅಭಿವೃದ್ಧಿ ಸಾಧ್ಯತೆಗಳಿರುತ್ತವೆ. ಕಾರ್ಯಕ್ರಮಗಳ ಮಾದರಿಯ ಪರಿಮಾಣದ ಪ್ರಕಾರ ಕಾರ್ಯಕ್ರಮನ್ನು ಹೀಗೆ ಅರ್ಥೈಸಬಹುದು. ಒದಗಿದ ಅಡಚಣೆಗಳ ಅಡಿಯಲ್ಲಿ ವಸ್ತುನಿಷ್ಠ ಕಾರ್ಯಗಳನ್ನು ಹೆಚ್ಚಿಸುವಲ್ಲಿ ಪರ್ಯಾಯ ಬಂಡವಾಳದ ಉತ್ಕೃಷ್ಟ ಮಿಶ್ರಣವನ್ನು ನಿರ್ಧರಿಸುವ

ಒಂದು ಪ್ರಕ್ರಿಯೆ ಎನ್ನಬಹುದು. ಹಾಗಿದ್ದರೂ ಕಾರ್ಯಕ್ರಮವನ್ನು ಭವಿಷ್ಯದಲ್ಲಿ ನಿರ್ದಿಷ್ಟ ಗುರಿಗಳನ್ನು ಸಾಧಿಸುವ ಒಂದು ವ್ಯವಸ್ಥಿತ, ವಿವೇಚಿತ ಮತ್ತು ನಿರಂತರ ಪ್ರಯತ್ನ ಎನ್ನಬಹುದು. ಕಾರ್ಯಕ್ರಮ ಈ ಪದವು ಒಂದು ವೇಳೆ ಗ್ರಾಮೀಣ ಹಾಗೂ ನಗರಗಳಿಗೆ ಸಂಬಂಧಿಸಿದಂತೆ ಬಳಸಿದಲ್ಲಿ ಅದು ಮನಸ್ಸಿನಲ್ಲಿ ಬೇರೆಯದೇ ಆದ ಭಾವನೆಯನ್ನು ತರುತ್ತದೆ. ಗ್ರಾಮೀಣ ಶಿಕ್ಷಣಕ್ಕೆಯಿರುವ ಕಾರ್ಯಕ್ರಮಗಳು ನಿರಂತರ ಪ್ರಗತಿಯನ್ನು ಹೊಂದುತ್ತಿರುವ ಸರ್ವಕಾಲದ ಒತ್ತು ನೀಡುವಂತಹ ವಿಷಯವಾಗಿದೆ. ಪ್ರಸ್ತುತ ವರ್ಷಗಳಲ್ಲಿ ಕಾರ್ಯಕ್ರಮವು ಮನುಷ್ಯ ಜೀವನದ ಒಂದು ಮುಖ್ಯವಾದ ವಿಷಯವಾಗಿದೆ.

ಮುಂದುವರಿದು, ಗುಲ್ಬರ್ಗಾ ವಿಭಾಗದಲ್ಲಿ ಶಾಲೆಯಿಂದ ಹೊರಗುಳಿದ ಮತ್ತು ಮಧ್ಯಂತರದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆಯು ತುಂಬಾ ಇದೆ. ಇತರೆ ಜಿಲ್ಲೆಗಳಿಗೆ ಹೋಲಿಸಿದಾಗ ೨೦೦೫ರ ಜನಗಣತಿ ಪ್ರಕಾರ ೦೬–೧೪ ವಯಸ್ಸಿನ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಸುಮಾರು ೬.೬೬ ಲಕ್ಷ (ಶೇ.೭.೩೮) ಕ್ಕಿಂತಲೂ ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಈ ಮಕ್ಕಳಲ್ಲಿ ಶೇ. ೫೪% ರಷ್ಟು ಮಕ್ಕಳು ಈಶಾನ್ಯ ಪ್ರದೇಶದ ಜಿಲ್ಲೆಗಳಿಗೆ ಸೇರಿದವರಾಗಿದ್ದಾರೆ. ೨೦೦೪ರ ಫೆಬ್ರವರಿಯಲ್ಲಿ ನಡೆದ ಮಕ್ಕಳ ಗಣತಿಯ ತಾತ್ಕಾಲಿಕ ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ೦೬–೧೪ ವರ್ಷದ ಒಟ್ಟು ಮಕ್ಕಳಲ್ಲಿ ಶೇ. ೪ ರಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಉತ್ತರ ಕರ್ನಾಟಕ ಪ್ರದೇಶದಲ್ಲಿ ಶೇ. ೬.೬೦ ರಷ್ಟಿದೆ. ಒಟ್ಟಾರೆ ಶೈಕ್ಷಣಿಕ ಪರಿಸರದ ಬೆಳವಣಿಗೆ ಮತ್ತು ಶೈಕ್ಷಣಿಕ ಮುಲಸೌಕರ್ಯ ಸೂಚ್ಯಂಕದ ದೃಷ್ಟಿಯಿಂದ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಶೇಕಡಾ ೬೫ ರಷ್ಟು ತಾಲೂಕುಗಳು ಇರುವುದು. ಈಶಾನ್ಯ ಕರ್ನಾಟಕ ಪ್ರದೇಶದಲ್ಲಿ ಇದರಿಂದ ಶಿಕ್ಷಣ ಮತ್ತು ಸಾಕ್ಷರತೆ ಕ್ಷೇತ್ರದಲ್ಲಿ ಸಂಪೂರ್ಣ ಅಭಿವೃದ್ಧಿ ಸಾಧಿಸುವುದು ಸಾಧ್ಯವಾಗಿಲ್ಲ ಎಂದು ಹೇಳಬಹುದು. ಇದೆಲ್ಲದಕ್ಕೂ ಏನು ಕಾರಣಗಳಿವೆ ಎಂಬುದು ತಿಳಿಯಬೇಕಾಗಿದೆ.

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಒಟ್ಟು ದಾಖಲಾತಿಯ ದರವು ೧೯೯೬–೯೭ರಲ್ಲಿ ಶೇ. ೯೨ ರಿಂದ ೨೦೦೦–೦೧ರಲ್ಲಿ ಶೇ. ೯೯ಕ್ಕೆ ಏರಿ ಪುನಃ ೨೦೦೩–೦೪ರಲ್ಲಿ ಶೇ. ೯೪.೧೪ಕ್ಕೆ ಇಳಿಮುಖವಾಯಿತು. ೧೯೯೮–೯೯ರಲ್ಲಿ ರಾಯಚೂರಿನಲ್ಲಿ ಅತಿ ಕಡಿಮೆ ಒಟ್ಟು ದಾಖಲಾತಿ ದರವಿದ್ದು, ಅದು ಉಡುಪಿಯಲ್ಲಿ ಅತಿ ಹೆಚ್ಚಾಗಿತ್ತು. ೨೦೦೦–೦೧ರಲ್ಲಿ ಒಟ್ಟು ದಾಖಲಾತಿ ದರದಲ್ಲಿ ರಾಯಚೂರಿನಲ್ಲಿ ಸ್ಥಾನಮಾನ(೭೪.೫೪)ದಲ್ಲಿ ಯಾವುದೇ ಬದಲಾವಣೆಯಾಗದೇ ಅದು ಇನ್ನೂ ಅತಿ ಕೆಳಸ್ಥಾನದಲ್ಲಿಯೇ ಇದ್ದರೆ ಬೆಂಗಳೂರು ನಗರ(೧೨೮.೨೧)ದಲ್ಲಿ ಅತಿ ಹೆಚ್ಚು ಒಟ್ಟು ದಾಖಲಾತಿ ದರ ಇರುತ್ತದೆ. ೨೦೦೩–೦೪ರಲ್ಲಿ ದಕ್ಷಿಣ ಕನ್ನಡದಲ್ಲಿ ಅತಿ ಹೆಚ್ಚು

ಒಟ್ಟು ದಾಖಲಾತಿ ದರವಿತ್ತು. ಈಗಲೂ ಸಹ ರಾಯಚೂರಿನಲ್ಲಿ ಅತಿ ಕಡಿಮೆ ಒಟ್ಟು ದಾಖಲಾತಿ ದರವಿರುತ್ತದೆ. ೨೦೦೩-೦೪ರಲ್ಲಿ ಬಾಲಕಿಯರ ಶಾಲಾ ಸರಾಸರಿ ವರ್ಷಗಳು ೧೦ ಜಿಲ್ಲೆಗಳಲ್ಲಿ (ಹೈದರಾಬಾದ್ ಕರ್ನಾಟಕದ ಎಲ್ಲಾ ೫ ಜಿಲ್ಲೆಗಳು, ಚಾಮರಾಜನಗರ, ದಾವಣಗೇರಿ, ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ) ರಾಜ್ಯದ ಸರಾಸರಿಗಿಂತ ಕಡಿಮೆ ಇರುತ್ತದೆ. ಸಂವಿಧಾನದ ನಿರ್ದೇಶನದನ್ವಯ ೧೪ ವರ್ಷ ವಯಸ್ಸಿನವರೆಗೆ ಕಡ್ಡಾಯ ಉಚಿತ ಶಿಕ್ಷಣವನ್ನು ಮಾದರಿಯನ್ನಾಗಿ ತೆಗೆದುಕೊಂಡಾಗ ಎಲ್ಲಾ ಮಕ್ಕಳ ಸರಾಸರಿ ೮ ವರ್ಷಗಳವರೆಗೆ ಶಾಲೆಗೆ ಹೋಗಬೇಕಾಗಿರುತ್ತದೆ. ಆದುದರಿಂದ ಪ್ರಸ್ತುತ ಸಾಧನೆಯ ಮಟ್ಟ ಈ ಗುರಿಗಿಂತ ಬಹಳ ಕೆಳಮಟ್ಟದಲ್ಲಿದೆ. ಶಾಲೆಯನ್ನು ಮಧ್ಯದಲ್ಲಿ ಬಿಡುವವರ ಪ್ರಮಾಣದ ಸೂಚ್ಯಂಕವು ಪ್ರಾಥಮಿಕ ಶಾಲಾ ವ್ಯವಸ್ಥೆಯ ಕಾರ್ಯಸಾಧಕತೆಯನ್ನು ಸೂಚಿಸುತ್ತದೆ. ಏಕೆಂದರೆ ಇದು ಮಾನವ ಸಂಪನ್ಮೂಲವು ವ್ಯರ್ಥವಾಗುವುದರ ಸೂಚನೆ ನೀಡುತ್ತದೆ. ಅದರ ಕಾರಣಗಳನ್ನು ಅಭ್ಯಾಸಿಸಬೇಕೆಂದುಕೊಂಡಿದ್ದೇನೆ.

ಒಂದನೇ ತರಗತಿಯಲ್ಲಿ ದಾಖಲಾತಿ ಹೊಂದಿದ ೧೦೦ ಮಕ್ಕಳಲ್ಲಿ ಸುಮಾರು ೪೫ ಮಕ್ಕಳು ಎಂಟನೇ ತರಗತಿಗೆ ತಲುಪುವ ಹೊತ್ತಿಗೆ ಶಾಲೆ ಬಿಟ್ಟು ಬಿಡುತ್ತಾರೆ ಯಾಕೆ? ಶಾಲೆಯಿಂದ ಹೊರಗುಳಿಯುವಿಕೆಯ ದರವು ವಿದ್ಯಾರ್ಥಿಗಳು ಒಂದನೇ ತರಗತಿಯಿಂದ ಮುಂದೆ ಸಾಗಿದಂತೆಲ್ಲಾ ಹೆಚ್ಚುತ್ತಾ ಹೋಗುತ್ತದೆ. ೨೦೦೩-೦೪ರ ಅಂಕಿ-ಅಂಶಗಳು ಒಂದನೇ ತರಗತಿಗೆ ದಾಖಲಾದ ೧೦೦ ಮಕ್ಕಳಲ್ಲಿ ಶೇ. ೧೧ ರಷ್ಟು ಮಕ್ಕಳು ೪ನೇ ತರಗತಿಯನ್ನು ಪೂರೈಸುವ ವೇಳೆಗೆ ಶಾಲೆಯಿಂದ ಹೊರಗುಳಿಯುತ್ತಾರೆ. ಶೇ. ೨೯ ರಷ್ಟು ಮಕ್ಕಳು ೭ನೇ ತರಗತಿಯು ಮುಗಿಯುವ ವೇಳೆಗೆ ಶಾಲೆಯಿಂದ ಹೊರಗುಳಿಯುತ್ತಾರೆ. ಹಾಗೂ ಶೇ. ೪೫ ರಷ್ಟು ಮಕ್ಕಳು ೮ನೇ ತರಗತಿಯ ಮುಕ್ತಾಯದ ಹೊತ್ತಿಗೆ ಶಾಲೆಯಿಂದ ಹೊರಗುಳಿಯುತ್ತಾರೆ. ಈ ದರವು ೧೯೯೨-೯೩ ರಿಂದ ೧೯೯೯-೨೦೦೦ರ ಅವಧಿಯಲ್ಲಿ ಅದು ಬಹಳಷ್ಟು (ಶೇ. ೫೯ ರಿಂದ ೫೪ ರಷ್ಟು) ಹೆಚ್ಚಾಗಿತ್ತು. ಪ್ರೌಢಶಾಲೆಯಲ್ಲಿ ಕೂಡ ಶಾಲೆಯಿಂದ ಹೊರಗಿರುವವರ ಸಂಖ್ಯೆ ಕೂಡ ಹೆಚ್ಚಾಗಿದೆ. ೧೯೯೯-೨೦೦೦ರಲ್ಲಿ ಶಾಲೆಯನ್ನು ಬಿಟ್ಟು ಹೋಗುವವರ ಪ್ರಮಾಣವು ಅತಿ ಕಡಿಮೆ. ಕೊಡಗು ಜಿಲ್ಲೆಯಲ್ಲಿ ಹಾಗೂ ಅತಿ ಹೆಚ್ಚು ಬಳ್ಳಾರಿ ಜಿಲ್ಲೆಯಲ್ಲಿ ಇತ್ತು. ೨೦೦೩-೦೪ರಲ್ಲಿ ಗುಲ್ಬರ್ಗಾ ಶೇ. ೭೬.೫೫ ಮತ್ತು ಬಳ್ಳಾರಿ ೭೫.೭೭ ಅತಿ ಹೆಚ್ಚು ಪ್ರಮಾಣದಲ್ಲಿದೆ. ೨೦೦೩-೦೪ ರಲ್ಲಿ ಹುಡುಗಿಯರು ಶಾಲೆ ಬಿಟ್ಟ ಹೋಗುವ ದರವು ಶೇ. ೭೯ ರಷ್ಟು ಅತಿ ಹೆಚ್ಚು (ಬಳ್ಳಾರಿ) ಗುಲ್ಬರ್ಗಾ ಜಿಲ್ಲೆಯಲ್ಲಿದೆ. ಒಟ್ಟಿನಲ್ಲಿ ಹೈದರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿ ಶಾಲೆ ಬಿಡುವವರ ಸಂಖ್ಯೆ ಅತೀ ಹೆಚ್ಚಾಗಿದೆ. ೧ ರಿಂದ ೧೦ನೇ ತರಗತಿಯಲ್ಲಿ ಬಾಲಕಿಯರು

ಶಾಲೆಯನ್ನು ತೊರೆಯುವಂತಹ ಅತಿ ಹೆಚ್ಚು ಪ್ರಮಾಣವು ಊಹಿಸಲಾಗದಷ್ಟು ಗಾತ್ರದಲ್ಲಿ ಮಾನವ ಸಂಪನ್ಮೂಲವು ಹಾಳಾಗುವುದನ್ನು ಸೂಚಿಸುತ್ತದೆ. ಇದು ಮಹಿಳಾ ವರ್ಗಕ್ಕೆ ಲಿಂಗಾಧರಿತ ವರ್ಗದ ದೃಷ್ಟಿಯಲ್ಲಿ ಹಾಗೂ ದೇಶಕ್ಕೂ ಉಂಟಾಗುವ ಒಂದು ನಷ್ಟ. ಇಲ್ಲಿ ದುರ್ಬಲ ಉಪವರ್ಗಕ್ಕೆ ಸೇರಿದವರು ಅಂದರೆ ಮಹಿಳೆಯರು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಶಿಕ್ಷಣದ ಮುಖ್ಯ ವಾಹಿನಿಯಿಂದ ಹೊರಬರುತ್ತಾರೆ. ಅವರು ಒಂದು ವೇಳೆ ಹೊರ ಬರದೇ ಇದ್ದರೆ ಶಿಕ್ಷಣ ವ್ಯವಸ್ಥೆಯು ಅವರಲ್ಲಿ ಉತ್ತಮ ಸಾಧನೆ ವಿದ್ಯಾರ್ಥಿಗಳಿಗೆ ಉತ್ತಮ ಫಲಗಳನ್ನು ನೀಡಬಹುದಿತ್ತು. ೨೦೦೪ರಲ್ಲಿ ಅತಿ ಹೆಚ್ಚು ಶೇಕಡಾವಾರು ಉತ್ತೀರ್ಣ ಹೊಂದಿದವರು ಉಡುಪಿ ಜಿಲ್ಲೆಯಲ್ಲಿದ್ದು ಅತಿ ಕಡಿಮೆ ಗುಲ್ಬರ್ಗಾ ಜಿಲ್ಲೆಯಲ್ಲಿರುತ್ತಾರೆ. ಶೈಕ್ಷಣಿಕ ಸೂಚ್ಯಂಕದಲ್ಲಿ ಗುಲ್ಬರ್ಗಾ ವಿಭಾಗದ ಜಿಲ್ಲೆಗಳು ಬಹಳ ಕೆಳಮಟ್ಟದಲ್ಲಿವೆ. ಇದಕ್ಕೆಲ್ಲ ಏನು ಕಾರಣಗಳು?

ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಇರುವಂತಹ ಕಾರ್ಯಕ್ರಮಗಳನ್ನು ನಾವು ಮೂರು ರೀತಿಯಾಗಿ ವಿಂಗಡಿಸಬಹುದಾಗಿದೆ. ಒಂದು ಮೂಲ ಸೌಕರ್ಯ ಅಭಿವೃದ್ಧಿ ಪಡಿಸಲು ರೂಪಗೊಂಡ ಕಾರ್ಯಕ್ರಮಗಳು(ಕಪ್ಪು ಹಲಿಕೆ ಕಾರ್ಯಕ್ರಮ, ಸರ್ವಶಿಕ್ಷಣ ಅಭಿಯಾನ) ಎರಡು ಬೌದ್ಧಿಕ ಪರಿಸರ ವೃದ್ಧಿಪಡಿಸುವುದು. (ಚಿನ್ನರ ಅಂಗಳ, ಕಲಿ–ನಲಿ ಕಲಿಕಾ ಖಾತ್ರಿ ಶಿಕ್ಷಕರಿಗೆ ವಿಷಯವಾರು ಪುನರ್ ಮನನ ಶಿಬಿರಗಳು, ಚೈತನ್ಯ ಹಾಗೂ ಇತರ ತರಬೇತಿಗಳು), ಕೊನೆಯದಾಗಿ ಶಾಲಾ ಪ್ರೋತ್ಸಾಹಕ ಕಾರ್ಯಕ್ರಮಗಳು(ಉಚಿತ ಪಠ್ಯ ಪುಸ್ತಕ ವಿತರಣೆ, ಸಮವಸ್ತ್ರ ವಿತರಣೆ, ಗ್ರಾಮೀಣ ಹೆಣ್ಣು ಮಕ್ಕಳ ಶಾಲಾ ಹಾಜರಾತಿಗೆ ಪ್ರೋತ್ಸಾಹಧನ ಶಾಲಾ ಬ್ಯಾಗ್ ವಿತರಣೆ ಮಕ್ಕಳ ಹಾಜರಾತಿಗೆ ಆಹಾರ ಧನ್ಯ ವಿತರಣೆ ಶಾಲಾ ಬಿಸಿಯೂಟ ವಿತರಣೆ ಮತ್ತು ಸೈಕಲ್ ವಿತರಣೆ ಇತ್ಯಾದಿಗಳು) ಈ ಎಲ್ಲಾ ಕಾರ್ಯಕ್ರಮಗಳ ಮುಖ್ಯ ಉದ್ಧೇಶ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವುದು. ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ತಗ್ಗಿಸಿ ಶಾಲಾದಾಖಲಾತಿ ಹೆಚ್ಚಿಸುವುದಾಗಿದೆ. ಹೀಗೆ ಶಿಕ್ಷಣದ ಅಭಿವೃದ್ಧಿಗಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳಲ್ಲಿ ಸ್ಥಳೀಯರು ಹೆಚ್ಚು ಕ್ರಿಯಾಶೀಲರಾಗಿ ಭಾಗವಹಿಸುತ್ತಿಲ್ಲ. ಹೀಗಾಗಿ ಶಿಕ್ಷಣ ವ್ಯವಸ್ಥೆ ಮತ್ತು ಸಮಾಜದ ನಡುವೆ ಅಂತರಗಳು ಸಾಕಷ್ಟು ಇವೆ. ಅವುಗಳು ಯಾವು? ಎಂಬುದನ್ನು ತಿಳಿಯಬೇಕಾಗಿದೆ.

ಒಟ್ಟಾರೆಯಾಗಿ, ರಾಷ್ಟ್ರೀಯ ನೀತಿ ಮತ್ತು ಅದರ ಕಾರ್ಯಕ್ರಮಗಳು ತಿಳಿಸುವುದೇನೆಂದರೆ ಶಿಕ್ಷಣದ ನಿರ್ವಹಣೆಯನ್ನು ಎಲ್ಲಾ ಹಂತದಲ್ಲಿ ವಿಕೇಂದ್ರಿಕರಣಗೊಳಿಸುವುದು ಮತ್ತು ನೀತಿ ನಿರ್ಧಾರ ಪ್ರಕ್ರಿಯೆಯಲ್ಲಿ ಸ್ಥಳಿಯ ಜನರನ್ನು ತೊಡಗಿಸಿಕೊಳ್ಳುವಂತೆ ಮಾಡುವುದು. ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಇಂದಿನ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡುತ್ತಿದ್ದರೂ

ಸಹ ಶಿಕ್ಷಣ ಕೇತ್ರ ಅದರಲ್ಲೂ ಮೂಲ ಶಿಕ್ಷಣದ ಅಭಿವೃದ್ಧಿ ಸಾಧಿತವಾಗುತ್ತಿಲ್ಲ. ಅದು ಏಕೆ? ಎಂದು ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ.

ಕಾರ್ಯಕ್ರಮಗಳ ಉದ್ದೇಶ

ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಒಳಿತಿಗಾಗಿ ಮತ್ತು ಆರೋಗ್ಯಕರ ಮತ್ತು ಹಿತಕರ ಜೀವನಕ್ಕಾಗಿ ಪ್ರೋತ್ಸಾಹಿಸುವ ರೀತಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೊಗಲಾಡಿಸುವಿಕೆಯನ್ನು ಕ್ರಮಬದ್ಧವಾಗಿ ಹೊಂದಿಸುವ ವಿಸ್ತಾರ ಗುರಿಯು ಪ್ರಾಥಮಿಕ ಶಿಕ್ಷಣದ ಕಾರ್ಯಕ್ರಮದ್ದಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಇರುವ ಕಾರ್ಯಕ್ರಮಗಳು ನಿರಂತರವಾಗಿ ಸಮಾಜದಲ್ಲಿ ಪ್ರಚಲಿತ ಅಸ್ತಿತ್ವದಲ್ಲಿರುವ ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ಅಂಶಗಳ ಜೊತೆ ಹೊಂದಾಣಿಕೆಯಿಂದ ಇರುತ್ತದೆ. ಮೇಲಾಗಿ ಅದು ಕರ್ನಾಟಕ ಪ್ರಾದೇಶಿಕ ನೆಲೆಗಳನ್ನು ಹೊಂದಿರುವುದರಿಂದ ಈಗ ಪ್ರಾಥಮಿಕ ಶಿಕ್ಷಣವನ್ನು ವಿಸ್ತಾರವಾಗಿ ವಿವರಿಸಲಾಗುತ್ತಿದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣದ ಉದ್ದೇಶವು ಕರ್ನಾಟಕದ ಪ್ರಾಥಮಿಕ ಶಾಲೆಗಳಿಗೆ ಸಮರ್ಪಕ ಬಹುಉದ್ದೇಶಿತ ಮತ್ತು ಪರಿಣಾಮದ ಭೂಬಲಕೆ ಅರಿಯುವುದಾಗಿದೆ.

ಪ್ರಾಥಮಿಕ ಶಾಲೆಗಳಿಗಾಗಿ ಇರುವ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಮಕ್ಕಳು ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ಬಡತನದಿಂದ ಶಾಲೆಗೆ ಬರದ ಮಕ್ಕಳಿಗೆ ಶಾಲೆಯ ಭಾಗ್ಯವನ್ನು ತೋರಿಸುವುದಾಗಿದ. ಗ್ರಾಮೀಣ ಪ್ರದೇಶಗಳು ಬಡತನದಿಂದ ಕೂಡಿದ ಗ್ರಾಮಗಳಾಗಿದ್ದು, ಅಲ್ಲಿನ ಜನರು ಕೂಲಿ ನಾಲಿಯನ್ನು ಮಾಡಿ ಜೀವನ ಸಾಗಿಸುವಾಗ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ದೂರದ ಮಾತಾಗಿದೆ. ಶಿಕ್ಷಣದಿಂದ ಮಾತ್ರ ಅಭಿವೃದ್ಧಿಯನ್ನು ಸಾಧಿಸುವದನ್ನು ಮನಗಂಡು ಶಿಕ್ಷಣಕ್ಕಾಗಿರುವ ಕಾರ್ಯಕ್ರಮಗಳನ್ನು ಪರಿಗಣಿಸಿ ಸೂಕ್ತಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಅಲ್ಲದೆ ಪ್ರಾಥಮಿಕ ಶಾಲೆಗಳ ಮಕ್ಕಳ ಚಟುವಟಿಕೆ ವಿಶೇಷವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ, ವಲಸೆಯಿಂದ ಬಂದ ಮಕ್ಕಳ ಶಿಕ್ಷಣ ಇತರೆ ಅಂಶಗಳು ಆರ್ಥಿಕ ಮತ್ತು ಸಾಮಾಜಿಕ ಅಂಶಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇಂತಹ ಕಾರ್ಯಕ್ರಮಗಳಿಂದ ಬಡ ಮಕ್ಕಳಿಗೆ ಮತ್ತು ಶಿಕ್ಷಣದಿಂದ ವಂಚಿತಗೊಂಡಿರುವವರಿಗೆ ಬಹಳಷ್ಟು ಮತ್ತು ವಿವಿಧ ಆಸಕ್ತಿಗಳು ಒಳಗೊಂಡಿರುತ್ತದೆ.

ಪ್ರಸ್ತುತ ಮತ್ತು ಭವಿಷ್ಯದಲ್ಲಿ ವಿವಿಧ ಮಾದರಿಯ ಮಾನವ ಚಟುವಟಿಕೆಗೆ ಅವಶ್ಯವಿರುವ ಅಕ್ಷರ ಜ್ಞಾನವನ್ನು ಕೂಡ ಪ್ರಾಥಮಿಕ ಶಿಕ್ಷಣಕ್ಕಾಗಿರುವ ಕಾರ್ಯಕ್ರಮಗಳು ಸಮಾಲೋಚಿಸ ಬೇಕಾಗುತ್ತದೆ. ಅದೇ ರೀತಿಯಾಗಿ ರಾಷ್ಟ್ರದ ಹಿತಾಸಕ್ತಿಯನ್ನು ಮನದಲ್ಲಿಟ್ಟುಕೊಂಡು ಎಲ್ಲಾ

ರೀತಿಯ ಅಭಿವೃದ್ಧಿಯು ಯೋಜಿತ ರೀತಿಯಲ್ಲಿ ಮತ್ತು ಸಮರ್ಥವಾದ ರೀತಿಯಲ್ಲಿ ನಿರ್ವಹಿಸಲು ಭೌತಿಕ ಚೌಕಟ್ಟನ್ನು ರಚಿಸುತ್ತದೆ. ಕೆಲವೊಂದು ಸಾಮಾಜಿಕ ಮೌಲ್ಯಗಳನ್ನು ತಿಳಿಯಲು ಅಕ್ಷರ ಜ್ಞಾನದಿಂದ ಅತ್ಯವಶ್ಯವಾಗಿರುತ್ತದೆ. ಭೌತಿಕ ಬೆಳವಣಿಗೆಯು ಸೌಹಾರ್ದಯುತವಾಗಿದ್ದು, ಸಾಮಾಜಿಕ ಮತ್ತು ಆರ್ಥಿಕ ಬೇಡಿಕೆ ಮತ್ತು ಅಂತ್ಯಗಳು ಸುಸ್ಪಷ್ಟವಾಗಿರಬೇಕು. ಶಿಕ್ಷಣಕ್ಕಾಗಿರುವ ಕಾರ್ಯಕ್ರಮಗಳು ಮಾನವ ನಿರ್ಮಿತ ಸಂಗತಿಯಾಗಿದ್ದು, ಅದು ಅಭಿವೃದ್ಧಿಯ ಸಾಧನವಾಗಿದೆ. ಶಿಕ್ಷಣವು ಸಮಾಜದ ಮುಖ್ಯವಾಹಿನಿಗೆ ತರುವ ಗುರಿಯನ್ನು ಹೊಂದಿದ್ದಾಗಿರುತ್ತದೆ. ಶಿಕ್ಷಣಕ್ಕಾಗಿರುವ ಕಾರ್ಯಕ್ರಮಗಳು ವಾಸ್ತವ ಜಗತ್ತಿನಲ್ಲಿ ಗೌರನ್ವಿತ ಜೀವನ ನಡೆಸಲು ಸಾಕ್ಷಿಯಾಗಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಇರುವ ಸೌಲಭ್ಯಗಳು ಸಮರ್ಥವಾಗಿ ವ್ಯವಹಾರ ಮತ್ತು ಫಲದಾಯಕ ಚಟುವಟಿಕೆಗಳನ್ನು ನೆರವೇರಿಸಲು ಸೂಕ್ತ ಪರಿಸರವನ್ನು ಪೂರೈಸುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣದ ಕಾರ್ಯಕ್ರಮಗಳು ಭೌತಿಕ ಅಥವಾ ನೈತಿಕ ಶಕ್ತಿ ಮತ್ತು ಸಾರ್ವಭೌಮಿಕೆಯ ಪ್ರವೇಶ ಪಡೆಯಬೇಕು. ಈ ರೀತಿಯ ಕಾರ್ಯನೀತಿಯ ಒಂದು ಅವಶ್ಯಕ ಅಂಶವೆಂದರೆ ಉದ್ಯೋಗದ ಅವಕಾಶಗಳನ್ನು ನಿರ್ಮಿಸುವುದಾಗಿದೆ.

ಶಿಕ್ಷಣಕ್ಕಾಗಿ ಇರುವ ಕಾರ್ಯಕ್ರಮಗಳು ಅವಶ್ಯವಾಗಿ ಪರಿಸರ ಮತ್ತು ವಿಶೇಷವಾಗಿ ಭೌತಿಕ ಪರಿಸರದ ಬಗ್ಗೆ ಆಸಕ್ತಿ ವಹಿಸುತ್ತದೆ. ಭೌತಿಕ ಪರಿಸರವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸರದ ಷರತ್ತುಗಳಿದ್ದು ಅದು ಜನರಿಂದ ಮತ್ತು ಸಾಮಾಜಿಕ ಪರಿಸರದಿಂದ ನಿರ್ಮಿತವಾದುದು ಅದು ಸಮಯಾನುಸಾರ ಅದರ ನಡಾವಳಿ ಮತ್ತು ಅಂತರ ಸಂಬಂಧವನ್ನು ತಿಳಿಸುತ್ತದೆ. ಭೌತಿಕ ಪರಿಸರವು ಮುಖ್ಯವಾಗಿ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಒಂದು ವಾಹನವಾಗಿ ಅಥವಾ ಮಾಧ್ಯಮವಾಗಿ ಸೇವೆಗೈಯುತ್ತದೆ. ಶಿಕ್ಷಣಕ್ಕಾಗಿ ಇರುವ ಕಾರ್ಯಕ್ರಮಗಳ ಮುಖ್ಯ ಉದ್ದೇಶವೇನೆಂದರೆ ನಿರ್ಮಿಸಿದ ಪರಿಸರವು ಒಟ್ಟಾರೆಯಾಗಿ ಅನುಕೂಲಕರವಾಗಿಯೂ ಮತ್ತು ಆರ್ಥಿಕವಾಗಿಯೂ ಸಮರ್ಥವಾಗಿಯೂ ಮತ್ತು ಅದೇ ಸಮಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಜನರ ಬದುಕಿನ ಸ್ಥಿತಿಗಳನ್ನು ಸುಧಾರಿಸಲು ಸಹಕರಿಸುತ್ತದೆ ಎಂದು ವೀಕ್ಷಿಸುವುದಾಗಿದೆ. ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಗುಣಧರ್ಮಗಳನ್ನು ಹೀಗೆ ಭೌತಿಕ ಪರಿಸರವನ್ನು ಒಂದು ರೀತಿಯಲ್ಲಿ ಅಧಿಕಾರ ನಡೆಸುತ್ತದೆ.

ಕೊಪ್ಪಳ, ಬಳ್ಳಾರಿ – ರಾಯಚೂರು ಪ್ರಾಥಮಿಕ ಶಿಕ್ಷಣಗಳ ಕಾರ್ಯಕ್ರಮಗಳ ಪ್ರಕ್ರಿಯೆ

ಸಂವಿಧಾನದ ೨೧ ನೇ ವಿಧಿ ರಾಷ್ಟ್ರೀಯ ಶಿಕ್ಷಣವನ್ನು ಅರ್ಪೈಸುತ್ತದೆ. ಈ ಅಧಿಕಾರದಂತೆ ಕರ್ನಾಟಕ ಸರ್ಕಾರವು ಪ್ರಾಥಮಿಕ ಶಾಲೆಗಳ ಅಭಿವೃದ್ಧಿಗಾಗಿ ಹಲವು ಅಭಿವೃದ್ಧಿ ಕರಡು

ಕಾರ್ಯಕ್ರಮಗಳನ್ನು ಮತ್ತು ಕಾರ್ಯಕ್ರಮಗಳ ಸಣ್ಣ ಸಮಿತಿಗಳನ್ನು ಸಿದ್ಧಪಡಿಸುತ್ತಾ ಶಿಕ್ಷಣವನ್ನು ಪ್ರೋತ್ಸಾಹಿಸುತ್ತದೆ. ಈ ಸಮಿತಿಗಳು ಸ್ಥಳೀಯ ಜನರನ್ನು, ಶಾಲಾ ಶಿಕ್ಷಕರನ್ನು, ತಾಲೂಕು ಅಧಿಕಾರಿಗಳನ್ನು ಮತ್ತು ಚುನಾಯಿತ ಸದಸ್ಯರನ್ನೊಳಗೊಂಡಿರುತ್ತದೆ. ಮುಂದುವರಿದು ಅದರಲ್ಲಿ ಒಬ್ಬ ಸದಸ್ಯನನ್ನು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಅದರಲ್ಲೊಬ್ಬ ಕಾರ್ಯದರ್ಶಿಯನ್ನಾಗಿ ನೇಮಿಸಲಾಗುತ್ತದೆ. ಈ ಶಾಲಾ ಶಿಕ್ಷಣಕ್ಕಾಗಿ ನಿರ್ಮಾಣಗೊಂಡಿರುವ ಸಮಿತಿಗಳು ಆಯಾಯ ಊರಿನ ಮಕ್ಕಳ ಶಿಕ್ಷಣದ ಬಗ್ಗೆ ಮತ್ತು ಮಕ್ಕಳಿಗೆ ವಿಭಿನ್ನ ರೀತಿಯ ತರಬೇತಿಗಳನ್ನೊಳಗೊಂಡ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಅದು ಕಾರ್ಯದರ್ಶಿ ಮತ್ತು ಎಸ್.ಡಿ.ಎಂ.ಸಿ. ಸದಸ್ಯರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತದೆ. ಕಾರ್ಯಕ್ರಮದ ಮಾದರಿಯನ್ನು ರಾಜ್ಯ ಸರಕಾರದ ಮಾರ್ಗಸೂಚಿಯಂತೆ ರಚಿಸಲಾಗುತ್ತದೆ. ಕಾರ್ಯಕ್ರಮವನ್ನು ಸಿದ್ಧಪಡಿಸುವಾಗ ಸಂಪನ್ಮೂಲ ಸಂಘಟನೆಯ ಬಗ್ಗೆ ಕಾಳಜಿ ವಹಿಸುತ್ತದೆ. ಅಧಿಕೃತ ಸಭೆಯಲ್ಲಿ ಲಭ್ಯ ಸಂಪನ್ಮೂಲಗಳ ಸ್ಥಿತಿಗತಿಯನ್ನು ಅಧ್ಯಯನ ಮಾಡಲಾಗುತ್ತದೆ. ಆದ್ದರಿಂದ ಇದು ಕಾರ್ಯಕ್ರಮವನ್ನು ಪ್ರಾರಂಭಿಸಲು ಒಂದು ಮುಖ್ಯ ಘಟ್ಟವಾಗಿರುತ್ತದೆ. ವಿವಿಧ ವಿಭಾಗಗಳ ಮುಖ್ಯಸ್ಥರೊಂದಿಗೆ ಗಂಭೀರವಾಗಿ ಸರಣಿ ಆಲೋಚನೆ ಮಾಡುತ್ತದೆ. ಕಾರ್ಯಕ್ರಮ ಪ್ರಕ್ರಿಯೆಯ ಕೆಲವೊಂದು ಮುಖ್ಯ ಅಂಶಗಳೆಂದರೆ ಮುಖ್ಯವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವುದು, ಬಡ ಮಕ್ಕಳನ್ನು ಗುರುತಿಸಿ ಅವರಿಗೆ ಅನುಕೂಲದ ರೀತಿಯಲ್ಲಿ ಅಕ್ಷರವನ್ನು ಕಲಿಸುವ ವ್ಯವಸ್ಥೆ, ಸುಸಜ್ಜಿತವಾದ ನೀರು ಸರಬರಾಜು, ಹೆಣ್ಣು ಮಕ್ಕಳಿಗಾಗಿ ಶೌಚಾಲಯವನ್ನು ಅಭಿವೃದ್ಧಿಗೊಳಿಸುವುದು, ಆರೋಗ್ಯ ಮತ್ತು ಶುಚಿತ್ವದ ವಿಷಯಗಳು ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಶಾಲೆಗಳಲ್ಲಿ ಕೈಗೊಳ್ಳಬೇಕಾಗುತ್ತದೆ. ಮುಂದಿನ ಅಂಶವೆಂದರೆ ಆದ್ಯತೆಯ ಮೇಲೆ ನಿರ್ವಹಿಸಬೇಕಾದ ಕಾರ್ಯಗಳ ಪಟ್ಟಿ ಮಾಡುವುದು ಶಾಲಾ ಅಭಿವೃದ್ಧಿಯ ಒಂದು ಪ್ರಕ್ರಿಯೆಯಾಗಿದೆ. ಕರ್ನಾಟಕದ ಎಲ್ಲಾ ಪ್ರಾಥಮಿಕ ಶಾಲೆಗಳಿಂದ ಅವಶ್ಯಕ ಮಾಹಿತಿಯನ್ನು ಸಂಗ್ರಹಿಸುತ್ತದೆ. ಎಲ್ಲಾ ವಿಭಾಗಗಳೆಂದರೆ ಮಕ್ಕಳ ಗಣತಿ, ಶಾಲೆಗೆ ಸೇರುವ ಮಕ್ಕಳ ವಿವರ ಮತ್ತು ಶಾಲೆಯನ್ನು ಬಿಟ್ಟ ಮಕ್ಕಳ ಸಂಖ್ಯೆ ಇತ್ಯಾದಿ. ಇಂತಹ ಮಾನದಂಡಗಳನ್ನು ಇಟ್ಟುಕೊಂಡು ಹಣಕಾಸು ಇಲಾಖೆಯೊಂದಿಗೆ ಸಮಾಲೋಚಿಸಿದ ನಂತರ ಯೋಜನಾ ವಿಭಾಗವು ಆಯಾಯ ಕಾರ್ಯಕ್ರಮಗಳಿಗೆ ಅವಶ್ಯವಿರುವ ಅನುದಾನವನ್ನು ಹಂಚಿಕೊಡುತ್ತದೆ. ಇದಕ್ಕೆ ಹಣಕಾಸು ವಿಭಾಗದ ಸಮ್ಮತಿ ಅವಶ್ಯವಿದ್ದು ಅದನ್ನು ಪಡೆಯಲಾಗುತ್ತದೆ. ಉಪ ಸಮಿತಿಯು ಕರಡು ಯೋಜನಾ ಪ್ರಸ್ತಾಪವನ್ನು ಸಿದ್ಧಪಡಿಸಿ ಅದನ್ನು ಕಾಯ್ದೆಯುತ ಸಭೆಯ ಮುಂದೆ ಇಡಲಾಗುವುದು ಮತ್ತು ಅದರ ಕೆಲಸಗಳು ಮತ್ತು ಕಾರ್ಯಗಳ ಆಳವಡಿಕೆಗೆ ಮಂಜೂರಾತಿಯ ಹಿನ್ನೆಲೆಯಲ್ಲಿ

ಆಯಾಯ ರಾಜ್ಯದ ಜಿಲ್ಲೆಗಳ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ನಿರ್ವಹಿಸುವುದರ ಬೆನ್ನಲ್ಲಿ ಗ್ರಾಮಾಂತರ ಶಾಲೆಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಒಂದು ಆಶಾಭಾವನೆಯನ್ನು ತಂದುಕೊಟ್ಟಾತ್ತಾಯಿತು ಎಂದು ಅಧ್ಯಯನಗಳಿಂದ ತಿಳಿಯಲಾಗಿದೆ.

ಸರ್ಕಾರದ ಪ್ರಾಥಮಿಕ ಶಿಕ್ಷಣಕ್ಕಿರುವ ಕಾರ್ಯಕ್ರಮಗಳು

ದೇಶದ ಜನಸಂಖ್ಯಾ ಹೆಚ್ಚಳವು ಅಲ್ಲಿನ ಬಡವರ ಸಂಖ್ಯೆಯ ಏರಿಕೆಗೂ ಕಾರಣವಾಗಿದೆ. ಜನಸಂಖ್ಯೆಯ ಸತತ ಹೆಚ್ಚಳವು ಪ್ರಾಥಮಿಕ ಶಿಕ್ಷಣದಿಂದ ವಂಚಿತಗೊಂಡು ಅದರಿಂದ ರಾಜಕೀಯ ದೊರೆಯುವ ಶಿಕ್ಷಣ ಸಂಬಂಧಿ ಮೂಲಭೂತ ಸೇವೆಗಳು ಮತ್ತು ಮೂಲಭೂತ ಸೌಕರ್ಯಗಳ ಮೇಲಿನ ಅತೀವ ಒತ್ತಡಕ್ಕೆ ಕಾರಣವಾಗುತ್ತದೆ. ಕ್ಷಿಪ್ರ ಬೆಳವಣಿಗೆಯ ಪರಿಣಾಮವಾಗಿ ಉದ್ಭವಿಸಿರುವ ತೀವ್ರ ಸಮಸ್ಯೆಗಳನ್ನು ನಿಭಾಯಿಸುವ ಸಲುವಾಗಿ, ಆಯ್ದ ಜಿಲ್ಲೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನದ ಮಾದರಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರಾಷ್ಟ್ರೀಯ ಶಿಕ್ಷಣ ನೀತಿ/ಕಾರ್ಯತಂತ್ರಗಳನ್ನು ರೂಪಿಸುವುದು ಕಡ್ಡಾಯವಾಗಿದೆ. ಯಾವುದೇ ಒಂದು ಶಿಕ್ಷಣ ಸಂಸ್ಥೆಯನ್ನು ಅಭಿವೃದ್ಧಿ ಪಡಿಸಲು ನೀತಿ ನಿಯಮಗಳು ಬೇಕು. ಅಂದರೆ ರಚಿತವಾದ ನೀತಿ ನಿಯಮಗಳ ಪಾಲನೆ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿರುತ್ತದೆ. ಆಗ ಶಿಕ್ಷಣ ಸಂಸ್ಥೆಯನ್ನು ಅಭಿವೃದ್ಧಿಪಡಿಸಲು ಸಾಧ್ಯ. ನೀತಿನಿಯಮಗಳು ಗಟ್ಟಿಗೊಂಡಷ್ಟು ಶಿಸ್ತುಪಾಲನೆಗೆ ದಾರಿಯಾಗುತ್ತದೆ. ಅದರಂತೆ ಶಿಕ್ಷಣ ನೀತಿಗಳ ಮೂಲಕ ಅಭಿವೃದ್ಧಿ ಸಾಧಿಸಲು ನಿಗದಿತ ಕಾರ್ಯಕ್ರಮಗಳನ್ನು ರಚಿಸಬೇಕಾಗುತ್ತದೆ. ಕಾರ್ಯಕ್ರಮಗಳ ಮೂಲಕ ನಿಗದಿತ ಗುರಿಯನ್ನು ಸಾಧಿಸಬಹುದು. ಅದರ ಪರಿಣಾಮವಾಗಿ ನೀತಿಗನುಗುಣವಾಗಿ ನಿರ್ಮಿತವಾದ ಕಾರ್ಯಕ್ರಮಗಳು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ

ರಾಷ್ಟ್ರದ ಮಹತ್ವಾಕಾಂಕ್ಷೆಯ ಶೈಕ್ಷಣಿಕ ಕಾರ್ಯಕ್ರಮವಾದ ಸರ್ವಶಿಕ್ಷಣ ಅಭಿಯಾನವು ೬-೧೪ ವಯೋಮಾನದ ಇಲ್ಲಾ ಮಕ್ಕಳಿಗೆ ಶಿಕ್ಷಣವು ಮೂಲಭೂತ ಹಕ್ಕುಯೆಂದು ಸಂವಿಧಾನದಲ್ಲಿ ತಿದ್ದುಪಡಿ ಜಾರಿಗೆ ತಂದ ಹಿನ್ನೆಲೆರಯಲ್ಲಿ ಈ ಉತ್ತರದಾಯಿತ್ವವನ್ನು ನಿಭಾಯಿಸಲು ಕೇಂದ್ರ ಸರ್ಕಾರದ ಮಟ್ಟದಲ್ಲಿ ಕೈಗೊಳ್ಳಲಾದ ಮಹತ್ವಾಕಾಂಕ್ಷೆಯ ಸರ್ವವ್ಯಾಪಿ ಆಂದೋಲನವೇ ಸರ್ವ ಶಿಕ್ಷಣ ಅಭಿಯಾನ. ಈ ಸರ್ವ ಶಿಕ್ಷಣವು ೧-೮ನೇ ತರಗತಿವರೆಗಿನ ಎಲ್ಲಾ ಪ್ರಾಥಮಿಕ ತರಗತಿಗಳನ್ನು ಆವರಿಸುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಈ ಅಭಿಯಾನವು ಒಳಗೊಳ್ಳುತ್ತದೆ.

ಸರ್ವ ಶಿಕ್ಷಣ ಅಭಿಯಾನವು ೨೦೦೦-೨೦೦೧ನೇ ಸಾಲಿನಲ್ಲಿ ರಾಜ್ಯದಲ್ಲಿ ಆರಂಭ ಗೊಂಡಿದ್ದು ಕೇಂದ್ರ ಪುರಸ್ಕೃತ ಯೋಜನೆಯಿಂದ ೯ನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ

೭೫:೧೫ ಕೇಂದ್ರ ಹಾಗೂ ರಾಜ್ಯ ಪಾಲುಗಾರಿಕೆಯಲ್ಲಿದ್ದು, ಈಗ ಅಂದರೆ ೧೦ ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಈ ಪ್ರಮಾಣ ೭೫:೨೫ ಆಗಿದೆ. ೨೦೦೭ನೇ ಸಾಲಿನ ನಂತರ ಈ ಅನುಪಾತವು ೫೦:೫೦ ಆಗುತ್ತದೆ. ಮುಂದುವರಿದು, ೬-೧೪ ವಯೋಮಾನದ ಎಲ್ಲ ಮಕ್ಕಳೂ ಶಾಲೆಗಳಲ್ಲಿ, ಶಿಕ್ಷಣ ಖಾತ್ರಿ ಕೇಂದ್ರಗಳಲ್ಲಿ, ಪರ್ಯಾಯ ಶಾಲೆಗಳಲ್ಲಿ, ಮರಳಿ ಶಾಲೆಗೆ ಶಿಬಿರಗಳಲ್ಲಿ ಕಲಿಯುವಂತೆ ಮಾಡುವುದು, ೨೦೦೭ರ ವೇಳೆ ಎಲ್ಲ ಮಕ್ಕಳೂ ೫ ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡುವುದು, ೨೦೧೦ರ ವೇಳೆಗೆ ಎಲ್ಲ ಮಕ್ಕಳೂ ೮ ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡುವುದು, ಬದುಕಿಗಾಗಿ ಶಿಕ್ಷಣದ ಮೇಲೆ ಒತ್ತು ನೀಡುವುದರೊಂದಿಗೆ ತೃಪ್ತಿಕರ ಗುಣಮಟ್ಟದ ಪ್ರಾಥಮಿಕ ಶಿಕ್ಷಣಕ್ಕೆ ಗಮನಹರಿಸುವುದು, ೨೦೦೭ರ ವೇಳೆಗೆ ಕಿರಿಯ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮತ್ತು ೨೦೧೦ರ ವೇಳೆಗೆ ಹಿರಿಯ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಎಲ್ಲಾ ಜೆಂಡರ್ ಮತ್ತು ಸಾಮಾಜಿಕ ಪ್ರವರ್ಗದ ಅಂತರ ಕಡಿಮೆ ಮಾಡುವಂತಹ ಉದ್ದೇಶವನ್ನಿಟ್ಟುಕೊಂಡು ಈ ಯೋಜನೆಯು ಅಸ್ತಿತ್ವಕ್ಕೆ ಬಂದಿದೆ.

ಹಾಗೆಯೇ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಿಶೇಷವಾಗಿ ಈ ಕಾರ್ಯಕ್ರಮದಡಿಯಲ್ಲಿ ಹಲವು ಉಪ ಕಾರ್ಯಕ್ರಮಗಳನ್ನು ರಚಿಸಲಾಗಿದೆ.

೧. ಸರ್ವರಿಗೂ ಶಿಕ್ಷಣ ಸಪ್ತಾಹ

೨. ಚಿಣ್ಣರ ಅಂಗಳ-೨೦೦೫-೦೬

೩. ವಸತಿಯುತ ಸೇತುಬಂಧ ಶಿಕ್ಷಣ ಶಿಬಿರ

೪. ಮನೆಯಲ್ಲಿಯೇ ಶಿಕ್ಷಣ

೫. ಶಾಲೆದೂರವಿರುವಲ್ಲಿ ಮಕ್ಕಳಿಗೆ ಸಾರಿಗೆ ಎಸ್ಕಾರ್ಟ ಸೌಲಭ್ಯ

೬. ಶಿಕ್ಷಣ ಖಾತ್ರಿ ಯೋಜನೆ

೭. ಪರ್ಯಾಯ ಆವಿಷ್ಕೃತ ಶಿಕ್ಷಣ ಮತ್ತು

೮. ಪರ್ಯಾಯ ಶಿಕ್ಷಣ

೯. ಸೇವಾನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮ

೧೦. ಸಮುದಾಯ ಮುಖಂಡರ ತರಬೇತಿ ಕಾರ್ಯಕ್ರಮ

೧೧. ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ

೧೨. ಶಾಲೆಗೆ ಸೌಲಭ್ಯಗಳು

೧೩. ಕಸೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯ

೧೪. ಚಿಣ್ಣರ ಕರ್ನಾಟಕ ದರ್ಶನ-ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ.

೨. ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳು

ಶಿಕ್ಷಣವು ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕು-ಶಿಕ್ಷಣವನ್ನು ಒದಗಿಸುವುದು ಎಲ್ಲಾ ಪೋಷಕರ, ಸಮುದಾಯದ ಮತ್ತು ಸರ್ಕಾರದ ಆದ್ಯ ಕರ್ತವ್ಯ. ಶಾಲೆಯಿಂದ ಹೊರಗುಳಿದ ಮಕ್ಕಳ ನಿಖರ ಅಂಕಿಅಂಶಗಳನ್ನು ಪಡೆಯುವ ಸಲುವಾಗಿ ಮಾರ್ಚಿಮಾಹೆ ೨೦೦೫ರಲ್ಲಿ ರಾಜ್ಯಾದ್ಯಂತ ಸರ್ಕಾರೇತರ ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಇಲಾಖೆವತಿಯಿಂದ ಮಕ್ಕಳ ಗಣತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಮಕ್ಕಳ ಗಣತಿ ಅಂಕಿ ಅಂಶದಂತೆ ರಾಜ್ಯದಲ್ಲಿ ೭-೧೪ ವಯೋಮಾನದ ಸುಮಾರು ೧.೦೫ ಲಕ್ಷ ಮಕ್ಕಳು ವಿವಿಧ ಕಾರಣಗಳಿಂದ ಶಿಕ್ಷಣ ಸೌಲಭ್ಯದಿಂದ ವಂಚಿತರಾಗಿ ಶಾಲೆಯಿಂದ ಹೊರಗುಳಿದಿರುವುದು ಕಂಡು ಬಂದಿದೆ. ಈ ಮಕ್ಕಳು ವಿಶೇಷವಾಗಿ ಬೀದಿ ಬದಿಯ ಮಕ್ಕಳು, ವಲಸೆ ಕುಟುಂಬಕ್ಕೆ ಸೇರಿದ ಮಕ್ಕಳು, ಮನೆಕೆಲಸದಲ್ಲಿ ತೊಡಗಿರುವ ಮಕ್ಕಳು, ಬಾಲ ಕಾರ್ಮಿಕರು, ಚಿಕ್ಕ ಮಕ್ಕಳ ಪೋಷಣೆ ನೋಡಿಕೊಳ್ಳುತ್ತಿರುವ ಮಕ್ಕಳು ಇನ್ನಿತರ ಗುಂಪುಗಳಿಗೆ ಸೇರಿದವರಾಗಿದ್ದಾರೆ. ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-೨೦೦೯ರ ಪ್ರಕಾರ ೬ ರಿಂದ ೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಸಾರ್ವತ್ರಿಕ ಶಿಕ್ಷಣವನ್ನು ಒದಗಿಸುವುದು ಕಡ್ಡಾಯವಾಗಿದೆ. ಈ ಹಿನ್ನೆಲೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿ ೭ ರಿಂದ ೧೪ ವರ್ಷ ವಯಸ್ಸಿನ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಅ. ಮೂರು ತಿಂಗಳ ವಸತಿಸಹಿತ/ವಸತಿರಹಿತ ವಿಶೇಷ ತರಬೇತಿ ಕಾರ್ಯಕ್ರಮ ಚಿಣ್ಣರ ಅಂಗಳ: ೨೦೦೫-೦೬

ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ(ಶಾಲೆ ಬಿಟ್ಟ ಹಾಗೂ ಶಾಲೆಗೆ ದಾಖಲಾಗದ) ಏಪ್ರಿಲ್ ೧೬.೨೦೦೫ ರಿಂದ ಜೂನ್ ೧೩.೨೦೦೫ ರವರೆಗೆ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ರಾಜ್ಯದ್ಯಾಂತ ಅಗತ್ಯವಿರುವ ಸ್ಥಳಗಳಲ್ಲಿ ೬೦ ದಿನಗಳ ಚಿಣ್ಣರ ಅಂಗಳ ಅಲ್ಲ

ಅವಧಿ ಸೇತುಬಂಧ ಶಿಕ್ಷಣ ಶಿಬಿರಗಳನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯದ್ಯಂತ ಒಟ್ಟು ೨೧೪೪ ಕೇಂದ್ರಗಳಲ್ಲಿ(೩೯ ವಸತಿ ಸಹಿತ ಕೇಂದ್ರಗಳು ಸೇರಿದಂತೆ) ೫೨೮೯ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ಕರೆತರಲು ಅಗತ್ಯ ಸಿದ್ಧತೆಗಳನ್ನು ಮಾಡಲಾಗುತ್ತದೆ. ಈ ಕಾರ್ಯಕ್ರಮದ ಒರತಾಗಿಯೂ ಉಳಿಯುವ ಮಕ್ಕಳಿಗೆ ಅಗತ್ಯಕ್ಕೆ ಅನುಗುಣವಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಲು ಈ ಮುಂದಿನಂತೆ ೧೧ ರಿಂದ ೧೪ ವಯೋಮಾನದ ಮಕ್ಕಳಿಗೆ ಆರು ತಿಂಗಳ ವಸತಿಯುತ ಸೇತುಬಂಧ ಶಿಕ್ಷಣ ಶಿಬಿರಗಳು, ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಮನೆಯಲ್ಲಿಯೇ ಶಿಕ್ಷಣ, ಅರಣ್ಯ-ಗುಡ್ಡಗಾಡು, ಮಲೆನಾಡು ಪ್ರದೇಶ ಇತ್ಯಾದಿ ಮನೆಯಿಂದ ಶಾಲೆ ದೂರವಿರುವ ಪ್ರದೇಶಗಳಲ್ಲಿ ಮಕ್ಕಳಿಗೆ ಸಾರಿಗೆ ಸೌಲಭ್ಯ, ಎಸ್ಕಾರ್ಟ ಸೌಲಭ್ಯವನ್ನು ಒದಗಿಸುವುದು, ಔಪಚಾರಿಕ ಶಾಲೆಗಳನ್ನು ತೆರೆಯಲು ಸಾಧ್ಯವಿಲ್ಲದೆ ಕಡೆಗಳಲ್ಲಿ ಅನೌಪಾಚಾರಿಕ ಶಾಲೆಗಳಾದ ಶಿಕ್ಷಣ ಖಾತ್ರಿ ಯೋಜನೆ, ಪರ್ಯಾಯ ಆವಿಷ್ಕೃತ ಶಿಕ್ಷಣ ಮತ್ತು ಪರ್ಯಾಯ ಶಿಕ್ಷಣವನ್ನು ಒದಗಿಸುವುದು ಈ ಮೇಲಿನ ಉದ್ದೇಶಗಳನ್ನು ಇಟ್ಟುಕೊಂಡು ದೇಶದ ಅಭಿವೃದ್ಧಿಯ ಭಾಗವಾದ ಶಿಕ್ಷಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತೆ ಮಾಡಿ ದೇಶವನ್ನು ಸಮಗ್ರ ಅಕ್ಷರ ನಾಡನ್ನಾಗಿ ಮಾಡುವುದಾಗಿದೆ.

ಆ. ೧೨ ತಿಂಗಳ ವಸತಿಸಹಿತ ವಿಶೇಷ ತರಬೇತಿ

ಶಾಲೆಯಿಂದ ಹೊರಗುಳಿದ ಹಿರಿಯ ವಯಸ್ಸಿನ ಮತ್ತು ಮುಖ್ಯವಾಹಿನಿಗೆ ಸೇರಲು ಹೆಚ್ಚು ಸಮಯವನ್ನು ಬೇಡುವ ಮಕ್ಕಳು ಈ ಕಾರ್ಯಕ್ರಮದ ಫಲಾನುಭವಿಗಳು, ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಅತ್ಯಂತ ಸಂಕಷ್ಟದಲ್ಲಿರುವ ಕೊನೆಯಸ್ಥರದ ಮಗು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರೈಸಲು ಅವಕಾಶ ಕಲ್ಪಿಸುತ್ತದೆ, ಸಂಕಷ್ಟದಲ್ಲಿರುವ ಮಗುವಿಗೆ ಪ್ರಸಾದ ನಿಲಯದ ಸೌಲಭ್ಯ ನೀಡಿ ವ್ಯಾಸಂಗ ಮಾಡಲು ಅವಕಾಶವಿದೆ. ಈ ಅವಧಿಯಲ್ಲಿ ಚಿಣ್ಣರ ಅಂಗಳ-೧ (೭ ರಿಂದ ೯ ವರ್ಷದ ಮಕ್ಕಳಿಗೆ) ಚಿಣ್ಣರ ಅಂಗಳ-೨ (೯ ರಿಂದ ೧೧ ವರ್ಷ ವಯಸ್ಸಿನ ಮಕ್ಕಳಿಗೆ) ಚಿಣ್ಣರ ಅಂಗಳ-೩ (೧೧ ರಿಂದ ೧೩+ ವಯಸ್ಸಿನ ಮಕ್ಕಳಿಗೆ) ಅಭ್ಯಾಸ ಪುಸ್ತಕ ಉಪಯೋಗಿಸಿಕೊಂಡು ವಿಶೇಷ ತರಬೇತಿ ನೀಡಲಾಗುವುದು, ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ, ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆಗಳ ಅಡಿಯಲ್ಲಿ ನಡೆಯುತ್ತಿರುವ ಆಶ್ರಮ ಶಾಲೆಗಳು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಕೆ.ಜಿ.ಬಿ.ವಿ, ಕೆ.ಕೆ.ಜಿ.ಬಿ.ವಿ. ವಸತಿ ಶಾಲೆಗಳಲ್ಲಿ ಮೇಲ್ಕಂಡ ಇಲಾಖೆಗಳ ಸಹಯೋಗದೊಂದಿಗೆ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ.

ಇ. ೧೨ ತಿಂಗಳ ವಸತಿರಹಿತ ವಿಶೇಷ ತರಬೇತಿ

ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಅತ್ಯಂತ ಸಂಕಷ್ಟದಲ್ಲಿರುವ ಕೊನೆಸ್ಥರದ ಮಗು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೊರೈಸಲು ನಿಲಯದ ಸೌಲಭ್ಯ ನೀಡಿ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸುವುದು ಮತ್ತು ಈ ಅವಧಿಯಲ್ಲಿ ಚಿಣ್ಣರ ಅಂಗಳ–೧ (೭ ರಿಂದ ೯ ವರ್ಷ ವಯಸ್ಸಿನ ಮಕ್ಕಳಿಗೆ) ಚಿಣ್ಣರ ಅಂಗಳ–೨ (೯ ರಿಂದ ೧೧ ವರ್ಷ ವಯಸ್ಸಿನ ಮಕ್ಕಳಿಗೆ) ಚಿಣ್ಣರ ಅಂಗಳ–೩ (೧೧ ರಿಂದ ೧೩+ ವಯಸ್ಸಿನ ಮಕ್ಕಳಿಗೆ) ಅಭ್ಯಾಸ ಪುಸ್ತಕ ಉಪಯೋಗಸಿಕೊಂಡು ವಿಶೇಷ ತರಬೇತಿ ನೀಡಲಾಗುವುದು,

ಈ. ಮದರಸ

ಮದರಸ ಶಾಲೆಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಜೊತೆ ಔಪಾಚಾರಿಕ ಶಿಕ್ಷಣ ನೀಡಲು ಮುಂದೆ ಬಂದ ಮದರಸಗಳಿಗೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಪ್ರಸ್ತುತ ವರ್ಷ (೨೦೧೩–೧೪) ಮಾತ್ರ ಅನುದಾನವನ್ನು ನೀಡುತ್ತಿದ್ದು, ಮುಂಬರುವ ವರ್ಷದಿಂದ ಮದರಸಗಳಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ಮಕ್ಕಳನ್ನು ಔಪಾಚಾರಿಕ ಶಾಲೆಗಳಿಗೆ ದಾಖಲಿಸುವುದು ಕಡ್ಡಾಯವಾಗಿದೆ.

ಉ. ಟೆಂಟ್ ಶಾಲೆ

ಎಲ್ಲಿ ವಲಸೆವೋ ಅಲ್ಲಿ ಶಾಲೆ, ವಲಸೆ ಹೋಗುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಗುವನ್ನು ಕರೆದ್ಯೊತ್ತಾರೆ. ಇಂತಹ ವಿದ್ಯಾಥಿಗಳ ಕಲಿಕೆಯ ಮಟ್ಟದ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುವುದು. ಹೆಚ್ಚು ಸಂದರ್ಭದಲ್ಲಿ ಶಾಲೆಯನ್ನು ಮದ್ಯದಲ್ಲೆ ಬಿಡುವರ ಸಂಖ್ಯೆ ಹೆಚ್ಚಳವಾಗುತ್ತದೆ. ಈ ಸಮಸ್ಯೆಯನ್ನು ನಿಯಂತ್ರಿಸಲು ಗೂಡಾರ ಶಾಲೆ ತೆರೆಯಲಾಗುತ್ತದೆ.

ಊ. ತಿಂಗಳ ಋಉತಮಾನ ವಸತಿಯುತ ವಿಶೇಷ ತರಬೇತಿ

ವಲಸೆ ಹೋಗುವ ಪ್ರದೇಶಗಳಲ್ಲಿ ವಲಸಿತ ಕುಟುಂಬಗಳ ಜೊತೆ ಹೋಗಿ ಮಕ್ಕಳು ಹೋಗಿ ಅವರ ವಿದ್ಯಾಭ್ಯಾಸ ಕುಂಠಿತವಾಗಬಾರದು ಎಂದು ಈ ಕೇಂದ್ರಗಳನ್ನು ತೆರೆಯಲಾಗಿದೆ. ಶಾಲೆಗೆ ಹೋಗುವ ಮಕ್ಕಳಿಗೆ ವಸತಿ ನಿಲಯವಾಗಿ ಕಾರ್ಯ ನಿರ್ವಹಿಸುತ್ತವೆ.

ಋ. ಶಾಲಾ ಆಧಾರಿತ ವಿಶೇಷ ತರಬೇತಿ

ಒಂದು ಜನ ವಸತಿ ಪ್ರದೇಶದಲ್ಲಿ / ಶಾಲಾ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿದ್ದರೆ. ಅಂತಹ ಮಕ್ಕಳಿಗೆ ಶಾಲೆಯಲ್ಲಿಯೇ ವಿಶೇಷ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗುವುದು.

೨. ಸರ್ವರಿಗೂ ಶಿಕ್ಷಣ ಸಪ್ತಾಹ

ಏಪ್ರಿಲ್ ೨೪, ೨೦೦೫ರಿಂದ ಏಪ್ರಿಲ್ ೩೦, ೨೦೦೫ ರವರೆಗೆ ಸರ್ವರಿಗೂ ಶಿಕ್ಷಣ ಸಪ್ತಾಹವನ್ನು ರಾಜ್ಯದ್ಯಾಂತ ಜಿಲ್ಲೆ ಪಂಚಾಯಿತ್ ಆಡಳಿತ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಲಾಗಿದೆ.

೩. ಸೇವಾನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮ

ಪ್ರಾಥಮಿಕ ಶಾಲಾ ಶಿಕ್ಷಣ ಗುಣಮಟ್ಟ ಸುಧಾರಣೆಗೆ ತರಗತಿಯ ಬೋಧನೆ ಮತ್ತು ಕಲಿಕೆ ಪ್ರಕ್ರೀಯೆ ಸುಧಾರಣೆಯು ಅತ್ಯವಶ್ಯ. ಇದಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಬೋಧನಾ ಸಾಮರ್ಥ್ಯ ಅಭಿವೃಧ್ಧಿಯು ಅಗತ್ಯ ಈ ಹಿನ್ನೆಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಸೇವಾನಿರತ ಶಿಕ್ಷಕರಿಗೆ ಅಗತ್ಯ ಆಧಾರಿತ ಹಲವಾರು ತರಭೇತಿಗಳನ್ನು ನೀಡಲಾಗುತ್ತದೆ. ಈ ತರಬೇತಿಗಳು ಚಟುವಟಿಕೆ ಆಧರಿತವಾಗಿದ್ದು ಶಿಕ್ಷಕರು ತಮ್ಮ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ವೇದಿಕೆಯನ್ನು ಕಲ್ಪಿಸುತ್ತವೆ.

ಪ್ರಮುಖ ತರಬೇತಿಗಳು:

೧. ಚೈತನ್ಯ-೧: ಕಿರಿಯ ಪ್ರಾಥಮಿಕ ಶಾಲಾ ಶಿಕ್ಷರಿಗಾಗಿ

೨. ಚೈತನ್ಯ-೨: ಹಿರಿಯ ಪ್ರಾಥಮಿಕ ಶಾಲಾ ಶಿಕ್ಷರಿಗಾಗಿ

೩. ಬಹುಮುಖಿ: ಬಹುವರ್ಗ ಬೋಧನೆ

೪. ಇಂಗ್ಲೀಷ್ ತರಬೇತಿ: ರೀಜನಲ್ ಇನ್ಸಿಟ್ಯೂಟ್ ಆಫ್ ಇಂಗ್ಲೀಷ್, ಇವರ ಸಹಯೋಗದೊಂದಿಗೆ

೫. ಮೌಲ್ಯ ಶಿಕ್ಷಣ

೬. ಚೈತನ್ಯ ತರಣಿ: ಬೋಧನೆ- ಕಲಿಕೆ ಸಾಮಾಗ್ರಿಗಳ ತಯಾರಿಕೆ ಕುರಿತು

೭. ಶಿಕ್ಷಣದಲ್ಲಿ ರಂಗ ಕಲೆ

೮. ಕ್ರಿಯಾ ಸಂಶೋಧನೆ

೯. ಸಮನ್ವಯ ಶಿಕ್ಷಣ: ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ

೧೦. ಯೋಗ ತರಬೇತಿ: ದೈಹಿಕ ಶಿಕ್ಷಣ ಶಿಕ್ಷಕರಿಗೆ

೧೧.ತ್ರೈಮಾಸಿಕ ಮೌಲ್ಯಮಾಪನ ತರಬೇತಿ

೧೨.ಉರ್ದು ಶಿಕ್ಷಕರ ತರಬೇತಿ

೧೩.ಪ್ರೇರಣಾ ತರಬೇತಿ: ಹೊಸದಾಗಿ ನೇಮಕಾತಿ ಹೊಂದಿದ ಶಿಕ್ಷಕರ ತರಬೇತಿ

೧೪.ಸಮುದಾಯ ಮುಖಂಡರ ತರಬೇತಿ: ಎಸ್.ಡಿ.ಎಂ.ಸಿ. ಸದಸ್ಯರ ತರಬೇತಿ

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಪ್ರತಿ ಶಿಕ್ಷಕರಿಗೆ ೨೦ ದಿನಗಳ ಸೇವಾ ನಿರತ ತರಬೇತಿ ಅವಕಾಶವಿದ್ದು, ಪ್ರತಿ ವರ್ಷಕ್ಕೊಮ್ಮೆ ಲಕ್ಷಾನುಗಟ್ಟಲೇ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಾ ಬರಲಾಗಿದೆ.

ಹೆಣ್ಣುಮಕ್ಕಳ ಶಿಕ್ಷಣ

ಎಲ್ಲಾ ಅರ್ಹ ವಯಸ್ಸಿನ ಮಕ್ಕಳಿಗೆ ಶಿಕ್ಷಣ ನೀಡುವುದು ರಾಷ್ಟ್ರದ ಗುರಿಯಾಗಿದೆ. ಈ ಶಿಕ್ಷಣದಿಂದ ಹೆಣ್ಣುಮಕ್ಕಳು ಹೆಚ್ಚು ವಂಚಿತರಾಗಿರುವುದು ಪ್ರತಿ ವರ್ಷದ ಮಕ್ಕಳ ಗಣತಿಯಲ್ಲಿ ಗುರುತಿಸಬಹುದಾಗಿದೆ. ಮಾರ್ಚ ೨೦೦೫ ರಲ್ಲಿ ನಡೆದ ಗಣತಿಯ ಮಾಹಿತಿಯಂತೆ ೬ ರಿಂದ ೧೪ ವರ್ಷದ ೭೬,೨೦,೯೭೭ ಮಕ್ಕಳಲ್ಲಿ ೩೯,೩೪,೩೭೬ ಗಂಡುಮಕ್ಕಳು, ೩೬,೮೫,೭೨೧ ಹೆಣ್ಣು ಮಕ್ಕಳಾಗಿದ್ದು ಇವರಲ್ಲಿ ಶೇಕಡಾ ೪೯.೯೭ ಗಂಡುಮಕ್ಕಳು ಹಾಗೂಶೇಕಡಾ ೫೦.೦೩ ಹೆಣ್ಣು ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ತಿಳಿದು ಬಂದಿದೆ. ಹೆಣ್ಣುಮಕ್ಕಳು ಶಾಲೆಯನ್ನು ತೊರೆಯುವುದನ್ನು ಶಾಲೆಗೆ ಸೇರದೆ ಇರುವ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳವದೆ ಸರ್ವ ಶಿಕ್ಷಣ ಅಭಿಯಾನದ ಉದ್ದೇಶವಾಗಿದೆ. ಹೆಣ್ಣು ಮಕ್ಕಳು ಪ್ರತಿ ದಿನ ಅನೇಕ ತೊಂದರೆಗಳ ನಡುವೆ ಶಿಕ್ಷಣವನ್ನು ಪಡೆಯಬೇಕಾಗಿದೆ ಇಂತಹ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನವನ್ನು ನೀಡುವ ಸಮಯ ಇದಾಗಿದ್ದು, ಶಿಕ್ಷಣದ ಎಲ್ಲಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರು ಈ ಕುರಿತು ಆಲೋಚನೆ ನಡೆಸಬೇಕಾಗಿದೆ. ಸರ್ವ ಶಿಕ್ಷಣ ಅಭಿಯಾನದ ಎಲ್ಲಾ ಚಟುವಟಿಕೆಗಳು ಜೆಂಡರ್ ಸಂವೇದಿಯಾಗಿದ್ದು, ಹೆಣ್ಣು ಮಕ್ಕಳಿಗಾಗಿ ವಿಶೇಷವಾಗಿ ಕೇಂದ್ರ ಸರ್ಕಾರವು ಕೆಲವು ಕಾರ್ಯಕ್ರಮಗಳನ್ಗನು ಹಮ್ಮಿಕೊಂಡಿದೆ.

೪. ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ

ಸರ್ವಶಿಕ್ಷಣ ಅಭಿಯಾನದಡಿ ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚುವರಿ ಸೌಲಭ್ಯಗಳನ್ನು ನೀಡುವ ಸಲುವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್. ಪಿ. ಇ. ಜಿ. ಇ. ಎಲ್.) ಎಂಬ ಹೊಸ ಕಾರ್ಯಕ್ರಮ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ. ಎನ್. ಪಿ. ಇ. ಜಿ. ಇ. ಎಲ್- ಸರ್ವ

ಶಿಕ್ಷಣ ಅಭಿಯಾನದ ಒಂದು ಭಾಗವಾಗಿದ್ದು, ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಪ್ರತ್ಯೇಕವಾಗಿ ಅನುಷ್ಠಾನಗೊಳ್ಳುತ್ತಿದೆ. ಸರ್ವ ಶಿಕ್ಷಣ ಅಭಿಯಾನವು ಶಿಕ್ಷಣದ ಸಾರ್ವತ್ರಿಕರಣದ ಉದ್ದೇಶದಿಂದ ೨೦೦೧-೦೨ರಲ್ಲಿ ಪ್ರಾರಂಭವಾಗೊಇದ್ದು ಈ ಯೋಜನೆಯು ಹೆಣ್ಣು ಮಕ್ಕಳನ್ನೊಳಗೊಂಡರತೆ ಎಲ್ಲಾ ಮಕ್ಕಳಿಗೂ ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸಲು ಒಂದು ಪ್ರಯತ್ನವಾಗಿದೆ. ಕೆಲವು ಚಟುವಟಿಕೆಗಳ ಮೂಲಕ ಹೆಣ್ಣು ಮಕ್ಕಳ ಶಿಕ್ಷಣವನ್ನು ಕ್ರಿಯಾತ್ಮಕವಾಗಿ ಅನುಷ್ಠಾನಗೊಳಿಸುವದೆ ಎನ್. ಪಿ. ಇ. ಜಿ. ಇ. ಎಲ್.ನ ಮುಖ್ಯ ಉದ್ದೇಶವಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿರುವ ಮತ್ತು ಜೆಂಡರ್ ಗ್ಯಾಫ್ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು ಇರುವ ಬ್ಲ್ಯಾಕ್‌ಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ಬ್ಲ್ಯಾಕ್‌ಗಳು ಎಂಬುದಾಗಿ ಎನ್. ಪಿ. ಇ. ಜಿ. ಇ. ಎಲ್. ಕಾರ್ಯಕ್ರಮದಡಿ ಆಯ್ಕೆ ಮಾಡಲಾಗಿದ್ದು ರಾಜ್ಯದ ೧೭ ಜಿಲ್ಲೆಗಳ ೫೮ ಶೈಕ್ಷಣಿಕವಾಗಿ ಹಿಂದುಳಿದ ಬ್ಲ್ಯಾಕ್‌ಗಳು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಆಯ್ಕೆಯಾಗಿವೆ. ಈ ಕಾರ್ಯಕ್ರಮದಡಿಯಲ್ಲಿ ನೀಡಿದ ಸೌಲಭ್ಯಗಳಾದ

೧. ಹೆಚ್ಚುವರಿ ಕೊಠಡಿ

೨. ಕುಡಿಯುವ ನೀರಿನ ಸೌಲಭ್ಯ

೩. ವಿದ್ಯುತ್ ವ್ಯವಸ್ಥೆ

೪. ಶೌಚಾಲಯ ವ್ಯವಸ್ಥೆ

೫. ಕಲಿಕೋಪಕರಣಗಳು

೬. ಕ್ರೀಡಾ ಸಾಮಾಗ್ರಗಳ ಪೂರೈಕೆ

೭ ಗ್ರಂಥಾಲಯ ಪುಸ್ತಕಗಳ ಪೂರೈಕೆ

೮. ಶಾಲಾ ಪೂರ್ವ ಶಿಕ್ಷಣ ಕೇಂದ್ರಗಳ ಪ್ರಾರಂಭ (ಅಂಗನವಾಡಿ)

೯. ವೃತ್ತಿ ಶಿಕ್ಷಕರ ನೇಮಕ

೧೦. ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಕುರಿತಂತೆ ಶಿಕ್ಷಕರಿಗೆ ತರಬೇತಿ

೧೧. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಉತ್ತಮ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಪ್ರಶಸ್ತಿ

೧೨. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿನಿಯರಿಗೆ ಪರಿಹಾರ ಬೋಧನೆ

೫. ಕಸ್ತೂರ ಬಾ ಗಾಂಧಿ ಬಾಲಿಕ ವಿದ್ಯಾಲಯ ಕಾರ್ಯಕ್ರಮ

ಕೇಂದ್ರ ಸರ್ಕಾರವು ಮಾನವ ಸಂಪನ್ಮೂಲ ಇಲಾಖೆ, ಸರ್ವ ಶಿಕ್ಷಣ ಅಭಿಯಾನದ ಮೂಲಕ ವಿದ್ಯಾಭ್ಯಾಸದಿಂದ ವಂಚಿತವಾಗಿರುವ ಹೆಣ್ಣು ಮಕ್ಕಳ ವ್ಯಾಸಂಗಕ್ಕೆ ಹೆಚ್ಚಿನ ಒತ್ತು ನೀಡುವ ದೃಷ್ಟಿಯಿಂದ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅದರಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರಾಥಮಿಕ ಹಂತದಲ್ಲಿ ಬಾಲಿಕಿಯರಿಗಾಗಿ ವಿಶೇಷವಾಗಿ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತ ಮಕ್ಕಳಿಗಾಗಿ ಈ ಕ್ಲಿಷ್ಟಕರವಾದ ಪ್ರದೇಶಗಳಲ್ಲಿ ವಸತಿ ಸಹಿತ ನಿವಾಸ ಶಾಲೆಗಳನ್ನು ತೆರೆಯಲು ಅನುಮತಿ ನೀಡಿದೆ. ಈ ಯೋಜನೆಯನ್ನು ಕಸ್ತೂರು ಬಾ ಬಾಲಿಕ ವಿದ್ಯಾಲಯ ಎಂಬ ಯೋಜನೆಯಡಿ ಸರ್ವ ಶಿಕ್ಷಣ ಅಭಿಯಾನದ ಪೂರಕ ಯೋಜನೆಯಲ್ಲಿ ಮೈಸೂರು ಜಿಲ್ಲೆಯ ಟಿ. ನರಸೀಪುರ, ನಂಜನಗೂಡು, ಹುಣುಸೂರು, ಮೈಸೂರು ತಾಲ್ಲೂಕುಗಳಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಮತ್ತು ಚಾಮರಾಜನಗರ ಜಿಲ್ಲೆಯ ಯಳಂದೂರು ಬ್ಲಾಕ್‌ನಲ್ಲಿ ೭ ಹೊಸ ಕೆ.ಜಿ.ಬಿ.ವಿ. ಗಳನ್ನು ೨೦೧೦-೧೧ರಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದು ಕೇಂದ್ರ ಸರ್ಕಾರ ಹೆಣ್ಣು ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮಗಳಲ್ಲಿ ಅತಿ ಹೆಚ್ಚು ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ.

ಈ ಕಾರ್ಯಕ್ರಮದವು ೨೦೦೧ರ ಜನಗಣತಿ ಪ್ರಕಾರ ಗ್ರಾಮೀಣ ಮಹಿಳಾ ಸಾಕ್ಷರತೆಯು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವ ಮಹಿಳಾ ಸಾಕ್ಷರತೆ ಹಾಗೂ ಪುರುಷ ಸಾಕ್ಷರತೆಗಳ ನಡುವಿನ ವ್ಯತ್ಯಾಸವು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿರುವ, ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಈ ಬ್ಲಾಕ್‌ಗಳ ಕೆಳಕಂಡ ಪ್ರದೇಶಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು

೧. ಮಹಿಳಾ ಸಾಕ್ಷರತೆ ಕಡಿಮೆ ಇರುವ ಬುಡಕಟ್ಟು ಜನಾಂಗ ಕೇಂದ್ರೀಕೃತವಾಗಿರುವ ಪ್ರದೇಶಗಳಲ್ಲಿ ಮತ್ತು ಶಾಲೆಯಿಂದ ಹೊರಗಿರುವ ಬಾಲಕಿಯರ ಸಂಖ್ಯೆ ಹೆಚ್ಚಾಗಿರುವ ಪ್ರದೇಶಗಳಲ್ಲಿ.

೨. ಮಹಿಳಾ ಸಾಕ್ಷರತೆ ಕಡಿಮೆ ಇದ್ದು ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಜನರು ಕೇಂದ್ರೀಕೃತವಾಗಿರುವ ಬಾಲಕಿಯರ ಸಂಖ್ಯೆ ಹೆಚ್ಚಾಗಿರುವ ಪ್ರದೇಶಗಳು

೩. ಮಹಿಳಾ ಸಾಕ್ಷರತೆ ಕಡಿಮೆ ಇರುವ ಪ್ರದೇಶಗಳು

೪. ಪ್ರಾಥಮಿಕ ಶಾಲೆ ಪ್ರಾರಂಭಿಸಲು ಅರ್ಹತೆ ಇಲ್ಲದ ಸಣ್ಣ ಸಣ್ಣ ಹಾಗೂ ಚದುರಿಹೋದ ಜನವಸತಿ ಪ್ರದೇಸಗಳಲ್ಲಿ

ಕಸ್ತೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳು ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿನಿಯರನ್ನು ಶೈಕ್ಷಣಿಕವಾಗಿ ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿ ಕೊನೆಯ ಹಂತವಾಗಿದ್ದು ಸೂಕ್ತ ಹೆಣ್ಣು ಮಕ್ಕಳನ್ನು ಗುರುತಿಸಿ ದಾಖಲಿಸುವುದರೊಂದಿಗೆ ಯೋಜನೆಯಯ ಉದ್ದೇಶ ಸಫಲವಾಗುತ್ತದೆ ಎಂದು ಹೇಳಲಾಗಿದೆ.

ಹೆಣ್ಣುಮಕ್ಕಳ ಶಿಕ್ಷಣದಿಂದ ಮಾತ್ರ ಸಮಾಜದ ಒಳಿತು. ಎಲ್ಲಾ ಹೆಣ್ಣು ಮಕ್ಕಳು ಗಂಡು ಮಕ್ಕಳೊಂದಿಗೆ ಸಮಾಜದಲ್ಲಿ ಸಮಾನ ಅವಕಾಶವನ್ನು ಪಡೆಯುವದರ ಮೂಲಕ ಸರ್ವ ತೋಮುಖ ಅಭಿವೃದ್ಧಿಯನ್ನು ಕಾಣಬೇಕಾಗಿದೆ. ಇದು ಶಿಕ್ಷನದಿಂದ ಮಾತ್ರ ಸಾಧ್ಯ. ಶೋಷಣೆಯ ಮೂಲವನ್ನು ಶಿಕ್ಷಣದಿಂದಲೇ ಅರಿಯಲು ಸಾಧ್ಯ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳು ನಿರ್ಭಿತಿಯಿಂದ ಜೀವನ ಸಾಗಿಸಲು ಅಕ್ಷರ ಜ್ಞಾನ ಅಗತ್ಯವಾಗಿದೆ.ಮಗುವಿನ ಲಾಲನೆ ಪಾಲನೆ ಮನೆಯಲ್ಲಿ ಆಗುವುದರಿಂದ, ವಿದ್ಯಾವಂತ ಮಹಿಳೆ ಮಾತ್ರ ತನ್ನ ಮಗುವನ್ನು ಸನ್ಮಾರ್ಗದತ್ತ ಕೊಂಡೊಯಯ್ಯಬಲ್ಲಳು. ಈ ಎಲ್ಲಾ ಕಾರಣಗಳಿಂದ ಪರಿಪೂರ್ಣ ಸಮಾಜದ ನಿರ್ಮಾಣ ವಿದ್ಯಾವಂತ ಮಹಿಳೆಯಿಂದಲೇ ಮಾತ್ರ ಸಾಧ್ಯ. ಆದುದರಿಂದ ಹೆಣ್ಣು ಸಮಾಜದ ಕಣ್ಣು ಎಂಬ ವಾಸ್ತವ ಸತ್ಯವನ್ನು ಮನಗಾಣಬೇಕಾಗಿದೆ.

೬. ಚಿಣ್ಣರ ಕರ್ನಾಟಕ ದರ್ಶನ-ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ

ಸರ್ವ ಶಿಕ್ಷಣ ಅಭಿಯಾನವು ಪ್ರಾದೇಶಿಕ ಹಾಗೂ ಲಿಂಗ ಅಸಮಾನತೆ ಹೋಗಲಾಡಿಸಿ ಗುಣಮಟ್ಟದ ಶಿಕ್ಷಣ ಒದಗಿಸುವ ಗುರಿಯಿಂದ ಪ್ರಾರಂಭಗೊಂಡಿದ್ದು, ಕೆಲವು ಕಾರ್ಯಕ್ರಮಗಳನ್ನು ವಿಶೇಷವಾಗಿ ಆಯೋಜಿಸಲಾಗಿದೆ. ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವ ಮತ್ತು ಶಾಲಾ ಚಟುವಟಿಕೆಗಳನ್ನು ಹೊರ ಪ್ರಪಂಚದ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವ ಉದ್ದೇಶದಿಂದ ಚಿನ್ನರ ಕರ್ನಾಟಕ ದರ್ಶನ ಎಂಬ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ೨೦೦೪-೦೫ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಯಿತು ೨೦೨ ಶೈಕ್ಷಣಿಕ ಬ್ಲಾಕ್‌ಗಳ ಪ್ರತಿ ಬ್ಲಾಕ್‌ನಿಂದ ೫೦ ವಿದ್ಯಾಥಿಗಳು ಈ ಕಾರ್ಯಕ್ರಮದ ಸೌಲಭ್ಯವನ್ನು ಪಡೆದಿರುತ್ತಾರೆ. ಚಿಣ್ಣರ ಕರ್ನಾಟಕ ದರ್ಶನ ೫ ದಿನಗಳ ಈ ಪ್ರವಾಸವು ವಿದ್ಯಾರ್ಥಿಗಳಿಗೆ ಉಚಿತವಾಗಿದ್ದು ಉತ್ಕೃಷ್ಟ ದರ್ಜೆಯ ವ್ಯವಸ್ಥೆಯಲ್ಲಿ ಮಕ್ಕಳು ಪ್ರವಾಸಕ್ಕೆ ಹೋಗುವ ಕಾಯ್ಕ್ರಮವಾಗಿದೆ. ಎಲ್ಲಾ ಮಕ್ಕಳು ೭ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವವರಾಗಿದ್ದು ಹೆಣ್ಣು ಮಕ್ಕಳಿಗೆ ಶೇ. ೬೫ ರಷ್ಟು ಆಸನಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಗಿದೆ. ಇಲ್ಲಿ ಯಾವ ಮಗುವು ತಟ್ಟೆ, ಲೋಟ ಮತ್ತು ಹಾಸಿಗೆ ಹೊದಿಕೆಗಳನ್ನು ತರುವ ಅಗತ್ಯವಿಲ್ಲ ಎಂದು ತಿಳಿಯಲಾಗಿದೆ. ಬರೆಯಲು ಪುಸ್ತಕ. ಪೆನ್.

ಬಣ್ಣದ ಕಾಗದ, ಬಣ್ಣದ ಪೆನ್ಸಿಲ್, ಮಾರ್ಗದರ್ಶನಕ್ಕಾಗಿ ಮಾರ್ಗಸೂಚಿ ಹಾಗೂ ಕರ್ನಾಟಕ ನಕ್ಷೆಗಳನ್ನು ಪ್ರತಿಯೊಬ್ಬರಿಗೂ ನೀಡಲಾಯಿತು. ಇದು ಸರ್ವ ಶಿಕ್ಷಣ ಅಭಿಯಾನದ ಯಶಸ್ವಿ ಹಾಗೂ ಪ್ರಸಿದ್ಧ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದಲ್ಲಿ ಮಕ್ಕಳು ಸ್ಥಳಗಳ ದರ್ಶನದ ಜೊತೆಗೆ ಪ್ರವಾಸದ ದಿನಾಚರಿಯನ್ನು ಬರೆದಿರುತ್ತಾರೆ. ಪ್ರತಿಯೊಬ್ಬರಿಗೂ ನೀಡಲ್ಪಟ್ಟದಂತಹ ಪ್ರಶ್ನಾವಳಿಗಳಿಗೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪ್ರವಾಸದ ಕೊನೆಯಲ್ಲಿ ಪ್ರತಿಕ್ರಿಯೆಯನ್ನು ನೀಡಿರುತ್ತಾರೆ. ಈ ಪ್ರಶ್ನಾವಳಿಗಳ ಅಧ್ಯಯನ ನಡೆಸಿ ಕಾರ್ಯಕ್ರಮದ ಯಶಸ್ಸನ್ನು ಅಳೆಯುವ ಕಾರ್ಯ ನಡೆದಿದೆ. ಶಾಲಾ ವ್ಯವಸ್ಥೆಗೆ ಮಕ್ಕಳನ್ನು ಆಕರ್ಷಿಸುವದರ ಜೊತೆಗೆ ಅವರನ್ನು ಶಾಲ;ಎಯಲ್ಲಿ ಉಳಿವಂತೆ ಮಾಡಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಈ ಕಾರ್ಯಕ್ರಮದ ಪ್ರಮುಖವಾದ ಉದ್ದೇಶವಾಗಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ.

೭. ರೇಡಿಯೋ ಕಾರ್ಯಕ್ರಮ

ಸಮನ್ವಯ ಶಿಕ್ಷಣವು ಎಲ್ಲಾ ಮಕ್ಕಳಿಗೂ ಅವರವರ ಅಗತ್ಯಗಳನ್ನು ಆಧಾರಿಸಿ ನೀಡುವ ಸಮಾನವಾದ ಶಿಕ್ಷಣವಾಗಿದೆ. ಇಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು ಸಹ ಇತರೆ ಮಕ್ಕಳೊಡನೆ ಸಮಾನ ಶೈಕ್ಷಣಿಕ ಅವಕಾಶ ಪಡೆಯುವಂತಹ ವಾತಾವರಣವಿರುತ್ತದೆ. ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಸಾಮಾಣ್ಯ ಶಿಕ್ಷಕರಿಂದಲೇ ಪೊರೈಸುವುದರ ಮೂಲಕ ಸರ್ವರಿಗೂ ಶಿಕ್ಷಣದ ಅವಕಾಶ ನೀಡುವುದರ ಹಿನ್ನೆಲೆಯಲ್ಲಿ ರೇಡಿಯೋ ಕಾರ್ಯಕ್ರಮದ ಭಾಗಗಳಾದ ಕೇಳಿ-ಕಲಿ, ಚುಕ್ಕಿ-ಚಿನ್ನ ಮತ್ತು ಚಿನ್ನರ ಚುಕ್ಕಿ ಕಾರ್ಯಕ್ರಮಗಳನ್ನು ತರಗತಿಯಲ್ಲಿ ವಿದ್ಯಾರ್ಥಿ ಕೇಂದ್ರಿತ ಕ್ರಿಯಾತ್ಮಕ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಬೋಧನಾ ಕಲಿಕಾ ಪ್ರಕ್ರಿಯೆಯ ಗುಣಮಟ್ಟವನ್ನು ಉತ್ತಮ ಪಡಿಸಲು ಶಿಕ್ಷಕರಿಗೆ ಅನುವು ಮಾಡಿಕೊಡುವುದು ಮತ್ತು ಬೋಧನೆ ಕಲಿಕೆಗೆ ಕ್ಲಿಷ್ಟವಾಗಿರುವ ಆಯ್ದ ಪರಿಕಲ್ಪನೆಗಳ ಉತ್ತಮ ಮಟ್ಟದ ಚಟುವಟಿಕೆ ಆಧಾರಿತ ಬೊಧನೆಯಿಂದ ಕಲಿಕೆಯ ಮಟ್ಟವನ್ನು ಉತ್ತಮ ಪಡಿಸುವುದಾಗಿದೆ.

೮. ಅಕ್ಷರ ದಾಸೋಹ ಕಾರ್ಯಕ್ರಮ

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಒಪ್ಪಂದದಲ್ಲಿ ಘೋಷಿಸಲ್ಪಟ್ಟಿರುವಂತೆ ಪ್ರತಿಯೊಬ್ಬ ಹಸಿದ ಮಗುವಿಗು ಆಹಾರವನ್ನು ಒದಗಿಸಬೇಕಾದೆ. ಅಕ್ಷರ ದಾಸೋಹವು ಒಂದು ಪ್ರತಿಷ್ಠತ ಯೋಜನೆಯಾಗಿದ್ದು ಮಕ್ಕಳು ಆರೋಗ್ಯ ಪೂರ್ಣವಾಗಿ ಶಕ್ತಿವಂತರೂ ಹಾಗೂ ದೃಡಕಾಯರಾಗಿ ಬೆಳೆಯಲು ಒಂದು 'ದವಕಾಶ ಕಲ್ಪಿಸುವ ಪದ್ಧತಿಯಿಂದ ಕೂಡಿದ್ದು ಸಹಕಾರಿಯಾಗಿದೆ. ಸದರಿ ಕಾರ್ಯಕ್ರಮದ ಪ್ರಮುಖ ಉದ್ದೇಶವು ಎಲ್ಲಾ ಸರ್ಕರಿ ಹಾಗೂ

ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಸಿವು ನೀಗಿಸಿ ತನ್ಮೂಲಕ ಅವರ ಕಲಿಕಾ ಸಾಮಥ್ಯಗಳನ್ನು ಮತ್ತು ಸಾಧನೆಗಳನ್ನು ಹೆಚ್ಚಿಸುವುದಾಗಿದೆ.

ಅಕ್ಷರ ದಾಸೋಹ ನಡೆದು ಬಂದ ದಾರಿ

೨೦೦೨-೦೩ ರವರೆಗೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ತಲಾ ೩ ಕೆ.ಜಿ. ಅಕ್ಕಿಯನ್ನು ಪ್ರತಿ ತಿಂಗಳು ನೀಡಲಾಗುತ್ತಿತ್ತು, ಕರ್ನಾಟಕ ರಾಜ್ಯದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ೨೦೦೨-೦೩ ನೇ ಸಾಲಿನಲ್ಲಿ ಮೋದಲ ಹಂತದಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದು:ಳಿದ ಈಶಾನ್ಯ ವಲಯದ ೭ ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ ಒಂದರಿಂದ ೫ ನೇ ತರಗತಿಯವರೆಗೆ ವಿದ್ಯಾರ್ಥಿಗಳಿಗೆ ಬಿಸಿಯೂಟ ಪ್ರಾರಂಭಿಸಲಾಯಿತು.

ಅ. ೨೦೦೩-೦೪ನೇ ಸಾಲಿನಿಂದ ಉಳಿದ ೨೦ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.

ಆ. ದಿನಾಂಕ: ೧-೦೯-೨೦೦೪ ರಿಂದ ಅನುದಾನಿತ ಪ್ರಾಥಮಿಕ ಶಾಲೆಗಳಿಗೂ ವಿಸ್ತರಿಸಲಾಯಿತು.

ಇ. ದಿನಾಂಕ: ೧-೧೦-೨೦೦೪ ರಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರಾತಮಿಕ ಶಾಲೆಗಳ ೬ ಮತ್ತು ೭ನೇ ತರಗತಿ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

ಈ. ೨೦೦೭-೦೮ನೇ ಸಾಲಿನಿಂದ ಯೋಜನೆಯನ್ನು ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಿಗೂ ವಿಸ್ತರಿಸಲಾಯಿತು. ಇದರಿಂದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ೧ ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳೆಲ್ಲಾರಿಗೂ ಮದ್ಯಾಹ್ನ ಉಪಾಹಾರವನ್ನು ಒದಗಿಸಲಾಯಿತು. ೧ ರಿಂದ ೮ನೇ ತರತಗತಿಯವರೆಗೆ ಕೇಂದ್ರ ಸರ್ಕಾರದಿಂದ ಹಾಗೂ ೯ ಮತ್ತು ೧೦ನೇ ತರಗತಿಯವರೆಗೆ ಮದ್ಯಾಹ್ನದ ಬಿಸಿಯೂಟವನ್ನು ಒದಗಿಸಲಾಗುತ್ತಿದೆ.

ಮುಂದುವರಿದು ಈ ಕಾರ್ಯಕ್ರಮದ ಉದ್ದೇಶವಾದ ಶಾಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಹೆಚ್ಚಿಸುವುದು, ಶೈಕ್ಷಣಿಕ ವರ್ಷದಲ್ಲಿ ಮಧ್ಯೆ ಮಧ್ಯೆ ಶಾಲೆಯನ್ನು ತೊರೆಯದಂತೆ ತಡೆಯುವುದು, ಪೌಷ್ಠಕಾಂಶ ಹೆಚ್ಚಿಸುವುದರ ಮೂಲಕ ಶಾಲಾ ಮಕ್ಕಳ ಆರೋಗ್ಯವನ್ನು ಅಭಿವೃದ್ಧಿಗೊಳಿಸುವುದು, ಶಾಲಾ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಸಾಮಾಜಿಕ ಸಮಾನತೆಯನ್ನು ಅಭಿವೃದ್ಧಿಗೊಳಿಸಿ ತನ್ಮೂಲಕ ರಾಷ್ಟ್ರೀಯ ಭಾವೈಎಕ್ಯತೆಯನ್ನು ಮಕ್ಕಳಲ್ಲಿ ಮೂಡಿಸಿವಂತಹ ಉದ್ದೇಶವನ್ನಿಟ್ಟುಕೊಂಡು ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.

೯. ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ

ಈ ಕಾರ್ಯಕ್ರಮವನ್ನು ೨೦೦೬-೦೭ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿನ ೧ ರಿಂದ ೧೦ನೇ ತರಗತಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. ಈ ಕಾರ್ಯಕ್ರಮವನ್ನು ನೋಡಿದಾಗ ಮಕ್ಕಳಿಗೆ ಕೇವಲ ಆರೋಗ್ಯ ಸೇವೆಯನ್ನು ಒದಗಿಸುವ ಕೆಲಸ ಕಾರ್ಯಗಳಾದರೆ ಸಾಲದು ಅದರ ಜೊತೆ ಜೊತೆಯಲ್ಲಿ ಆರೋಗ್ಯ ಸಂಬಂಧಿ ಪೂರ್ವ ನಿರ್ದೇಣಗಳನ್ನು ಕೊಟ್ಟಾಗ ಮಾತ್ರ ಉತ್ತಮ ಆರೊಗ್ಯವನ್ನು ಕಾಣಲು ಸಾಧ್ಯವಾಗುತ್ತದೆ.

ಮೇಲಿನ ಎಲ್ಲಾ ಆಲೋಚನೆಗಳನ್ನು ನೋಡಿದಾಗ ದೇಶದ ಹಿಂದುಳಿದ ಮತ್ತು ಶಿಕ್ಷಣದಿಂದ ವಂಚಿತಗೊಂಡ ಪ್ರಾಥಮಿಕ ಶಾಲಾ ಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಹಲವು ರೀತಿಯ ಪ್ರಯತ್ನಗಳು ನಡೆದಿರುವುದನ್ನು ಕಾಣಲಾಗಿದೆ. ಮುಂದುವರಿದು ಇತ್ತೀಚಿನ ದಿನಮಾನಗಳಲ್ಲಿ ಶಿಕ್ಷಣದಲ್ಲಿ ಆಗಿರುವ ಬದಲಾವಣೆಗಳನ್ನು ಗುರ್ತಿಸುವುದು ಈ ಅಧ್ಯಯನದ ಉದ್ದೇಶ. ಶಾಲಾ ಶಿಕ್ಷಣದ ಮಕ್ಕಳಿಗೆ ಎಷ್ಟರ ಮಟ್ಟಿಗೆ ಶಾಲಾ ಸೌಲಭ್ಯಗಳು ಸಮರ್ಥವಾಗಿ ತಲುಪಿವಿಯೋ ಎಂಬುದನ್ನು ಕಾಣಲು ಸಕಾರದಿಂದ ರಚಿತಗೊಂಡಿರುವ ಕಾರ್ಯಕ್ರಗಳು ನಮಗೆ ಪ್ರಸ್ತುತವೆನಿಸುತ್ತವೆ. ಅವುಗಳನ್ನು ಆಧಾರವಾಗಿ ಇಟ್ಟುಕೊಂಡು ಪ್ರಾಥಮಿಕ ಶಾಲೆಗಳ ಸ್ಥಿತಿಗತಿಯನ್ನು ಕ್ಷೇತ್ರಾಧ್ಯಯನದ ಮಾಹಿತಿಯ ಮೂಲಕ ಮೌಲ್ಯಮಾಪನ ಮಾಡಲಾಗಿದೆ. ಅಂದಹಾಗೆ ಅಂಕಿ-ಅಂಶಗಳನ್ನು ಪ್ರಸ್ತುತ ಪಡಿಸುವುದಕ್ಕಿಂತ ಹೆಚ್ಚಾಗಿ ಕಣ್ಣಿಗೆ ಬೀರುವ ಬದಲಾವಣೆಗಳನ್ನು ಗಮನಕ್ಕೆ ತರುವುದು ಇಂದು ಅಗತ್ಯ ಎನಿಸುತ್ತದೆ. ೨೧ನೇ ಶತಮಾನದ ೨ನೇ ದಶಕದಲ್ಲಿ ನಾವು ಕಾಣುತ್ತಿರುವ ಜನಸಂಖ್ಯಾ ಬೆಳವಣಿಗೆಯಿಂದ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶ ವಲಸೆ ಹೋಗುವುದು ನಮ್ಮ ಗ್ರಾಮಾಂತರ ಪ್ರದೇಶಗಳ ಸ್ಥಿತಿ ಇನ್ನೂ ಸುಧಾರಿಸದೇ ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಾಲೆಗಳ ಸ್ಥಿತಿಯು ಶೋಚನೀಯಗೊಂಡಿರುವುದು ಹಲವು ಅಧ್ಯಯನಗಳು ಸಾಧರಪಡಿಸಿವೆ. ಇತಂಹ ಹಲವು ವಿದ್ಯಮಾನಗಳಿಂದ ದೇಶದಲ್ಲಾಗುತ್ತಿರುವ ಈ ಬದಲಾವಣೆಗಳು ಎಲ್ಲಿಗೆ ಕೊಂಡೊಯ್ಯುತ್ತಿವೆ ಎಂಬುದನ್ನು ಮುಂದಿನ ಅಧ್ಯಯನದಲ್ಲಿ ನೋಡಲಾಗಿದೆ.

ಅಧ್ಯಾಯ ನಾಲ್ಕು

ಪ್ರಾಥಮಿಕ ಶಾಲಾ ಶಿಕ್ಷಣ: ಪಾಲಕರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ

ಅಧ್ಯಾಯ ನಾಲ್ಕು

ಪ್ರಾಥಮಿಕ ಶಾಲಾ ಶಿಕ್ಷಣ: ಪಾಲಕರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ

ಪ್ರಬಂಧದ ಮೂರನೆಯಾ ಅಧ್ಯಯನದಲ್ಲಿ ಶಿಕ್ಷಣಕ್ಕಿರುವ ಕಾರ್ಯಕ್ರಮಗಳ ಮೂಲಕ ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನು ಕುರಿತು ಅಧ್ಯಯನ ಮಾಡುವ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಭಾರತದಲ್ಲಿ ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಹೇಗೆ ಕಾರ್ಯಕ್ರಮಗಳು ರೂಪಿತ ಗೊಂಡಿವೆ ಅಲ್ಲದೆ, ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ ಯಾವ ರೀತಿಯಾಗಿ ಬಲಗೊಂಡಿವೆ ಎಂಬುದನ್ನು ನೋಡಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ನೋಡುವ ಉದ್ದೇಶದೊಂದಿಗೆ ಮೂರು ಜಿಲ್ಲೆಯ ಹದಿನೈದು ಗ್ರಾಮಗಳ ಜನತೆಯನ್ನು ಯಾದೃಚ್ಛಿಕ ವಿಧಾನದ ಮೂಲಕ ಸಂದರ್ಶಿಸಲಾಗಿದೆ. ಹಾಗಾಗಿ, ಕುಟುಂಬಗಳ ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳನ್ನು ಗುರುತಿಸಲಾಗಿದೆ.

ಅಂತೆಯೇ, ಗ್ರಾಮೀಣ ಪ್ರದೇಶದಲ್ಲಿ ಚಾಲನೆಯಲ್ಲಿರುವ ಪ್ರಾಥಮಿಕ ಶಾಲೆಗಳನ್ನು ಸಬಲೀಕರಣಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನೇಕ ರೀತಿಯ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಇಂದಿನ ಸಂದರ್ಭಕ್ಕೆ ಅನುಸಾರವಾಗಿ ಗ್ರಾಮಾಂತರ ಪ್ರದೇಶದಲ್ಲಿ ಅಲ್ಲಿಯ ಮಕ್ಕಳ ಅನುಕೂಲಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಅಂದರೆ, ಮಾನವ ಅಭಿವೃದ್ಧಿ ವರದಿಯು ಹೇಳುವಂತೆ ಅಭಿವೃದ್ಧಿಯನ್ನು ಶಿಕ್ಷಣ, ಆರೋಗ್ಯ

ಮತ್ತು ವರಮಾನ ಎಂಬ ಮೂರು ಮಾನದಂಡಗಳ ಮೂಲಕ ಅಳೆಯಲಾಗುತ್ತದೆ. ಆದ್ದರಿಂದ ಜನರ ಅಭಿವೃದ್ಧಿಯನ್ನು ಕಾಣುವ ದೃಷ್ಟಿಯಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ ಶಿಕ್ಷಣದ ಬೆಳವಣಿಗೆಯನ್ನು ಕಾಣಲು ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಗೆ ಈಗ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಆದರೆ ಈ ಎಲ್ಲಾ ಕೆಲಸಗಳನ್ನು ಕೇವಲ ಸರ್ಕಾರ ಮಾತ್ರ ನಿರ್ವಹಿಸುವುದು ಕಷ್ಟಸಾಧ್ಯವಾದ ಮಾತಾಗಿದೆ. ಇದಕ್ಕೆ ಗ್ರಾಮೀಣ ಜನರ ಜೊತೆಗೆ ಅಧಿಕಾರಿ ವರ್ಗ ಸೇರಿಕೊಂಡಾಗ ಮಾತ್ರ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಕಾಣಬಹುದಾಗಿದೆ. ಹೀಗಾಗಿ ಗ್ರಾಮೀಣ ಪ್ರದೇಶಗಳ ಆಡಳಿತ ವ್ಯವಸ್ಥೆ ಸುಧಾರಣೆಯಾಗುವುದು ಆದ್ಯತೆಯ ಕೆಲಸವಾಗಿರುತ್ತದೆ. ಹಾಗೂ ಹೆಚ್ಚುತ್ತಿರುವ ಆರ್ಥಿಕ ಸಮಸ್ಯೆಗಳಿಂದ ವಲಸೆ ಹೋಗುವುದರಿಂದ ಪ್ರಾಥಮಿಕ ಶಾಲಾ ಶಿಕ್ಷಣದ ಮೇಲೆ ತುಂಬಾ ಪರಿಣಾಮ ಬೀರಿ ಅನೇಕ ಸಮಸ್ಯೆಗಳು ಉದ್ಭವವಾಗುವುದಲ್ಲದೆ, ಗ್ರಾಮೀಣ ಪ್ರದೇಶಗಳ ಮೂಲಕ ದೇಶದ ಅಭಿವೃದ್ಧಿಗೆ ಸವಾಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಶಾಲೆಗಳಿಗೆ ಪ್ರಮುಖ ಮೂಲಭೂತ ಸೌಲಭ್ಯಗಳಾದ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳನ್ನು ನೀಡುವ ಮೂಲಕ ಪ್ರಾಥಮಿಕ ಶಾಲೆಗಳನ್ನು ಅಭಿವೃದ್ಧಿಯ ದಿಕ್ಕಿಗೆ ಒಯ್ಯಬೇಕಾದ ಅಗತ್ಯವಿದೆ ಎಂದು ಹೇಳಲಾಗಿದೆ.

1-185,187,189,191-192,194,196,199,203,205,207-

ಕೊಪ್ಪಕ-೧. ಸಾಮಾನ್ಯ ವಿವರಗಳು(ಲಿಂಗ)

ಸಾಮಾನ್ಯ ವಿವರಗಳು	ಉಪಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಲಿಂಗ	ಗಂಡು	೩೫	೭೦	೨೮	೫೬	೪೧	೮೨
	ಹೆಣ್ಣು	೧೫	೩೦	೨೨	೪೪	೯	೧೮
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲೆ ತೋರಿಸಲಾದ ಕರ್ನಾಟಕದ ಮೂರು ಜಿಲ್ಲೆಯಲ್ಲಿನ ಗ್ರಾಮಗಳ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪಾಲಕರ ಸಂದರ್ಶಿತಗೊಂಡ ಲಿಂಗದ ವಿವರವನ್ನು ಕೊಷ್ಟಕದಲ್ಲಿ ನೀಡಲಾಗಿದೆ. ಕೊಪ್ಪಳ ಜಿಲ್ಲೆಯ ೫ ಶಾಲೆಯ ಪಾಲಕರಲ್ಲಿ ಶೇ. ೭೦.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೩೦.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ. ಅದರಂತೆ, ಬಳ್ಳಾರಿ ಜಿಲ್ಲೆಯ ೫ ಶಾಲೆಯ ಪಾಲಕರಲ್ಲಿ ಶೇ. ೫೬.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೪೪.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ. ಕೊನೆಯದಾಗಿ, ರಾಯಚೂರು ಜಿಲ್ಲೆಯ ೫ ಶಾಲೆಯ ಪಾಲಕರಲ್ಲಿ ಶೇ. ೮೨.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೧೮.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ. ಮೂರು ಜಿಲ್ಲೆಯನ್ನು ಹೋಲಿಕೆಯನ್ನು ಮಾಡಿದಾಗ ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಂಡು ಮಕ್ಕಳು ಸಂದರ್ಶನಗೊಂಡಿರುವುದನ್ನು ನೋಡಬಹುದಾಗಿದೆ.

ಮೇಲಿನ ಅಂಶಗಳಿಂದ ತಿಳಿದು ಬರುವ ಅಂಶವೆಂದರೆ, ಹೈದ್ರಾಬಾದ್ ಕರ್ನಾಟಕದ ಪ್ರದೇಶವಾದ ಬಳ್ಳಾರಿ ಮತ್ತು ರಾಯಚೂರಿನ ಜಿಲ್ಲೆಗಳನ್ನು ನೋಡಿದಾಗ ಮುಖ್ಯವಾಹಿನಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲ ರಾಯಚೂರಿನ ಗಂಡು ಮಕ್ಕಳ ಪಾಲಕರು ಇರುವುದನ್ನು ಕಾಣಬಹುದು ಅದರ ನಂತರ ಕೊಪ್ಪಳ ಜಿಲ್ಲೆಯಲ್ಲಿ ಆ ಪ್ರಮಾಣವನ್ನು ಕಾಣಬಹುದಾಗಿದೆ. ಕೊನೆಯ ಸ್ಥಾನದಲ್ಲಿ ಬಳ್ಳಾರಿಯ ಜನತೆಯನ್ನು ನೋಡಲಾಗುತ್ತದೆ.

ಹಾಗಾಗಿ, ಕುಟುಂಬದ ಮಹಿಳೆಯರು ಮಕ್ಕಳ ಶಿಕ್ಷಣ ಸಬಲೀಕರಣದಲ್ಲಿ ಇನ್ನು ಹೆಚ್ಚು-ಹೆಚ್ಚು ಭಾಗವಹಿಸುವ ಮೂಲಕ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಸ್ವಂತಃ ಕಂಡುಕೊಳ್ಳುವುದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ಬೆಳವಣಿಗೆಯನ್ನು ಕಂಡುಕೊಳ್ಳಲಾಗಿದೆ.

ಕೊಷ್ಟಕ-೨. ಸಾಮಾನ್ಯ ವಿವರಗಳು (ಜಾತಿ)

ಸಾಮಾನ್ಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಜಾತಿ	ಪ.ಜಾ.	೫	೧೦	೫	೧೦	೫	೧೦
	ಪ.ಪಂ.	೬	೧೨	೬	೧೨	೬	೧೨
	ಒ..ಬಿ.ಸಿ.	೧೨	೨೪	೧೮	೩೬	೧೪	೨೮
	ಸಾಮಾನ್ಯ	೨೭	೫೪	೨೨	೪೪	೨೫	೫೦
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲೆಯ ಗ್ರಾಮವಾರು ಪ್ರಾಥಮಿಕ ಶಾಲೆಯ ವ್ಯಾಪ್ತಿಯಲ್ಲಿ ಬರುವ ಪಾಲಕರನ್ನು ಸಂದರ್ಶನ ಮಾಡಿದ ಕುಟುಂಬಗಳು ಯಾವ ಜಾತಿಗೆ ಸೇರಿದ್ದಾರೆ ಎಂದು ಕೋಷ್ಟಕ–೨ರಲ್ಲಿ ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯ ಗ್ರಾಮಗಳಲ್ಲಿ ಶೇ. ೧೦.೦೦ರಷ್ಟು ಕುಟುಂಬಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಶೇ. ೧೨.೦೦ರಷ್ಟು ಕುಟುಂಬಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಶೇ. ೨೪.೦೦ ರಷ್ಟು ಹಿಂದುಳಿದ ಜಾತಿಗೆ ಸೇರಿದ್ದು, ಶೇ. ೫೪.೦೦ರಷ್ಟು ಸಾಮಾನ್ಯ ಜಾತಿಗೆ ಸೇರಿದವರಾಗಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿ ಶೇ. ೧೦.೦೦ರಷ್ಟು ಕುಟುಂಬಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಶೇ. ೧೨.೦೦ರಷ್ಟು ಕುಟುಂಬಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಶೇ. ೩೪.೦೦ ರಷ್ಟು ಹಿಂದುಳಿದ ಜಾತಿಗೆ ಸೇರಿದ್ದು, ಶೇ. ೪೪.೦೦ರಷ್ಟು ಸಾಮಾನ್ಯ ಜಾತಿಗೆ ಸೇರಿದವರಾಗಿದ್ದಾರೆ. ಕೊನೆಯದಾಗಿ, ರಾಯಚೂರು ಜಿಲ್ಲೆಯ ಗ್ರಾಮಗಳಲ್ಲಿ ಶೇ. ೧೦.೦೦ರಷ್ಟು ಕುಟುಂಬಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಶೇ. ೧೨.೦೦ರಷ್ಟು ಕುಟುಂಬಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಶೇ. ೨೮.೦೦ ರಷ್ಟು ಹಿಂದುಳಿದ ಜಾತಿಗೆ ಸೇರಿದ್ದು, ಶೇ. ೫೦.೦೦ರಷ್ಟು ಸಾಮಾನ್ಯ ಜಾತಿಗೆ ಸೇರಿದವರಾಗಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿರುವ ಕೊಪ್ಪಳ ಜಿಲ್ಲೆಯ ಸಾಮಾನ್ಯ ಜಾತಿಗೆ ಸೇರಿದವರಿರುತ್ತಾರೆ. ನಂತರ ರಾಯಚೂರು ಜಿಲ್ಲೆಯಲ್ಲಿಯೂ ಸಹ ಸಾಮಾನ್ಯ ಜಾತಿಗೆ ಸೇರಿದವರನ್ನು ಕಾಣಲಾಗುತ್ತದೆ. ಮೂರು ತಾಲೂಕಿನಲ್ಲಿ ಪ.ಜಾ. ಮತ್ತು ಪ.ಪಂ. ಜಾತಿಗೆ ಸೇರಿದವರು ಮಾಹಿತಿಯನ್ನು ನೀಡುವಲ್ಲಿ ವಿಫಲರಾಗಿದ್ದಾರೆ ಎನ್ನಲಾಗಿದೆ. ಅತಿಹೆಚ್ಚು ಬಡವರು ಪರಿಶಿಷ್ಟ ಜಾತಿಯಲ್ಲಿ ಮತ್ತು ಇತರೆ ವರ್ಗದಲ್ಲಿದ್ದಾರೆ. ಆದರೂ ಪರಿಶಿಷ್ಟರ ಪ್ರಮಾಣ ಹೆಚ್ಚಾಗಿದ್ದರೂ ಪರಿಶಿಷ್ಟರ ಮತ್ತು ಹಿಂದುಳಿದ ವರ್ಗದ ಕುಟುಂಬಗಳು ಮದ್ಯಮ ಸ್ಥಿತಿಯಲ್ಲಿದ್ದುಕೊಂಡು ಯಾವ ಅಭಿವೃದ್ಧಿಯನ್ನು ಕಾಣದೆ ಮಕ್ಕಳನ್ನು ಅಕ್ಷರ ಕಲಿಸುವಲ್ಲಿ ಹಿಂದುಳಿದಿದ್ದಾರೆ. ಇಲ್ಲಯಾ ಪಾಲಕರ ಅಭಿಪ್ರಾಯಗಳನ್ನು ನೋಡಿದಾಗ ತಮ್ಮ ಮಕ್ಕಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣವನ್ನು ಕಲಿಸದೆ ಕೆಳವರ್ಗದವರ ಸ್ಥಿತಿ ಶೋಚನೀಚುವಾಗಿದೆ ಎಂದು ಮನಗಣಲಾಗಿದೆ. ಈ ನಟ್ಟಿನಲ್ಲಿ ಸರಿಯಾದ ಹಂತಗಳಲ್ಲಿ ದುಃಸ್ಥಿತಿಯಲ್ಲಿರುವ ಪಾಲಕರನ್ನು ಗುರುತಿಸಿ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಪೂರಕವಾಗಿ ತಲುಪುವಂತೆ ಮಾಡಿ ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಿತರನ್ನಾಗಿ ಮಾಡಬೇಕಾದ ಅವಶ್ಯಕತೆಯಿದೆ ಎಂದು ಹೇಳಲಾಗುತ್ತದೆ.

ಕೊಷ್ಟಕ-೩. ಸಾಮಾನ್ಯ ವಿವರಗಳು (ವಯಸ್ಸು)

ಸಾಮಾನ್ಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ,	
ವಯಸ್ಸು	೨೧-೩೦	೭	೧೪	೧೨	೨೪	೧೯	೩೮
	೩೧-೪೦	೨೯	೫೮	೨೧	೪೨	೨೪	೪೮
	೪೧-೫೦	೧೪	೨೮	೧೭	೩೪	೭	೧೪
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲಾವಾರು ಸಂದರ್ಶನ ಮಾಡಿದ ಕುಟುಂಬಗಳು ಯಾವ ವಯಸ್ಸಿನವರು ಎಂದು ತೋರಿಸಲಾಗಿದೆ. ಪುರುಷ ಮತ್ತು ಮಹಿಳೆಯರ ವಯೋಮಿತಿಯವರು ಭಾಗವಹಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಗ್ರಾಮಗಳಲ್ಲಿ ಶೇ. ೧೪ರಷ್ಟು ಕುಟುಂಬಗಳು ೨೧ರಿಂದ ೩೦ ವಯೋಮಿತಿ ಯವರಾಗಿದ್ದಾರೆ. ಅದೇ ಪ್ರಕಾರ ಶೇ. ೫೮.೦೦ರಷ್ಟು ಕುಟುಂಬಗಳು ೩೧ರಿಂದ ೪೦ ವಯೋಮಿತಿ ಯವರಾಗಿದ್ದಾರೆ. ಉಳಿದ ಶೇ. ೨೮.೦೦ರಷ್ಟು ಕುಟುಂಬಗಳು ೪೧ ರಿಂದ ೫೦ ವಯೋಮಿತಿ ಯವರಾಗಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿ ಶೇ. ೨೪ರಷ್ಟು ಕುಟುಂಬಗಳು ೨೧ರಿಂದ ೩೦ ವಯೋಮಿತಿಯವರಾಗಿದ್ದಾರೆ. ಅದೇ ಪ್ರಕಾರ ಶೇ. ೪೨.೦೦ರಷ್ಟು ಕುಟುಂಬಗಳು ೩೧ರಿಂದ ೪೦ ವಯೋಮಿತಿಯವರಾಗಿದ್ದಾರೆ. ಉಳಿದ ಶೇ. ೩೪.೦೦ರಷ್ಟು ಕುಟುಂಬಗಳು ೪೧ ರಿಂದ ೫೦ ವಯೋಮಿತಿಯವರಾಗಿದ್ದಾರೆ. ಕೊನೆಯದಾಗಿ, ರಾಯಚೂರು ಜಿಲ್ಲೆಯ ಗ್ರಾಮಗಳಲ್ಲಿ ಶೇ. ೩೮ರಷ್ಟು ಕುಟುಂಬಗಳು ೨೧ರಿಂದ ೩೦ ವಯೋಮಿತಿಯವರಾಗಿದ್ದಾರೆ. ಅದೇ ಪ್ರಕಾರ ಶೇ. ೪೮.೦೦ರಷ್ಟು ಕುಟುಂಬಗಳು ೩೧ರಿಂದ ೪೦ ವಯೋಮಿತಿಯವರಾಗಿದ್ದಾರೆ. ಉಳಿದ ಶೇ. ೧೪.೦೦ರಷ್ಟು ಕುಟುಂಬಗಳು ೪೧ ರಿಂದ ೫೦ ವಯೋಮಿತಿಯವರಾಗಿದ್ದಾರೆ.

ಆದರೆ ಮೂರು ಜಿಲ್ಲೆಯ ಗ್ರಾಮಗಳನ್ನು ಗಮನಸಿದಾಗ ೩೧–೪೦ ವರ್ಷದ ವಯೋಮಿತಿಯ ಕುಟುಂಬದವರು ಹೆಚ್ಚಿರುವುದನ್ನು ಅಧ್ಯಯನದಿಂದ ತಿಳಿದು ಬರುತ್ತದೆ. ಇಲ್ಲಿ ಮುಖ್ಯವಾಗಿ ಗಮನಸಬೇಕಾಗಿರುವ ಅಂಶವೆಂದರೆ, ಇವರೇ ಹೆಚ್ಚಿನ ಸಂಖ್ಯೆಯಲ್ಲಿ ಹುಮ್ಮಸ್ಸಿನಂದ ಸಂದರ್ಶಿತರಾಗುವ ಜೊತೆಗೆ ಮಕ್ಕಳ ಶಿಕ್ಷಣದ ಬೆಳವಣಿಗೆಯನ್ನು ಹೆಚ್ಚಾಗಿ ಗಮನಸಿರುವುದನ್ನು ಕಾಣಲಾಗಿದೆ.

ಕೊಷ್ಟಕ-೪. ಸಾಮಾನ್ಯ ವಿವರಗಳು (ಶಿಕ್ಷಣ)

ಸಾಮಾನ್ಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಶಿಕ್ಷಣ	ಅನಕ್ಷರಸ್ಥರು	೮	೧೬	೧೧	೨೨	೫	೧೦
	ಪ್ರಾಥಮಿಕ ಶಿಕ್ಷಣ	೧೯	೩೮	೨೧	೪೨	೨೭	೫೪
	ಪ್ರೌಢ ಶಿಕ್ಷಣ	೨೩	೪೬	೧೫	೩೦	೧೪	೨೮
	ಪದವಿ ಪೂರ್ವ	–	–	೩	೬	೪	೮
ಒಟ್ಟು		೫೧	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲಾವಾರು ಗ್ರಾಮಗಳ ಪ್ರಾಥಮಿಕ ಶಾಲೆಗಳ ಪಾಲಕರನ್ನು ಸಂದರ್ಶನ ಮಾಡಿದಾಗ ಕೊಪ್ಪಳ ಜಿಲ್ಲೆಯಲ್ಲಿ ಶೇ. ೩೮.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಅದೇ ಪ್ರಕಾರ ಶೇ. ೪೬.೦೦ರಷ್ಟು ಪ್ರೌಢ ಶಿಕ್ಷಣವನ್ನು ಹೊಂದಿರುತ್ತಾರೆ. ಉಳಿದ ಶೇ. ೧೬.೦೦ರಷ್ಟು ಕುಟುಂಬಗಳು ಅನಕ್ಷರಸ್ಥರ ಕುಟುಂಬಗಳನ್ನು ಸಂದರ್ಶಿಸಲಾಯಿತು. ಅದರಂತೆ, ಬಳ್ಳಾರಿ ಜಿಲ್ಲೆಯ ಶೇ. ೪೨.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಅದೇ ಪ್ರಕಾರ ಶೇ. ೩೦.೦೦ರಷ್ಟು ಪ್ರೌಢ ಶಿಕ್ಷಣವನ್ನು ಹೊಂದಿರುತ್ತಾರೆ. ಅಲ್ಲದೇ, ಶೇ. ೬.೦೦ರಷ್ಟು ಕುಟುಂಬಗಳು ಪದವಿ ಪೂರ್ವ ಶಿಕ್ಷಣವನ್ನು ಕಲಿತಿರುತ್ತಾರೆ. ಉಳಿದ ಶೇ. ೨೨.೦೦ರಷ್ಟು ಕುಟುಂಬಗಳು ಅನಕ್ಷರಸ್ಥರ ಕುಟುಂಬಗಳನ್ನು ಸಂದರ್ಶಿಸಲಾಯಿತು. ಕೊನೆಯದಾಗಿ, ಅದರಂತೆ, ರಾಯಚೂರು ಜಿಲ್ಲೆಯ ಶೇ. ೫೪.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಅದೇ ಪ್ರಕಾರ ಶೇ. ೨೮.೦೦ರಷ್ಟು ಪ್ರೌಢ ಶಿಕ್ಷಣವನ್ನು ಹೊಂದಿರುತ್ತಾರೆ. ಅಲ್ಲದೇ, ಶೇ. ೮.೦೦ರಷ್ಟು ಕುಟುಂಬಗಳು ಪದವಿ ಪೂರ್ವ ಶಿಕ್ಷಣವನ್ನು ಕಲಿತಿರುತ್ತಾರೆ. ಉಳಿದ ಶೇ. ೧೦.೦೦ರಷ್ಟು ಕುಟುಂಬಗಳು ಅನಕ್ಷರಸ್ಥರ ಕುಟುಂಬಗಳನ್ನು ಸಂದರ್ಶಿಸಲಾಯಿತು.

ಇಲ್ಲಿ ಗಮನಸಬೇಕಾದ ಸಂಗತಿಯೆಂದರೆ, ಮೂರು ಜಿಲ್ಲೆಯ ಗ್ರಾಮಗಳಲ್ಲಿರುವ ಪಾಲಕರ ವಿದ್ಯಾರ್ಹತೆಯನ್ನು ಕಂಡಾಗ ಸರಾಸರಿ ಒಂದೇಯಾಗಿರುತ್ತದೆ. ಇವುಗಳಲ್ಲಿಯೇ ಹೋಲಿಕೆ ಮಾಡಿದಾಗ ರಾಯಚೂರಿನ ಗ್ರಾಮಗಳು ಹೆಚ್ಚಿನ ಶಿಕ್ಷಣವನ್ನು ಹೊಂದಿರುವುದು ನಂತರ ಬಳ್ಳಾರಿಯನ್ನು ನೋಡಲಾಗಿದೆ ಕೊನೆಯ ಸ್ಥಾನದಲ್ಲಿ ಕೊಪ್ಪಳ ಇರುವುದನ್ನು ನೋಡಬಹುದಾಗಿದೆ. ಹೆಚ್ಚಾನು ಹೆಚ್ಚು ಪ್ರಾಥಮಿಕ ಶಾಲೆಯನ್ನು ಕಲಿತಿರುವುದನ್ನು ಕಂಡುಬರಲಾಗಿದೆ. ಇದರಿಂದ ತಿಳಿದುಬರುವ ಸಂಗತಿಯೆಂದರೆ, ತಾವು ವಿದ್ಯಾವಂತರಾಗದೆ ಇರುವುದರಿಂದ ತಮ್ಮ ಮಕ್ಕಳನ್ನು ಅಕ್ಷರ ಕಲಿಕೆಯಿಂದ ದೂರವಿರಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಂತಹ ಸಂದರ್ಭವನ್ನು ಸರ್ಕಾರವು ವಿವಿಧ ವರದಿ ಮತ್ತು ಅಧ್ಯಯನಗಳಿಂದ ತಿಳಿದುಕೊಂಡು ವಿದ್ಯಾರ್ಥಿಗಳ ಪಾಲಕರು ಅಕ್ಷರವನ್ನು ಕಲಿಯುವ ಮೂಲಕ ತಮ್ಮ ಮಕ್ಕಳನ್ನು ಸಹ ಹೆಚಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸವನ್ನು ಕೊಡಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೫. ಸಾಮಾನ್ಯ ವಿವರಗಳು (ಉದ್ಯೋಗ)

ಸಾಮಾನ್ಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವವಿನಬಾವಿ, ಸಂತೆಕಲ್ಲೂರು	
ಉದ್ಯೋಗ	ಕೂಲಿ	೫	೧೦	೧೧	೨೨	೧೪	೨೮
	ಖಾಸಗಿ	೧೬	೩೨	೨೧	೪೨	೧೯	೩೮
	ವ್ಯವಹಾರ	೧೨	೨೪	೮	೧೬	೯	೧೮
	ವ್ಯವಸಾಯ	೧೭	೩೪	೧೦	೨೦	೮	೧೬
	ಸರ್ಕಾರಿ	–	–	–	–	–	–
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕರ್ನಾಟಕದ ಪ್ರಾಥಮಿಕ ಶಾಲೆಯಲ್ಲಿ ಪಾಠ ಕಲಿಯುತ್ತಿರುವ ಮಕ್ಕಳ ಪಾಲಕರು ತಮ್ಮ ಜೀವನೋಪಾಯಕ್ಕಾಗಿ ವಿವಿಧ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಕೊಪ್ಪಳ ಜಿಲ್ಲೆಯ ಗ್ರಾಮಗಳಲ್ಲಿ ಶೇ. ೧೦.೦೦ರಷ್ಟು ಕುಟುಂಬಗಳು ಕೂಲಿಯಿಂದ ತಮ್ಮ ಜೀವನ ಮಾಡುತ್ತಿದ್ದಾರೆ. ಅದೇ ಪ್ರಕಾರ ಶೇ. ೩೨.೦೦ರಷ್ಟು ಕುಟುಂಬಗಳು ಖಾಸಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ, ಶೇ. ೨೪.೦೦ರಷ್ಟು ಪಾಲಕರು ವ್ಯವಹಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇತರೆ ಶೇ. ೩೪.೦೦ರಷ್ಟು ಕುಟುಂಬಗಳು ವ್ಯವಸಾಯವನ್ನು ಆಧಾರಿತರಾಗಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿ ಶೇ. ೨೨.೦೦ರಷ್ಟು ಕುಟುಂಬಗಳು ಕೂಲಿಯಿಂದ ತಮ್ಮ ಜೀವನ ಮಾಡುತ್ತಿದ್ದಾರೆ. ಅದೇ ಪ್ರಕಾರ ಶೇ. ೪೨.೦೦ರಷ್ಟು ಕುಟುಂಬಗಳು ಖಾಸಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ, ಶೇ. ೧೬.೦೦ರಷ್ಟು ಪಾಲಕರು ವ್ಯವಹಾರವನ್ನು ಮಾಡಿಕೊಂಡು ಜೀವನ

ನಡೆಸುತ್ತಿದ್ದಾರೆ. ಇತರೆ ಶೇ. ೨೦.೦೦ರಷ್ಟು ಕುಟುಂಬಗಳು ವ್ಯವಸಾಯವನ್ನು ಆಧಾರಿತ ರಾಗಿದ್ದಾರೆ. ಮುಂದುವರಿದು, ರಾಯಚೂರು ಜಿಲ್ಲೆಯ ಗ್ರಾಮಗಳಲ್ಲಿ ಶೇ. ೨೮.೦೦ರಷ್ಟು ಕುಟುಂಬಗಳು ಕೂಲಿಯಿಂದ ತಮ್ಮ ಜೀವನ ಮಾಡುತ್ತಿದ್ದಾರೆ. ಅದೇ ಪ್ರಕಾರ ಶೇ. ೩೮.೦೦ರಷ್ಟು ಕುಟುಂಬಗಳು ಖಾಸಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ, ಶೇ. ೧೮.೦೦ರಷ್ಟು ಪಾಲಕರು ವ್ಯವಹಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇತರೆ ಶೇ. ೧೬.೦೦ರಷ್ಟು ಕುಟುಂಬಗಳು ವ್ಯವಸಾಯವನ್ನು ಆಧಾರಿತರಾಗಿದ್ದಾರೆ. ಹೀಗೆ ಮುಂತಾದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿರುವುದು ಅಧ್ಯಯದಿಂದ ತಿಳಿದು ಬರುತ್ತದೆ. ಮೂರು ಜಿಲ್ಲೆಯನ್ನು ನೋಡಿದಾಗ ಯಾವ ಪಾಲಕರು ಸರ್ಕಾರಿ ಹುದ್ದೆಯನ್ನು ಹೊಂದದೆ ಸರ್ಕಾರೇತರ ಮತ್ತು ಕೂಲಿ ನಾಲಿ ಮಾಡಿಕೊಂಡು ಜೀವಿಸುತ್ತಿದ್ದಾರೆ. ಆದರೆ ಹೆಚ್ಚು ಅಭಿವೃದ್ಧಿಯನ್ನು ಕಾಣುವುದಕ್ಕೆ ಸರ್ಕಾರಿ ಉದ್ಯೋಗದ ಅವಶ್ಯಕತೆಯು ಒಂದು. ಆದ್ದರಿಂದ ಹೆಚ್ಚು-ಹೆಚ್ಚು ಅಕ್ಷರವನ್ನು ಕಲಿಯುವುದರೊಂದಿಗೆ ಸರ್ಕಾರಿ ಉದ್ಯೋಗವನ್ನು ಪಡೆಯುವ ಅಗತ್ಯವಿದೆ ಎಂದು ಹೇಳಬಹುದಾಗಿದೆ.

ಒಟ್ಟಾರೆಯಾಗಿ ಈ ವಿಶ್ಲೇಷಣೆಯಿಂದ ತಿಳಿದುಬರುವ ಅಂಶವೆಂದರೆ ಬಡತನದ ರೇಖೆಯ ಅಂಚಿನಲ್ಲಿರುವ ಬಹುಳಷ್ಟು ಜನರು ಕಡಿಮೆ ಆದಾಯದ ಉದ್ಯೋಗಗಳಲ್ಲಿಯೇ ಒದ್ದಾಡುವುದು ಅವರ ಜೀವನ ಹೀನಾಯ ಸ್ಥಿತಿಯಲ್ಲಿದ್ದಾಗಿದೆ. ಮೂರು ಜಿಲ್ಲೆಗಳ ಅಂಕಿ ಅಂಶಗಳನ್ನು ನೋಡಿದಾಗ ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದು,

ಅದಕ್ಕೆ ಹೊರತಾಗಿ ಬಳ್ಳಾರಿ ಮತ್ತು ರಾಯಾಚೂರಿನಲ್ಲಿ ವಿವಿಧ ಕೌಶಲ್ಯಗಳನ್ನು ಹೊಂದಿದ್ದು ಖಾಸಗಿ ವ್ಯವಹಾರವನ್ನು ಮಾಡುತ್ತಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಕೊಷ್ಟಕ-೬. ಸಾಮಾನ್ಯ ವಿವರಗಳು (ಮಾಸಿಕ ವರಮಾನ)

ಸಾಮಾನ್ಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಮಾಸಿಕ ವರಮಾನ	೧೦೦೦-೫೦೦೦	೪	೮	೭	೧೪	೮	೧೬
	೫೦೦೦-೧೦೦೦೦	೨೩	೪೬	೧೯	೩೮	೧೪	೨೮
	೧೦೦೦೦-೨೦೦೦೦	೨೩	೪೬	೨೪	೪೮	೨೮	೫೬
	ಒಟ್ಟು	೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ವರಮಾನದ ವಿವರ ಕುರಿತು ಮೂರು ಜಿಲ್ಲೆಯ ಗ್ರಾಮಗಳಲ್ಲಿ ಕೊಪ್ಪಳ ಜಿಲ್ಲೆಯ ಗ್ರಾಮಗಳು ಶೇ. ೦೮.೦೦ರಷ್ಟು ಕುಟುಂಬಗಳು ೧೦೦೦ರಿಂದ ೫೦೦೦ ವರಮಾನ ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೪೬.೦೦ರಷ್ಟು ಕುಟುಂಬಗಳು ೫೦೦೧ರಿಂದ ೧೦೦೦೦ ವರಮಾನ ಹೊಂದಿದವರಾಗಿದ್ದಾರೆ. ಕೆಲವು ಶೇ. ೪೬.೦೦ರಷ್ಟು ಕುಟುಂಬಗಳು ೧೦.೦೦೦ರಿಂದ ೨೦.೦೦೦ ವರಮಾನ ಹೊಂದಿದವರಾಗಿದ್ದಾರೆ. ಬಳ್ಳಾರಿ ಜಿಲ್ಲೆಯ ಗ್ರಾಮಗಳು ಶೇ. ೧೪.೦೦ರಷ್ಟು ಕುಟುಂಬಗಳು ೧೦೦೦ರಿಂದ ೫೦೦೦ ವರಮಾನ ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೩೮.೦೦ರಷ್ಟು ಕುಟುಂಬಗಳು ೫೦೦೧ರಿಂದ ೧೦೦೦೦ ವರಮಾನ ಹೊಂದಿದವರಾಗಿದ್ದಾರೆ. ಕೆಲವು ಶೇ. ೪೮.೦೦ರಷ್ಟು ಕುಟುಂಬಗಳು ೧೦.೦೦೦ರಿಂದ ೨೦.೦೦೦ ವರಮಾನ ಹೊಂದಿದವರಾಗಿದ್ದಾರೆ. ರಾಯಚೂರು ಜಿಲ್ಲೆಯ ಗ್ರಾಮಗಳು ಶೇ. ೧೬.೦೦ರಷ್ಟು ಕುಟುಂಬಗಳು ೧೦೦೦ರಿಂದ ೫೦೦೦ ವರಮಾನ ಹೊಂದಿದವರಾಗಿದ್ದಾರೆ. ಅದೇ ಪ್ರಕಾರ

ಶೇ. ೨೮.೦೦ರಷ್ಟು ಕುಟುಂಬಗಳು ೫೦೦೧ರಿಂದ ೧೦೦೦೦ ವರಮಾನ ಹೊಂದಿದವರಾಗಿದ್ದಾರೆ. ಕೆಲವು ಶೇ. ೫೬.೦೦ರಷ್ಟು ಕುಟುಂಬಗಳು ೧೦,೦೦೦ರಿಂದ ೨೦,೦೦೦ ವರಮಾನ ಹೊಂದಿದವರಾಗಿದ್ದಾರೆ. ಇಲ್ಲಿ ಗಮನಸಬೇಕಾದ ಅಂಶವೆಂದರೆ ವರಮಾನದ ಏರಿಕೆಯಿಲ್ಲದೆ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಅಂದಹಾಗೆ ಮೂರು ಜಿಲ್ಲೆಗಳಿಗೆ ಅನ್ವಯವಾಗುತ್ತದೆ. ಹೆಚ್ಚು ವರಮಾನ ಹೊಂದುವುದರೊಂದಿಗೆ ಶಿಕ್ಷಣವನ್ನು ಸುಸ್ಥಿತಿಯಲ್ಲಿಡಬಹುದು. ಆದರೆ ವರಮಾನವಿಲ್ಲದೆ ಶಿಕ್ಷಣದ ಸಬಲೀಕರಣ ಸಾಧ್ಯವಿಲ್ಲ. ವರಮಾನದ ಕೊರತೆಯು ದುಃಸ್ಥಿತಿಗೆ ಕಾರಣವಾಗಿದೆ. ಇದಕ್ಕೆ ಹೊರತಾಗಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳು ಪ್ರಗತಿಯನ್ನು ಕಂಡಿದ್ದು ಕೊಪ್ಪಳ ಜಿಲ್ಲೆಯು ಹಿನ್ನಡೆಯನ್ನು ಕಂಡಿದೆ ಎಂದು ಅಧ್ಯಯನಗಳಿಂದ ಹೇಳಲಾಗುತ್ತದೆ. ಹಾಗಾಗಿ ವರಮಾನವು ಅಭಿವೃದ್ಧಿಗೆ ಅಗತ್ಯ. ಉತ್ತಮ ಜೀವನ ನಿರ್ವಹಣೆಗಾಗಿ ವರಮಾನ ಅಗತ್ಯವಿದೆ ಎಂದು ಕಂಡುಬರುತ್ತದೆ. ಹಾಗಾಗಿ, ವರಮಾನದಲ್ಲಿ ಯಾವ ಜಿಲ್ಲೆಯು ಹಿಂದುಳಿದಿದೆಯೋ ಅಂತಹ ಗ್ರಾಮಗಳು ವರಮಾನದ ಪ್ರಗತಿಯನ್ನು ಕಂಡುಕೊಂಡು ಮಕ್ಕಳ ಶಿಕ್ಷಣದ ಅಭಿವೃದ್ಧಿಯನ್ನು ಸಾಧಿಸುವ ಅಗತ್ಯವಿದೆ ಎಂದು ಹೇಳಬಹುದಾಗಿದೆ.

ಕೊಪ್ಪಕ-೭ ಸಾಮಾನ್ಯ ವಿವರಗಳು (ಮನೆಯ ಸ್ವರೂಪ)

ಕುಟುಂಬಗಳ ಆಸ್ತಿಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮನೆಯ ಸ್ವರೂಪ	ಸ್ವಂತ ಗುಡಿಸಲು	೪	೮	೭	೧೪	೨	೪
	ಯೋಜನೆಯ ಮನೆ	೧೯	೩೮	೨೭	೫೪	೧೭	೩೪
	ಆರ್. ಸಿ. ಸಿ. ಮನೆ	೨೭	೫೪	೧೬	೩೨	೩೧	೬೨
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲಾವಾರು ಸಂದರ್ಶನದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೮.೦೦ರಷ್ಟು ಕುಟುಂಬಗಳು ಸ್ವಂತ ಗುಡಿಸಲು ಮನೆಯನ್ನು ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೩೮.೦೦ರಷ್ಟು ಕುಟುಂಬಗಳು ಯೋಜನೆಯ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದು ತಿಳಿಸಿದರು. ಉಳಿದ ಶೇ. ೫೪.೦೦ರಷ್ಟು ಕುಟುಂಬಗಳು ಆರ್.ಸಿ.ಸಿ. ಮನೆಯನ್ನು ನಿರ್ಮಿಸಿಕೊಂಡು ವಾಸ ಮಾಡುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಶೇ. ೧೪.೦೦ರಷ್ಟು ಕುಟುಂಬಗಳು ಸ್ವಂತ ಗುಡಿಸಲು ಮನೆಯನ್ನು ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೫೪.೦೦ರಷ್ಟು ಕುಟುಂಬಗಳು ಯೋಜನೆಯ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದು ತಿಳಿಸಿದರು. ಉಳಿದ ಶೇ. ೩೨.೦೦ರಷ್ಟು ಕುಟುಂಬಗಳು ಆರ್.ಸಿ.ಸಿ. ಮನೆಯನ್ನು ನಿರ್ಮಿಸಿಕೊಂಡು ವಾಸ ಮಾಡುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಶೇ. ೦೪.೦೦ರಷ್ಟು ಕುಟುಂಬಗಳು ಸ್ವಂತ ಗುಡಿಸಲು ಮನೆಯನ್ನು ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೩೪.೦೦ರಷ್ಟು ಕುಟುಂಬಗಳು ಯೋಜನೆಯ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದು ತಿಳಿಸಿದರು. ಉಳಿದ ಶೇ. ೬೨.೦೦ರಷ್ಟು ಕುಟುಂಬಗಳು ಆರ್.ಸಿ.ಸಿ. ಮನೆಯನ್ನು ನಿರ್ಮಿಸಿಕೊಂಡು ವಾಸ ಮಾಡುವುದಾಗಿದೆ ಎಂದು ಹೇಳಿಕೊಂಡಿದ್ದಾರೆ.

ಈ ಅಂಶದಿಂದ ತಿಳಿದುಬರುವ ಸಂಗತಿಯೆಂದರೆ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಗ್ರಾಮಗಳ ಪಾಲಕರಲ್ಲಿ ವರಮಾನ ಮಟ್ಟ ಉತ್ತಮವಾಗಿದ್ದು, ಆ ವರಮಾನದಿಂದ ಮೂಲಭೂತ ಸೌಕರ್ಯಗಳಾದ ವಸತಿಯನ್ನು ನಿರ್ಮಿಸಿಕೊಳ್ಳುವುದರ ಜೊತೆಗೆ ಜನರ ಬದುಕನ್ನು ಸಮೃದ್ಧಗೊಳಿಸುವಲ್ಲಿ ಯಶಸ್ವಿಯಾಗಿರುವುದು ತಿಳಿದುಬರುತ್ತದೆ. ಹಾಗೇ, ಕೊಪ್ಪಳ ಜಿಲ್ಲೆಯ ಗ್ರಾಮಗಳ ಪಾಲಕರಲ್ಲಿ ವರಮಾನ ಮಟ್ಟ ಶೋಚನೀಯವಾಗಿದ್ದು, ಸರ್ಕಾರ ನೀಡುವ ಯೋಜನಾಧಾರಿತ ವಸತಿಗಳನ್ನು ಪಡೆಯುವುದರಲ್ಲಿಯೂ ವಸತಿರಹಿತರು ಪಡೆಯುವುದರಲ್ಲಿ ವಿಫಲಗೊಂಡಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಮಕ್ಕಳ ಶಿಕ್ಷಣವನ್ನು ಸುಸ್ಥಿತಿಯಲ್ಲಿಡಲು ಕನಿಷ್ಠ ಮೂಲಭೂತ ಸೌಲಭ್ಯಗಳಲ್ಲಿ ಸುಸ್ಥಿತಿಯಾದ ಮನೆಯ ನೀರ್ಮಾಣ ಎನ್ನಲಾಗಿದೆ. ಅಂದರೆ ಇಂತಹ ವ್ಯವಸ್ಥೆಯನ್ನು ಸಕಾರಗೊಳಿಸುವುದು ದುಃಸ್ಥಿತಿಯಲ್ಲಿರುವ ಪಾಲಕರನ್ನು ಸುಸ್ಥಿತಿಯಲ್ಲಿಡುವ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ.

ಕೊಷ್ಟಕ-೮. ಮೂಲಭೂತ ಸೌಲಭ್ಯಗಳಲ್ಲಿ ಶೌಚಾಲಯದ ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಂಸಾಪುರ, ಮಾವಿನಬಾವಿ, ಸಂತೆಕಲ್ಲೂರು	
ಶೌಚಾಲಯದ ವ್ಯವಸ್ಥೆಯನ್ನು ಹೊಂದಿದ್ದೀರಾ	ಹೊಂದಿದ್ದೇವೆ	೩೧	೬೨	೨೭	೫೪	೧೮	೩೬
	ಇಲ್ಲ	೧೯	೩೮	೨೩	೪೬	೩೨	೬೪
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಈ ಕೆಳಗೆ ಜಿಲ್ಲಾವಾರು ಗ್ರಾಮೀಣ ಪ್ರದೇಶಗಳಲ್ಲಿ ಪಾಲಕರು ಹೊಂದಿರುವ ಶೌಚಾಲಯದ ವಿವರಗಳನ್ನು ತೋರಿಸಲಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕಾಡುತ್ತಿರುವ ಬಹುದೊಡ್ಡ ಸಮಸ್ಯೆಗಳ ಪೈಕಿ ಒಂದಾದ ನೈರ್ಮಲ್ಯದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಟ್ಟಿನಲ್ಲಿ ಕೇಂದ್ರ ಸರ್ಕಾರ ಸಮಗ್ರ ನೈರ್ಮಲ್ಯ ಆದೋಲನವನ್ನು ಕೈಗೊಂಡಿದ್ದು, ಕೊಪ್ಪಳ ಜಿಲ್ಲೆಯಲ್ಲಿ ಶೇ. ೬೨.೦೦ರಷ್ಟು ಕುಟುಂಬಗಳು ಶೌಚಾಲಯ ಹೊಂದಿವೆ. ಅದರಂತೆ ಶೇ. ೩೮.೦೦ರಷ್ಟು ಕುಟುಂಬಗಳು ಶೌಚಾಲಯಗಳ ಸೌಲಭ್ಯ ಇಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೫೪.೦೦ರಷ್ಟು ಕುಟುಂಬಗಳು ಶೌಚಾಲಯ ಹೊಂದಿವೆ. ಅದರಂತೆ ಶೇ. ೪೬.೦೦ರಷ್ಟು ಕುಟುಂಬಗಳು ಶೌಚಾಲಯಗಳ ಸೌಲಭ್ಯ ಇಲ್ಲ ಎಂದು ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೩೬.೦೦ರಷ್ಟು ಕುಟುಂಬಗಳು ಶೌಚಾಲಯ ಹೊಂದಿವೆ. ಅದರಂತೆ ಶೇ. ೬೪.೦೦ರಷ್ಟು ಕುಟುಂಬಗಳು ಶೌಚಾಲಯಗಳ ಸೌಲಭ್ಯ ಇಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಅಂದರೆ ಹಲವಾರು ಅಧ್ಯಯನಗಳಿಂದ ಮತ್ತು ವರದಿಗಳನ್ವಯವಾಗಿ ಭಾರತದಲ್ಲಿ ೬೫೦ ದಶಲಕ್ಷ ಜನ ಶೌಚಾಲಯ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂಬ ಅಂಶಗಳ ಹಿನ್ನೆಲೆಯಾಗಿ ಮೇಲಿನ ಅಭಿಪ್ರಾಯವನ್ನು ನೋಡಿದಾಗ ಶೌಚಾಲಯ ಇಲ್ಲದಿರುವುದರ ಹಿನ್ನೆಲೆಯ ಕಾರಣವಾಗಿ

ಕಡಿಮೆ ಆದಾಯ ಮತ್ತು ಅನಕ್ಷರತೆಯ ಪರಿಣಾಮವಾಗಿ ಜನರು ಸೌಲಭ್ಯವನ್ನು ಹೊಂದಿಲ್ಲ ಎಂಬ ಕಾರಣಗಳು ನೀಡಲಾಗಿದೆ. ಈ ಕಾರಣಗಳಿಂದ ಸೌಲಭ್ಯ ಇಲ್ಲ ಎಂಬವವರಿಗೆ ಸೌಲಭ್ಯವನ್ನು ನೀಡುವ ಮೂಲಕ ಶುಚಿತ್ವದ ಗುಂಪಿಗೆ ಸೇರಿಸುವ ಸಾಧ್ಯತೆ ಹೆಚ್ಚಿರುವುದು ಕೂಡ ನಮಗೆ ಕಂಡುಬಂದಿದೆ.

ಕೊಷ್ಟಕ–೯. ಸರ್ಕಾರಿ ಸೇವೆಯನ್ನ ಪಡೆದಿರುವುದರ ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು,ರಾರಾವಿ,ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಪಡಿತರ ಚೀಟಿಯನ್ನು ಹೊಂದಿದ್ದೀರಾ	ಹೊಂದಿದ್ದೇವೆ	೨೩	೪೬	೩೧	೬೨	೨೩	೪೬
	ಇಲ್ಲ	೨೭	೫೪	೧೯	೩೮	೨೭	೫೪
	ಒಟ್ಟು	೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶದಿಂದ ಮೂರು ಜಿಲ್ಲೆಯಲ್ಲಿ ಪಡಿತರ ಚೀಟಿಯನ್ನು ಹೊಂದಿರುವುದರ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೪೬.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೫೪.೦೦ರಷ್ಟು ಕುಟುಂಬಗಳು ಪಡಿತರ ಚೀಟಿ ಸೌಲಭ್ಯವನ್ನು ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೬೨.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೩೮.೦೦ರಷ್ಟು ಕುಟುಂಬಗಳು ಪಡಿತರ ಚೀಟಿ ಸೌಲಭ್ಯವನ್ನು ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೪೬.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೫೪.೦೦ರಷ್ಟು ಕುಟುಂಬಗಳು ಪಡಿತರ ಚೀಟಿ ಸೌಲಭ್ಯವನ್ನು ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಮೇಲಿನ ಅಂಶದಿಂದ ತಿಳಿದು ಬರುವುದೆನೆಂದರೆ, ಕೊಪ್ಪಳ ಮತ್ತು ರಾಯಚೂರಿನಲ್ಲಿ ವಾಸಿಸುವ ಮಕ್ಕಳ ಪಾಲಕರು ಸರಿಸುಮಾರು ಒಂದೇ ಸಂಖ್ಯೆಯಲ್ಲಿ ಪಡಿತರ ಚೀಟಿಯನ್ನು ಹೊಂದಿದ್ದಾರೆ. ಆದರೆ, ಬಳ್ಳಾರಿ ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರು ಬೇರೆ ಜಿಲ್ಲೆಗಳಿಗೆ ಹೋಲಿಸಿದಾಗ ಹೆಚ್ಚಿನ ಸಂಖ್ಯಯಲ್ಲೆ ಪಡಿತರ ಚೀಟಿಯನ್ನು ಹೊಂದಿರುತ್ತಾರೆ. ಅಂದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಬಳ್ಳಾರಿ ಜಿಲ್ಲೆಯ ಪಾಲಕರು ತಮ್ಮ ಜೀವನವನ್ನು ಸಾಗಿಸುವಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದು, ಅಲ್ಲದೇ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಿಕೊಳ್ಳುವಲ್ಲಿ ಸಫಲರಾಗಿ ಅಭಿವೃದ್ಧಿಯುನ್ನು ಕಂಡಿದ್ದಾರೆ ಆದರೆ, ಇನ್ನೂಳಿದ ಎರಡು ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರು ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳದೆ ತಮ್ಮ ಜೀವನವನ್ನು ಸಾಗಿಸುವಲ್ಲಿ ವಿಫಲ ಕಂಡುಕೊಂಡಿದ್ದಾರೆ. ಒಟ್ಟಾರೆಯಾಗಿ ಪ್ರಸ್ತುತ ಸಂದರ್ಭದಲ್ಲಿ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಹಿಂದುಳಿದು ತಮ್ಮ ಬದುಕಿನಲ್ಲಿ ಅಭಿವೃದ್ಧಿಯನ್ನು ಕಾಣದೆ ದುಃಸ್ಥಿತಿಯನ್ನು ಅನುಭವಿಸುವುದನ್ನು ಕಾಣಲಾಗಿದೆ. ಹಾಗಾಗಿ ಇಂತಹ ಪರಿಸರದಲ್ಲಿರುವ ಜಿಲ್ಲೆಯ ಗ್ರಾಮಗಳನ್ನು ಹುಡಿಕಿಕೊಂಡು ಅವರಿಗೆ ಸರಿಯಾದ ರೀತಿಯಲ್ಲಿ ಸಮಪರ್ಕವಾಗಿ ತಲುಪಿಸುವಂತಹ ಕಾರ್ಯ ಮಾಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಭೂಮಿಯ ವಿವರ

ಕೊಷ್ಟಕ–೧೦. ಪಾಲಕರ ಭೂಮಿಯನ್ನ ಹೊಂದಿರುವುದರ ಕುರಿತು

ಭೂಮಿಯ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬ್ಯೆಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಭೂಮಿಯನ್ನು ಹೊಂದಿದ್ದೀರಾ?	ಹೊಂದಿದ್ದೇವೆ	೩೭	೭೪	೪೨	೮೪	೪೫	೯೦
	ಇಲ್ಲಾ	೧೩	೨೬	೮	೧೬	೫	೧೦
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶದಿಂದ ಮೂರು ಜಿಲ್ಲೆಯಲ್ಲಿ ಭೂಮಿಯನ್ನು ಹೊಂದಿರುವುದರ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೭೪.೦೦ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೨೬.೦೦ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೮೪.೦೦ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೧೬.೦೦ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೯೦.೦೦ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೧೦.೦೦ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ ಮೇಲಿನ ಮೂರು ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರ ಭೂಮಿಯ ವಿವರವನ್ನು ನೋಡಿದಾಗ ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ಹೆಚ್ಚಿನ ಪ್ರಮಾಣದಲ್ಲಿ ಭೂಮಿಯನ್ನು ಹೊಂದದೆ ಇರುವುದನ್ನು ಕಾಣಲಾಗುತ್ತದೆ. ಇನ್ನೂಳಿದ ಎರಡು ಜಿಲ್ಲೆಯ ಕುಟುಂಬಗಳು

ಹೆಚ್ಚಿನ ಸಂಖ್ಯೆಯಲ್ಲಿ ಭೂಮಿಯನ್ನು ಹೊಂದಿರುವುದು ತಿಳಿದುಬರುತ್ತದೆ. ಬಳ್ಳಾರಿ ಮತ್ತು ರಾಯಚೂರಿನಲ್ಲಿ ಕೃಷಿ ಅವಲಂಬನೆ ಸಾಪೇಕ್ಷವಾಗಿ ಅಧಿಕವಾಗಿದೆ. ಕೊಪ್ಪಳದಲ್ಲಿ ಕೃಷಿ ಅವಲಂಬಿತರಲ್ಲಿ ಭೂರಹಿತ ಕೂಲಿಕಾರರ ಪ್ರಮಾಣ ಅಧಿಕವಾಗಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಈ ಹೆಚ್ಚಿನ ಪ್ರಮಾಣವನ್ನು ಬಡತನಕ್ಕೆ ಕಾರಣವೆಂದು ತಿಳಿದುಕೊಳ್ಳಬಹುದು. ಈ ರೀತಿಯಾಗಿ ಭೂರಹಿತ ತಮ್ಮ ಜೀವನಕ್ಕಾಗಿ ಕೂಲಿಯನ್ನು ಮಾಡಿ ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಕೂಲಿ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಭೂರಹಿತ ಕೂಲಿಕಾರರಲ್ಲಿ ಮಹಿಳೆಯರ ಪಾತ್ರ ಹೆಚ್ಚಿರುವುದು ಅಧ್ಯಯನದಲ್ಲಿ ತಿಳಿದುಬಂದಿದೆ. ಇದು ಬಡತನದ ತೀವ್ರತೆಯನ್ನು ಸೂಚಿಸುತ್ತದೆ. ಇದರಿಂದ ಕೊಪ್ಪಳದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಜಿಲ್ಲೆಯ ಗ್ರಾಮಗಳು ದುಃಸ್ಥಿತಿಯಲ್ಲಿರುವುದು ಎಂದು ಹೇಳಲಾಗಿದೆ. ಇದರಿಂದ ತಿಳಿದುಬರುವ ಸಂಗತಿಯೆಂದರೆ ಬಳ್ಳಾರಿ ಮತ್ತು ರಾಯಚೂರು ಗ್ರಾಮಾಂತರ ಪ್ರದೇಶದಲ್ಲಿ ತುಂಗಭದ್ರ ನದಿ ಕಾಲುವೆಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಪ್ರದೇಶವನ್ನು ಹೊಂದಿದ್ದು ಸ್ವಂತಃ ಕೃಷಿಯಲ್ಲಿ ನಿರತರಾಗಿ ವರಮಾನದಿಂದ ಜನರ ಬದುಕು ಸಮೃದ್ಧವಾಗುತ್ತಿರುವುದು ತೀವ್ರಗತಿಯಲ್ಲಿದ್ದರೆ ಹೆಚ್ಚಿನ ಪ್ರಮಾಣದಲ್ಲಿ ಒಣಭೂಮಿಯನ್ನು ಹೊಂದಿರುವ ಕೊಪ್ಪಳ ಜಿಲ್ಲೆಯು ಅಲ್ಲದೇ, ಭೂರಹಿತರೆ ಹೆಚ್ಚಾಗಿರುವುದರಿಂದ ತಮ್ಮ ಜೀವನವನ್ನು ಸಾಗಿಸಲು ಕೂಲಿಯನ್ನು ಆಶ್ರಯಿಸಿರುವುದರಿಂದ ಉತ್ತಮ ಜೀವನದಿಂದ ವಂಚಿತಗೊಂಡು ತಮ್ಮ ಬದುಕು ದುಸ್ಥಿತಿಯಲ್ಲಿರುವುದಕ್ಕೆ ಕಾರಣವಾಗಿದೆ ಎಂದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಇಂತಹ ದುಃಸ್ಥಿತಿಯನ್ನು ಜಿಲ್ಲೆ ಮತ್ತು ಗ್ರಾಮ ಪಂಚಾಯಿತಿಯ ಮೂಲಕ ಜಿಲ್ಲೆಯ ಗ್ರಾಮಗಳ ಪಾಲಕರ ಬದುಕನ್ನು ಅಭಿವೃದ್ಧಿಯನ್ನು ಮಾಡುವ ಅಗತ್ಯವಿದೆ ಎಂದು ತಿಳಿದುಕೊಳ್ಳಲಾಗಿದೆ.

ಕೋಷ್ಟಕ–೧೧. ಭೂಮಿಯ ಸ್ವತ್ತಿನ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು,ರಾರಾವಿ,ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಹೊಂದಿದ್ದೇವೆ ಎಂದರೆ ಅದು ಸ್ವಂತ ಭೂಮಿಯಾ	ಹೌದು	೨೧	೫೭	೩೪	೮೧	೩೯	೮೭
	ಇಲ್ಲಾ	೧೬	೪೩	೮	೧೯	೬	೧೩
	ಒಟ್ಟು	೩೭	೧೦೦	೪೨	೧೦೦	೪೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶದಿಂದ ಮೂರು ಜಿಲ್ಲೆಯಲ್ಲಿ ಭೂಮಿಯನ್ನು ಹೊಂದಿರುವುದರ ವಿವರದಲ್ಲಿ ಸ್ವಂತ ಭೂಮಿಯಾ ಎಂದು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೫೬.೭೬ರಷ್ಟು ಕುಟುಂಬಗಳು ಭೂಮಿಯನ್ನು ಸ್ವಂತ ಹೊಂದಿದ್ದಾರೆ. ಅದರಂತೆ ಶೇ. ೪೩.೨೪ರಷ್ಟು ಕುಟುಂಬಗಳು ಭೂಮಿಯನ್ನು ಸ್ವಂತವಾಗಿ ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೮೦.೯೬ರಷ್ಟು ಕುಟುಂಬಗಳು ಭೂಮಿಯನ್ನು ಸ್ವಂತವಾಗಿ ಹೊಂದಿದ್ದಾರೆ. ಅದರಂತೆ ಶೇ. ೧೯.೦೪ರಷ್ಟು ಕುಟುಂಬಗಳು ಭೂಮಿಯನ್ನು ಸ್ವಂತ ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೮೬.೬೬ರಷ್ಟು ಕುಟುಂಬಗಳು ಭೂಮಿಯನ್ನು ಸ್ವಂತ ಹೊಂದಿದ್ದಾರೆ. ಅದರಂತೆ ಶೇ. ೧೩.೩೪ರಷ್ಟು ಕುಟುಂಬಗಳು ಭೂಮಿಯನ್ನು ಸ್ವಂತ ಹೊಂದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೇಲಿನ ಅಂಶದಿಂದ ತಿಳಿದುಬರುವ ಸಂಗತಿಯೆಂದರೆ, ಕೊಪ್ಪಳ ಜಿಲ್ಲೆಯ ಗ್ರಾಮಗಳು ಹೆಚ್ಚಿನ ಸಂಖ್ಯೆಯಲ್ಲಿ ಭೂಮಿಯನ್ನು ಹೊಂದದೆಯಿದ್ದರೂ ಸಹ ಹೊಂದಿರುವ ಭೂಮಿಯಲ್ಲಿಯೇ ಎರಡು ಜಿಲ್ಲೆಗಳಿಗೆ ಹೋಲಿಕೆ ಮಾಡಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಸ್ವಂತ

ಭೂಮಿಯನ್ನು ಹೊಂದದೇಯಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಸಬೇಕಾದ ಸಂಗತಿಯೆಂದರೆ, ಕೊಪ್ಪಳ ಜಿಲ್ಲೆಯ ಗ್ರಾಮಗಳು ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಯನ್ನು ಮಾಡುತ್ತಾ ಬಂದಿದ್ದು ತಮ್ಮ ಜೀವನವನ್ನು ಸಾಗಿಸುತ್ತಾ ಬರುತ್ತಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಆದರೆ ಇನ್ನೂಳಿದ ಎರಡು ಜಿಲ್ಲೆಗಳು ಹೆಚ್ಚಿನ ಸಂಖ್ವೆಯಲ್ಲಿ ಭೂಮಿಯನ್ನು ಹೊಂದಿದ್ದು ಅದರಲ್ಲಿಯೂ ಸಹ ಸ್ವಂತ ಭೂಮಿಯನ್ನು ಹೊಂದಿ ತಮ್ಮ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅಂದಹಾಗೆ, ಮೂರು ಜಿಲ್ಲೆಯ ಗ್ರಾಮಗಳ ಅಂಕಿ-ಅಂಶಗಳ ನೋಡಿದಾಗ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಕಂಡಿದ್ದು ಕೊಪ್ಪಳ ಜಿಲ್ಲೆಯ ಗ್ರಾಮಗಳು ದುಃಸ್ಥಿತಿಯಲ್ಲಿರುವುದನ್ನು ಕಂಡುಬರುತ್ತದೆ. ಹಾಗಾಗಿ, ಇಂತಹ ಜಿಲ್ಲೆಯನ್ನು ಅಭಿವೃದ್ಧಿಗೊಳಿಸಲು ಗ್ರಾಮಗಳ ಪಾಲಕರನ್ನು ಶಿಕ್ಷಿತರನ್ನಾಗಿ ಮತ್ತು ವರಮಾನ ವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹಾಕಿಕೊಳ್ಳುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ-೧೨. ಭೂಮಿಯ ವಿಧಾನದ ಕುರಿತು

	ಉಪ ಸೂಚಕಗಳು	ಕೊಪ್ಪಳ ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಳ್ಳಾರಿ ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ರಾಯಚೂರು ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಒಂದು ವೇಳೆ ಅದು ಸ್ವಂತ ಭೂಮಿಯಾಗಿದ್ದರೆ	ನೀರಾವರಿ	೪	೧೯	೨೩	೬೮	೩೪	೮೭
	ಒಣ ಭೂಮಿ	೧೭	೮೧	೧೧	೩೨	೫	೧೩
	ಒಟ್ಟು	೨೧	೧೦೦	೩೪	೧೦೦	೩೯	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶದಿಂದ ಮೂರು ಜಿಲ್ಲೆಯಲ್ಲಿ ಭೂಮಿಯನ್ನು ಹೊಂದಿರುವುದರ ವಿವರದಲ್ಲಿ ಸ್ವಂತ ಭೂಮಿಯಲ್ಲಿ ನೀರಾವರಿ ಭೂಮಿಯ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೯.೦೪ರಷ್ಟು ಕುಟುಂಬಗಳು ನೀರಾವರಿ ಭೂಮಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೮೦.೯೬ರಷ್ಟು ಕುಟುಂಬಗಳು ಒಣ ಭೂಮಿಯನ್ನು ಹೊಂದಿದ್ದಾರೆ ಎಂಬ ಅಭಿಪ್ರಾಯವನ್ನು

ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೬೭.೬೪ರಷ್ಟು ಕುಟುಂಬಗಳು ನೀರಾವರಿ ಭೂಮಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೩೨.೩೬ರಷ್ಟು ಕುಟುಂಬಗಳು ಒಣ ಭೂಮಿಯನ್ನು ಹೊಂದಿರುವ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೮೭.೧೭ರಷ್ಟು ಕುಟುಂಬಗಳು ನೀರಾವರಿ ಭೂಮಿಯನ್ನು ಹೊಂದಿದ್ದಾರೆ. ಅದರಂತೆ ಶೇ. ೧೨.೮೩ರಷ್ಟು ಕುಟುಂಬಗಳು ಒಣ ಭೂಮಿಯನ್ನು ಹೊಂದಿರುವುದರ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೂರು ಜಿಲ್ಲೆಯ ಗ್ರಾಮಗಳನ್ನು ನೋಡಿದಾಗ ಅದರಲ್ಲಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳನ್ನು ಗಮನಿಸಿದಾಗ ಹೆಚ್ಚಿನ ಪ್ರಮಾಣದಲ್ಲಿ ಸ್ವಂತ ಭೂಮಿಯನ್ನು ಹೊಂದಿರುವುದಲ್ಲದೆ, ಆ ಭೂಮಿಯನ್ನು ನೀರಾವರಿಯನ್ನಾಗಿ ಉಳುಮೆಯನ್ನು ಮಾಡಲಾಗಿದೆ. ಇದಕ್ಕೆ ಹೊರತಾಗಿ ಕೊಪ್ಪಳ ಜಿಲ್ಲೆಯಲ್ಲಿ ಸ್ವಂತ ಭೂಮಿಯನ್ನು ಹೊಂದದೆಯಿರುವುದಲ್ಲದೆ ಒಣ ಭೂಮಿಯನ್ನೆ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಅಭಿವೃದ್ಧಿಯ ಮಾನದಂಡಗಳಲ್ಲಿ ಭೂಮಿಯನ್ನು ಒಂದು ಎಂದು ಪರಿಗಣಿಸಿ ಭೂಮಿಯಲ್ಲಿ ಉಳುಮೆ ಮಾಡಿ ಅದರಿಂದ ಬಂದ ಸಂಪತ್ತನ್ನು ತಮ್ಮ ಕುಟುಂಬವನ್ನು ಅಭಿವೃದ್ಧಿಯ ದಿಶೆಗೆ ಹೋಗಲಾಗುತ್ತದೆ. ಆದರೆ ಇಂತಹ ಅಂಶವನ್ನು ನೋಡಿದಾಗ ನಮಗೆ ತಿಳಿದು ಬರುವ ಸಂಗತಿಯೆಂದರೆ, ಕೊಪ್ಪಳ ಜಿಲ್ಲೆಯು ಇದಕ್ಕೆ ಹೊರತಾಗಿ ಹೆಚ್ಚಿನ ಭೂಮಿಯನ್ನು ಹೊಂದದೆ ಹಾಗೂ ಸ್ವಲ್ಪ ಭೂಮಿಯಲ್ಲಯೇ ನೀರಾವರಿಯನ್ನು ಹೊಂದದೆ ಯಾವ ಉಳುಮೆಯನ್ನು ಮಾಡದೆ ಅದರಿಂದ ಸಂಪತ್ತುನ್ನು ಗಳಸದೆ ತಮ್ಮ ಕುಟುಂಬಗಳ ಜೀವನವು ದುಃಸ್ಥಿತಿಯನ್ನು ಅನುಭವಿಸುತ್ತಿರುವುದು ತಿಳಿದು ಬಂದಿದೆ. ಹಾಗಾಗಿ ಇಂತಹ ಕಾರಣಗನ್ನು ನೋಡಿ ಹೆಚ್ಚಿ ಸಂಖ್ಯೆಯಲ್ಲಿ ಒಣ ಭೂಮಿಯನ್ನು ಹೊಂದಿರುವವರಿಗೆ ಸರ್ಕಾರದ ವತಿಯಿಂದ ಅವರನ್ನು ಪರಿಗಣಿಸಿ ಬೋರ್‌ವೆಲ್‌ಗಳನ್ನು ಕೊರೆಸುವುದು ಇನ್ನತರ ಉಳುಮೆಗಾಗಿ ಉಪಕರಣಗಳನ್ನು ಕೊಡುವುದರ ಮೂಲಕ ಅವರ ಭೂಮಿಯನ್ನು ನೀರಾವರಿಯನ್ನಾಗಿ ಮಾಡಿ ಅದರಿಂದ ಬದುಕನ್ನು ಅಭಿವೃದ್ಧಿಗೊಳಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಶಾಲೆಯ ವಿವರಗಳು

ಕೊಷ್ಟಕ-೧೩. ಶಾಲೆಗೆ ಹೋಗುವುದರ ವಿವರ

ಶಾಲೆಗೆ ತೆರಳುತ್ತಿರುವುದರ ವಿವರ	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಮನೆಯಲ್ಲಿ ಮಕ್ಕಳು ಶಾಲೆಗೆ ಹೋಗುವುದರ ವಿವರ	ಹೋಗುತ್ತಾರೆ	೪೧	೮೨	೩೭	೭೪	೪೪	೮೮
	ಹೋಗಲ್ಲಾ	೯	೧೮	೧೩	೨೬	೬	೧೨
ಒಟ್ಟು		೫೦	೧೦೦	೫೦	೧೦೦	೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶದಿಂದ ಮೂರು ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವವರ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೮೨.೦೦ರಷ್ಟು ಕುಟುಂಬಗಳು ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೧೮.೦೦ರಷ್ಟು ಕುಟುಂಬಗಳು ಶಾಲೆಗೆ ಹೋಗಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೭೪.೦೦ರಷ್ಟು ಕುಟುಂಬಗಳು ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೨೬.೦೦ರಷ್ಟು ಕುಟುಂಬಗಳು ಶಾಲೆಗೆ ಹೋಗಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೮೮.೦೦ರಷ್ಟು ಕುಟುಂಬಗಳು ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೧೨.೦೦ರಷ್ಟು ಕುಟುಂಬಗಳು ಶಾಲೆಗೆ ಹೋಗಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಮೇಲಿನ ಅಂಶಗಳಿಂದ ತಿಳಿದುಬರುವುದೇನೆಂದರೆ. ಮೂರು ಜಿಲ್ಲೆಯ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶಾಲೆಗೆ ಹೋಗುವವರ ಪ್ರಮಾಣ ಹೆಚ್ಚಿರುವುದು ಮತ್ತು ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿರುವ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಹೋಗದಿರುವುದನ್ನು

ನೋಡಲಾಗಿದೆ. ಅಭಿವೃದ್ಧಿಯ ಮಾನದಂಡಗಳಲ್ಲಿ ಶಿಕ್ಷಣವು ಒಂದು ಅದನ್ನು ಮಕ್ಕಳಿಗೆ ಸರಿಯಾಗಿ ಕೊಡಿಸಿದಾಗ ಅವರ ಬದುಕನ್ನು ಅಭಿವೃದ್ಯಿಗೊಳಿಸಬಹುದಾಗಿದೆ. ಇಲ್ಲವಾದರೆ ಅವರ ಜೀವನವು ದುಃಸ್ಥಿತಿಯನ್ನು ಅನುಭವಿಸುವಂತಾಗುತ್ತದೆ. ಇಂತಹ ಒಂದು ದುಃಸ್ಥಿತಿಯನ್ನು ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿ ಇರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಇಂತಹ ಒಂದು ದುಃಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರಗಳು, ಶಿಕ್ಷಣ ಸಂಸ್ಥೆಗಳು ಮತ್ತು ಎನ್.ಜಿ.ಓ. ಸಂಸ್ಥೆಗಳ ಹೆಚ್ಚಿನ ರೀತಿಯಲ್ಲಿ ಸಹಕರಿಸಬೇಕಾದ ಅವಶ್ಯಕತೆಯಿದೆ ಎಂದು ಹೇಳಲಾಗಿದೆ.

ಕೊಷ್ಟಕ-೧೪. ಯಾವ ಮಾದರಿಯ ಶಾಲೆಯಾಗಿರುತ್ತದೆ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಹೌದಾದರೆ ಯಾವ ಶಾಲೆಗೆ ಹೋಗುತ್ತಾರೆ	ಸರ್ಕಾರಿ	೩೧	೭೬	೧೬	೪೩	೨೩	೫೨
	ಖಾಸಗೀ	೧೦	೨೪	೨೧	೫೭	೨೧	೪೮
	ಒಟ್ಟು	೪೧	೧೦೦	೩೭	೧೦೦	೪೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶವನ್ನು ಪರಿಗಣಿಸಿ ಮೂರು ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವವರು ಯಾವ ಶಾಲೆಗೆ ಹೋಗುತ್ತಾರೆ ಎಂಬುದರ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೭೫.೬೧ರಷ್ಟು ಕುಟುಂಬಗಳು ಸರ್ಕಾರಿ ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೨೪.೪೦ರಷ್ಟು ಕುಟುಂಬಗಳು ಖಾಸಗೀ ಶಾಲೆಗೆ ಹೋಗುತ್ತಾರೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ. ಬಳ್ಳಾರಿ ಜಿಲ್ಲೆಯಲ್ಲಿ ಶೇ. ೪೩.೨೪ರಷ್ಟು ಕುಟುಂಬಗಳು ಸರ್ಕಾರಿ ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೫೬.೭೬ರಷ್ಟು ಕುಟುಂಬಗಳು ಖಾಸಗೀ ಶಾಲೆಗೆ ಹೋಗುತ್ತಾರೆ

ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೫೨.೨೭ರಷ್ಟು ಕುಟುಂಬಗಳು ಸರ್ಕಾರಿ ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೪೭.೭೩ರಷ್ಟು ಕುಟುಂಬಗಳು ಖಾಸಗೀ ಶಾಲೆಗೆ ಹೋಗುತ್ತಾರೆ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಮೇಲಿನ ಅಂಶಗಳಿಂದ ತಿಳಿಯಬಹುದಾದ ಅಂಶವೆಂದರೆ, ಮೂರು ಜಿಲ್ಲೆಗಳ ಗ್ರಾಮಗಳನ್ನು ನೋಡಿದಾಗ ಬಳ್ಳಾರಿ ಮತ್ತು ರಾಯಚೂರಿನ ಗ್ರಾಮಗಳು ಕೊಪ್ಪಳ ಜಿಲ್ಲೆಯ ಗ್ರಾಮಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗೀ ಶಾಲೆಗಳಿಗೆ ಕಳುಹಿಸುತ್ತಿರುವುದು ತಿಳಿದು ಬಂದಿದೆ. ಅಂದಹಾಗೆ, ಹಲವು ಅಧ್ಯಯನಗಳ ಪರಿಣಾಮವಾಗಿ ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮಗಳ ಸ್ಥಿತಿಯು ದುಃಸ್ಥಿತಿಯಲ್ಲಿರುವ ಹಿನ್ನೆಲೆಯಲ್ಲಿ ಅವರು ತಮ್ಮ ಮಕ್ಕಳ ಶಾಲೆಗೆ ಹೆಚ್ಚಿನ ಹಣವನ್ನು ಖರ್ಚು ಮಾಡಲಾಗದೆಯಿರುವುದರಿಂದ ಈ ಜಿಲ್ಲೆಯಲ್ಲಿರುವ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಿಕೊಡಲಾಗುವುದು ಎಂದು ತಿಳಿದು ಬಂದಿದೆ. ಉಳಿದ ಎರಡು ಜಿಲ್ಲೆಯ ಗ್ರಾಮಗಳ ಪಾಲಕರು ತಮ್ಮ ಮಕ್ಕಳ ಉತ್ತಮ ಶಿಕ್ಷಣವು ಖಾಸಗೀ ಶಾಲೆಗಳಿಗೆ ಕಳುಹಿಸಿದಾಗ ಮಾತ್ರ ಸಿಗುತ್ತದೆ ಎಂಬ ಮನೋಭಾವನೆಯಿಂದ ಹೆಚ್ಚಿನ ಮಕ್ಕಳನ್ನು ಖಾಸಗೀ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ತಿಳಿಯಲಾಗಿದೆ. ಎರಡು ಹೇಳಿಕೆಯನ್ನು ನೋಡಿದಾಗ ಮಕ್ಕಳ ಶಿಕ್ಷಣವು ಕೆಲವು ಸರ್ಕಾರಿ ಮತ್ತು ಖಾಸಗೀ ಶಾಲೆಗಳಲ್ಲಿಯೂ ಉತ್ತಮ ಶಿಕ್ಷಣ ಸಿಗುತ್ತದೆ ಎಂಬ ನಲವುಗೆ ಬರಬಹುದು. ಆದರೆ ಎಲ್ಲಾ ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುವ ಮೂಲಕ ಸರ್ಕಾರದಿಂದ ಬರುವ ಉತ್ತಮ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ಮಕ್ಕಳನ್ನು ಸಮಾಜದ ಮುಖ್ಯವಾಹಿನಯಲ್ಲಿ ಬರುವಚಿತಹ ಕಾರ್ಯವನ್ನು ಮಾಡುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ-೧೫. ಶಾಲೆಗೆ ಹೋಗದೆಯಿರುವವರ ಕುರಿತು

	ಉಪ ಸೂಚಕಗಳು	ಕೊಪ್ಪಳ ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಳ್ಳಾರಿ ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ರಾಯಚೂರು ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಒಂದು ವೇಳೆ ಹೋಗಲ್ಲಾ ಅಂದರೆ, ಯಾವ ಕಾರಣಕ್ಕಾಗಿ..	ಮನೆಯಲ್ಲಿ ಕಷ್ಟವಿರುವುದರಿಂದ ಕೂಲಿಗೆ ಕಳುಹಿಸುತ್ತಾರೆ	೭	೭೮	೯	೬೯	೪	೬೭
	ಪಾಲಕರ ಅಜ್ಞಾನದಿಂದ	೨	೨೨	೪	೩೧	೨	೩೩
ಒಟ್ಟು		೯	೧೦೦	೧೩	೧೦೦	೬	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಅಂಶವನ್ನು ಪರಿಗಣಿಸಿ ಮೂರು ಜಿಲ್ಲೆಯಲ್ಲಿ ಶಾಲೆಗೆ ಹೋಗದಿರುವವರ ಕಾರಣಗಳನ್ನು ಈ ಕೆಳಗಿನಂತೆ ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೭೭.೭೭ರಷ್ಟು ಕುಟುಂಬಗಳು ಮನೆಯಲ್ಲಿ ಕಷ್ಟವಿರುವುದರಿಂದ ಕೂಲಿಗೆ ಕಳುಹಿಸುತ್ತಾರೆ. ಅದರಂತೆ ಶೇ. ೨೨.೨೨ರಷ್ಟು ಕುಟುಂಬಗಳು ಪಾಲಕರ ಅಜ್ಞಾನದಿಂದ ಶಾಲೆಗೆ ಕಳುಹಿಸುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೬೯.೨೩ರಷ್ಟು ಕುಟುಂಬಗಳು ಮನೆಯಲ್ಲಿ ಕಷ್ಟವಿರುವುದರಿಂದ ಕೂಲಿಗೆ ಕಳುಹಿಸುತ್ತಾರೆ. ಅದರಂತೆ ಶೇ. ೩೦.೭೭ರಷ್ಟು ಕುಟುಂಬಗಳು ಪಾಲಕರ ಅಜ್ಞಾನದಿಂದ ಶಾಲೆಗೆ ಕಳುಹಿಸುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ. ರಾಯಚೂರು ಜಿಲ್ಲೆಯಲ್ಲಿ ಶೇ. ೬೬.೬೬ರಷ್ಟು ಕುಟುಂಬಗಳು ಸರ್ಕಾರಿ ಶಾಲೆಗೆ ಹೋಗುತ್ತಾರೆ. ಅದರಂತೆ ಶೇ. ೩೩.೩೪ರಷ್ಟು ಕುಟುಂಬಗಳು ಪಾಲಕರ ಅಜ್ಞಾನದಿಂದ ಶಾಲೆಗೆ ಕಳುಹಿಸುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೇಲಿನ ಅಂಶಗಳಿಂದ ನೋಡಲಾದ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರಿಗಿಂತ ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಲ್ಲಿ ವಿಫಲವಾಗಿದ್ದಾರೆ ಕಾರಣವನ್ನು ನೋಡಿದಾಗ ತಮ್ಮ ಮನೆಯಲ್ಲಿ ಬಡತನವಿರುವುದರಿಂದ ಮಕ್ಕಳ ಶಾಲೆಗೆ ಕಳುಹಿಸಲಾಗದೆ ಅವರನ್ನು ದುಡಿಮೆಗಾಗಿ ಕಳುಹಿಸುತ್ತಿದೆವೇ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಗಮನಸಬೇಕಾದ ಅಂಶವೆಂದರೆ, ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದುಡಿಯುವ ಹುಮ್ಮಸು ಇಲ್ಲ ಮತ್ತು ಅಕ್ಷರದ ಕೊರತೆಯನ್ನು ಕಾಣಲಾಗುತ್ತದೆ ಹಾಗಾಗಿ ಉಳಿದ ಎರಡು ಜಿಲ್ಲೆ ಗ್ರಾಮಗಳಿಗೆ ಹೋಲಿಕೆ ಮಾಡಿದಾಗ ಕೊಪ್ಪಳ ಜಿಲ್ಲೆಯು ಹೆಚ್ಚಿನ ಪ್ರಮಾಣದಲ್ಲಿ ದುಃಸ್ಥಿತಿಯನ್ನು ಅನುಭವಿಸುತ್ತಿರುವುದು ತಿಳಿದು ಬಂದಿದೆ. ಕೊನೆಯದಾಗಿ, ಸರ್ಕಾರದಿಂದ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳು ಇದ್ದು ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಕೆಯಾಗುವಚಿತೆ ಮಾಡುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೧೬ ಶಾಲೆಯನ್ನ ಬಿಟ್ಟ ಮಕ್ಕಳ ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಶಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಶಾಲೆಗೆ ಹೋಗಿ ಮಧ್ಯದಲ್ಲಿ ಶಾಲೆಯನ್ನು ಬಿಟ್ಟ ಮಕ್ಕಳ ಸಂಖ್ಯೆಯ ವಿವರ	ಗಂಡು=	೨	೨೨	೫	೩೮	೧	೧೭
	ಹೆಣ್ಣು=	೭	೭೮	೮	೬೨	೫	೮೩
ಒಟ್ಟು		೯	೧೦೦	೧೩	೧೦೦	೬	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಈ ಕೆಳಗೆ ಜಿಲ್ಲಾವಾರು ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟವರ ವಿವರಗಳನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೨೨.೨೩ರಷ್ಟು ಕುಟುಂಬಗಳ ಮಕ್ಕಳನ್ನು ಮಧ್ಯದಲ್ಲಿಯೇ ಬಿಡಿಸಿರುತ್ತಾರೆ. ಅದರಂತೆ ಶೇ. ೭೭.೭೭ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಯನ್ನು ಮಧ್ಯದಲ್ಲಿಯೇ ಬಿಡಿಸಲಾಗಿದೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೩೮.೪೭ರಷ್ಟು ಕುಟುಂಬಗಳ ಮಕ್ಕಳನ್ನು ಮಧ್ಯದಲ್ಲಿಯೇ ಬಿಡಿಸಿರುತ್ತಾರೆ. ಅದರಂತೆ ಶೇ. ೬೧.೫೩ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಯನ್ನು ಮಧ್ಯದಲ್ಲಿಯೇ ಬಿಡಿಸಲಾಗಿದೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೧೬.೬೬ ರಷ್ಟು ಕುಟುಂಬಗಳ ಮಕ್ಕಳನ್ನು ಮಧ್ಯದಲ್ಲಿಯೇ ಬಿಡಿಸಿರುತ್ತಾರೆ. ಅದರಂತೆ ಶೇ. ೮೩.೩೪ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಯನ್ನು ಮಧ್ಯದಲ್ಲಿಯೇ ಬಿಡಿಸಲಾಗಿದೆ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೂರು ಜಿಲ್ಲೆಗಳ ಮಾಹಿತಿಯನ್ನು ನೋಡಿದಾಗ ತಿಳಿಯಬಹುದಾದ ಅಂಶವೆಂದರೆ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿರುವ ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡಿಸದೇ ಅಕ್ಷರ ಕಲಿಕೆಗಾಗಿ ಶಾಲೆಗೆ ಕಳುಹಿಸುತ್ತಿರುವುದನ್ನು ಕಾಣಲಾಗಿದೆ. ಆದರೆ, ರಾಯಚೂರು ಜಿಲ್ಲೆಯ ಗ್ರಾಮಗಳ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸದೆ ಮಧ್ಯದಲ್ಲಿಯೇ ಬಿಡಿಸುವಂತಹ ಸ್ಥಿತಿ ಹೆಚ್ಚಾಗಿರುವುದನ್ನು ಕಾಣಲಾಗಿದೆ. ಇಲ್ಲಿ ಗಮನಿಸಲಾದ ಅಂಶವೆಂದರೆ, ಮೂರು ಜಿಲ್ಲೆಯ ಗ್ರಾಮಗಳ ಪಾಲಕರನ್ನು ನೋಡಿದಾಗ ರಾಯಚೂರು ಜಿಲ್ಲೆಯ ಗ್ರಾಮಗಳ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳನ್ನೆ ಶಾಲೆಯನ್ನು ಮಧ್ಯದಲ್ಲಿಯೇ ಬಿಡಿಸಿರುವುದು ಅಂದಹಾಗೆ ಇದಕ್ಕೆ ಕಾರಣಗಳನ್ನು ನೋಡಿದಾಗ ಹೆಣ್ಣುಮಕ್ಕಳು ಪ್ರಾಥಮಿಕ ಶಾಲೆಯನ್ನು ಓದುವ ಸಂದರ್ಭದಲ್ಲಿ ಪ್ರೌಢಾವಸ್ಥೆಗೆ ಬರುವಂತಹದು, ಮನೆಯ ನಿರ್ವಹಣೆಗಾಗಿ, ಶಾಲೆಯಲ್ಲಿ ನಡೆಯುವ ಅಹಿತಕರ ಘಟನೆಗಳಿಂದ, ಸರಿಯಾದ ಪೀಠೋಪಕರಣಗಳು ಇಲ್ಲದೆಯಿರುವ್ಯದರಿಂದ ಮತ್ತು ಮನೆಯಲ್ಲಿ ಕಷ್ಟದಿಂದ ಅವರನ್ನು ಉನ್ನತ ವ್ಯಾಸಂಗಕ್ಕೆ ಕಳುಹಿಸದೆ ಇರುವುದು ಹಾಗಯೇ, ಇನ್ನಿತರ ಹಲವು ಕಾರಣಗಳಿಂದ ಮಧ್ಯದಲ್ಲಿಯೇ ಬಿಡಿಸಲಾಗಿದೆ ಎಂದು ತಿಳಿದು ಬಂದಿದೆ. ಇಂತಹ ವಾತಾವರಣವನ್ನು ಪರಿಗಣಿಸಿ ಶಾಲೆಗಳಿಗೆ ಸರ್ಕಾರದಿಂದ ಸರಿಯಾದ ಆದೇಶಗಳನ್ನು ಹೊರಡಿಸುವಂತಹ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ–೧೭. ಶಾಲೆಗೆ ಕಳುಹಿಸುವುದರ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ನಿಮ್ಮ ಮಗುವನ್ನು ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆಯಾ	ಇದೆ	೬	೬೭	೭	೫೪	೪	೬೭
	ಇಲ್ಲಾ	೩	೩೩	೬	೪೬	೨	೩೩
ಒಟ್ಟು		೯	೧೦೦	೧೩	೧೦೦	೬	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೋಷ್ಟಕದ ವಿವರವನ್ನು ನೋಡಿದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರಾಥಮಿಕ ಶಾಲೆ ವ್ಯಾಪ್ತಿಯಲ್ಲಿರುವ ಪಾಲಕರ ಮಕ್ಕಳನ್ನು ಈ ಮೇಲಿನ ಪ್ರಶ್ನೆಯನ್ನು ಕೇಳಿ ಪಡೆದ ವಿವರವನ್ನು ಈ ಕೆಳಗಿನಂತೆ ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೬೬.೬೭ರಷ್ಟು ಕುಟುಂಬಗಳ ಮಕ್ಕಳನ್ನು ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೩೩.೩೩ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಗೆ ಮಕ್ಕಳನ್ನು ಕಳುಹಿಸುವ ಆಸಕ್ತಿ ಇಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೫೩.೮೪ರಷ್ಟು ಕುಟುಂಬಗಳ ಮಕ್ಕಳನ್ನು ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೪೬.೧೬ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಗೆ ಮಕ್ಕಳನ್ನು ಕಳುಹಿಸುವ ಆಸಕ್ತಿ ಇಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೬೬.೬೭ ರಷ್ಟು ಕುಟುಂಬಗಳ ಮಕ್ಕಳನ್ನು ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೩೩.೩೩ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿ ಇಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ ಮೇಲಿನ ಅಂಶಗಳಿಂದ ತಿಳಿದು ಬರುವ ಸಂಗತಿಯೆಂದರೆ, ಬಳ್ಳಾರಿ ಜಿಲ್ಲೆಯ ಗ್ರಾಮಗಳಿಗಿಂತ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮಗಳ ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಗಮನಸಬೇಕಾದ ಸಂಗತಿಯೆಂದರೆ, ರಾಜ್ಯದ ಹಲವು ಜಿಲ್ಲೆಗಳಲ್ಲಿರುವ ಗ್ರಾಮಗಳಲ್ಲಿರುವ ಶಾಲೆಗಳ ಮಕ್ಕಳನ್ನು ಮಧ್ಯದಲ್ಲಿಯೇ ಶಾಲೆಯನ್ನು ಬಿಡಿಸಲು ಹಲವು ಕಾರಣಗಳನ್ನು ನೀಡಿದ್ದಾರೆ. ಇಂತಹ ದುಃಸ್ಥಿತಿಯಲ್ಲಿಯೂ ಅವರನ್ನು ಅಕ್ಷರಸ್ಥರನ್ನಾಗಿ ಮಾಡಿಸುವ ಆಸಕ್ತಿಯನ್ನು ಹೊಂದಿದ್ದಾರೆ ಎಂದು ತಿಳಿದು ಬಂದಿದೆ. ಇಂತಹ ಅಂಶಗಳನ್ನು ಪರಿಗಣಿಸಿ ಅವರಿಗೆ ಶಾಲೆಯಲ್ಲಿ ಉತ್ತಮ ರೀತಿಯ ಸೌಲಭ್ಯಗಳನ್ನು ಮತ್ತು ಸರಿಯಾದ ರೀತಿಯಲ್ಲಿ ಸುರಕ್ಷತೆಯನ್ನು ಒದಗಿಸಿಕೊಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ–೧೮. ಶಾಲೆಗೆ ಕಳುಹಿಸಲು ಇರುವ ಕಾರಣಗಳ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಇದ್ದರೆ, ಯಾವ ಕಾರಣಕ್ಕಾಗಿ	ಓದಿನಲ್ಲಿ ಆಸಕ್ತಗಾಗಿ	೩	೫೦	೪	೫೭	೧	೨೫
	ಉತ್ತಮ ಆರ್ಥಿಕ ಸುಧಾರಣೆಗಾಗಿ	–	–	೧	೧೪	–	–
	ಶಾಲೆಯಲ್ಲಿ ಬಟ್ಟೆ, ಪುಸ್ತಕ, ಬಿಸಿಯೂಟ ಇರಲು ಮತ್ತು ವಿದ್ಯಾರ್ಥಿ ವೇತನ ನೀಡುತ್ತಿರುವ ಕಾರಣಕ್ಕಾಗಿ	೩	೫೦	೨	೨೯	೩	೭೫
	ಒಟ್ಟು	೬	೧೦೦	೭	೧೦೦	೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕದಲ್ಲಿ ಯಾವ ಕಾರಣಕ್ಕಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಲಿಕ್ಕೆ ಇರುವ ಆಸಕ್ತಿ ವಿವರವನ್ನು ಈ ಕೆಳಗಿನಂತೆ ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೫೦.೦೦ರಷ್ಟು ಕುಟುಂಬಗಳ ಮಕ್ಕಳನ್ನು ಓದಿನಲ್ಲಿರುವ ಆಸಕ್ತಿಗಾಗಿ ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೫೦.೦೦ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಗೆ ಕಳುಹಿಸಲು ಇರುವ ಕಾರಣಗಳೆಂದರೆ ಶಾಲೆಯಲ್ಲಿ ಬಟ್ಟೆ, ಪುಸ್ತಕ ನೀಡುವುದು, ಬಿಸಿಯೂಟಕ್ಕಾಗಿ ಮತ್ತು ವಿದ್ಯಾರ್ಥಿ ವೇತನ ನೀಡುತ್ತಿರುವ ಕಾರಣಕ್ಕಾಗಿ ಆಸಕ್ತಿಯನ್ನು ಹೊಂದಿದ್ದೇವೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೫೭೧೪ರಷ್ಟು ಕುಟುಂಬಗಳ ಮಕ್ಕಳನ್ನು ಓದಿನಲ್ಲಿರುವ ಆಸಕ್ತಿಗಾಗಿ ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೧೪.೨೮ರಷ್ಟು ಕುಟುಂಬಗಳು ಉತ್ತಮ ಆರ್ಥಿಕ ಸುಧಾರಣೆಗಾಗಿ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಅದರಂತೆ ಶೇ. ೨೮.೫೮ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಗೆ ಕಳುಹಿಸಲು ಇರುವ ಕಾರಣಗಳೆಂದರೆ ಶಾಲೆಯಲ್ಲಿ ಬಟ್ಟೆ, ಪುಸ್ತಕ ನೀಡುವುದು, ಬಿಸಿಯೂಟಕ್ಕಾಗಿ ಮತ್ತು ವಿದ್ಯಾರ್ಥಿ ವೇತನ ನೀಡುತ್ತಿರುವ ಕಾರಣಕ್ಕಾಗಿ ಆಸಕ್ತಿಯನ್ನು ಹೊಂದಿದ್ದೇವೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ರಾಯಚೂರು ಜಿಲ್ಲೆಯಲ್ಲಿ ಶೇ. ೨೫.೦೦ ರಷ್ಟು ಕುಟುಂಬಗಳ ಮಕ್ಕಳನ್ನು ಓದಿನಲ್ಲಿರುವ ಆಸಕ್ತಿಗಾಗಿ ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೭೫.೦೦ರಷ್ಟು ಕುಟುಂಬಗಳು ಸಹ ಮಕ್ಕಳನ್ನು ಶಾಲೆಗೆ ಕಳುಹಿಸಲು ಇರುವ ಕಾರಣಗಳೆಂದರೆ ಶಾಲೆಯಲ್ಲಿ ಬಟ್ಟೆ, ಪುಸ್ತಕ ನೀಡುವುದು, ಬಿಸಿಯೂಟಕ್ಕಾಗಿ ಮತ್ತು ವಿದ್ಯಾರ್ಥಿ ವೇತನ ನೀಡುತ್ತಿರುವ ಕಾರಣಕ್ಕಾಗಿ ಆಸಕ್ತಿಯನ್ನು ಹೊಂದಿದ್ದೇವೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಒಟ್ಟಾರೆಯಾಗಿ ಮೇಲಿನ ಕೊಷ್ಟಕದಿಂದ ತಿಳಿದು ಬರುವುದೇನೆಂದರೆ, ಬಳ್ಳಾರಿ ಜಿಲ್ಲೆ ಗ್ರಾಮಗಳಲ್ಲಿರುವ ಶಾಲೆಗಳಿಗಿಂತ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯಲ್ಲಿರುವ ಗ್ರಾಮಗಳ ಶಾಲೆಯ ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ಓದಿನಲ್ಲಿ ಆಸಕ್ತಿ ಇದ್ದರೂ ಅವರು ಶಾಲೆಗೆ ಹೋಗಲು ಆಗದೆ ಇರುವ ದುಃಸ್ಥಿತಿಯನ್ನು ನೋಡಲಾಗುತ್ತದೆ. ಇವೆರೆಡು ಜಿಲ್ಲೆಗಳಲ್ಲಿರುವ ಮಕ್ಕಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಹೋಗದೆಯಿರಲು ಹಲವು ಕಾರಣಗಳಿದ್ದು ಅವುಗಳಿಂದ ಶಾಲೆಯಿಂದ ದೂರ ಉಳಿದಿದ್ದಾರೆ ಎಂದು ತಿಳಿದು ಬಂದಿದೆ. ಆದರೂ ಇವರು ಮಕ್ಕಳನ್ನು ಶಾಲೆಯನ್ನು ಬಿಡಿಸಿದ್ದರೂ ಸರ್ಕಾರದಿಂದ ಸಿಗುವ ಸೌಲಭ್ಯದಿಂದಲಾದರೂ ಮಕ್ಕಳನ್ನು ಕನಿಷ್ಠ ಮಟ್ಟದ ಅಕ್ಷರವನ್ನು ಕಲಿಸಬೇಕು ಎಂಬ ಆಸಕ್ತಿಯನ್ನು ಹೊಂದಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಮೇಲಿನ ಅಂಶಗಳಿಂದ ಎರಡು ಜಿಲ್ಲೆಯ ಗ್ರಾಮಗಳಲ್ಲಿರುವ ಮಕ್ಕಳು ಕಲಿಕೆಯ ವಂಚನೆಯಿಂದ ಆದ ದುಃಸ್ಥಿತಿಯನ್ನು ನೋಡಲಾಗಿದೆ. ಹಾಗಾಗಿ ಸರ್ಕಾರದಿಂದ

ಸಿಗುವ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿರುವ ಮಕ್ಕಳಿಗೆ ಸಿಗುವಂತೆ ಮಾಡುವ ಮೂಲಕ ಉಚಿತ ಶಿಕ್ಷಣದ ಗುರಿಯನ್ನು ಸಫಲವಾಗಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೧೯. ಮಗು ಕಲಿಕೆಯಲ್ಲಿ ಹಿಂದುಳಿದಿರುವದರ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ನಿಮ್ಮ ಮಗು ಯಾವುದಾದರೂ ವಿಷಯದಲ್ಲಿ ಹಿಂದುಳಿದಿದೆಯಾ?	ಉಳಿದಿದೆ	೩೭	೯೦	೩೨	೮೬	೪೧	೯೩
	ಇಲ್ಲಾ	೪	೯.೮	೫	೧೪	೩	೬.೮
ಒಟ್ಟು		೪೧	೧೦೦	೩೭	೧೦೦	೪೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೋಷ್ಟಕದ ವಿವರವನ್ನು ನೋಡಿದ ಹಿನ್ನೆಲೆಯಲ್ಲಿ ತಮ್ಮ ಮಗು ಯಾವುದಾರೂ ವಿಷಯದಲ್ಲಿ ಹಿಂದುಳಿದಿದೆಯಾ ಎಂಬ ವಿವರವನ್ನು ಈ ಕೆಳಗಿನಂತೆ ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೯೦.೨೪ರಷ್ಟು ಕುಟುಂಬಗಳ ಮಕ್ಕಳು ಕೆಲವು ವಿಷಯಗಳಲ್ಲಿ ಹಿಂದೆ ಉಳಿದಿದೆ ಎಂದು ಹೇಳಿದ್ದಾರೆ. ಅದರಂತೆ ಶೇ. ೯.೭೬ರಷ್ಟು ಕುಟುಂಬಗಳಲ್ಲಿ ಯಾವ ಮಗು ಹಿಂದೆ ಉಳಿದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೮೬.೪೮ರಷ್ಟು ಕುಟುಂಬಗಳ ಮಕ್ಕಳು ಸಹ ಒಂದೆರೆಡು ವಿಷಯಗಳಲ್ಲಿ ಹಿಂದೆ ಉಳಿದಿದ್ದಾರೆ ಎಂದು ಹೇಳಿದ್ದಾರೆ. ಅದರಂತೆ ಶೇ. ೧೩.೫೨ರಷ್ಟು ಕುಟುಂಬಗಳಲ್ಲಿ ತಮ್ಮ ಮಕ್ಕಳು ಯಾವ ವಿಷಯದಲ್ಲಿ ಹಿಂದೆ ಉಳಿದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ,

ರಾಯಚೂರು ಜಿಲ್ಲೆಯಲ್ಲಿಯೂ ಸಹ ಶೇ. ೯೩.೧೮ರಷ್ಟು ಕುಟುಂಬಗಳಲ್ಲಿ ಮಕ್ಕಳು ಕೆಲವು ವಿಷಯಗಳಲ್ಲಿ ಹಿಂದೆ ಉಳಿದಿದ್ದಾರೆ ಎಂದು ಹೇಳಿದ್ದಾರೆ. ಅದರಂತೆ ಶೇ. ೬.೮೨ರಷ್ಟು ಕುಟುಂಬಗಳಲ್ಲಿ ಮಕ್ಕಳು ಯಾವ ವಿಷಯದಲ್ಲಿ ಹಿಂದುಳಿದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ ಮೇಲಿನ ಅಂಶಗಳಿಂದ ತಿಳಿಯಬಹುದಾದ ಅಂಶವೆಂದರೆ, ಬಳ್ಳಾರಿ ಜಿಲ್ಲೆಗಿಂತ ಕೊಪ್ಪಳ ಮತ್ತು ರಾಯಚೂರು ಗ್ರಾಮಗಳಲ್ಲಿರುವ ಮಕ್ಕಳು ಸರಿಸುಮಾರು ಒಂದೇ ರೀತಿಯಲ್ಲಿ ಕೆಲವು ವಿಷಯಗಳಲ್ಲಿ ಹಿಂದುಳಿದಿದ್ದಾರೆ ಎಂದು ತಿಳಿದು ಬಂದಿದೆ. ಅಂದರೆ, ಇಲ್ಲ ಗಮನಸಬೇಕಾದ ಸಂಗತಿಯೆಂದರೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಹಲವಾರು ಸಾಮಾಜಿಕ, ಆರ್ಥಿಕ ಕಾರಣಗಳನ್ನು ಎದುರಿಸುವುದರಿಂದ ಅಲ್ಲಿಯಿರುವ ಮಕ್ಕಳು ಕಲಿಕೆಯಿಂದ ಹಿಂದುಳಿದಿದ್ದು ತಾವು ಅಭ್ಯಾಸಿಸುವ ವಿಷಯಗಳಲ್ಲಿ ಹಿಂದುಳಿದು ತಮ್ಮ ಬದುಕು ದುಃಸ್ಥಿತಿಯಿಂದ ಕೂಡಿದೆ. ಹಾಗಾಗಿ ಯಾವ ವಿಷಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಿಂದುಳಿದಿದ್ದಾರೆ ಆ ವಿಷಯಗಳನ್ನು ಹೆಚ್ಚು ಅವಧಿಯಲ್ಲಿ ಬೋಧಿಸಿ ಅದರಲ್ಲಿ ಪರಿಣಿತಿಗೊಳಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ–೨೦. ಯಾವ ವಿಷಯದಲ್ಲಿ ಹಿಂದುಳಿದಿದೆ ಎನ್ನುವುದರ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಹೌದಾದರೆ, ಯಾವ ವಿಷಯದಲ್ಲಿ	ಇಂಗ್ಲೀಷ್, ಗಣಿತ	೨೧	೫೭	೧೮	೫೬	೧೭	೪೧
	ಹಿಂದಿ	–	–	–	–	೬	೧೫
	ಗಣಿತ	–	–	೬	೧೯	೧೧	೨೭
	ಎಲ್ಲಾವು	೧೬	೪೩	೧೦	೩೧	೭	೧೭
ಒಟ್ಟು		೩೭	೧೦೦	೩೨	೧೦೦	೪೧	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕದಲ್ಲಿ ಯಾವ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂಬ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೬.೭೬ರಷ್ಟು ಕುಟುಂಬಗಳು ತಮ್ಮ ಮಕ್ಕಳು ಇಂಗ್ಲೀಷ್ ಮತ್ತು ಗಣಿತ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂದು ಮತ್ತು ಶೇ. ೪೩.೨೪ರಷ್ಟು ಕುಟುಂಬಗಳು ತಮ್ಮ ಮಕ್ಕಳು ಎಲ್ಲಾ ವಿಷಯಗಳಲ್ಲಿ ಹಿಂದುಳಿದಿದ್ದಾರೆ ಎಂದಿದ್ದಾರೆ. ಅದೇ ತರಹ ಬಳ್ಳಾರಿ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೫೬.೨೫ರಷ್ಟು ಕುಟುಂಬಗಳು ತಮ್ಮ ಮಕ್ಕಳು ಇಂಗ್ಲೀಷ್ ಮತ್ತು ಗಣಿತ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂದು, ಶೇ. ೧೦೦ರಷ್ಟರಲ್ಲಿ ಶೇ. ೧೮.೭೫ರಷ್ಟು ಗಣಿತ ವಿಷಯದಲ್ಲಿ ಹಿಂದುಳಿದಿದೆ ಎಂದು ಮತ್ತು ಶೇ. ೩೧.೨೫ರಷ್ಟು ಕುಟುಂಬಗಳು ತಮ್ಮ ಮಕ್ಕಳು ಎಲ್ಲಾ ವಿಷಯಗಳಲ್ಲಿ ಹಿಂದುಳಿದಿದ್ದಾರೆ ಎಂದಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆಯ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೪೧.೪೬ರಷ್ಟು ಕುಟುಂಬಗಳು ತಮ್ಮ ಮಕ್ಕಳು ಇಂಗ್ಲೀಷ್ ಮತ್ತು ಗಣಿತ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂದು, ಶೇ. ೧೦೦ರಷ್ಟರಲ್ಲಿ ಶೇ. ೧೪.೬೩ರಷ್ಟು ಹಿಂದಿ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂದು, ಶೇ. ೧೦೦ರಷ್ಟರಲ್ಲಿ ಶೇ. ೨೬.೮೩ರಷ್ಟು ಗಣಿತ ವಿಷಯದಲ್ಲಿ ಹಿಂದುಳಿದಿದೆ ಎಂದು ಮತ್ತು ಶೇ. ೧೭.೦೮ರಷ್ಟು ಕುಟುಂಬಗಳು ತಮ್ಮ ಮಕ್ಕಳು ಎಲ್ಲಾ ವಿಷಯಗಳಲ್ಲಿ ಹಿಂದುಳಿದಿದ್ದಾರೆ ಎಂದಿದ್ದಾರೆ.

ಒಟ್ಟಾರೆಯಾಗಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆ ಗ್ರಾಮಗಳಿಗಿಂತ ಕೊಪ್ಪಳ ಜಿಲ್ಲೆಯ ಗ್ರಾಮಗಳ ಪಾಲಕರ ಮಕ್ಕಳು ಎಲ್ಲಾ ವಿಷಯಗಳಲ್ಲಿ ಹಿಂದುಳಿದಿದ್ದಾರೆ ಎಂದು ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಇಂಗ್ಲೀಷ್ ಕಲಿಕೆಯು ಗುಣಮಟ್ಟದಲ್ಲಿದ್ದರೂ ಶಾಲೆಯಲ್ಲಿ ಹೆಣ್ಣು ಮಕ್ಕಳು ಇಂಗ್ಲೀಷ್ ವಿಷಯದಲ್ಲಿ ಹಿಂದುಳಿದಿದ್ದು ಅದರಿಂದ ಜಿಲ್ಲೆಯ ಗ್ರಾಮಗಳಲ್ಲಿ ದುಃಸ್ಥಿತಿಗೆ ಒಂದು ಕಾರಣವೆಂದು ಹೇಳಬಹುದಾಗಿದೆ. ಅದರ ಜೊತೆಗೆ ಕೊಪ್ಪಳ ಜಿಲ್ಲೆಯ ಗ್ರಾಮಗಳಲ್ಲಿ ವರಮಾನ, ಹಿರಿಯರ ನಿರಾಸಕ್ತಿ ತಮಗೆ ಇರುವ ಕಷ್ಟಗಳಿಂದ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಕೊಡಿಸಲಾಗದೆ ಮಕ್ಕಳ ಅಕ್ಷರ ಕಲಿಕೆಯು ಒಚಿದು ದುಃಸ್ಥಿತಿ ಎಂದು ಹೇಳಲಾಗಿದೆ. ಹಾಗಾಗಿ, ಇದರಿಂದ ಶಾಲೆಯಲ್ಲಿ ಮಕ್ಕಳಿಗೆ ಸರ್ಕಾರದಿಂದ ಇರುವ ಕಲಿಕೆಯ ವಿಧಾನಗಳನ್ನು ಅಳವಡಿಸಿಕೊಂಡು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಅವಶ್ಯಕತೆಯಿದೆ ಎಂದು ಹೇಳಲಾಗಿದೆ.

ಕೊಷ್ಟಕ-೨೧. ಶಾಲೆಯ ಅಂತರದ ಕುರಿತ ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ನಿಮ್ಮ ಮನೆಯಿಂದ ಶಾಲೆ ಎಷ್ಟು ದೂರ ಇದೆ	೦-೫೦ ಮೀ	೬	೧೫	೩	೮.೧	೩೧	೭೦
	೫೧-೧೦೦ ಮೀ	೩೫	೮೫	೩೪	೯೨	೧೩	೩೦
	ಒಟ್ಟು	೪೧	೧೦೦	೩೭	೧೦೦	೪೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಮಕ್ಕಳು ಶಾಲೆಗೆ ಹೋಗುವ ಅಂತರದ ವಿವರವನ್ನು ತಿಳಿಸಲಾಗಿದೆ. ಕೊಪ್ಪಳ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೧೪.೬೩ರಷ್ಟು ಕುಟುಂಬಗಳು ತಮ್ಮ ಮನೆಯಿಂದ ಶಾಲೆ ೫೦ ಮೀಟರ್ ದೂರ ಇದೆ ಎಂದಿದ್ದಾರೆ. ಅದೇ ತರಹ ಶೇ. ೮೫.೩೭ ರಷ್ಟು ಕುಟುಂಬಗಳು ೫೧-೧೦೦ ಮೀಟರ್ ದೂ ಇದೆ ಎಂದು ಹೇಳಿದ್ದಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೮.೧ರಷ್ಟು ಕುಟುಂಬಗಳು ತಮ್ಮ ಮನೆಯಿಂದ ಶಾಲೆ ೫೦ ಮೀಟರ್ ದೂರ ಇದೆ ಎಂದಿದ್ದಾರೆ. ಅದೇ ತರಹ ಶೇ. ೯೧.೯ರಷ್ಟು ಕುಟುಂಬಗಳು ೫೧-೧೦೦ ಮೀಟರ್ ದೂ ಇದೆ ಎಂದು ಹೇಳಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೭೦.೪೬ರಷ್ಟು ಕುಟುಂಬಗಳು ತಮ್ಮ ಮನೆಯಿಂದ ಶಾಲೆ ೫೦ ಮೀಟರ್ ದೂರ ಇದೆ ಎಂದಿದ್ದಾರೆ. ಅದೇ ತರಹ ಶೇ. ೨೯.೫೪ ರಷ್ಟು ಕುಟುಂಬಗಳು ೫೧-೧೦೦ ಮೀಟರ್ ದೂ ಇದೆ ಎಂದು ಹೇಳಿದ್ದಾರೆ.

ಒಟ್ಟಾರೆಯಾಗಿ ರಾಯಚೂರು ಜಿಲ್ಲೆಯ ಗ್ರಾಮಗಳ ಶಾಲೆಗಿಂತ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಗಳು ಹೆಚ್ಚಿನ ಪ್ರಮಾಣದಲ್ಲಿ ಮನೆಯಿಂದ ದೂರವಿರುವುದನ್ನು ಕಾಣಲಾಗಿದೆ.

ಇಲ್ಲಿ ತಿಳಿದು ಬರುವ ಸಂಗತಿಯೆಂದರೆ ಶಾಲೆಯ ಅಂತರ ದೂರವಿದ್ದರೂ ಪೊಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಬಿಡದಿರುವುದನ್ನು ಕಾಣಲಾಗಿದೆ. ಇದರಿಂದ ಅವರಿಗೆ ಇರುವ ಅಭಿವೃದ್ಧಿಯ ಕಾಳಜಿಯನ್ನು ಕಂಡು ದುಃಸ್ಥಿತಿಯ ಮಟ್ಟವನ್ನು ಮಕ್ಕಳಿಗೆ ಅರಿವನ್ನು ಮೂಡಿಸುವುದರೊಂದಿಗೆ ಊರಿನ ಮಕ್ಕಳ ಅಭಿವೃದ್ಧಿಯ ಜೊತೆಗೆ ಮಕ್ಕಳನ್ನು ಹೆಚ್ಚು ಹೆಚ್ಚು ಶಿಕ್ಷಿತರನ್ನಾಗಿ ಮಾಡುವ ಮೂಲಕ ಅಭಿವೃದ್ಧಿಯನ್ನು ಕಾಣುವ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ.

ಕೊಷ್ಟಕ-೨೨. ಮಕ್ಕಳು ಶಾಲೆಗೆ ಹೋಗುವುದರ ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ನಿಮ್ಮ ಮಕ್ಕಳು ಶಾಲೆಗೆ ಹೇಗೆ ಹೋಗುತ್ತಾರೆ	ಕಾಲು ನಡಿಗೆ	೨೮	೬೫	೧೬	೪೩	೨೧	೪೮
	ಸೈಕಲ್‌ನಲ್ಲಿ	೧೩	೩೨	೨೧	೫೭	೧೪	೩೨
	ಆಟೋದಲ್ಲಿ	-	-	-	-	೯	೨೦
ಒಟ್ಟು		೪೧	೧೦೦	೩೭	೧೦೦	೪೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಮಕ್ಕಳು ಶಾಲೆಗೆ ಯಾವುದರಲ್ಲಿ ಹೋಗುತ್ತಾರೆ ಎಂಬುದರ ವಿವರವನ್ನು ತಿಳಿಸಲಾಗಿದೆ. ಕೊಪ್ಪಳ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೬೫.೯೫ರಷ್ಟು ಕುಟುಂಬಗಳು ತಮ್ಮ ಮನೆಯಿಂದ ಶಾಲೆಗೆ ಕಾಲುನಡಿಗೆಯಲ್ಲಿ ಹೋಗುತ್ತಾರೆ. ಅದೇ ತರಹ ಶೇ. ೩೧.೭೦ ರಷ್ಟು ಕುಟುಂಬಗಳ ಮಕ್ಕಳು ಶಾಲೆಗೆ ಸೈಕಲ್‌ನಲ್ಲಿ ಹೋಗುತ್ತಾರೆ ಎಂದು ಹೇಳಿದ್ದಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೪೩.೨೪ರಷ್ಟು ಕುಟುಂಬಗಳು ತಮ್ಮ ಮನೆಯಿಂದ ಶಾಲೆಗೆ ಕಾಲುನಡಿಗೆಯಲ್ಲಿ ಹೋಗುತ್ತಾರೆ. ಅದೇ ತರಹ ಶೇ. ೫೬.೭೬ರಷ್ಟು ಕುಟುಂಬಗಳ ಮಕ್ಕಳು

ಶಾಲೆಗೆ ಸೈಕಲ್‌ನಲ್ಲಿ ಹೋಗುತ್ತಾರೆ ಎಂದು ಹೇಳಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೪೭.೭೩ರಷ್ಟು ಕುಟುಂಬಗಳು ತಮ್ಮ ಮನೆಯಿಂದ ಶಾಲೆಗೆ ಕಾಲುನಡಿಗೆಯಲ್ಲಿ ಹೋಗುತ್ತಾರೆ. ಅದೇ ತರಹ ಶೇ. ೩೧.೮೩ರಷ್ಟು ಕುಟುಂಬಗಳ ಮಕ್ಕಳು ಶಾಲೆಗೆ ಸೈಕಲ್‌ನಲ್ಲಿ ಹೋಗುತ್ತಾರೆ ಎಂದು ಹೇಳಿದ್ದಾರೆ. ಅಲ್ಲದೇ, ಶೇ. ೨೦.೪೬ರಷ್ಟು ಕುಟುಂಬಗಳ ಮಕ್ಕಳು ಆಟೋದಲ್ಲಿ ಹೋಗುತ್ತಾರೆ ಎಂದು ಹೇಳಿದ್ದಾರೆ.

ಒಟ್ಟಾರೆಯಾಗಿ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯಲ್ಲಿರುವ ಗ್ರಾಮಗಳ ಮಕ್ಕಳಿಗಿಂತ ಕೊಪ್ಪಳ ಜಿಲ್ಲೆ ಗ್ರಾಮಗಳಲ್ಲಿರುವ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಕಾಲುನಡಿಗೆಯಲ್ಲಿ ಹೋಗುತ್ತಿರುವುದನ್ನು ನೋಡಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೊಪ್ಪಳ ಜಿಲ್ಲೆಯಲ್ಲಿರುವ ಮಕ್ಕಳ ಪಾಲಕರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತುಂಬ ದುಃಸ್ಥಿತಿಯನ್ನು ಅನುಭವಿಸುತ್ತಿದ್ದು ಅಲ್ಲದೇ, ಅವರನ್ನ ಶಾಲೆಗೆ ಕಳುಹಿಸುವುದೇ ದುಸ್ಥರ ಎಂದು ಹೇಳಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಅಂದಹಾಗೆ ಮಕ್ಕಳು ಯಾವ ವಿಧಾನದಲ್ಲಿ ಶಾಲೆಗೆ ಹೋಗುವುದು ಮುಖ್ಯ ಅಲ್ಲ ಅವರು ಯಾವ ರೀತಿಯಲ್ಲಿ ಅಕ್ಷರವನ್ನು ಕಲಿಯುತ್ತಾರೆ ಎನ್ನುವುದು ಪ್ರಮುಖ ಎಂದು ತಿಳಿಯುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ–೨೩. ಮಕ್ಕಳ ಪೌಷ್ಟಿಕ ಆಹಾರದ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಚಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ನಿಮ್ಮ ಮಗು ಶಾಲೆಂಯಲ್ಲಿ ಪೌಷ್ಟಿಕ ಆಹಾರ ಪಡೆಯುತ್ತಿದೆಯಾ?	ಪಡೆಯುತ್ತದೆ	೯	೨೨	೬	೧೬	೧೩	೩೦
	ಏನೂ ಕೊಡ್ತಾರಾ	೩೨	೭೮	೩೧	೮೪	೩೧	೭೦
ಒಟ್ಟು		೪೧	೧೦೦	೩೭	೧೦೦	೪೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಮಕ್ಕಳು ಪೌಷ್ಠಿಕ ಆಹಾರವನ್ನು ಪಡೆಯುದರ ವಿವರವನ್ನು ತಿಳಿಸಲಾಗಿದೆ. ಕೊಪ್ಪಳ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೨೧.೯೫ರಷ್ಟು ಕುಟುಂಬಗಳು ತಮ್ಮ ಮಕ್ಕಳು ಪೌಷ್ಠಿಕ ಆಹಾರವನ್ನು ಪಡೆಯುತ್ತಾರೆ ಎಂದಿದ್ದಾರೆ. ಅದೇ ತರಹ ಶೇ. ೭೮.೯ರಷ್ಟು ಕುಟುಂಬಗಳ ಪಾಲಕರು ಶಾಲೆಯಲ್ಲಿ ಏನೂ ಪೌಷ್ಠಿಕ ಆಹಾರವನ್ನು ಕೊಡುತ್ತಾರೋ ಎಂಬುದನ್ನು ಬೇಸರದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೧೯.೨೧ರಷ್ಟು ಕುಟುಂಬಗಳು ತಮ್ಮ ಮಕ್ಕಳು ಪೌಷ್ಠಿಕ ಆಹಾರವನ್ನು ಪಡೆಯುತ್ತಾರೆ ಎಂದಿದ್ದಾರೆ. ಅದೇ ತರಹ ಶೇ. ೮೩.೭೯ರಷ್ಟು ಕುಟುಂಬಗಳ ಪಾಲಕರು ಶಾಲೆಯಲ್ಲಿ ಏನೂ ಪೌಷ್ಠಿಕ ಆಹಾರವನ್ನು ಕೊಡುತ್ತಾರೋ ಎಂಬುದನ್ನು ಬೇಸರದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ಶೇ. ೨೯.೫೪ರಷ್ಟು ಕುಟುಂಬಗಳು ತಮ್ಮ ಮಕ್ಕಳು ಪೌಷ್ಠಿಕ ಆಹಾರವನ್ನು ಪಡೆಯುತ್ತಾರೆ ಎಂದಿದ್ದಾರೆ. ಅದೇ ತರಹ ಶೇ. ೨೦.೪೬ರಷ್ಟು ಕುಟುಂಬಗಳ ಪಾಲಕರು ಶಾಲೆಯಲ್ಲಿ ಏನೂ ಪೌಷ್ಠಿಕ ಆಹಾರವನ್ನು ಕೊಡುತ್ತಾರೋ ಎಂಬುದನ್ನು ಬೇಸರದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ರಾಯಾಚೂರು ಜಿಲ್ಲೆಯಲ್ಲಿರುವ ಗ್ರಾಮಗಳ ಪಾಲಕರು ತಮ್ಮ ಮಕ್ಕಳಿಗೆ ಪೌಷ್ಠಿಕ ಆಹಾರವು ಸಿಗುತ್ತದೆ ಎನ್ನುವುದಕ್ಕಿಂತ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಯ ಗ್ರಾಮಗಳ ಪಾಲಕರ ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ಪೌಷ್ಠಿಕ ಆಹಾರವು ಸಿಗುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ರಾಯಚೂರು ಜಿಲ್ಲೆಯು ಪೌಷ್ಠಿಕಾಂಶಯುಕ್ತ ಆಹಾರವನ್ನು ಕೊಡುವುದರಲ್ಲಿ ಸಫಲರಾಗಿದ್ದಾರೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಸಲೇಬೇಕಾದ ಸಂಗತಿಯೆಂದರೆ ಶಾಲಾ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಕೊಡುವುದು ಅವರ ಮಕ್ಕಳ ದೈಹಿಕ ಶಕ್ತಿ ಮತ್ತು ಹೆಚ್ಚಿನ ಪ್ರಮಾಣದಲ್ಲಿ ದಾಖಲಿಕರಣ ಎಂದು ತಿಳಿಯಲಾಗಿದೆ. ಹಾಗೆಯೇ ಪೌಷ್ಠಕ ಆಹಾರವನ್ನು ಪಡೆಯುವುದು ಅವರ ಹಕ್ಕು. ಅಂದರೆ ಶಿಕ್ಷಣವು ಪ್ರತಿ ಹಂತದಲ್ಲಿ ಹೇಗೆ ಮಕ್ಕಳನ್ನು ಅಭಿವೃದ್ಧಿಗೊಳಿಸಲಾಗುತ್ತದೆ ಎಂದು ಹೇಳಲಾಗುತ್ತದೆ. ಶಾಲೆಗೆ ಹೋಗುವ ತುಂಬಾ ಮಕ್ಕಳು ಆರ್ಥಿಕವಾಗಿ ಹಿಂದುಳಿದಿರುತ್ತಾರೆ ಇದರಿಂದ ಅವರು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟು ಹೋಗಬಾರದು ಎಂಬ ಉದ್ದೇಶದಿಂದ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಮಕ್ಕಳಿಗೂ ಪೌಷ್ಠಿಕ ಆಹಾರವನ್ನು ಸಮರ್ಥವಾಗಿ ವಿತರಿಸುವ ತುರ್ತು ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೨೪. ಮಕ್ಕಳಿಗೆ ಕಲಿಕೆಯಲ್ಲಿ ಯಾವ ಮಾಧ್ಯಮವನ್ನು ನೀಡುವುದರ ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವವಿನಬಾವಿ, ಸಂತೆಕಲ್ಲೂರು	
ಯಾವ ಸ್ವರೂಪದ ಶಿಕ್ಷಣ ಮಾದರಿಯನ್ನು ಪ್ರಾಥಮಿಕ ಹಂತದಲ್ಲಿ ಕೊಡಿಸ ಬೇಕೆಂದು ಬಯಸುತೀರಿ?	ಇಂಗ್ಲೀಷ್	೨೯	೭೧	೨೧	೫೭	೩೧	೭೦
	ಕನ್ನಡ	೧೨	೨೯	೧೬	೪೩	೧೩	೩೦
ಒಟ್ಟು		೪೧	೧೦೦	೩೭	೧೦೦	೪೪	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಮಕ್ಕಳಿಗೆ ಯಾವ ಸ್ವರೂಪದ ಶಿಕ್ಷಣ ಮಾದರಿಯನ್ನು ಪ್ರಾಥಮಿಕ ಹಂತದಲ್ಲಿ ಕೊಡಿಸಬೇಕೆಂದಿರೆಂದು ಎಂಬ ವಿವರವನ್ನು ತಿಳಿಸಲಾಗಿದೆ. ಕೊಪ್ಪಳ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೭೦.೭೩ರಷ್ಟು ಕುಟುಂಬಗಳು ತಮ್ಮ ಮಕ್ಕಳಿಗೆ ಇಂಗ್ಲೀಷ್ ಸ್ವರೂಪದ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿದ್ದಾರೆ. ಅದೇ ತರಹ ಶೇ. ೨೯.೨೭ರಷ್ಟು ಕುಟುಂಬಗಳ ಪಾಲಕರು ತಮ್ಮ ಮಕ್ಕಳಿಗೆ ಕನ್ನಡ ಸ್ವರೂಪದ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೫೬.೭೬ರಷ್ಟು ಕುಟುಂಬಗಳು ತಮ್ಮ ಮಕ್ಕಳಿಗೆ ಇಂಗ್ಲೀಷ್ ಸ್ವರೂಪದ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿದ್ದಾರೆ. ಅದೇ ತರಹ ಶೇ. ೪೩.೨೪ಷ್ಟು

ಕುಟುಂಬಗಳ ಪಾಲಕರು ತಮ್ಮ ಮಕ್ಕಳಿಗೆ ಕನ್ನಡ ಸ್ವರೂಪದ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿಕೊಂಡಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೭೦.೪೫ರಷ್ಟು ಕುಟುಂಬಗಳು ತಮ್ಮ ಮಕ್ಕಳಿಗೆ ಇಂಗ್ಲೀಷ್ ಸ್ವರೂಪದ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿದ್ದಾರೆ. ಅದೇ ತರಹ ಶೇ. ೨೯.೫೫ರಷ್ಟು ಕುಟುಂಬಗಳ ಪಾಲಕರು ತಮ್ಮ ಮಕ್ಕಳಿಗೆ ಕನ್ನಡ ಸ್ವರೂಪದ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಮೂರು ಜಿಲ್ಲೆಗಳ ಹೇಳಿಕೆಯನ್ನು ನೋಡಿದಾಗ ಇಂಗ್ಲೀಷ್ ಕಲಿಕೆಯನ್ನು ಸರಿಸುಮಾರು ಎಲ್ಲಾರಿಗೂ ಕೊಡಿಸಬೇಕೆಂದು ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ, ಬಳ್ಳಾರಿ ಜಿಲ್ಲೆಗಿಂತ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಇಂಗ್ಲೀಷ್ ಕಲಿಕೆಯ ಅಭಿಪ್ರಾಯಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದನ್ನು ತಿಳಿದು ಬಂದಿದೆ. ಇಲ್ಲಿ ಗಮನುಸಬೇಕಾದ ಸಂಗತಿಯೆಂದರೆ, ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಶಾಲೆ ಬಿಡಿಸಿದ್ದರೂ ಸಹ ಅವರಿಗೆ ತಮ್ಮ ಮಕ್ಕಳನ್ನು ಸರಿಯಾದ ಶಿಕ್ಷಣವನ್ನು ಕೊಡಿಸಬೇಕೆಂದು ಭಾವಿಸಿರುವುದು ತಿಳಿದು ಬಂದಿದೆ. ಮೇಲಿನ ಎರಡು ಜಿಲ್ಲೆಗಳನ್ನು ನೋಡಿದಾಗ ಮಕ್ಕಳಿಗೆ ಇಂಗ್ಲೀಷ್ ಕಲಿಕೆಯಿಂದ ಅವರ ಭವಿಷ್ಯತ್ತಿನಲ್ಲಿ ಚೆನ್ನಾಗಿ ಇರುತ್ತಾರೆ ಎಂಬ ಕಾರಣಕ್ಕಾಗಿ ಅವರು ಇಂತಹ ನಿರ್ಧಾರವನ್ನು ತಳಿದಿದ್ದಾರೆ ಎಂದು ತಿಳಿದು ಬಂದಿದೆ. ಹಾಗಾಗಿ ಕೇವಲ ಹೆಚ್ಚಿನ ಪ್ರಮಾಣದಲ್ಲಿ ಇಂಗ್ಲೀಷ್ ಕಲಿಕೆಯಿಂದ ಜೀವನ ರೂಪಿಸಿಕೊಳ್ಳುವುದು ನಮ್ಮ ಭ್ರಮೆ ಅದರ ಜೊತೆಗೆ ನಮ್ಮ ಮಾತೃ ಭಾಷೆಯಾದ ಕನ್ನಡವನ್ನು ಕಲಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೇಲಿನ ವಿಶ್ಲೇಷಣೆಯಿಂದ ತಿಳಿದುಬರುವ ಅಂಶವೆಂದರೆ ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆ ಗ್ರಾಮಗಳ ಪಾಲಕರನ್ನು ಸಂದರ್ಶಿಸಿದ ನಂತರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಗಮನಸಿದಾಗ ರಾಯಚೂರ ಮತ್ತು ಬಳ್ಳಾರಿ ಜಿಲ್ಲೆ ಪಾಲಕರಿಗಿಂತ ಕೊಪ್ಪಳ ಜಿಲ್ಲೆಯ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರು, ಆರ್ಥಿಕವಾಗಿ ದುರ್ಬಲರು ಮತ್ತು ಸಮಾಜದ ಜ್ಞಾನವನ್ನು ಹೊಂದದವರು ಅಲ್ಲದೇ, ತಮಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆಯದೆ ವಂಚಿತಗೊಂಡಿರುವುದಲ್ಲದೆ, ಒಣಭೂಮಿಯಿಂದ ಕಡಿಮೆ ಆದಾಯ ವನ್ನು ಹೊಂದಿ ಜೀವನಾಧಾರಕ್ಕೆ ಕೂಲಿಯನ್ನು ಮಾಡುತ್ತಾ ಹೆಚ್ಚಿನ ವರಮಾನವನ್ನು ಹೊಂದದೆ ವೈಯಕ್ತಿಕ ಜೀವನವನ್ನು ಗುಣಮಟ್ಟ ಜೀವನದಿಂದ ನಡೆಸಿಕೊಂಡು ಹೋಗುವಲ್ಲಿ ವಿಫಲವಾಗಿದ್ದು, ಇಂತಹ ಹಲವು ಕಾರಣಗಳಿಂದ ಭೂಮಾಲೀಕರ ಮತ್ತು ಇದ್ದವರ ಮೇಲೆ ಅವಲಂಬಿತವಾಗಿ ಅದರಿಂದ ನಿರೀಕ್ಷಿತ ಅನುಕೂಲತೆಗಳನ್ನು ಪಡೆಯದೆ ಅಭಿವೃದ್ಧಿಯನ್ನು ಸಾಧಿಸಲು ಆಗದೆ ದುಃಸ್ಥಿತಿಯನ್ನು ಅನುಭವಿಸಬೇಕಾದ ಸಂದರ್ಭ ಎದುರಾಗಿದೆ ಎನ್ನಬಹುದು. ಈ ಇಂತಹ

ದುಃಸ್ಥಿತಿಗೆ ಪರಿಣಾಮಕಾರಿಯಾದ ಶಾಲೆಗಳನ್ನು ತೆರದು ಅದರ ಮೂಲಕ ಅಕ್ಷರ ಕಲಿಕೆಯಲ್ಲಿ ತೊಡಗಿಸಿಕೊಳ್ಳವಲ್ಲಿ ಶಾಲೆಗಳಿಗೆ ವಿವಿಧ ಸಂಸ್ಥೆಗಳಿಂದ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದರ ಮೂಲಕ ಉತ್ಕೃಷ್ಟವಾದ ಅಕ್ಷರವನ್ನು ಕಲಿಸುವ ಮೂಲಕ ದುಃಸ್ಥಿತಿಯನ್ನು ಪರಿಣಾಮಕಾರಿಯಾಗಿ ಹೋಗಲಾಡಿಸಿ ಅಭಿವೃದ್ಧಿಯನ್ನು ಕಾಣಲು ಸಾಧ್ಯವೆಂದು ಅಭಿಪ್ರಾಯ ಪಡಲಾಗಿದೆ.

ಅಧ್ಯಾಯ ಐದು

ಪ್ರಾಥಮಿಕ ಶಾಲಾ ಶಿಕ್ಷಣ: ಶಿಕ್ಷಕರ ಅಭಿಪ್ರಾಯಗಳು

ಅಧ್ಯಾಯ ಐದು

ಪ್ರಾಥಮಿಕ ಶಾಲಾ ಶಿಕ್ಷಣ: ಶಿಕ್ಷಕರ ಅಭಿಪ್ರಾಯ

ಪ್ರಬಂಧದ ನಾಲ್ಕನೆಯ ಅಧ್ಯಾಯನದಲ್ಲಿ ಮೂರು ಜಿಲ್ಲೆಯ ಗ್ರಾಮದಲ್ಲಿನ ಶಾಲೆಯ ಮಕ್ಕಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಪ್ರಾಥಮಿಕ ಹಂತದ ಮೂಲಕ ನೋಡಲಾಗಿದೆ. ಅಲ್ಲದೇ, ಪ್ರಸ್ತುತ ಅಧ್ಯಾಯದಲ್ಲಿ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿರುವ ಶಾಲೆಗಳ ಶಿಕ್ಷಕರನ್ನು ಸಂದರ್ಶಿಸುವ ಮೂಲಕ ಮಕ್ಕಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಗತಿಯನ್ನು ನೋಡಲಾಗಿದೆ. ಅಂತೆಯೇ, ಗ್ರಾಮಗಳ ವಾಸಿಸುವ ಶಾಲಾ ಮಕ್ಕಳ ಜೀವನ ವ್ಯವಸ್ಥೆಯು ಸಮರ್ಪಕವಾಗಿರಲು ಸರ್ಕಾರವು ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹೆಚ್ಚಿನ ಅನುಷ್ಠಾನಗೊಳಿಸಲಾಗಿದೆ. ಇಂತಹ ಯೋಜನೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು ವಿವಿಧ ಸಂಸ್ಥೆಗಳ ಶಾಲೆಯನ್ನು ಮುಖ್ಯವಾಗಿ ನಿರ್ವಹಿಸುವ ಕಾರ್ಯವನ್ನು ವಹಿಸಿಕೊಂಡಿರುವ ಶಿಕ್ಷಕರ ಆದ್ಯಕರ್ತವ್ಯವಾಗಿದೆ. ಇಂತಹ ಒಂದು ಬೆಳವಣಿಗೆಯಿಂದ ಜಿಲ್ಲೆಯಲ್ಲಿರುವ ದುಃಸ್ಥಿತಿಯನ್ನು ನಿವಾರಣೆ ಮಾಡಿ ಅದರ ಮೂಲಕ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ. ಹೀಗಾಗಿ ಕರ್ನಾಟಕದಲ್ಲಿ ಜಿಲ್ಲವಾರು ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳನ್ನು ಸುಧಾರಣೆ ಮಾಡುವುದು ಆದ್ಯತೆಯ ಕೆಲಸವಾಗಬೇಕಾಗಿದೆ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವ ಮೂಲಕ ಅಭಿವೃದ್ಧಿ ಇಂದು ಪ್ರಮುಖವಾದ ಕೆಲಸವಾಗಿದ್ದು, ಈ ಮೂಲಕ ಶಾಲೆಗಳನ್ನು ಅಭಿವೃದ್ಧಿಗೊಳಿಸುವ ಮೂಲಕ ಮಾತ್ರ ಸಾಧ್ಯ ಎಂದು ಹೇಳಬಹುದು.

ಕೊಷ್ಟಕ ೧. ಸಾಮಾನ್ಯ ವಿವರಗಳು(ಲಿಂಗ)

ಸೂಚಕಗಳು	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮುಖ್ಯ ಶಿಕ್ಷಕರ	ಗಂಡು	೫	೧೦೦	೪	೮೦	೫	೧೦೦
	ಹೆಣ್ಣು	-	-	೧	೨೦	-	-
ಒಟ್ಟು		೫	೧೦೦	೫	೧೦೦	೫	೧೦೯

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲೆ ತೋರಿಸಲಾದ ಕರ್ನಾಟಕದ ಮೂರು ಜಿಲ್ಲೆಯಲ್ಲಿನ ಶಾಲೆಯಲ್ಲಿ ಸಂದರ್ಶಿತಗೊಂಡ ಶಿಕ್ಷಕರ ಲಿಂಗದ ವಿವರವನ್ನು ಕೊಷ್ಟಕದಲ್ಲಿ ನೀಡಲಾಗಿದೆ. ಕೊಪ್ಪಳ ಜಿಲ್ಲೆಯ ೫ ಶಾಲೆಯ ಪಾಲಕರಲ್ಲಿ ಶೇ. ೧೦೦.೦೦ರಷ್ಟು ಕುಟುಂಬಗಳ ಗಂಡಸರನ್ನು ಸಂದರ್ಶಿಸಲಾಯಿತು. ಅದರಂತೆ, ಬಳ್ಳಾರಿ ಜಿಲ್ಲೆಯ ೫ ಶಾಲೆಯ ಪಾಲಕರಲ್ಲಿ ಶೇ. ೮೦.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೨೦.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ. ಕೊನೆಯದಾಗಿ, ರಾಯಚೂರು ಜಿಲ್ಲೆಯ ೫ ಶಾಲೆಯ ಪಾಲಕರಲ್ಲಿ ಶೇ. ೧೦೦.೦೦ರಷ್ಟು ಕುಟುಂಬಗಳ ಗಂಡಸರನ್ನು ಸಂದರ್ಶನ ಮಾಡಲಾಗಿದೆ.

ಒಟ್ಟಾರೆಯಾಗಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಗ್ರಾಮಗಳಿಗಿಂತ ಬಳ್ಳಾರಿ ಜಿಲ್ಲೆಯ ಗ್ರಾಮಗಳ ಶಾಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಶಿಕ್ಷಕರಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ತಿಳಿಯಬೇಕಾದ ಸಂಗತಿಯೆಂದರೆ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯಲ್ಲಿ ತಾವು ಆಯ್ಕೆ ಮಾಡಿಕೊಂಡ ಶಾಲೆಗಳಲ್ಲಿ ಯಾವ ಹೆಣ್ಣು

ಶಿಕ್ಷಕರು ಇಲ್ಲದ ಕಾರಣ ಅವರು ಸಂದರ್ಶಗೊಂಡಿಲ್ಲ ಎಂಬ ಕಾರಣವು ಅಧ್ಯಯನಗಳಿಂದ ತಿಳಿದು ಬಂದಿದೆ. ಅಂದರೆ, ಮೂರು ಜಿಲ್ಲೆಗಳನ್ನು ಹೋಲಿಕೆ ಮಾಡಿದಾಗ ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಂಡುಮಕ್ಕಳು ಸಂದರ್ಶನಗೊಂಡಿರುವುದನ್ನು ನೋಡಬಹುದಾಗಿದೆ.

ಕೋಷ್ಟಕ-೨. ಶಾಲಾ ಮಕ್ಕಳಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳು

ಸೂಚಕಗಳು	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಶಾಲೆಗೆ ದಾಖಲಾದ ಮಕ್ಕಳ ಶೈಕ್ಷಣಿಕ ಬೆಳವಣಿಗೆಗಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಾ?	ವಿಶೇಷ ತರಗತಿಗಳನ್ನು ಏರ್ಪಡಿಸುವುದು	೩	೬೦	೫	೧೦೦	೪	೮೦
	ನಿರಂತರ ಮೌಲ್ಯ ಮಾಪನ	೨	೪೦	-	-	೧	೨೦
ಒಟ್ಟು		೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಮಕ್ಕಳ ಶೈಕ್ಷಣಿಕ ಬೆಳವಣಿಗೆಗಾಗಿ ಕೈಗೊಂಡ ಕಾರ್ಯಕ್ರಮಗಳ ವಿವರವನ್ನು ತಿಳಿಸಲಾಗಿದೆ. ಕೊಪ್ಪಳ ಜಿಲ್ಲೆಯ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬೆಳವಣಿಗಾಗಿ ವಿಶೇಷ ತರಗತಿಗಳನ್ನು ಏರ್ಪಡಿಸಲಾಗಿದೆ ಎಂದು ಅಭಿಪ್ರಾಯವನ್ನು

ವ್ಯಕ್ತಪಡಿಸಿದ್ದಾರೆ. ಅದೇ ತರಹ ಇನ್ನೂ ಶೇ. ೪೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬೆಳವಣಿಗೆಗಾಗಿ ನಿರಂತರ ಮೌಲ್ಯಮಾಪನ ಮಾಡುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೧೦೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬೆಳವಣಿಗಾಗಿ ವಿಶೇಷ ತರಗತಿಗಳನ್ನು ಏರ್ಪಡಿಸಲಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆಯ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೮೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬೆಳವಣಿಗಾಗಿ ವಿಶೇಷ ತರಗತಿಗಳನ್ನು ಏರ್ಪಡಿಸಲಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದೇ ತರಹ ಇನ್ನೂ ಶೇ. ೨೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬೆಳವಣಿಗೆಗಾಗಿ ನಿರಂತರ ಮೌಲ್ಯಮಾಪನ ಮಾಡುತ್ತೇವೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಬಳ್ಳಾರಿ ಜಿಲ್ಲೆಯ ಗ್ರಾಮಗಳ ಶಿಕ್ಷಕರಿಗಿಂತ ರಾಯಚೂರು ಮತ್ತು ಕೊಪ್ಪಳ ಜಿಲ್ಲೆ ಗ್ರಾಮಗಳ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನಿರಂತರ ಮೌಲ್ಯಮಾಪನ ಮತ್ತು ವಿಶೇಷ ತರಗತಿಗಳನ್ನು ಎರಡು ರೀತಿಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ ಎಂದು ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಎರಡು ಜಿಲ್ಲೆಯ ಶಿಕ್ಷಕರು ಮಕ್ಕಳ ಬೆಳವಣಿಗಾಗಿ ಒಂದು ವಿಧಾನವಲ್ಲದೆ ಅದರ ಜೊತೆಗೆ ಮತ್ತೊಂದು ವಿಧಾನವನ್ನು ಅನುಸರಿಸಿ ತೀವ್ರವಾಗಿ ಮಕ್ಕಳನ್ನು ಅಭಿವೃದ್ಧಿಗೊಳಿಸುತ್ತಾರೆ. ಅಂದರೆ, ಒಂದೇ ವಿಧಾನವನ್ನು ಅನುಸರಿಕೊಂಡಾಗ ಮಕ್ಕಳಲ್ಲಿ ಕಲಿಕೆಯಲ್ಲಿ ಕಠಿಣ ಎಂದು ಅನಿಸುತ್ತದೆ. ಹಾಗಾಗಿ ಮಕ್ಕಳಿಗೆ ಸರಳ ವಿಧಾನವನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಲಿಸಿಕೊಟ್ಟಾಗ ಅವರ ಅಕ್ಷರ ಜ್ಞಾನದಿಂದ ಅಭಿವೃದ್ಧಿಯನ್ನು ಕಾಣುವಂತಹ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ ೩. ಸರ್ಕಾರ ನೀಡಿರುವ ಸೌಲಭ್ಯದಲ್ಲಿರುವ ಗುಣಮಟ್ಟದ ವಿವರ

	ಉಪ ಸೂಚಕಗಳು	ಕೊಪ್ಪಳ ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಳ್ಳಾರಿ ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ಮತ್ತು ರಾವಿಹಾಳ್		ರಾಯಚೂರು ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವವಿನಬಾವಿ, ಸಂತೆಕಲ್ಲೂರು	
ಉಚಿತವಾಗಿ ನೀಡುವ ಸೈಕಲ್‌ನ ಗುಣಮಟ್ಟದ ವಿವರ	ಸಾಧರಣ ವಾಗಿದೆ	೩	೬೦	೩	೬೦	೨	೪೦
	ಇಲ್ಲ	೨	೪೦	೨	೪೦	೩	೬೦
	ಒಟ್ಟು	೫	೧೦೦	೫	೧೦೦	೫	೧೦೦

ಮಾಹಿತಿ ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಗ್ರಾಮಗಳಲ್ಲಿರುವ ಶಾಲೆಯಲ್ಲಿ ನೀಡುವ ಸೈಕಲಗಳ ಗುಣಮಟ್ಟದ ವಿವರವನ್ನು ನೀಡಲಾಗಿದೆ. ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೦ರಷ್ಟು ಶಿಕ್ಷಕರು ಸೈಕಲ್‌ಗಳು ಸಾಧರಣಾವಾಗಿವೆ ಎಂದು ಹೇಳಿಕೊಂಡಿದ್ದಾರೆ. ಅದೇ ರೀತಿಯಾಗಿ ಶೇ. ೪೦.೦೦ರಷ್ಟರಲ್ಲಿ ಗುಣಮಟ್ಟದಿಂದ ಕೂಡಿಲ್ಲ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೦ರಷ್ಟು ಶಿಕ್ಷಕರು ಸೈಕಲ್‌ಗಳು ಸಾಧರಣಾವಾಗಿವೆ ಎಂದು ಹೇಳಿಕೊಂಡಿದ್ದಾರೆ. ಅದೇ ರೀತಿಯಾಗಿ ಶೇ. ೪೦.೦೦ರಷ್ಟರಲ್ಲಿ ಗುಣಮಟ್ಟದಿಂದ ಕೂಡಿಲ್ಲ ಎಂದು ಹೇಳಿಕೊಂಡಿದ್ದಾರೆ. ರಾಯಚೂರು ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೦ರಷ್ಟು ಶಿಕ್ಷಕರು ಸೈಕಲ್‌ಗಳು ಸಾಧರಣಾವಾಗಿವೆ ಎಂದು ಹೇಳಿಕೊಂಡಿದ್ದಾರೆ. ಅದೇ ರೀತಿಯಾಗಿ ಶೇ. ೬೦.೦೦ರಷ್ಟರಲ್ಲಿ ಗುಣಮಟ್ಟದಿಂದ ಕೂಡಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಗ್ರಾಮಗಳ ಶಾಲಾ ಶಿಕ್ಷಕರಿಗಿಂತ ರಾಯಚೂರು ಜಿಲ್ಲೆ ಗ್ರಾಮಗಳ ಶಿಕ್ಷಕರು ತಮ್ಮ ಶಾಲೆಯಿಂದ ವಿತರಿಸುವ ಸೈಕಲ್‌ಗಳ

ಗುಣಮಟ್ಟವನ್ನು ಬೇಸರದಿಂದ ಉತ್ತಮವಾಗಿಲ್ಲ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸರ್ಕಾರ ನೀಡಿರುವ ಸೈಕಲ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಮನೆಯ ಕೆಲಸಗಳಿಗೆ ಉಪಯೋಗವಾಗಿವೆ ವಿನಃ ಮಕ್ಕಳಿಗೆ ಶಾಲೆಗೆ ತರಲು ಅಲ್ಲ ಎಂದು ಹೇಳುತ್ತಾರೆ. ನೀಡಿರುವ ಸೈಕಲ್‌ಗಳು ಸುಧಾರಣೆಯಲ್ಲಿದ್ದರೂ ಅವುಗಳು ಹೆಚ್ಚು ಬಾಳಿಕೆ ಬಾರದೆ ಬೇಗ ನಶಿಸಿ ಹೋಗುತ್ತವೆ. ಆದ್ದರಿಂದ ಮಕ್ಕಳು ತಮಗೆ ನೀಡುವ ಸೌಲಭ್ಯದಿಂದ ವಂಚಿತಗೊಂಡು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟ ಪ್ರಸಂಗಗಳು ಎದರಾಗಿವೆ ಎಂದು ತಿಳಿದು ಬಂದಿದೆ. ಅಂದಹಾಗೆ ಸರ್ಕಾರದಿಂದ ವಿತರಿಸುವ ಉಚಿತ ಸೈಕಲ್‌ಗಳನ್ನು ಪರಿಣಾಮ ಕಾರಿಯಾಗಿ ಹೆಚ್ಚು ಬಾಳಿಕೆ ಬರುವಂತಹ ಸೈಕಲ್ಗಳನ್ನು ವಿತರಿಸಿದಾಗ ಶಾಲೆಗೆ ಬರುವ ಮಕ್ಕಳು ಉತ್ಸಹದಿಂದ ತಪ್ಪಿಸದೆ ದಿನಾಲು ಬರುತ್ತವೆ. ಈ ಹಿನ್ನೆಲೆಯಲ್ಲಿ ಶಾಲೆಗಳಿಗೆ ಸರ್ಕಾರದಿಂದ ವಿತರಣೆಯಾಗುವ ಸೈಕಲ್‌ಗಳು ಇನ್ನೂ ಗುಣಮಟ್ಟದಿಂದ ಕೋಡಿರಬೇಕಾದ ಅವಶ್ಯಕತೆಯಿದೆ ಎಂದು ಹೇಳಲಾಗಿದೆ.

ಕೊಷ್ಟಕ–೪. ಶಾಲೆಯಲ್ಲಿ ಲಭ್ಯವಿರುವ ಕಾರ್ಯಕ್ರಮಗಳ ವಿವರ

	ಉಪ ಸೂಚಕಗಳು	ಕೊಪ್ಪಳ ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಳ್ಳಾರಿ ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ರಾಯಚೂರು ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಈ ಕೆಳಗಿನ ಯಾವ ಕಾರ್ಯಕ್ರಮಗಳು ನಿಮ್ಮ ಶಾಲೆಯಲ್ಲಿ ಲಭ್ಯವಿರುತ್ತವೆ	ಮದ್ಯಾಹ್ನದ ಬಿಸಿ ಊಟ	–	–	–	–	–	–
	ಉಚಿತ ಪುಸ್ತಕ ಮತ್ತು ಬಟ್ಟೆ ವಿತರಣೆ	–	–	–	–	–	–
	ವಿದ್ಯಾರ್ಥಿ ವೇತನಗಳು	–	–	–	–	–	–
	ಮೇಲಿನ ಎಲ್ಲಾ	೫	೧೦೦	೫	೧೦೦	೫	೧೦೦
ಒಟ್ಟು		೫	೧೦೦	೫	೧೦೦	೫	೧೦೦

ಮಾಹಿತಿ ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಗ್ರಾಮಗಳಲ್ಲಿರುವ ಒಟ್ಟಾರೆ ಕಾರ್ಯಕ್ರಮಗಳ ವಿವರವನ್ನು ನೀಡಲಾಗಿದೆ. ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟು ಶಾಲೆಯಲ್ಲಿ ಮದ್ಯಾಹ್ನದ ಬಿಸಿಯೂಟ, ಉಚಿತ ಪಠ್ಯ ಪುಸ್ತಕ ಹಾಗೂ ಬಟ್ಟೆ ವಿತರಣೆ, ಮತ್ತು ವಿವಿಧ ವಿದ್ಯಾರ್ಥಿ ವೇತನಗಳನ್ನು ಸಹ ನೀಡಲಾಗುತ್ತದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟು ಶಾಲೆಯಲ್ಲಿ ಮದ್ಯಾಹ್ನದ ಬಿಸಿಯೂಟ, ಉಚಿತ ಪಠ್ಯ ಪುಸ್ತಕ ಹಾಗೂ ಬಟ್ಟೆ ವಿತರಣೆ, ಮತ್ತು ವಿವಿಧ ವಿದ್ಯಾರ್ಥಿ ವೇತನಗಳನ್ನು ಸಹ ನೀಡಲಾಗುತ್ತದೆ ಎಂದು ಹೇಳಿಕೊಂಡಿದ್ದಾರೆ. ರಾಯಚೂರು ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟು ಶಾಲೆಯಲ್ಲಿ ಮದ್ಯಾಹ್ನದ ಬಿಸಿಯೂಟ, ಉಚಿತ ಪಠ್ಯ ಪುಸ್ತಕ ಹಾಗೂ ಬಟ್ಟೆ ವಿತರಣೆ, ಮತ್ತು ವಿವಿಧ ವಿದ್ಯಾರ್ಥಿ ವೇತನಗಳನ್ನು ಸಹ ನೀಡಲಾಗುತ್ತದೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಮೂರು ಜಿಲ್ಲೆ ಗ್ರಾಮಗಳ ಶಾಲೆಯ ಶಿಕ್ಷಕರು ತಮ್ಮ ತಮ್ಮ ಶಾಲೆಯಲ್ಲಿ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳು ನಿಯಮಿತವಾಗಿ ಬಂದರೂ ಅವಗಳ ಬಳಕೆಯು ಸರಿಸುಮಾರು ಸಮನಾಂತರವಾಗಿ ಆದರೂ ಅವುಗಳ ಬಳಕೆಯಲ್ಲಿ ಮಾತ್ರ ಪಾಲಕರಲ್ಲಿ ಸಮರ್ಥವಾಗಿ ಆಗುತ್ತಿಲ್ಲ ಎಂದು ಹೇಳಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಆದರೆ ಸೌಲಭ್ಯಗಳಿಂದ ವಂಚಿತಗೊಳ್ಳುವಲ್ಲಿ ಕೊಪ್ಪಳ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳು ಸಮರ್ಥವಾಗಿ ಬಳಕೆ ಮಾಡಿಕೊಂಡು ಮಕ್ಕಳಿಗೆ ಅಕ್ಷರವನ್ನು ಕಲಿಸುವಲ್ಲಿ ಸಾಪೇಕ್ಷವಾಗಿ ಯಶಸ್ವಿಗೊಂಡಿದ್ದಾರೆ ಎಂದು ಹೇಳಲಾಗಿದೆ. ಆದರೆ ಕೊಪ್ಪಳ ಜಿಲ್ಲೆಯ ಪಾಲಕರು ಮೂಲಭೂತ ಸೌಲಭ್ಯವನ್ನು ಪಡೆಯದೆ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ವಿಫಲಗೊಂಡಿದ್ದು ಅಭಿವೃದ್ಧಿಯನ್ನು ಕಾಣದೇ ದುಃಸ್ಥಿತಿಯನ್ನು ಅನುಭವಿಸಿದ್ದಾರೆ ಎಂದು ತಿಳಿದು ಬಂದಿದೆ. ಅಲ್ಲದೇ, ಮೂರು ಜಿಲ್ಲೆಯಲ್ಲಿ ಬಿಸಿ ಊಟದ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಅತೃಪ್ತಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಈ ನಿಟ್ಟಿನಲ್ಲಿ ಶಾಲೆಯ ಮೇಲುಸ್ತುವಾರಿ ಸಮಿತಿಯ ಸದಸ್ಯರು ಸರಿಯಾದ ರೀತಿಯಲ್ಲಿ ಪರಿಗಣಿಸಿ ರಾಜ್ಯ ಸರ್ಕಾರಕ್ಕೆ ಬೆಂಬಲಿಸುವುದರೊಂದಿಗೆ ವಿಶೇಷವೆಂದು ಪರಿಗಣಿಸಿ ಅತೃಪ್ತಿಯನ್ನು ಹೊಂದಿರುವ ಶಾಲೆಯಲ್ಲಿ ಉತ್ತಮ ರೀತಿಯ ಬಿಸಿ ಊಟವನ್ನು ಕೊಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೆ ಮಕ್ಕಳ ಬದುಕನ್ನು ರೂಪಿಸುವುದರ ಮೂಲಕ ದುಃಸ್ಥಿತಿಯಿಂದ ಅಭಿವೃದ್ಧಿಯನ್ನು ಮಾಡುವ ಅವಶ್ಯಕತೆ ಇದೆ ಎಂದು ಹೇಳಬಹುದಾಗಿದೆ.

ಕೋಷ್ಟಕ–೫. ಶಾಲೆಯ ಮಕ್ಕಳ ನಿರಂತರ ಕಲಿಕೆಗಾಗಿ ಇರುವ ಹಂತಗಳ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಶಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ನಿರಂತರ ಮಕ್ಕಳ ಹಾಜರಾತಿಗಾಗಿ ನೀವು ತೆಗೆದುಕೊಂಡ ಹಂತಗಳು ಯಾವುವು?	ದಾಖಲಾತಿ ಆಂದೋಲನ	–	–	೩	೬೦	೧	೨೦
	ಪಾಲಕರ ಮತ್ತು ಮಕ್ಕಳ ಮನ ಒಲೈಕೆ	೫	೧೦೦	೨	೪೦	೪	೮೦
	ಒಟ್ಟು	೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಗ್ರಾಮಗಳಲ್ಲಿ ಶಾಲೆಯನ್ನು ಬಿಟ್ಟ ಮಕ್ಕಳ ಹಾಜರಾತಿಗಾಗಿ ಏನ್ನನ್ನ ಮಾಡುತ್ತಾರೆ ಎಂಬುದರ ವಿವರವನ್ನು ನೀಡಲಾಗಿದೆ. ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟು ಶಾಲೆಯಲ್ಲಿ ಮಕ್ಕಳ ಹಾಜರಾತಿಗಾಗಿ ಪಾಲಕರ ಮತ್ತು ಮಕ್ಕಳ ಮನ ಓಲೈಕೆ ಮಾಡಲಾಗುತ್ತದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಹಾಜರಾತಿಗಾಗಿ ದಾಖಲಾತಿ ಆಂದೋಲನವನ್ನು ಮಾಡಲಾಗುತ್ತದೆ ಎಂದಿದ್ದಾರೆ. ಅದೇತರಹ ಶೇ. ೪೦.೦೦ರಷ್ಟು ಶಾಲೆಯಲ್ಲಿ ಮಕ್ಕಳ ಹಾಜರಾತಿಗಾಗಿ ಪಾಲಕರ ಮತ್ತು ಮಕ್ಕಳ ಮನ ಓಲೈಕೆ ಮಾಡಲಾಗುತ್ತದೆ ಎಂದು ಹೇಳಿಕೊಂಡಿದ್ದಾರೆ. ಹಾಗೆಯೇ, ರಾಯಚೂರು ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೦.೦೦ರಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಹಾಜರಾತಿಗಾಗಿ ದಾಖಲಾತಿ ಆಂದೋಲನವನ್ನು ಮಾಡಲಾಗುತ್ತದೆ ಎಂದಿದ್ದಾರೆ. ಅದೇತರಹ ಶೇ. ೮೦.೦೦ರಷ್ಟು ಶಾಲೆಯಲ್ಲಿ ಮಕ್ಕಳ ಹಾಜರಾತಿಗಾಗಿ ಪಾಲಕರ ಮತ್ತು ಮಕ್ಕಳ ಮನ ಓಲೈಕೆ ಮಾಡಲಾಗುತ್ತದೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಬಳ್ಳಾರಿ ಮತ್ತು ರಾಯಚೂರಿನ ಶಿಕ್ಷರಿಗಿಂತ ಕೊಪ್ಪಳ ಜಿಲ್ಲೆಯಲ್ಲಿನ ಶಾಲೆಗಳ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಶಾಲೆಗೆ ಕರೆ ತರಲು ಬೇರೆ ಎರಡು ಜಿಲ್ಲೆಗಳಿಗಿಂತ ಉತ್ತಮ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಆದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸರ್ಕಾರದಿಂದ ವಿವಿಧ ಯೋಜನೆಗಳು ಇದ್ದರೂ, ಪಾಲಕರು ಶಾಲೆಯಿಂದ ಮಕ್ಕಳನ್ನು ಬಿಡಿಸುತ್ತಾರೆ ಕಾರಣ ಮನೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ತೊಂದರಂಗಳಿಂದ ಇಂತಹ ಒಂದು ಸಂದರ್ಭದಲ್ಲಿ ಮಕ್ಕಳಿಗೆ ಮತ್ತು ಪಾಲಕರಿಗೆ ತಿಳಿಸುವ ಮೂಲಕ ಅವರನ್ನು ಶಾಲೆಗೆ ಕರೆ ತರಲು ಇಂತಹ ಹಲವು ವಿಧಾನಗಳನ್ನು ತಮ್ಮ ಶಾಲೆಯಲ್ಲಿ ಅಳವಡಿಸಿಕೊಂಡಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಹಾಗಾಗಿ ಮೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗಳಿದ್ದು ಅವುಗಳಿಗೆ ಪೂರಕವಾದ ಶಿಕ್ಷಕರ ಕೊರತೆಯಿಂದ ತನ್ನ ಗುರಿಯನ್ನು ಮುಟ್ಟಲು ಸಾಧ್ಯವಾಗದೆ ದುಃಸ್ಥಿತಿಯನ್ನು ಅನುಭವಿಸು ವಂತಾಗಿದೆ ಇಂತಹ ಒಂದು ಪರಿಣಾಮವನ್ನು ಸಮಾಲೋಚಿಸಿ ಉತ್ತಮ ಪರಿಹಾರವನ್ನು ನೀಡುವ ತುರ್ತು ಅಗತ್ಯವಿದೆ ಎಂದು ತಿಳಿದುಬಂದಿದೆ.

ಕೊಷ್ಟಕ–೬. ಮೂಲಭೂತ ಸೌಲಭ್ಯಗಳಲ್ಲಿ (ಕಪ್ಪು ಹಲಿಗೆ)ಯ ವಿವರ

ಸೂಚಕಗಳು	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಶಾಲೆಯಲ್ಲಿ ಕಪ್ಪು ಹಲಗೆಯಾ	ಗೋಡೆ	೪	೮೦	೫	೧೦೦	೫	೧೦೦
	ಸುರುಳಿ ಹಲಗೆ	೧	೨೦	–	–	–	–
ಒಟ್ಟು		೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಗ್ರಾಮಗಳ ಶಾಲೆಯಲ್ಲಿ ಬರೆಯಲು ಬಳಸುವ ವಿಧಾನದ ವಿವರವನ್ನು ನೀಡಲಾಗಿದೆ. ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ

ಪಾಠವನ್ನು ಮಾಡುವ ಸಂದರ್ಭದಲ್ಲಿ ಶೇ. ೧೦೦ರಷ್ಟು ಶೇ. ೮೦.೦೦ರಷ್ಟು ಶಿಕ್ಷಕರು ಬರವಣಿಗಾಗಿ ಗೋಡೆಯನ್ನು ಬಳಸುತ್ತಾರೆ ಎಂದು ಹೇಳಲಾಗಿದೆ. ಅಲ್ಲದೇ, ಶೇ. ೨೦.೦೦ರಷ್ಟು ಶಿಕ್ಷಕರು ಸುರುಳಿ ಹಲಗೆಯನ್ನು ಬಳಸುತ್ತಾರೆ ಎಂದು ಹೇಳಲಾಗಿದೆ. ಅದರಂತೆ, ಬಳ್ಳಾರಿ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ ಪಾಠವನ್ನು ಮಾಡುವ ಸಂದರ್ಭದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೦೦.೦೦ರಷ್ಟು ಶಿಕ್ಷಕರು ಬರವಣಿಗಾಗಿ ಗೋಡೆಯನ್ನು ಬಳಸುತ್ತಾರೆ ಎಂದು ಹೇಳಲಾಗಿದೆ. ಹಾಗೆಯೇ, ರಾಯಚೂರು ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ ಪಾಠವನ್ನು ಮಾಡುವ ಸಂದರ್ಭದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೦೦.೦೦ರಷ್ಟು ಶಿಕ್ಷಕರು ಬರವಣಿಗಾಗಿ ಗೋಡೆಯನ್ನು ಬಳಸುತ್ತಾರೆ ಎಂದು ಹೇಳಲಾಗಿದೆ.

ಒಟ್ಟಾರೆಯಾಗಿ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆ ಗ್ರಾಮಗಳ ಶಿಕ್ಷಕರಿಗಿಂತ ಕೊಪ್ಪಳ ಜಿಲ್ಲೆ ಗ್ರಾಮಗಳ ಶಿಕ್ಷಕರು ಮಾತ್ರ ಸುರುಳಿ ಹಲಗೆಯನ್ನು ಬಳಸುವುದನ್ನು ನೋಡಲಾಗಿದೆ. ಅಂದರೆ, ಇಲ್ಲಿ ಗಮನಿಸಬಹುದಾದ ಸಂಗತಿಯೆಂದರೆ, ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಗಳಲ್ಲಿ ಇನ್ನೂ ಸುರುಳಿ ಹಲಗೆಯನ್ನು ಬಳಸುವುದನ್ನು ನೋಡಿದಾಗ ಅಲ್ಲಿಯಾ ಪಾಠ ಶಾಲೆಗಳು ತುಂಬ ದುಃಸ್ಥಿತಿಯನ್ನು ಅನುಭವಿಸುತ್ತಿವೆ ಎಂದು ತಿಳಿದು ಬಂದಿದೆ. ಇವತ್ತಿನ ದಿನಮಾನಗಳಲ್ಲಿ ಇಂತಹ ಒಂದು ವಾತವರಣದಿಂದ ಮುಕ್ತಿಗೊಳಿಸಲು ವಿಶೇಷವಾದ ಸ್ಥಾನಮಾನವನ್ನು ನೀಡುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೭. ಮೂಲಭೂತ ಸೌಲಭ್ಯ(ಕುಳಿತುಕೊಳ್ಳಲುಯಿರುವ ಆಸನ)ಗಳ ವಿವರ

	ಉಪ ಸೂಚಕಗಳು	ಕೊಪ್ಪಳ ಗೊಂಡಬಾಳು, ಹ್ಯಾಟಿ, ಓಂದೋಗಿ, ಕಾತರಕಿ, ಹಿರೆಬಗನಾಳ್		ಬಳ್ಳಾರಿ ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ರಾಯಚೂರು ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವವಿನಬಾವಿ, ಸಂತೆಕಲ್ಲೂರು	
ಕುಳಿತುಕೊಳ್ಳಲು ಆಸನದ ವ್ಯವಸ್ಥೆ	ನೆಲದ ಮೇಲೆ	೩	೬೦	೧	೨೦	೨	೪೦
	ಬೆಂಚು	೨	೪೦	೪	೮೦	೩	೬೦
	ಒಟ್ಟು	೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನು ನೋಡಿದಾಗ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ ಕೂರಲು ಬಳಸುವ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ ಕೂರಲು ಶೇ. ೧೦೦ರಷ್ಟು ಶೇ. ೬೦.೦೦ರಷ್ಟು ಶಿಕ್ಷಕರು ನೆಲದ ಮೇಲೆ ಬಳಸಲಾಗುತ್ತದೆ ಎಂದು ಹೇಳಲಾಗಿದೆ. ಇನ್ನೂಳಿದ, ಶೇ. ೪೦.೦೦ರಷ್ಟು ಮಕ್ಕಳು ಬೆಂಚಿಯ ಮೇಲೆ ಕೂರಲಾಗುತ್ತದೆ ಎಂದು ಹೇಳಲಾಗಿದೆ. ಅದರಂತೆ, ಬಳ್ಳಾರಿ ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ ಕೂರಲು ಶೇ. ೧೦೦ರಷ್ಟು ಶೇ. ೨೦.೦೦ರಷ್ಟು ಶಿಕ್ಷಕರು ನೆಲದ ಮೇಲೆ ಬಳಸಲಾಗುತ್ತದೆ ಎಂದು ಹೇಳಲಾಗಿದೆ. ಇನ್ನೂಳಿದ, ಶೇ. ೮೦.೦೦ರಷ್ಟು ಮಕ್ಕಳು ಬೆಂಚಿಯ ಮೇಲೆ ಕೂರಲಾಗುತ್ತದೆ ಎಂದು ಹೇಳಲಾಗಿದೆ. ಹಾಗೆಯೇ, ರಾಯಚೂರು ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಮಕ್ಕಳಿಗೆ ಕೂರಲು ಶೇ. ೧೦೦ರಷ್ಟು ಶೇ. ೪೦.೦೦ರಷ್ಟು ಶಿಕ್ಷಕರು ನೆಲದ ಮೇಲೆ ಬಳಸಲಾಗುತ್ತದೆ ಎಂದು ಹೇಳಲಾಗಿದೆ. ಇನ್ನೂಳಿದ, ಶೇ. ೬೦.೦೦ರಷ್ಟು ಮಕ್ಕಳು ಬೆಂಚಿಯ ಮೇಲೆ ಕೂರಲಾಗುತ್ತದೆ ಎಂದು ಹೇಳಲಾಗಿದೆ.

ಒಟ್ಟಾರೆಯಾಗಿ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ಗ್ರಾಮಗಳ ಶಾಲೆಗಿಂತ ಕೊಪ್ಪಳ ಜಿಲ್ಲೆಯ ಗ್ರಾಮಗಳಲ್ಲಿರುವ ಶಾಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಾಲೆಯಲ್ಲಿ ಮಕ್ಕಳು ನೆಲದ ಮೇಲೆ ಕೂರುವ ಸೌಲಭ್ಯವಿದೆ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಶಾಲೆಯ ಅಭಿವೃದ್ಧಿಯಲ್ಲಿ ಸಾಮಾನ್ಯ ಸಂಗತಿಯಾದ ಶಾಲೆಗೆ ನೀಡಲಾದ ಪೀಠೋಪಕರಣಗಳ ಸೌಲಭ್ಯಗಳು ಒಂದು. ಇಂತಹ ಹಲವಾರು ಸಂಗತಿಗಳಿಂದ ಕೊಪ್ಪಳದಲ್ಲಿರುವ ಶಾಲೆಗಳು ಕೊರತೆಯನ್ನು ಅನುಭವಿಸುತ್ತಿವೆ. ಇಂತಹ ಒಂದು ಸ್ಥಿತಿಯಿಂದ ದುಃಸ್ಥಿತಿಯನ್ನು ನೋಡಲಾಗಿದೆ. ಹಾಗಾಗಿ, ಇನ್ನೂಳಿದ ಎರಡು ಜಿಲ್ಲೆಗಳಿಗೆ ಇರುವಂತಹ ಸಮರ್ಥ ಸೌಲಭ್ಯಗಳನ್ನು ಕೊಪ್ಪಳ ಜಿಲ್ಲೆಗೂ ವಿಸ್ತರಿಸುವಂತೆ ಮಾಡಿದಾಗ ಮಾತ್ರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ ಇರುವ ಜಿಲ್ಲೆಗೂ ಕೊಡಬೇಕಾದ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೮. ಮೂಲಭೂತ ಸೌಲಭ್ಯಗಳಲ್ಲಿ (ಪೀಠೋಪಕರಣಗಳ) ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಶಾಲಾ ಸಿಬ್ಬಂದಿಯ ಪೀಠೋಪ ಕರಣಗಳು	ಕುರ್ಚಿಗಳು, ಟೇಬಲ್, ಅಲ್ಮಾರ್	೫	೧೦೦	೫	೧೦೦	೫	೧೦೦
	ಯಾವುದು ಇಲ್ಲಾ	–	–	–	–	–	–
ಒಟ್ಟು		೫	೧೦೦	೫	೧೦೦	೫	೧೦೦

ಮಾಹಿತಿ ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲೆಯ ಗ್ರಾಮಗಳ ಶಾಲೆಯಲ್ಲಿರುವ **ಪೀಠೋಪಕರಣಗಳ ಅನುಕೂಲತೆಯ** ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೦೦ರಷ್ಟು ತಮ್ಮಲ್ಲಿ ಶಾಲಾ ಪೀಠೋಪಕರಣಗಳು ಇವೆ ಎಂದು ಹೇಳಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೧೦೦ ರಷ್ಟರಲ್ಲಿ ೧೦೦ರಷ್ಟು ಅಲ್ಲಿಯೂ ಪೀಠೋಪಕರಣಗಳನ್ನು ಹೊಂದಿದ್ದಾರೆ ಎನ್ನಲಾಗಿದೆ. ಕೊನೆಯದಾಗಿ, ರಾಯಚೂರು ಜಿಲ್ಲೆಯಲ್ಲಿ ಸಹ ಶೇ. ೧೦೦ರಷ್ಟು ತಮ್ಮಲ್ಲಿ ಶಾಲಾ ಪೀಠೋಪಕರಣ ಗಳು ಇವೆ ಎಂದು ಹೇಳಿದ್ದಾರೆ.

ಒಟ್ಟಾರೆಯಾಗಿ, ಮೂರು ಜಿಲ್ಲೆಯನ್ನು ನೋಡಿದಾಗ ಸರ್ಕಾರದಿಂದ ಸಿಗುವ ಸೌಲಭ್ಯಗಳಲ್ಲಿ ಪೀಠೋಪಕರಣಗಳು ಶಾಲೆಗಳಿಗೆ ಸಿಕ್ಕಿವೆ ಎಂದು ತಿಳಿದು ಬಂದಿದೆ. ಆದರೆ, ಇಲ್ಲಿ ಗಮನಿಸ ಬೇಕಾದ ಸಂಗತಿಯೆಂದರೆ, ಮೂರು ಜಿಲ್ಲೆಯಲ್ಲಿ ಪೀಠೋಪಕರಣಗಳು ಸೌಲಭ್ಯ ಇದ್ದರೆ ಮಾತ್ರ ಮಕ್ಕಳ ಅಕ್ಷರ ಅಭಿವೃದ್ಧಿಯನ್ನು ಕಾಣುವುದಿಲ್ಲ. ಮೂರು ಜಿಲ್ಲೆಯ ಶಾಲಾ ವಿದ್ಯಾರ್ಥಿಗಳನ್ನು ನೋಡಿದಾಗ ಎಲ್ಲಾರಿಗೂ ಸರಿಯಾದ ಅಕ್ಷರ ಅಭ್ಯಾಸವಿಲ್ಲದೆ ಶಾಲೆಯಿಂದ ಹೊರಗುಳಿದು ಅವರ ಕುಟುಂಬಗಳು ದುಃಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಕೊನೆಯದಾಗಿ, ಶಾಲೆಯಲ್ಲಿ ಮಕ್ಕಳಿಗೆ ಅಕ್ಷರವು ಎಷ್ಟು ಮುಖ್ಯವೋ ಅಷ್ಟೇ ಶಾಲೆಗೆ ಮೂಲಸೌಕರ್ಯಗಳ ಬಳಕೆಯು ಆ

ಶಾಲೆಯ ಬೆಳವಣಿಗೆಗೆ ಮುಖ್ಯ ತಿಳಿದು ಬಂದಿದೆ. ಆದರೂ ಸಹ ಆಯಾಯ ಶಾಲೆಯಲ್ಲಿ ಪೀಠೋಪಕರಣಗಳ ಸಂಪೂರ್ಣ ಬಳಕೆಯಲ್ಲಿದೆಯೋ ಹಾಗೆಯೇ, ಶಿಕ್ಷಕರು ವಿದ್ಯಾರ್ಥಿಗಳನ್ನ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆ ತರಲು ಸಂಪೂರ್ಣವಾಗಿ ಸೇರಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೯. ಮೂಲಭೂತ ಸೌಲಭ್ಯಗಳಲ್ಲಿ (ಚಿತ್ರಪಟಗಳ) ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಶಾಲೆಯಲ್ಲಿ ಚಿತ್ರಪಟಗಳು	ರಾಷ್ಟ್ರ ನಾಯಕರು	೨	೪೦	೪	೮೦	೩	೬೦
	ಗಣಿತಕ್ಕೆ ಸಂಬಂಧಿಸಿದ	೩	೬೦	೧	೨೦	೨	೪೦
ಒಟ್ಟು		೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲೆಯ ಗ್ರಾಮಗಳ ಶಾಲೆಯಲ್ಲಿರುವ ಶಾಲೆಯಲ್ಲಿ ಚಿತ್ರಪಟಗಳ ಮೂಲಕ ಶಾಲೆಯ ಬೆಳವಣಿಗೆಯ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೦.೦೦ರಷ್ಟು ತಮ್ಮಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆಗಾಗಿ ಶಾಲೆಯಲ್ಲಿ ರಾಷ್ಟ್ರ ನಾಯಕರ ಚಿತ್ರಪಟಗಳನ್ನ ಹಾಕಲಾಗಿದೆ ಎಂದು ಹೇಳಿದ್ದಾರೆ. ಮತ್ತು ಶೇ. ೬೦.೦೦ರಷ್ಟು ಶಿಕ್ಷಕರು ಮಕ್ಕಳ ನೆನಪಿನ ಶಕ್ತಿಗಾಗಿ ಶಾಲೆಯಲ್ಲಿ ಗಣಿತಕ್ಕೆ ಸಂಬಂಧಿಸಿದ ಚಿತ್ರಪಟಗಳನ್ನು ಹಾಕಲಾಗಿದೆ ಎಂದು ಹೇಳಲಾಗಿದೆ. ಅದರಂತೆ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೮೦.೦೦ರಷ್ಟು ಶಾಲೆಯಲ್ಲಿ ಶಿಕ್ಷಕರು ತಮ್ಮಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆಗಾಗಿ ಶಾಲೆಯಲ್ಲಿ ರಾಷ್ಟ್ರ ನಾಯಕರ ಚಿತ್ರಪಟಗಳನ್ನ ಹಾಕಲಾಗಿದೆ ಎಂದು ಹೇಳಿದ್ದಾರೆ. ಮತ್ತು ಶೇ. ೨೦.೦೦ರಷ್ಟು ಶಿಕ್ಷಕರು ಮಕ್ಕಳ ನೆನಪಿನ ಶಕ್ತಿಗಾಗಿ ಶಾಲೆಯಲ್ಲಿ ಗಣಿತಕ್ಕೆ ಸಂಬಂಧಿಸಿದ ಚಿತ್ರಪಟಗಳನ್ನು ಹಾಕಲಾಗಿದೆ ಎಂದು ಹೇಳಲಾಗಿದೆ. ಕೊನೆಯದಾಗಿ, ರಾಯಚೂರು ಜಿಲ್ಲೆಯಲ್ಲಿ ಸಹ ಶೇ. ೧೦೦ರಷ್ಟು ಶೇ.

೬೦.೦೦ರಷ್ಟು ಶಿಕ್ಷಕರು ಶಾಲೆಯಲ್ಲಿ ತಮ್ಮಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆಗಾಗಿ ಶಾಲೆಯಲ್ಲಿ ರಾಷ್ಟ್ರ ನಾಯಕರ ಚಿತ್ರಪಟಗಳನ್ನ ಹಾಕಲಾಗಿದೆ ಎಂದು ಹೇಳಿದ್ದಾರೆ. ಮತ್ತು ಶೇ. ೪೦.೦೦ರಷ್ಟು ಶಿಕ್ಷಕರು ಮಕ್ಕಳ ನೆನಪಿನ ಶಕ್ತಿಗಾಗಿ ಶಾಲೆಯಲ್ಲಿ ಗಣಿತಕ್ಕೆ ಸಂಬಂಧಿಸಿದ ಚಿತ್ರಪಟಗಳನ್ನು ಹಾಕಲಾಗಿದೆ ಎಂದು ಹೇಳಲಾಗಿದೆ.

ಒಟ್ಟಾರೆಯಾಗಿ, ಮೂರು ಜಿಲ್ಲೆಯನ್ನು ನೋಡಿದಾಗ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ಗ್ರಾಮಗಳ ಶಾಲೆಗಿಂತ ಕೊಪ್ಪಳ ಜಿಲ್ಲೆಯ ಗ್ರಾಮ ಶಾಲೆಗಳಲ್ಲಿ ಮಕ್ಕಳ ಅಭಿವೃದ್ಧಿಗಾಗಿ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗಾಗಿ ಹೆಚ್ಚಿನ ಪ್ರಮಾಣದಲ್ಲಿ ಕಲಿಕೆಯ ಸಾಮಾಗ್ರಿಗಳನ್ನ ಉಪಯೋಗಿಸಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಆದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಉತ್ತಮ ಕಲಿಕಾ ಸಾಮಾಗ್ರಗಳನ್ನು ಕೊಪ್ಪಳದ ವ್ಯಾಪ್ತಿಯಲ್ಲಿ ಅನ್ವಯಿಸಿದ್ದರೂ ಸಹ ಅಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗುಳಿದ ಮತ್ತು ಪಾಲಕರ ನಿರಾಸಕ್ತಯನ್ನು ಕಾನಲಾಗಿದೆ. ಹಾಗಾಗಿ ಇಲ್ಲಿ ಇದಕ್ಕೆ ಕಾರಣಗಳನ್ನು ನೋಡಿದಾಗ ಹೆಚ್ಚಿನ ಗ್ರಾಮಗಳಲ್ಲಿ ಪಾಲಕರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗಲು ಕೂಲಿಗಾಗಿ, ಮನೆಯಲ್ಲಿ ಹಿರಿಯರಿಗೆ ಆನಾರೋಗ್ಯದ ತೊಂದರೆಯಿಂದ ಮಕ್ಕಳನ್ನು ಶಾಲೆಯನ್ನು ಮಧ್ಯದಲ್ಲಿಯೇ ಹೆಚ್ಚಿನ ದಿನಗಳು ಬಿಡಿಸುವುದು ಇಂತಹ ಹಲವು ಕಾರಣಗಳಿಂದ ಕೊಪ್ಪಳ ಜಿಲ್ಲೆಯು ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದಾಗ ದುಃಸ್ಥಿತಿಯನ್ನು ಅನುಭವಿಸುತ್ತಿದೆ ಎಂದ ತಿಳಿದುಬಂದಿದೆ. ಇಂತಹ ಅನೇಕ ಕಾರಣಗಳಿಂದ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳು ಸಹ ಇಂತಹ ಒಂದು ಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ಕಾಣಲಾಗಿದೆ. ಮುಂದುವರಿದು ಇಂತಹ ಸಮಸ್ಯೆಗಳನ್ನು ನೋಡಿಕೊಂಡು ಅದಕ್ಕೆ ಸಮರ್ಥವಾದ ಮಾರ್ಗೋಪಯಗಳನ್ನು ನೀಡಬೇಕಾದ ತುರ್ತು ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೊಷ್ಟಕ-೧೦. ಮೂಲಭೂತ ಸೌಲಭ್ಯಗಳಲ್ಲಿ (ಆಟದ ಮೈದಾನ) ವಿವರ

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಆಟದ ಮೈದಾನ ಇದೆಯಾ ?	ಇದೆ	೨	೪೦	೧	೨೦	೪	೮೦
	ಇಲ್ಲಾ	೩	೬೦	೪	೮೦	೧	೨೦
	ಒಟ್ಟು	೫	೧೦೦	೫	೧೦೦	೫	೧೦೦

ಮಾಹಿತಿ ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲೆಯ ಗ್ರಾಮಗಳಲ್ಲಿರುವ ಶಾಲೆಗಳಿಗೆ ಆಟದ ಮೈದಾನ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೦.೦೦ರಷ್ಟು ತಮ್ಮಲ್ಲಿ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಶಾಲೆಯಲ್ಲಿ ಆಟದ ಮೈದಾನವು ಇದೆ ಎಂದು ಹೇಳಿದ್ದಾರೆ. ಮತ್ತು ಶೇ. ೬೦.೦೦ರಷ್ಟು ಶಿಕ್ಷಕರು ತಮ್ಮ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಆಟದ ಮೈದಾನವನ್ನು ಕಲ್ಪಿಸಲಾಗಿದೆ ಎಂದಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೦.೦೦ರಷ್ಟು ತಮ್ಮಲ್ಲಿ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಶಾಲೆಯಲ್ಲಿ ಆಟದ ಮೈದಾನವು ಇದೆ ಎಂದು ಹೇಳಿದ್ದಾರೆ. ಮತ್ತು ಶೇ. ೮೦.೦೦ರಷ್ಟು ಶಿಕ್ಷಕರು ತಮ್ಮ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಆಟದ ಮೈದಾನವನ್ನು ಕಲ್ಪಿಸಲಾಗಿದೆ ಎಂದಿದ್ದಾರೆ. ಕೊನೆಯದಾಗಿ, ರಾಯಚೂರು ಜಿಲ್ಲೆಯಲ್ಲಿ ಸಹ ಶೇ. ೮೦.೦೦ರಷ್ಟು ತಮ್ಮಲ್ಲಿ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಶಾಲೆಯಲ್ಲಿ ಆಟದ ಮೈದಾನವು ಇದೆ ಎಂದು ಹೇಳಿದ್ದಾರೆ. ಮತ್ತು ಶೇ. ೨೦.೦೦ರಷ್ಟು ಶಿಕ್ಷಕರು ತಮ್ಮ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಆಟದ ಮೈದಾನವನ್ನು ಕಲ್ಪಿಸಲಾಗಿದೆ ಎಂದಿದ್ದಾರೆ.

ಒಟ್ಟಾರೆಯಾಗಿ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆ ಗ್ರಾಮಗಳ ಶಾಲೆಗಳಿಂತ ರಾಯಚೂರು ಜಿಲ್ಲೆ ಗ್ರಾಮಗಳ ಶಾಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಮಕ್ಕಳ ದೈಹಿಕ ಬೆಳವಣಿಗೆಗಾಗಿ ಆಟದ ಮೈದಾನವನ್ನು ಕಲ್ಪಿಸಿದ್ದಾರೆ ಎಂದು ತಿಳಿದು ಬಂದಿದೆ. ಆದರೆ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಗ್ರಾಮಗಳು ಆಟದ ಮೈದಾನದ ಕೊರತೆಯನ್ನು ಹೆಚ್ಚಾಗಿ ಇರುವುದನ್ನ ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮಕ್ಕಳ

ದೈಹಿಕವಾಗಿ ಸದೃಢರಾಗಿ ಬೆಳಸಬೇಕಾದರೆ ಪಾಠದ ಜೊತೆಗೆ ಆಟದ ಮೈದಾನವು ಮುಖ್ಯವೆಂದು ಕಂಡುಕೊಳ್ಳಲಾಗಿದೆ. ಇಂತಹ ಒಂದು ಸಂದರ್ಭವನ್ನು ನೋಡಿದಾಗ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ನೋಡಿದಾಗ ಶಾಲೆಗೆ ಹೆಚ್ಚಿನ ಜಾಗ ಇರದೆ ಮತ್ತು ಅದಕ್ಕೆ ಪೂರಜವಾಗಿ ಊರಿನ ಯಜಮಾನರು ಸ್ಪಂಧಿಸದೆ ಮಕ್ಕಳ ದೈಹಿಕ ಬೆಳವಣೆಗೆಗಾಗಿ ಆಟದ ಮೈದಾನವನ್ನು ಕಲಿಸಲಾಗಿಲ್ಲ ಎಂದಿದ್ದಾರೆ. ಕೊನೆಯದಾಗಿ, ಇಂತಹ ವಿಷಯವನ್ನು ಪರಿಣಾಮಕಾರಿಯಾಗಿ ಶಿಕ್ಷಕರು ಪರಿಗಣಿಸಿ ಸರ್ಕಾರಕ್ಕೆ ಸೂಕ್ತ ರೀತಿಯಲ್ಲಿ ಮಾರ್ಗದರ್ಶನವನ್ನು ಕೇಳಿಕೊಂಡು ಅವರಿಗೆ ತುರ್ತಾಗಿ ಮಕ್ಕಳ ಬೆಳವಣೆಗೆಯ ಒಂದು ಸಾಧನವಾದ ಆಟದ ಮೈದಾನವನ್ನು ಕಲ್ಪಿಸುವ ಅಗತ್ಯತೆ ಇದೆ ಎಂದು ತಿಳಿದು ಬಂದಿದೆ.

ಕೊಷ್ಟಕ-೧೧. ಮೂಲಭೂತ ಸೌಲಭ್ಯ(ಪಠ್ಯೇತರ ಚಟುವಟಿಕೆ)ಗಳ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ, ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ, ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಪಠ್ಯೇತರ ಚಟುವಟಿಕೆಗಳು	ಪ್ರತಿಭಾ ಕಾರಂಜಿ, ಚರ್ಚಾ ಸ್ಪರ್ದೆ	೩	೬೦	೪	೮೦	೪	೮೦
	ರಸಪ್ರಶ್ನೆ ಕಾರ್ಯಕ್ರಮಗಳು	೨	೪೦	೧	೨೦	೧	೨೦
	ಒಟ್ಟು	೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಜಿಲ್ಲೆಯ ಗ್ರಾಮಗಳಲ್ಲಿರುವ ಶಾಲೆಗಳಿಗೆ ಪಠ್ಯೇತರ ಚಟುವಟಿಕೆಗಳ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೦.೦೦ರಷ್ಟು ತಮ್ಮ ಮಕ್ಕಳಿಗೆ ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಪ್ರತಿಭಾ ಕಾರಂಜಿ ಮತ್ತು ಚರ್ಚಾ ಸ್ಪರ್ದೆಗಳನ್ನು ನಡೆಸಲಾಗುತ್ತದೆ ಎಂದಿದ್ದಾರೆ. ಮತ್ತು ಶೇ. ೪೦.೦೦ರಷ್ಟು ಶಿಕ್ಷಕರು ತಮ್ಮ ಮಕ್ಕಳ ಪಠ್ಯೇತರ ಚಟುವಟಿಕೆಗಳಾದ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೮೦.೦೦ರಷ್ಟು ತಮ್ಮ ಮಕ್ಕಳಿಗೆ

ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಪ್ರತಿಭಾ ಕಾರಂಜಿ ಮತ್ತು ಚರ್ಚಾ ಸ್ಪರ್ದೆಗಳನ್ನು ನಡೆಸಲಾಗುತ್ತದೆ ಎಂದಿದ್ದಾರೆ. ಮತ್ತು ಶೇ. ೨೦.೦೦ರಷ್ಟು ಶಿಕ್ಷಕರು ತಮ್ಮ ಮಕ್ಕಳ ಪಠ್ಯೇತರ ಚಟುವಟಿಕೆಗಳಾದ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದಿದ್ದಾರೆ. ಕೊನೆಯದಾಗಿ, ರಾಯಚೂರು ಜಿಲ್ಲೆಯಲ್ಲಿ ಸಹ ಶೇ. ೮೦.೦೦ರಷ್ಟು ತಮ್ಮ ಮಕ್ಕಳಿಗೆ ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಪ್ರತಿಭಾ ಕಾರಂಜಿ ಮತ್ತು ಚರ್ಚಾ ಸ್ಪರ್ದೆಗಳನ್ನು ನಡೆಸಲಾಗುತ್ತದೆ ಎಂದಿದ್ದಾರೆ. ಮತ್ತು ಶೇ. ೨೦.೦೦ರಷ್ಟು ಶಿಕ್ಷಕರು ತಮ್ಮ ಮಕ್ಕಳ ಪಠ್ಯೇತರ ಚಟುವಟಿಕೆಗಳಾದ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೂರು ಜಿಲ್ಲೆಗಳಾದ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಊರಿನ ಶಾಲೆಗಳಿಗಿಂತ ಕೊಪ್ಪಳ ಜಿಲ್ಲೆ ಗ್ರಾಮಗಳು ಪಠ್ಯೇತರ ಚಟುವಟಿಕೆಗಳ ಪ್ರಮಾಣ ಕಡಿಮೆ ಇದೆ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಹೆಚ್ಚಿನ ಸಂಖ್ಯೆಯಲ್ಲಿ ರಸಪ್ರಶ್ನೆಗಳನ್ನು ನಡೆಸಿಕೊಡುವುದು ಕೇವಲ ಮಕ್ಕಳ ಒಂದು ಮುಖದ ಬೆಳವಣಿಗಾಗಿ ಇರುವಂತಹದ್ದು ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಆದರೆ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಗ್ರಾಮಗಳು ಮಕ್ಕಳ ಬೆಳವಣಿಗೆಗಾಗಿ ಬಹು ಆಯ್ಕೆಯಲ್ಲಿರುವ ಚಟುವಟಿಕೆಗಳನ್ನು ಜಾರಿಗೆ ತರುವುದರ ಮೂಲಕ ಮಕ್ಕಳ ಅಭಿವೃದ್ಧಿಯನ್ನು ಕಾಣಲಾಗಿದೆ. ಇಂತಹ ಒಂದು ಸಂದರ್ಭವನ್ನು ಪರಿಗಣಿಸಿ ಕೊಪ್ಪಳ ಜಿಲ್ಲೆಯ ಗ್ರಾಮಗಳ ಮಕ್ಕಳು ದುಃಸ್ಥಿತಿಯನ್ನು ಅನುಭವಿಸುತ್ತಿವೆ ಎಂದು ತಿಳಿದು ಬಂದಿದೆ. ಆದರೆ, ಕೊಪ್ಪಳ ಜಿಲ್ಲೆಯ ಗ್ರಾಮಗಳ ಶಾಲೆಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸದೆ ಇರುವುದನ್ನು ಕಾಣಲಾಗಿದೆ. ಇಂತಹ ಕಾರ್ಯಕ್ರಮಗಳಿಂದ ಪ್ರತಿ ವರ್ಷಕ್ಕೊಮ್ಮೆ ನಡೆಸುವುದರಿಂದ ಹಲವು ಮಕ್ಕಳು ಬಡತನದಿಂದ, ಶಾಲೆಗೆ ನಿಯಮಿತವಾಗಿ ಬರದೆಯಿರುವುದು ಇಂತಹ ಹಲವು ಕಾರಣಗಳಿಂದ ಶಾಲೆಗೆ ಗೈರಾಗುವುದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇವರ ಸಂಖ್ಯೆ ಹೆಚ್ಚಾಗಿರುವುದನ್ನು ಕಾಣಲಾಗಿದೆ ಎಂದು ಹೇಳಬಹುದಾಗಿದೆ. ಹಾಗಾಗಿ ಇಂತಹ ಸಂದರ್ಭವನ್ನು ಕಂಡು ಶಾಲಾ ಗುರುಗಳು ಮಕ್ಕಳ ಪೋಷಕರಿಗೆ ಸರ್ಕಾರದಿಂದ ಇರುವ ಕಾರ್ಯಕ್ರಮದ ಬಗ್ಗೆ ಹೇಳುತ್ತಾ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮದ ಸಾಧಕ ಬಾಧಕಗಳ ಬಗ್ಗೆ ತಿಳಿಸಿ ಹೇಳುವ ಅಗತ್ಯತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ-೧೨. ಮೂಲಭೂತ ಸೌಲಭ್ಯ(ಹುಡುಗಿಯರ ಶೌಚಾಲಯ)ದ ಕುರಿತು

	ಉಪ ಸೂಚಕಗಳು	ಕೊಪ್ಪಳ		ಬಳ್ಳಾರಿ		ರಾಯಚೂರು	
		ಗೊಂಡಬಾಳು, ಹ್ಯಾಟಿ, ಸಿಂದೋಗಿ, ಕಾತರಕಿ ಮತ್ತು ಹಿರೆಬಗನಾಳ್		ಬಲಕುಂದಿ, ತಾಳೂರು, ರಾರಾವಿ, ಅಚ್ಚಳ್ಳಿ ರಾವಿಹಾಳ್		ಅಂಕುಶದೊಡ್ಡಿ, ಕೈರವಾಡಗಿ, ಬೈಯಾಪುರ, ಮಾವಿನಬಾವಿ, ಸಂತೆಕಲ್ಲೂರು	
ಹುಡುಗಿಂಯರಿಗೆ ಪ್ರತ್ಯೇಕ ಶೌಚಾಲಂಯ ಇದೆಯಾ?	ಇದೆ	೨	೪೦	೧	೨೦	–	–
	ಇಲ್ಲಾ	೩	೬೦	೪	೮೦	೫	೧೦೦
	ಒಟ್ಟು	೫	೧೦೦	೫	೧೦೦	೫	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಜಿಲ್ಲೆಯ ಗ್ರಾಮಗಳಲ್ಲಿರುವ ಶಾಲೆಗಳಲ್ಲಿರುವ ಹೆಣ್ಣು ಮಕ್ಕಳಿಗಾಗಿ ಇರುವ ಪ್ರತ್ಯೇಕ ಶೌಚಾಲಯಗಳ ವಿವರವನ್ನು ತೋರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೦.೦೦ರಷ್ಟು ತಮ್ಮ ಶಾಲೆಯಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯವನ್ನು ನಿರ್ಮಿಸಲಾಗಿದೆ ಎಂದಿದ್ದಾರೆ. ಮತ್ತು ಶೇ. ೬೦.೦೦ರಷ್ಟು ಶಿಕ್ಷಕರು ತಮ್ಮ ಶಾಲೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯದ ಸೌಲಭ್ಯವನ್ನು ಕಲ್ಪಿಸಲಾಗಿಲ್ಲ ಎಂದಿದ್ದಾರೆ. ಅದರಂತೆ, ಬಳ್ಳಾರಿ ಜಿಲ್ಲೆಯಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೦.೦೦ರಷ್ಟು ತಮ್ಮ ಶಾಲೆಯಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯವನ್ನು ನಿರ್ಮಿಸಲಾಗಿದೆ ಎಂದಿದ್ದಾರೆ. ಮತ್ತು ಶೇ. ೮೦.೦೦ರಷ್ಟು ಶಿಕ್ಷಕರು ತಮ್ಮ ಶಾಲೆಯಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯದ ಸೌಲಭ್ಯವನ್ನು ಕಲ್ಪಿಸಲಾಗಿಲ್ಲ ಎಂದಿದ್ದಾರೆ. ಕೊನೆಯದಾಗಿ, ರಾಯಚೂರು ಶೇ. ೧೦೦ರಷ್ಟರಲ್ಲಿ ಶೇ. ೦೦.೦೦ರಷ್ಟು ತಮ್ಮ ಶಾಲೆಯಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯವನ್ನು ನಿರ್ಮಿಸಲಾಗಿದೆ ಎಂದಿದ್ದಾರೆ. ಮತ್ತು ಶೇ. ೧೦೦.೦೦ರಷ್ಟು ಶಿಕ್ಷಕರು ತಮ್ಮ ಶಾಲೆಯಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯದ ಸೌಲಭ್ಯವನ್ನು ಕಲ್ಪಿಸಲಾಗಿಲ್ಲ ಎಂದಿದ್ದಾರೆ.

ಒಟ್ಟಾರೆಯಾಗಿ, ಮೂರು ಜಿಲ್ಲೆಯನ್ನು ನೋಡಿದಾಗ ಸರಿಸುಮಾರು ಹೆಣ್ಣು ಮಕ್ಕಳಿಗಾಗಿ ಇರುವ ಪ್ರತ್ಯೇಕ ಶೌಚಾಲಯದ ವ್ಯವಸ್ಥೆಯು ಹೆಚ್ಚು ಕಡಿಮೆ ಒಂದೇ ತೆರನಾಗಿ ಇದೆ ಎಂದು ತಿಳಿದು ಬಂದಿದೆ. ಆದರೂ ಇದರಲ್ಲಿ ರಾಯಚೂರು ಜಿಲ್ಲೆಯ ಗ್ರಾಮಗಳ ಶಾಲೆಗಳು ಹೆಚ್ಚಿನ ಪ್ರಮಾಣದಲ್ಲಿ ಹೊಂದದೆಯಿರುವುದನ್ನು ಅಧ್ಯಯನಗಳಿಂದ ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಹೆಣ್ಣು ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯನ್ನು ಬಿಡಿಸುವುದು ಬಡತನದ ಜೊತೆಗೆ ಶಾಲೆಯಲ್ಲಿ ಸರಿಯಾದ ಮೂಲಭೂತ ಸೌಲಭ್ಯಗಳ ಕೊರತೆಯಿಂದು ಎಂದು ತಿಳಿದು ಬಂದಿದೆ. ಹಾಗಾಗಿ ಇತ್ತೀಚಿನ ದಿನಮಾನಗಳಲ್ಲಿ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸುರಕ್ಷಿತ ತಾಣವಾಗದೆ ಅದೊಂದು ಅಸುರಕ್ಷತೆಯ ತಾಣವಾಗಿದೆ ಎಂದಿದ್ದಾರೆ. ಇಂತಹ ಅಂಶವನ್ನು ಪರಿಗಣಿಸಿ ಶಾಲೆಯಲ್ಲಿ ಶಿಕ್ಷಕರ ಜೊತೆಗೆ ಸರ್ಕಾರವು ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಹೆಣ್ಣು ಮಕ್ಕಳನ್ನು ಮಧ್ಯೆದಲ್ಲಿ ಶಾಲೆಯನ್ನು ಬಿಡಿಸಿ ಅವರ ಜೀವನವನ್ನು ದುಃಸ್ಥಿತಿಗೆ ತಲುಪಿಸದೆ ಅವರಿಗೆ ಶಾಲೆಯಲ್ಲಿ ಸುರಕ್ಷಿತವಾದ ವಾತವರಣವನ್ನು ಕಲ್ಪಿಸುವಂತಹ ಅಗತ್ಯತೆ ಇದೆ ಎಂದು ತಿಳಿದು ಬಂದಿದೆ.

ಅಧ್ಯಾಯ ಆರು

ಅಧ್ಯಯನದ ಫಲಿತಗಳು ಮತ್ತು ಪರಿಹಾರೋಪಾಯಗಳು

ಅಧ್ಯಾಯ ಆರು

ಅಧ್ಯಯನದ ಫಲಿತಗಳು ಮತ್ತು ಪರಿಹಾರೋಪಾಯಗಳು

ಪ್ರಸ್ತುತ ಅಧ್ಯಯನದ ಫಲಿತಗಳು ಮತ್ತು ಫಲಿತಗಳ ಹಿನ್ನೆಲೆಯಲ್ಲಿ ರೂಪಿಸಿಕೊಂಡ ಕೆಲವು ಪರಿಹಾರೋಪಾಯಗಳನ್ನು ನೀಡಲಾಗಿದೆ.

ಮನುಕುಲದ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುವುದರಲ್ಲಿ ಶಿಕ್ಷಣವು ಮಾನವ ಅಭಿವೃದ್ಧಿಯಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿರುವ ಯಾವುದೇ ರಾಷ್ಟ್ರವು ಸುಲಭವಾಗಿಯೇ ಅಭಿವೃದ್ಧಿ ಹೊಂದುತ್ತದೆ. ಇದಕ್ಕೆ ಪೂರಕವಾಗಿ ಇಂದು ಜಗತ್ತಿನ ಅನೇಕ ಅಭಿವೃದ್ಧಿ, ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಹೆಸರಿಸಬಹುದು. ಸ್ವಾತಂತ್ರ್ಯದ ಸಾಧನ ಮತ್ತು ಸ್ವಾಭಿಮಾನದ ಸಂಕೇತವೂ ಆದ ಶಿಕ್ಷಣ, ಸಮಾಜದಲ್ಲಿ ಗೌರವ ಸ್ಥಾನಮಾನಗಳನ್ನು ತಂದುಕೊಡುತ್ತದೆ. ನಿರ್ಧಿಷ್ಟವಾಗಿ ಹೇಳಬೇಕೆಂದರೆ ಮನುಷ್ಯ ತನ್ನ ಬದುಕು ಹಾಗೂ ಜೀವನ ನಿರ್ವಾಹಣೆ ಉತ್ತಮ ಪಡಿಸಿಕೊಳ್ಳಲು ಇರುವ ಅವಕಾಶಗಳನ್ನು ಬಳಸಿಕೊಳ್ಳುವ ಆಗಾಧವಾದ ಶಕ್ತಿ ಸಾಮರ್ಥ್ಯಗಳನ್ನು ಶಿಕ್ಷಣ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಸಾಕ್ಷರತೆ ಎಂದರೆ ಸ್ವಾತಂತ್ರ್ಯ ಎಂದಿರುವ ಅಮರ್ತ್ಯಸೇನ್ ಅವರ ಮಾತು ಅರ್ಥಗರ್ಭಿತವಾಗಿದೆ.

ಶಿಕ್ಷಣದಿಂದ ಅಭಿವೃದ್ಧಿ ಎಂಬುದಕ್ಕಿಂತ ಶಿಕ್ಷಣವೇ ಅಭಿವೃದ್ಧಿ ಎಂಬ ಮಾತು ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ಇತ್ತೀಚೆಗೆ ಪ್ರಚಲಿತವಾಗಿದೆ. ಅಮರ್ತ್ಯಸೇನ್‌ರವರ ಪ್ರಕಾರ ಅಭಿವೃದ್ಧಿಯ ದೃಷ್ಟಿಯಿಂದ ಶಿಕ್ಷಣವು ಎಲ್ಲರಿಗೂ ದೊರೆಯಬೇಕಾದ ಒಂದು ಸಾಮಾಜಿಕ

ಅಗತ್ಯವಾಗಿದೆ. ಅದರಲ್ಲಿಯೂ ಪ್ರಾಥಮಿಕ ಶಿಕ್ಷಣವು ೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯವಾಗಿ ಒದಗಿಸಬೇಕೆಂಬುದು ನಮ್ಮ ಸಂವಿಧಾನದ ರಚನಾ ಪೂರ್ವದ ಆಶಯವಾಗಿರುತ್ತದೆ. ಅದರಂತೆಯೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಸಹ ನಿರಂತರವಾಗಿವೆ. ಆದರೆ ಸಮಾಜದ ಎಲ್ಲಾ ವರ್ಗದ ಜನರು ಸಮಾನವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೇ ಇಂದಿಗೂ ಶಿಕ್ಷಣದ ವಿಷಯದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಭಿನ್ನತೆಗಳು ಜೀವಂತವಾಗಿವೆ. ಹಾಗಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮತ್ತು ಪಡೆದುಕೊಳ್ಳುವ ಶಕ್ತಿ ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹೀಗೆ ಪರಿಗಣಿಸುವಾಗ ಶೈಕ್ಷಣಿಕವಾಗಿ ವಂಚಿತರಾಗಿರುವ ಗ್ರಾಮೀಣ ಮಕ್ಕಳು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಗಮನಿಸಲಾಗಿದೆ.

ಜಿಲ್ಲೆಯಲ್ಲಿರುವ ಗ್ರಾಮಗಳ ಶಾಲೆ ಅಭಿವೃದ್ಧಿಗೆ ಮತ್ತು ಅವರ ಶಾಲಾ ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಸಂವಿಧಾನದ ಮೂಲಕವೇ ಮಾಡಲಾಯಿತು. ಆದರೂ ಪಾಲಕರ ಮತ್ತು ಮಕ್ಕಳು ಶಾಲೆಯಲ್ಲಿ ಭಾಗವಹಿಸುವಿಕೆ ನಿರೀಕ್ಷಿತ ಮಟ್ಟವನ್ನು ತಲುಪಲಿಲ್ಲ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ ಅಂಶಗಳು, ಸರ್ಕಾರ ವಿವಿಧ ಇಲಾಖೆಗಳು ಮತ್ತು ಸರ್ಕಾರವೇ ನಡೆಸುತ್ತಿರುವ ಸಂಶೋಧನಾ ಸಂಸ್ಥೆಗಳು (ಎನ್.ಸಿ.ಇ.ಆರ್.ಪಿ, ಎನ್.ಐ.ಇ.ಪಿ.ಪಿ ಮತ್ತು ಡಿ.ಎಸ್.ಇ.ಆರ್.ಟಿ) ವಿವಿಧ ರಾಜ್ಯಗಳ (ಕರ್ನಾಟಕವೂ ಸೇರಿದಂತೆ) ವಾರ್ಷಿಕ ವರದಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಸಮಾಜ ವಿಜ್ಞಾನಗಳ ಸಂಶೋಧನೆಗಳು ಪ್ರಕಟಿಸಿರುವ ಪುಸ್ತಕಗಳು ಮತ್ತು ಲೇಖನಗಳೂ ಸೂಚಿಸುವ ಅಂಶವೆಂದರೆ, ಈ ಹಿನ್ನೆಲೆಯಲ್ಲಿ ಗ್ರಾಮೀಣ ಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವೇನು? ಇಲ್ಲಿ ಏನು ತಪ್ಪುಗಳಿವೆ? ಇವರ ಪಾಲಕರಲ್ಲಿ ಮನಸ್ಸಿನಲ್ಲಿ ಏನಿದೆ? ಅನುಷ್ಠಾನದಲ್ಲಿರುವ ಶಿಕ್ಷಣದ ಸೌಲಭ್ಯಗಳು ಮಕ್ಕಳಿಗೆ ತಲುಪುತ್ತಿವೆಯೇ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಹಾಗಾಗಿ ಸಾಕ್ಷರತೆಯ ಸ್ಥಿತಿ ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಮನೋಭಾವನೆ ಮತ್ತು ಮಕ್ಕಳ ಶಿಕ್ಷಣದ ಸಂಬಂಧ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿ ಹಾಗೂ ಗ್ರಾಮೀಣ ಹೆಣ್ಣು ಮಕ್ಕಳ ಶಿಕ್ಷಣದ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಈ ಮಹಾಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಆದರೆ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಂದಾಗ ಸ್ವಲ್ಪ ವ್ಯತ್ಯಾಸಗಳು ಕಾಣುತ್ತವೆ. ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪಾಲಕರು ಹೆಣ್ಣುಮಕ್ಕಳ

ಶಿಕ್ಷಣಕ್ಕೆ ಅದೇ ರೀತಿಯ ಆದ್ಯತೆಯನ್ನು ತೋರಿಸುವುದಿಲ್ಲ. ಅಂದರೆ ಪಾಲಕರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡದಿರುವುದೇ ಇಲ್ಲವೆಂದು ಅರ್ಥವಲ್ಲ. ಬಹುತೇಕವಾಗಿ ಪಾಲಕರು ತಮ್ಮ ಮಕ್ಕಳಿಗೆ ಕೊಡಿಸುವ ಶಿಕ್ಷಣವನ್ನು ಕೇವಲ ಆದಾಯವನ್ನು ಹೆಚ್ಚಿಸುವ ಒಂದು ಆರ್ಥಿಕ ಸಾಧನವನ್ನಾಗಿ ಪರಿಗಣಿಸುತ್ತಾರೆ. ಕೆಲವು ಮಂದಿ ಸರ್ಕಾರಿ ಕೆಲಸಕ್ಕೆ ಸೀಮಿತವೆಂದರೆ ಇನ್ನೂ ಕೇಲವರು ಕೂಡಪತ್ರ ಓದಲು ಮತ್ತು ಗಂಡನ ಮನೆಯಲ್ಲಿ ಮಕ್ಕಳಿಗೆ ಅಭ್ಯಾಸಿಸಲು ಹೇಳುತ್ತಾರೆ.

ಈ ದೃಷ್ಟಿಕೋನದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುವುದರಿಂದ ಹಣದ ದುಂದುವೆಚ್ಚ ವಾಗುತ್ತದೆ ಎಂಬ ಭಾವನೆ ನಾವು ಅಧ್ಯಯನಕ್ಕೊಳಪಡಿಸಿದ ಬಹುತೇಕ ಪೋಷಕರಲ್ಲಿದೆ. ಇದಕ್ಕೆ ಪೂರಕವಾಗಿ ಪೋಷಕರು ಬಹುತೇಕವಾಗಿ ಸಾಮಾಜಿಕ ಕಾರಣಗಳನ್ನು ಹೇಳುತ್ತಾರೆ. ಅವುಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಿಂದ ಅಥವಾ ಅವಳ ರಕ್ಷಣೆಯ ದೃಷ್ಟಿಯಿಂದ ನೋಡುವುದು ಮುಖ್ಯವಾಗಿದೆ. ವೃತ ಪತ್ರದ ವಿಷಯ ಅಲ್ಲದೇ ಪುರುಷರಿಗಿಂತ ಮಹಿಳೆರಿಗೆ ಉದ್ಯೋಗದ ಅವಕಾಶಗಳು ಕಡಿಮೆ ಎಂಬುದಾಗಿ ಬಹುತೇಕ ಪೋಷಕರು ಭಾವಿಸಿರುವುದರಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಮಾನ ಆಧ್ಯತೆ ಲಭಿಸುತ್ತಿಲ್ಲ. ಈ ವಿಚಾರದಲ್ಲಿ ಸಾಮಾಜಿಕವಾಗಿ ಬದಲಾವಣೆಗಳಾಗುತ್ತಿದ್ದರೂ ಹೆಣ್ಣುಮಕ್ಕಳ ಶಿಕ್ಷಣವನ್ನು ಶೈಕ್ಷಣಿಕ ಅಂಶಗಳಿಂದಾಚೆ ನೋಡಬೇಕಾದ ಅಗತ್ಯವಿದೆ. ಅದರಂತೆ ಕೇವಲ ಬೆರಳೆಣಿಕೆಯಷ್ಟು ಪೋಷಕರು ಮಾತ್ರ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಮಾನವನ ಕುಶಲತೆ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸುವದರಲ್ಲಿ ಶಿಕ್ಷಣವು ಮಾನವ ಅಭಿವೃದ್ಧಿಯಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿರುವ ಯಾವುದೇ ರಾಷ್ಟ್ರವು ಸುಲಭವಾಗಿಯೇ ಅಭಿವೃದ್ಧಿ ಹೊಂದುತ್ತದೆ. ಇದಕ್ಕೆ ಪೂರಕವಾಗಿ ಇಂದು ಜಗತ್ತಿನ ಅನೇಕ ಹಿಂದುಳಿದ ರಾಷ್ಟ್ರಗಳು ಶೈಕ್ಷಣಿಕವಾಗಿ ಹಿಂದುಳಿದಿರುವದನ್ನು ಹೇಳಬಹುದು. ಸ್ವಾತಂತ್ರ್ಯದ ಸಾಧನ ಮತ್ತು ಸ್ವಾಭಿಮಾನದ ಸಂಕೇತವೂ ಆದ ಶಿಕ್ಷಣ, ಸಮಾಜದಲ್ಲಿ ಗೌರವ ಸ್ಥಾನಮಾನಗಳನ್ನು ತಂದುಕೊಡುತ್ತದೆ. ನಿರ್ದಿಷ್ಟವಾಗಿ ಹೇಲಬೇಕೆಂದರೆ ಮನುಷ್ಯ ತನ್ನ ಬದುಕನ್ನು ಉತ್ತಮ ಪಡಿಕೊಳ್ಳಲು ಇರುವ ಅವಕಾಶಗಳನ್ನು ಬಳಸಿಕೊಳ್ಳುವ ಧಾರಣಶಕ್ತಿ, ಸಾಮರ್ಥ್ಯಗಳನ್ನು ಶಿಕ್ಷಣ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಸಾಕ್ಷರತೆ ಎಂದರೆ ಸ್ವಾತಂತ್ರ್ಯ ಎಂದಿರುವ ಅಮರ್ತ್ಯಸೇನ್ ಅವರ ಮಾತು ಅರ್ಥಗರ್ಭಿತವಾಗಿದೆ.

ಶಿಕ್ಷಣದಿಂದ ಅಭಿವೃದ್ಧಿ ಎಂಬುದಕ್ಕಿಂತ 'ಶಿಕ್ಷಣವೇ ಅಭಿವೃದ್ಧಿ' ಎಂಬ ಮಾತು ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ಇತ್ತೀಚಿಗೆ ಪ್ರಚಲಿತವಾಗಿದೆ. ಅಮರ್ತ್ಯಸೇನ್‌ರ ಪ್ರಕಾರ

ಅಭಿವೃದ್ಧಿಯ ದೃಷ್ಟಿಯಿಂದ ಶಿಕ್ಷಣವು ಎಲ್ಲಿರಗೂ ದೊರೆಯಬೇಕಾದ ಒಂದು ಸಾಮಾಜಿಕ ಅಗತ್ಯವಾಗಿದೆ.. ಅದರಲ್ಲಿಯೂ ಪ್ರಾಥಮಿಕ ಶಿಕಷಣವು ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ, ಉಚಿತ ಕಡ್ಡಾಯವಾಗಿ ಒದಗಿಸಬೇಕೆಂಬುದು ನಮ್ಮ ಸಂವಿಧಾನ ರಚನಾ ಪೂರ್ವದ ಆಶಯವಾಗಿರುತ್ತದೆ. ಅದರಂತೆಯೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಸಹ ನಿರಂತರವಾಗಿವೆ. ಆದರೆ ಸಮಾಜದ ಎಲ್ಲಾ ವರ್ಗದ ಜನರು ಸಮಾನವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೇ ಇಂದಿಗೂ ಶಿಕ್ಷಣದ ವಿಷಯದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಭಿನ್ನತೆಗಳು ಜೀವಂತವಾಗಿವೆ. ಹಾಗಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮತ್ತು ಪಡೆದುಕೊಳ್ಳುವ ಶಕ್ತಿ ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹೀಗೆ ಪರಿಗಣಿಸುವಾಗ ಶೈಕ್ಷಣಿಕವಾಗಿ ವಂಚಿತರಾಗಿರುವ ದಲಿತರ ಶಿಕ್ಷಣವನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಗಮನಿಸಲಾಗಿದೆ.

ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಾಗಿ ರೂಪಿಸಿ ಅನುಷ್ಠಾನಗೊಳಿಸಿದ ಬಹುತೇಕ ಕಾರ್ಯಕ್ರಮಗಳು ವಾಸ್ಥವವಾಗಿ ದಲಿತ ಮಕ್ಕಳಿಗೆ ದೊರಕದಿರುವದು ಕೂಡ ನಮ್ಮ ಅಧ್ಯಯನದಿಂದ ತಿಳಿದು ಬಂದಿದೆ. ಒಂದು ಪಕ್ಷ ದೊರೆಯುತ್ತಿದ್ದರೂ ದಲಿತ ಮಕ್ಕಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ದೊರೆಯದಿರುವದು ತಿಳಿದುಬಂದಿದೆ. ಈ ಬಗೆಯ ಅಸಮಾನತೆ ಶಾಲೆಯಲ್ಲಿ ಕೆಲಸಗಳನ್ನು ನಿಯೋಜಿಸುವ ಸಂದರ್ಭದಲ್ಲಿ ದಲಿತ ಮಕ್ಕಳಿಗೆ ಶ್ರಮದಾಯಕವಾದ ಕೆಲಸಗಳನ್ನು ಶಿಕ್ಷಕರು ನಿಯೋಜಿಸುತ್ತಿರುವದು ಕಂಡು ಬಂದಿರುತ್ತದೆ.

ಅಧ್ಯಯನ ಕ್ಷೇತ್ರದ ದಲಿತ ಪೋಷಕರಲ್ಲಿ ಹೆಣ್ಣು ಮಕ್ಕಳು ಹೆಚ್ಚು ಓದು ಅವಶ್ಯಕತೆಯಿಲ್ಲ. ಹೆಣ್ಣು ಮಕ್ಕಳು ಹೆಚ್ಚಾಗಿ ಓದಿದರೆ ಅವಳಿಗೆ ಹೆಚ್ಚು ಓದಿಕೊಂಡ ವರ ಸಿಗುವದಿಲ್ಲ. ಅಲ್ಲದೆ ಹೆಚ್ಚು ಓದಿದ ದಲಿತ ಹೆಣ್ಣು ಮಕ್ಕಳನ್ನು ಸೊಸೆಯರನ್ನಾಗಿ ಸ್ವೀಕರಿಸಲು ಹಿಂಜರಿಯುವ ದಲಿತ ಪೋಷಕರಿದ್ದಾರೆ. ಹಾಗಾಗಿ ಅವಿದ್ಯಾವಂತ ದಲಿತ ಪೋಷಕರಿಗೆ ಅರಿವು ಮೂಡಿಸುವ ಮತ್ತು ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವವನ್ನು ತಿಳಿಸುವಂತ ಕಾರ್ಯಕ್ರಮದ ಅವಶ್ಯಕತೆಯಿದೆ.

ಮುಂದುವರಿದು ಹಲವು ಕಾರ್ಯಕ್ರಮಗಳಲ್ಲಿ ಈ ಬಿಸಿಯೂಟ ಯೋಜನೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ, ಕಲಿಕೆಯ ಕನಿಷ್ಟ ಮಟ್ಟದ ಕಾರ್ಯಕ್ರಮ, ಪ್ರತಿಭಕಾರಂಜಿ ಚಿಣ್ಣರ ಜಿಲ್ಲಾ ದರ್ಶನ ಪರಿಸರ ಗ್ರಂಥಾಲಯ ಸೌಲಭ್ಯ, ಸಮವಸ್ತ್ರ, ಶಾಲಾ ಬ್ಯಾಗ್‌ಗಳ ವಿತರಣೆ, ವಿದ್ಯಾರ್ಥಿ ವೇತನ ಸಂದಾಯ, ಸರ್ವಶಿಕ್ಷಣ ಅಭಿಯಾನ ಇನ್ನೂ ಮುಂತಾದ ಕಾರ್ಯಯೋಜನೆಗಳ ಮೂಲಕವಾಗಿ ಸರ್ಕಾರದ ಗಮನ ಮತ್ತು ಪ್ರಯತ್ನಗಳು ಶಾಲಾ

ಮಕ್ಕಳ ಶಿಕ್ಷಣದ ಕಡೆಗೆ ಇವೆ. ಆದರೂ ಮಕ್ಕಳ ಶಿಕ್ಷಣದಲ್ಲಿ ಸಂಪೂರ್ಣವಾದ ಸುಧಾರಣೆ ಗಳಾಗಲೇ ಇಲ್ಲ ಈಗಾಗಲೇ ತಿಳಿಸಿದ ಅಧ್ಯಯನದ ವಿಧಾನಗಳನ್ನು ಬಳಸಿ ವಿಮರ್ಶಾತ್ಮಕವಾಗಿ ನಮ್ಮ ಅಧ್ಯಯನವು ಈ ಕೆಳಗಿನ ನಿರ್ಧಾರಕ್ಕೆ ಬಂದಿದೆ. ಈ ಮುಂದಿನಂತೆ ಪ್ರಸ್ತುತ ಅಧ್ಯಯನದ ಫಲಿತಗಳಾಗಿವೆ.

ಅಧ್ಯಯನದ ಫಲಿತಗಳು

- ಅಧ್ಯಯನ ಮಾಡಿದ ಮೂರು ಜಿಲ್ಲೆಯ ಗ್ರಾಮಗಳಲ್ಲಿ ಮಧ್ಯದಲ್ಲಿಯೇ ಶಾಲೆ ಬಿಡುವ ತಮ್ಮ ಮಕ್ಕಳಲ್ಲಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲಾ ಗ್ರಾಮಗಳಿಗಿಂತ ಕೊಪ್ಪಳ ಜಿಲ್ಲೆ ಗ್ರಾಮಗಳಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಅಧಿಕವಾಗಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇದನ್ನು ತುಲನಾತ್ಮಕವಾಗಿ ಕೊಪ್ಪಳ ಜಿಲ್ಲೆಯಲ್ಲಿ ಅಧಿಕವಾಗಿರುವುದು ತಿಳಿಯುತ್ತದೆ. ಇದು ಶೈಕ್ಷಣಿಕವಾಗಿ ದುಃಸ್ಥಿತಿಯನ್ನು ಹೊಂದಿದ ಪ್ರದೇಶದ ಲಕ್ಷಣವೂ ಆಗಿರುತ್ತದೆ.

- ಅಧ್ಯಯನಕ್ಕೆ ಒಳಪಡಿಸಿದ ಕೊಪ್ಪಳ ಜಿಲ್ಲೆಯ ಗ್ರಾಮಗಳ ಪಾಲಕರಲ್ಲಿ ಆರ್ಥಿಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ದುರ್ಬಲರಾಗಿದ್ದು ಅಧಿಕ ಪ್ರಮಾಣದಲ್ಲಿ ಪಾಲಕರ ಜೀವನವು ಬಡತನದಿಂದ ಕೂಡಿರುವುದರಿಂದ ಅಲ್ಲದೇ, ಕಲಿಕೆಯ ಬಗ್ಗೆ ಹೆಚ್ಚಾಗಿ ಅರಿವನ್ನು ಹೊಂದದೆಯಿರುವ್ಯದರಿಂದ ಅಧಿಕ ಸಂಖ್ಯೆಯಲ್ಲಿ ಶಿಕ್ಷನದಿಂದ ವಂಚಿತಗೊಂಡಿರುವುದು ತಿಳಿಯುತ್ತದೆ. ಹಾಗೆಯೇ, ಇನ್ನೂಳಿದ ಎರಡು ಜಿಲ್ಲೆಯ ಗ್ರಾಮಗಳಲ್ಲಿ ಇದಕ್ಕೆ ವಿರುದ್ಧವಾಗಿ ಅಕ್ಷರ ಕಲಿಕೆಯಲ್ಲಿ ಪ್ರೋತ್ಸಾಹಿಸುತ್ತಿರುವುದು ಸರಿಸುಮಾರು ಒಂದೇ ಸಮವಾಗಿದೆ ಎಂದು ತಿಳಿದಿದೆ.

- ಮಕ್ಕಳ ಶಿಕ್ಷಣದ ಬಗ್ಗೆ ಮೂರು ಜಿಲ್ಲೆಯಲ್ಲಿ ನೋಡಿದಾಗ ಸರ್ಕಾರದಿಂದ ಸಿಗುವ ಸೌಲಭ್ಯಗಳು ಸರಿಸಮನಾಗಿವೆ. ಆದರೆ ಅವುಗಳ ಬಳಕೆಯಲ್ಲಿ ಕೊಪ್ಪಳ ಜಿಲ್ಲೆಗಿಂತ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು ಉತ್ತಮ ರೀತಿಯಲ್ಲಿ ಬಳಸಿಕೊಂಡು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವಲ್ಲಿ ಯಶಸ್ವಿಯಾಗಿದ್ದು, ಅದಕ್ಕೆ ಹೊರತಾಗಿ ಕೊಪ್ಪಳ ಜಿಲ್ಲೆಯು ಅದರ ಬಳಕೆಯಲ್ಲಿ ಹಿಂದುಳಿದಿದೆ ಎಂದು ಮನಗಣಲಾಗಿದೆ.

- ಮೂರು ಜಿಲ್ಲೆಯ ಗ್ರಾಮಗಳ ಪಾಲಕರು ಬಡತನ ಮತ್ತು ಸ್ತ್ರೀಯರ ಹಲವು ಸಮಸ್ಯೆಗಳಂತಹ ಕಾರಣಗಳನ್ನು ಹೇಳಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡಿಸಿ ಮಕ್ಕಳನ್ನು ಕೂಲಿಗೊ ಅಥವಾ ವಿವಾಹವನ್ನು ಮಾಡುವಂತಹದ್ದು ಇಂತಹ ಆರ್ಥಿಕ, ಸಾಮಾಜಿಕ ಕಾರಣಗಳಿಂದ ಪಾಲಕರಲ್ಲಿ ಮಕ್ಕಳು ಹೆಚ್ಚು ಓದುವ ಅವಶ್ಯಕತೆ ಇಲ್ಲ ಎಂಬಂತಹ ಧೋರಣೆ ಮೂರು ಜಿಲ್ಲೆಗಳಿಗೆ ಹೋಲಿಕೆ ಮಾಡಿದಾಗ ಕೊಪ್ಪಳ ಜಿಲ್ಲೆಯಲ್ಲಿ ಅಧಿಕವಾಗಿರುವುದು ತಿಳಿಯುತ್ತದೆ.

• ಶಾಲೆಗಳು ಎಲ್ಲರಿಗೂ ಲಭಿಸುತ್ತವೆ ಎಂಬುದನ್ನು ಸರ್ಕಾರದ ಅಂಕಿ ಅಂಶಗಳು ಸೇರಿದಂತೆ ಶೈಕ್ಷಣಿಕ ಸಮೀಕ್ಷೆಗಳು, ರಾಜ್ಯ ಮತ್ತು ರಾಷ್ಟ್ರಮಟ್ಟದ ಶೈಕ್ಷಣಿಕ ಅಧ್ಯಯನಗಳು ಗುರುತಿಸುತ್ತವೆ. ಇವೆಲ್ಲವುಗಳ ಪ್ರಕಾರ ಗ್ರಾಮೀಣ ಪ್ರದೇಶದ ಹೆಚ್ಚಿನ ಕುಟುಂಬಗಳಿಗೆ ಸುಲಭವಾದ ದೂರದಲ್ಲಿಯೇ ಪ್ರಾಥಮಿಕ ಶಾಲೆಗಳು ಲಭಿಸುತ್ತವೆ. ಆದರೆ ಇಡೀ ರಾಷ್ಟ್ರಮಟ್ಟದಲ್ಲಿ ನೋಡಿದಾಗ ಶೇಕಡ ೭೧ರಷ್ಟು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳೇ ಇಲ್ಲವೆಂಬುದು ಬಹಳ ಗಂಭೀರವಾದ ಅಂಶವಾಗುತ್ತದೆ.

• ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇತರೆ ಕಲಿಕೆಯನ್ನು ಉತ್ತೇಜಿಸುವಂತಹ ಕಾರ್ಯ ನಡೆಯಬೇಕಾಗಿದೆ.

• ಇತ್ತೀಚೆಗೆ ಶಾಲೆಯಲ್ಲಿ ಶಿಕ್ಷಕರೆ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವನ್ನು ಮಾಡುವ ಹೆಚ್ಚಿನ ಪ್ರಮಾಣದಲ್ಲಿರುವ್ಯದರಿಂದ ಎಲ್ಲಾ ಪಾಲಕರು ಮಕ್ಕಳನ್ನು ಅಲ್ಲದೇ ಮುಖ್ಯವಾಗಿ ಹೆಣ್ಣು ಮಕ್ಕಳನ್ನು ಶಾಲೆಯನ್ನು ಬಿಡಿಸುವುದು, ಮಧ್ಯದಲ್ಲಿಯೇ ಬಿಡಿಸುವುದು ಎಂಬ ಅಂಶಗಳು ಮೂರು ಜಿಲ್ಲೆಯಲ್ಲಿ ಸರಿಸುಮಾರು ಪ್ರಮಾಣಸದಲ್ಲಿ ಕಂಡು ಬಂದಿದೆ. ಇಂತಹ ಸಾಮಾಜಿಕ ಕಾರಣಗಳು ಮಕ್ಕಳ ತಲೆಯಲ್ಲಿ ಸುಳಿಯಲಾರದಂತೆ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಜಾಗೃತವಾಗಿ ಇಡಬೇಕಾದ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ.

• ಗ್ರಾಮೀಣ ಭಾಗದ ಪೋಷಕರು ತಮ್ಮ ಮಕ್ಕಳನ್ನು ಪಕ್ಕದ ಇನ್ನೊಂದು ಗ್ರಾಮದಲ್ಲಿರುವ ಶಾಲೆಗೆ ಕಳುಹಿಸಲು ಇಷ್ಟಪಡುವುದಿಲ್ಲ. ಹಾಗಾಗಿ ೫, ೬ ಮತ್ತು ೭ನೇ ತರಗತಿಯ ನಂತರದಲ್ಲಿ ಗ್ರಾಮೀಣ ಪ್ರದೇಶದ ಹೆಚ್ಚಿನ ಪ್ರಮಾಣದ ಹೆಣ್ಣುಮಕ್ಕಳು ಶಾಲೆಗೆ ಹೋಗುವ ಆಸಕ್ತಿ ಇದ್ದರೂ, ಪೋಷಕರ ಇಚ್ಛೆಯ ವಿರುದ್ಧ ಶಾಲೆಗೆ ಹೋಗಲಾರದ ಸ್ಥಿತಿ ಇದೆ.

• ಶಿಕ್ಷಣದ ಭೌತಿಕ ಮೂಲಭೂತ ಸೌಲಭ್ಯಗಳಾದ ಶಾಲೆಯ ಕೊಠಡಿ, ಶಿಕ್ಷಕರ ನೇಮಕ, ಕುಡಿಯುವ ನೀರಿನ ಬಗ್ಗೆ ತೃಪ್ತಿ ಮತ್ತು ಶೌಚಾಲಯ ಸೌಲಭ್ಯದ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸುವ ಪಾಲಕರು ಶಿಕ್ಷಣದ ಬೌದ್ಧಿಕ ಪರಿಸರದ ಸೌಲಭ್ಯದ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗದೆ ಶಾಲಾ ಶಿಕ್ಷಕರನ್ನು ದೂಷಿಸುತ್ತಾರೆ. ಆದರೆ ಶಿಕ್ಷಣದ ಪ್ರೋತ್ಸಾಹದಾಯಕ ಸೌಲಭ್ಯಗಳಾದ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ನೋಟ್ ಪುಸ್ತಕಗಳ ವಿತರಣೆ, ಮಧ್ಯಾಹ್ನದ ಶಾಲಾ ಬಿಸಿಯೂಟ, ವಿದ್ಯಾರ್ಥಿ ವೇತನದ ಸಂದಾಯ ಇತ್ಯಾದಿಗಳ ಬಗ್ಗೆ ಪಾಲಕರಲ್ಲಿ ಅತೃಪ್ತಿ ಕಂಡು ಬರುತ್ತದೆ.

• ಮೂರು ಜಿಲ್ಲೆಯ ಗ್ರಾಮಗಳ ಪಾಲಕರು ತಮ್ಮ ಜೀವನ ನಿರ್ವಹಣೆಯ ಕೆಲಸ ಕಾರ್ಯಗಳಿಗೆ ತೋರಿಸುವಷ್ಟು ಆಸಕ್ತಿಯನ್ನು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ತೋರಿಸುವುದಿಲ್ಲ. ಮಕ್ಕಳನ್ನು ಹೊಲ ಗದ್ದೆಗಳಲ್ಲಿ ಕೆಲಸ ಮಾಡಿ ಜೀವನ ಮಾಡಲು ಪ್ರೇರೆಪಿಸಲಾಗುತ್ತಿದೆ. ಅಂದರೆ, ಈ ಆಲೋಚನೆಯನ್ನು ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಗ್ರಾಮಗಳಿಗಿಂತ ಕೊಪ್ಪಳ ಜಿಲ್ಲೆಯ ಗ್ರಾಮಗಳು ಅಧಿಕ ಪ್ರಮಾಣದಲ್ಲಿರುವುದು ತಿಳಿದು ಬಂದಿದೆ.

• ಈ ಸಂದರ್ಭದಲ್ಲಿ ಬಡತನದಲ್ಲಿರುವ ಪಾಲಕರಿಗೆ ತಮ್ಮ ಜೀವನ ನಿರ್ವಹಣೆಗಾಗಿ ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿರುವುದು ಮುಖ್ಯವಾಗಿ ಕಂಡುಬರುತ್ತದೆ. ಹಾಗಾಗಿ ತಮ್ಮ ಮಕ್ಕಳ ಬದುಕಿನ ಅಥವಾ ಭವಿಷ್ಯದ ದೃಷ್ಟಿಯಿಂದ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಮುಂದಾಲೋಚನೆ ಪಾಲಕರಿಗೆ ಕಡಿಮೆ ಇರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪಾಲಕರಿಗೆ ಕೂಲಿಗಾಗಿ ಕಾಳು ಅಥವಾ ಉದ್ಯೋಗ ಖಾತ್ರಿಯಂತಹ ಯೋಜನೆಗಳ ಪ್ರಕಾರ ಉದ್ಯೋಗಗಳನ್ನು ಒದಗಿಸಿದರೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ಸಾಧ್ಯತೆಗಳಿರುತ್ತವೆ. ಈ ದೃಷ್ಟಿಯಿಂದ ಇನ್ನಷ್ಟು ಅಧ್ಯಯನಗಳನ್ನು ನಿರೀಕ್ಷೆ ಮಾಡುವ ಅವಶ್ಯಕತೆ ಇದೆ.

• ಶಾಲಾ-ಶಿಕ್ಷಣ ವ್ಯವಸ್ಥೆಯಲ್ಲಿ ಕಂಡು ಬರುವಂತಹ ನಿರುತ್ಸಾಹದಾಯಕ ಅಂಶವು ಪೋಷಕರು ಅಥವಾ ಅವರ ಮಕ್ಕಳ ಮೇಲೆ ಪ್ರಭಾವವನ್ನುಂಟು ಮಾಡಿದರೂ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಇನ್ನೂ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಕನಿಷ್ಟ ಪ್ರಮಾಣದ ಕಲಿಕೆಯು ನಡೆಯದಿರುವ ಶಾಲೆಗಳಿರುವ ಪ್ರದೇಶದಲ್ಲಿ ಇದು ಪ್ರಧಾನವಾಗಿ ಕಂಡು ಬರುತ್ತದೆ. ಈ ನಿರುತ್ಸಾಹದ ಮಾತುಗಳು ಕೆಳವರ್ಗದ ಜನರ ಮೇಲೆ ತೀವ್ರವಾದ ಪರಿಣಾಮವನ್ನುಂಟು ಮಾಡುತ್ತವೆ. ಈ ರೀತಿಯಾಗಿ ಶಾಲಾ ಮಕ್ಕಳ ಪಾಲಕರು ಸ್ಥಳೀಯವಾಗಿ ಮಕ್ಕಳ ಶಿಕ್ಷಣದಲ್ಲಿ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳೂ ಗ್ರಾಮೀಣ ಭಾಗದಲ್ಲಿ ನಡೆದರೆ ಉತ್ತಮ.

• ಅಲ್ಲದೇ, ಪಾಲಕರು ತಮ್ಮ ಮಕ್ಕಳಿಗೆ ಬೇಕಾದ ಭೌತಿಕ ಸೌಲಭ್ಯಗಳನ್ನು ಕೊಡಿಸಲು ಸಾವಿರಾರು ರೂಪಾಯಿಗಳು ಬೇಕಾಗುತ್ತವೆ. ನಮ್ಮ ಅಧ್ಯಯನದಲ್ಲಿ ಮಕ್ಕಳಿಗೆ ಇವೆಲ್ಲವುಗಳನ್ನು ಕೊಡಿಸಲು ಮತ್ತು ಇತರೆ ಖರ್ಚುಗಳಿಂದಾಗಿ ಒಂದು ಮಗುವಿಗೆ ಸಾವಿರಾರು ರೂಪಾಯಿಗಳು ಬೇಕಾಗುತ್ತವೆ ಎಂಬ ನಿರ್ಧಾರಕ್ಕೆ ಬರಲಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳು ಶಾಲೆಗೆ ಹೋಗುವಾಗ ಹೇಗೆ ಶುಚಿತ್ವದಿಂದ ಇರಬೇಕು ಮತ್ತು ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ಮಿತಗೊಳಿಸುವುದು ಹೇಗೆ? ಎಂಬುದರ ಬಗ್ಗೆ ವಿಸ್ತೃತವಾದ ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ.

• ಶಾಲೆಯಿಂದ ಹೊರಗಿರುವ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ಈಗಾಗಲೇ ಅನೇಕ ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಕ್ರಮ ಅಥವಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ. ಇವುಗಳಲ್ಲಿ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವಲ್ಲಿ ಯಶಸ್ವಿಯಾದ ಕಾರ್ಯಕ್ರಮಗಳಿಗಿಂತ ವಿಫಲವಾದ ಕಾರ್ಯಕ್ರಮಗಳೇ ಹೆಚ್ಚಾಗಿವೆ. ಇದು ಸ್ಥಳೀಯವಾಗಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಕ್ರಮದ ಫಲಿತಾಂಶವಾಗಿದೆ. ಹಾಗಾಗಿ ಶಾಲೆಯಿಂದ ಹೊರಗಿರುವ ಮಕ್ಕಳನ್ನು ನಿಗದಿತ ಸಮಯದಲ್ಲಿ ಮರಳಿ ಶಾಲೆಗೆ ಬರುವಂತೆ ಸ್ಥಳೀಯ ಸಮುದಾಯದ ಸಹಭಾಗಿತ್ವದ ಮೂಲಕ ಜನರ ಯೋಜನೆಗಳನ್ನು ರೂಪಿಸಿ, ಕ್ರಮಬದ್ಧವಾಗಿ ಜಾರಿಗೊಳಿಸುವ ಅಗತ್ಯವಿದೆ. ಆಗ ಮಾತ್ರ ಶೈಕ್ಷಣಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.

• ಶಾಲಾ ಬಿಸಿಯೂಟ ಯೋಜನೆಯು ಕೆಲವು ಲೋಪದೋಷಗಳ ನಡುವೆಯೂ ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ಸುಧಾರಣೆಯನ್ನು ತಂದುಕೊಟ್ಟಿದೆ. ಅದರಲ್ಲಿಯೂ ಸಮಾಜದ ಅಂಚಿನಲ್ಲಿರುವ ಮತ್ತು ಅವಕಾಶ ವಂಚಿತ ಕೆಳಜಾತಿಯ ಕುಟುಂಬಗಳ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಈ ಯೋಜನೆಯು ಹೆಚ್ಚಿಸಿದೆ. ಈ ಯೋಜನೆಯ ಅನುಷ್ಠಾನದಿಂದ ಸಮಾಜದಲ್ಲಿನ ಜಾತಿ ವರ್ಗಗಳ ಏಣಿ-ಶ್ರೇಣಿಯ ಅಂತರಗಳು ಸ್ವಲ್ಪಮಟ್ಟಿಗೆ ಶಮನಗೊಂಡು ಸಾಮಾಜಿಕ ಸಮಾನತೆಯನ್ನು ಹೆಚ್ಚಿಸುವುದರ ಮೂಲಕ ಸಾಮಾಜೀಕರಣದ ಸಾಧನೆಯಾಗುತ್ತಿದೆ. ಅಲ್ಲದೆ ಈ ಯೋಜನೆಯು ಶಿಕ್ಷಣ ಕ್ಷೇತ್ರದಲ್ಲಿನ ಲಿಂಗ ತಾರತಮ್ಯದ ಅಂತರವನ್ನು ಕಡಿಮೆ ಮಾಡುತ್ತಾ ಲಿಂಗ ಸಮಾನತೆಯನ್ನು ಸಾಧಿಸಲು ಹೆಚ್ಚಿನ ಸಹಕಾರಿಯಾಗಿದೆ. ಒಟ್ಟಾರೆಯಾಗಿ ಶಾಲಾ ಬಿಸಿಯೂಟ ಯೋಜನೆಯು ಸಾಮಾಜೀಕರಣದ ಸಾಧನೆಯಾಗುತ್ತಿದೆ. ಅಲ್ಲದೆ ಈ ಯೋಜನೆಯು ಶಿಕ್ಷಣ ಕ್ಷೇತ್ರದಲ್ಲಿನ ಲಿಂಗ ತಾರತಮ್ಯದ ಅಂತರವನ್ನು ಕಡಿಮೆ ಮಾಡುತ್ತಾ ಲಿಂಗ ಸಮಾನತೆಯನ್ನು ಸಾಧಿಸಲು ಹೆಚ್ಚಿನ ಸಹಕಾರಿಯಾಗಿದೆ. ಒಟ್ಟಾರೆಯಾಗಿ ಶಾಲಾ ಬಿಸಿಯೂಟ ಯೋಜನೆಯು ಸಾಮಾಜಿಕ ಅಭಿವೃದ್ಧಿಗೆ ಅಥವಾ ಕೂಲಿ ಕೆಲಸಗಳಿಗೆ ಕರೆದುಕೊಂಡು ಹೋಗದೆ ಶಾಲೆಗೆ ಕಳಿಸುವುದು ಮಾತ್ರ ತಮ್ಮ ಕೆಲಸ ಎಂಬ ಭಾವನೆ ಪಾಲಕರಲ್ಲಿರುವುದನ್ನು ನಮ್ಮ ಅಧ್ಯಯನ ಗುರುತಿಸಿದೆ.

• ಅಧ್ಯಯನ ನಡೆಸಿದ ಒಂದು ಗ್ರಾಮ ಪಂಚಾಯತಿಯ ದಲಿತರು ಶೈಕ್ಷಣಿಕವಾಗಿ ಹಿಂದುಳಿಯಲು ಮತ್ತು ಇನ್ನೊಂದು ಗ್ರಾಮ ಪಂಚಾಯತಿಯ ದಲಿತರು ಮುಂದುವರೆಯಲು ಸ್ಥಳೀಯವಾದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕಿಯ ಅಂಶಗಳು ಕಾರಣ ವಾಗಿರುವದು ನಮ್ಮ ಅಧ್ಯಯನಗಳಲ್ಲಿ ಗುರುತಿಸಲಾಗಿದೆ. ಹಾಗಾಗಿ ಶೈಕ್ಷಣಿಕ ಅಭಿವೃದ್ಧಿಯ

ಕಾರ್ಯಕ್ರಮಗಳನ್ನು ಸ್ಥಳೀಯವಾದ ಸಾಮಾಜಿಕ ಪರಿಸರದ ಆಧಾರದಲ್ಲಿ ರೂಪಿಸಿ ಅನುಷ್ಠಾನ ಗೊಳಿಸುವ ಅಗತ್ಯವಿರುತ್ತದೆ.

- ಅಧ್ಯಯನ ಕ್ಷೇತ್ರದ ದಲಿತರು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಾಗಿ ಹಿಂದುಳಿದಿರುವದರಿಂದ ಬಡತನ, ಅನಕ್ಷರತೆ, ಚಿಕ್ಕಮಕ್ಕಳ ಪೋಷಣೆ ಇನ್ನೂ ಮುಂತಾದ ಸಾಮಾಜಿಕ ಅಂಶಗಳ ಜೊತೆಯಲ್ಲಿ ಆತ್ಮಹತ್ಯೆಯಂತಹ ಅಂಶವೂ ಕೂಡ ದಲಿತ ಮಕ್ಕಳ ಶೈಕ್ಷಣಿಕ ಹಿಂದುಳಿದ ಪರಸ್ಥಿತಿಗೆ ಕಾರಣವಾಗಿರುವುದನ್ನು ನಮ್ಮ ಅಧ್ಯಯನವು ಸ್ಪಷ್ಟಪಡಿಸುತ್ತದೆ.

- ಅಧ್ಯಯನ ಕ್ಷೇತ್ರದ ಮಕ್ಕಳ ಜಾತಿ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುವುದರಿಂದ ಬಡತನ, ಅನಕ್ಷರತೆ, ಚಿಕ್ಕಮಕ್ಕಳ ಪೋಷಣೆ ಇನ್ನೂ ಮುಂತಾದ ಸಾಮಾಜಿಕ ಅಂಶಗಳ ಜೊತೆಯಲ್ಲಿ ಲೈಂಗಿಕ ಅಂಶವೂ ಕೂಡ ಶೈಕ್ಷಣಿಕ ಹಿಂದುಳಿದ ಪರಿಸ್ಥಿತಿಗೆ ಕಾರಣವಾಗಿರುವುದನ್ನು ನಮ್ಮ ಅಧ್ಯಯನವು ಸ್ಪಷ್ಟಪಡಿಸುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದ ಹಿನ್ನೆಲೆಯಲ್ಲಿ ಎಸ್.ಡಿ.ಎಂ.ಸಿ. ಗಳನ್ನು ಸಬಲೀಕರಿಸಿ ಅದರಲ್ಲಿ ಪ್ರಜಾಸತ್ತಾತ್ಮಕವಾಗಿ, ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳ ದೃಷ್ಟಿಯಿಂದ ಹಿಂದುಳಿದ ವರ್ಗ, ಎಸ್.ಸಿ., ಎಸ್.ಟಿ. ಮತ್ತು ಮಹಿಳೆಯರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮುಖ್ಯ ವಾಗಿದ್ದರೂ, ಇಡೀ ನಮ್ಮ ಸಾಮಾಜಿಕ ವ್ಯವಸ್ಥೆಯೇ ಕಾರ್ಯ ಪ್ರವೃತ್ತವಾಗಬೇಕಾಗಿದೆ ಎಂಬುದು ನಮ್ಮ ಅಧ್ಯಯನದ ಆಶಯವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಕುರಿತು ವಿಸ್ತೃತವಾಗಿ ಸ್ಥಳೀಯ ಮಟ್ಟದಲ್ಲಿ ಇನ್ನಷ್ಟು ಅಧ್ಯಯನ ಮತ್ತು ಚರ್ಚೆಗಳು ನಡೆಯಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಉಪಸಂಹಾರ

ಉಪಸಂಹಾರ

ಹೀಗೆ ಹಿಂದುಳಿದ ಸಾಮಾಜಿಕ ಸನ್ನಿವೇಶ, ಸದೃಡವಾಗಿರದ ಆರ್ಥಿಕ ಸ್ಥಿತಿ, ಕಡಿಮೆ ಇರುವ ರಾಜಕೀಯ ತಿಳುವಳಿಕೆ ಮತ್ತು ಸಾಂಸ್ಕೃತಿಕ ಪರಿಸರ, ಅಧ್ಯಯನ ಕ್ಷೇತ್ರದಲ್ಲಿನ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ಗ್ರಾಮಗಳಿಗಿಂತ ಕೊಪ್ಪಳ ಜಿಲ್ಲೆಯ ಗ್ರಾಮಗಳ ಪಾಲಕರಲ್ಲಿ ಕಂಡುಬರುತ್ತದೆ. ಇಂತಹ ಪರಿಸರದಲ್ಲಿರುವ ಮಕ್ಕಳ ಶಿಕ್ಷಣವು ಹಿಂದುಳಿಯುವುದು ಮೇಲ್ನೋಟಕ್ಕೆ ಅರ್ಥವಾಗುತ್ತದೆ. ಅದರೂ ಕೊಪ್ಪಳ ಜಿಲ್ಲೆಯ ಗ್ರಾಮಗಳ ಪಾಲಕರಲ್ಲಿ ತಮ್ಮ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಬಡತನ, ಅನಕ್ಷರತೆ, ಚಿಕ್ಕಮಕ್ಕಳ ಪಾಲನೆ ಪೋಷಣೆ, ಕೀಳಿರಿಮೆ ಮತ್ತು ಲೈಂಗಿಕ ಕಿರುಕುಳಗಳಂತಹ ಅಂಶಗಳು ಕಾರಣವಾಗುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಅಲ್ಲದೇ ಗುರುತಿಸಲಾಗದ ಬಹುತೇಕ ಅಂಶಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿ ಅಂಶಗಳಿದ್ದರೂ ಲೈಂಗಿಕ ಕಿರುಕುಳ ಮಾತ್ರ ಹೊಸ ಅಂಶವಾಗಿರುತ್ತದೆ.

ಸಮಾಜೋ-ಆರ್ಥಿಕ ಅಂಶವಾದ ಬಡತನವು ಶೈಕ್ಷಣಿಕ ಹಿಂದುಳಿಯುವಿಕೆಗೆ ಮತ್ತು ಲಿಂಗ ತಾರತಮ್ಯಕ್ಕೆ ಕಾರಣವಾಗುವ ಅಂಶವನ್ನು ಅಲ್ಲಗಳಿಯಲಾಗದ ಸ್ಥಿತಿಯು ಹಾಗೂ ಅಧ್ಯಯನ ಕೈಗೊಂಡ ಅಧ್ಯಯನ ಕ್ಷೇತ್ರದಲ್ಲಿ ರುಜುವಾತಾಗಿದೆ. ಹಾಗಾಗಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕೆಳಜಾತಿಯಲ್ಲಿರುವವರಿಗೆ ಉದ್ಯೋಗ ಸೃಷ್ಟಿಸುವುದರ ಮೂಲಕ ಬಡತನ ನಿರ್ಮೂಲನದೊಂದಿಗೆ ಅವರ ವಲಸೆಯನ್ನು ತಡೆಗಟ್ಟುವ ಉದ್ಯೋಗ ಖಾತ್ರಿ, ಎನ್.ಆರ್.ಇ.ಪಿ. ಕಾರ್ಯಕ್ರಮಗಳ ಪ್ರಾಮಾಣಿಕ ಅನುಷ್ಠಾನದ ಅಗತ್ಯವಿದೆ. ಈ ವಿಚಾರದಲ್ಲಿ ಸರ್ಕಾರವು ಬಜೆಟ್‌ನಲ್ಲಿ ನಿರ್ಧಿಷ್ಟ ಪ್ರಮಾಣದ ಹಣವನ್ನು ಮೀಸಲಿಟ್ಟು ಹಣಕಾಸು ವರ್ಷದ ಕೊನೆಯಲ್ಲಿ ಅವಸರವಾಗಿ ಖರ್ಚುಮಾಡುವಂತಹ ಒತ್ತಡಕ್ಕೆ ಒಳಗಾಗುವುದನ್ನು ತಡೆಯುವ

ಅಗತ್ಯವಿರುವುದನ್ನು ಅಧ್ಯಯನ ಸಂದರ್ಭದಲ್ಲಿ ಗಮನಿಸಲಾಗಿದೆ. ಅಂದ ಮಾತ್ರಕ್ಕೆ ಬಡತನವೊಂದೇ ದುಃಸ್ಥಿತಿಯಲ್ಲಿರುವ ಪಾಲಕರ ಮಕ್ಕಳ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯು ಹಿಂದುಳಿಯುವಿಕೆಗೆ ಕಾರಣವಲ್ಲ ಎಂಬುದು ಅಧ್ಯಯನದ ಅಭಿಪ್ರಾಯವಾಗಿದೆ. ಹಾಗೆಯೇ, ಅನಕ್ಷರತೆ ಮತ್ತು ಚಿಕ್ಕಮಕ್ಕಳ ಪಾಲನೆಯಂತಹ ಸಾಮಾಜಿಕ ಅಂಶಗಳು ಪರಿಶಿಷ್ಟ ಜಾತಿ ಹಾಗೂ ಪಂಗಡ ಮತ್ತು ಇತರೆ ಸಮುದಾಯಗಳ ಶೈಕ್ಷಣಿಕ ಹಿಂದುಳಿಯುವಿಕೆಗೆ ಕಾರಣ ವಾಗಿರುವುದನ್ನು ಅಧ್ಯಯನವು ಸ್ಪಷ್ಟಪಡಿಸುತ್ತದೆ. ಈ ವಿಚಾರದಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಹೆಚ್ಚಾಗಿ ಶೈಕ್ಷಣಿಕ ಅವಕಾಶ ವಂಚಿತರಾಗುತ್ತಾರೆ. ಎಂಬುದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಅವಿದ್ಯಾವಂತ ದಲಿತ ಪೋಷಕರಿಗೆ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಿ, ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವ ಅಗತ್ಯವಿರುವುದನ್ನು ನಮ್ಮ ಅಧ್ಯಯನವು ಒತ್ತಿ ಹೇಳುತ್ತದೆ. ಈ ರೀತಿಯಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಸ್ಥಳೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಹಿನ್ನಲೆಯಲ್ಲಿ ರೂಪಿಸಿ, ಅನುಷ್ಠಾನಗೊಳಿಸಿದರೆ ಯಶಸ್ಸು ಕಾಣಬಹುದೆಂಬ ಆಶಾಭಾವನೆಯನ್ನು ನಮ್ಮ ಅಧ್ಯಯನವು ವ್ಯಕ್ತಪಡಿಸುತ್ತದೆ.

ನಾವು ಹೀನಜಾತಿಯವರು, ಕೀಳುಜಾತಿಯವರಾದನಮಗೆ ವಿದ್ಯೆ ಒಲಿಯುವುದಿಲ್ಲ, ಮೇಲ್ಜಾತಿಯವರಿಂದ ಮಾತ್ರ ವಿದ್ಯೆ ಕಲಿಯಲು ಸಾಧ್ಯ ಎಂಬ ಕೀಳಿರಿಮೆಯ ಭಾವನೆ ಇನ್ನೂ ದಲಿತರಲ್ಲಿದೆ. ಈ ಕೀಳಿರಿಮೆಯ ಭಾವನೆ ಇನ್ನೂ ದಲಿತರಲ್ಲಿದೆ. ಈ ಕೀಳಿರಿಮೆ ಭಾವನೇ ಮಕ್ಕಳನ್ನು ಶೈಕ್ಷಣಿಕವಾಗಿ ಹಿಂದೆ ಬೀಳುವಂತೆ ಮಾಡುವುದನ್ನು ನಮ್ಮ ಅಧ್ಯಯನದಲ್ಲಿ ಕಂಡುಕೊಳ್ಳುಳಾಗಿದೆ. ಈ ದಿಸೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡ ಮತ್ತು ಇತರೆ ಸಮುದಾಯಗಳ ಮಕ್ಕಳ ಕೀಳಿರಿಮೆಯನ್ನು ಗುರುತಿಸಿ ಅದನ್ನು ಹೊಗಲಾಡಿಸುವಂತಹ ಮತ್ತು ಸಾಮರ್ಥ್ಯವನ್ನು ಪ್ರೋತ್ಸಾಹಿಸುವ ಅವಶ್ಯಕತೆ ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ದಲಿತರಲ್ಲಿ ಜಾಗೃತಿ ಮೂಡಿಸುವಂತಹ ಸಾಮಾಜಿಕ ಅಂಧೋಲವನ್ನು ಅತ್ಯಂತ ಪ್ರಾಮಾಣಿಕವಾದ ರೀತಿಯಲ್ಲಿ ಮಾಡಲಾಗಿದೆ. ಈ ದೃಷ್ಟಿಯಲ್ಲಿ ಇನ್ನೂಷ್ಟು ಅಧ್ಯಯನಗಳು ಆದರೆ ಉತ್ತಮ.

ಆತ್ಮಹತ್ಯೆಯಂತಹ ಹೊಸ ಅಂಶವು ದಲಿತ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಹಿಂದೆ ತಳ್ಳಿರುವುದನ್ನು ನಮ್ಮ ಅಧ್ಯಯನವು ಗುರುತಿಸುತ್ತದೆ. ನಿಖರವಾಗಿ ಅಧ್ಯಯನ ಕ್ಷೇತ್ರದ ಶೇಕಡ ೫ರಷ್ಟು ಜನಪ್ರತಿನಿಧಿಗಳು ತಮ್ಮ ಮಕ್ಕಳ ಆತ್ಮಹತ್ಯೆಯ ಬೆದರಿಕೆಯನ್ನು ಹಾಕುತ್ತಾ ಮದ್ಯಾಹ್ನ ದಲ್ಲಿಯೇ ಶಾಲೆ ಬಿಟ್ಟಿರುವುದನ್ನು ದೃಢಪಡಿಸುತ್ತಾರೆ. ವಿವಿಧ ಕಾರಣಗಳಿಂದಾಗಿ ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಸಂಭವಿಸುವ ಆತ್ಮಹತ್ಯೆಗಳು ದಲಿತ ಮಕ್ಕಳ ಮನಸ್ಸಿನ ಮೇಲೆ

ಪರಿಣಾಮ ಬೀರುತ್ತಾ, ಮಕ್ಕಳು ಅದನ್ನು ಒಂದು ಅಸ್ತ್ರವಾನ್ನಿಗಿಸಿಕೊಳ್ಳುವಂತೆ ಮಾಡುಬಿಟ್ಟದೆ. ಈ ಹಿನ್ನಲೆಯಲ್ಲಿ ಶಿಕ್ಷಣ ಇಲಾಖೆ, ಆಡಳಿತ ವ್ಯವಸ್ಥೆ ಮತ್ತು ಇಡೀ ಸಾಮಾಜಿಕ ವ್ಯವಸ್ಥೆಯೇ ಎಚ್ಚರವಾಗಬೇಕಾದ ಅಗತ್ಯವಿದೆ. ಈ ನೆಲೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ನಾವು ಎದುರು ನೋಡಬಹುದಾಗಿದೆ.

ಅನುಬಂಧಗಳು

೧. ಮೂಲ ಆಕರಗಳು

ಪೂರಕವಾದ ಆಕರಗಳು

೨. ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ

೩. ಛಾಯಾಚಿತ್ರಗಳು

ಅನುಬಂಧ-೧

೧. ಮೂಲ ಆಕರಗಳು

ಕರೂರ ಎನ್.ಜಿ., (೨೦೦೨), ಶಿಕ್ಷಣ ಮಾರ್ಗ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

ಕುಮಾರಸ್ವಾಮಿ ಎಚ್., (೨೦೦೭), ಗುಣಮಟ್ಟದ ಶಿಕ್ಷಣ ತರಗತಿಯಲ್ಲಿ ಪ್ರಕ್ರೀಯೆಗಳು, ಅಭಿವೃದ್ಧಿ ಅಧ್ಯಯನ ವಿಭಾಗ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್., ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ, ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಿರಂಜನಾರಾಧ್ಯ ಪಿ.ವಿ., (೨೦೦೭), ಶಾಲಾ ಶಿಕ್ಷಣದ ಸಮುದಾಯದ ಸಹಭಾಗಿತ್ವ (ಲೇಖನ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದ್ಮಾರಾಮಚಂದ್ರನ ಮತ್ತು ವಸಂತಕುಮಾರ್, (೨೦೦೫), ಎಜುಕೇಷನ್ ಇನ್ ಇಂಡಿಯಾ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯ, ನ್ಯೂಡೆಲ್ಲಿ.

ಪ್ರಶಾಂತ್ ಎಚ್.ಡಿ., (೨೦೦೫), ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಕ್ಕಳ ಸಮೀಕ್ಷೆ, ೨೦೧೨ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಶೈಕ್ಷಣಿಕ ಅಂಕಿ ಅಂಶಗಳ ಪಕ್ಷಿನೋಟ, ೨೦೧೦-೧೧ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಸುಮಂಗಲಾ ಅತ್ತಿಗೇರಿ, (೨೦೦೭), ಕೃಷಿ ಜನಪದ ಮತ್ತು ಮಹಿಳೆ, (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ಸೆನ್ಸಸ್ ಆ್ಯಂಡ್ ಇಂಡಿಯಾ ೨೦೧೧, ಡಿಸ್ಟ್ರಿಕ್ ಪಾಪ್ಯುಲೇಶನ್ ಬುಕ್‌ಲೆಟ್, ರಾಮನಗರ ಜಿಲ್ಲೆ.

೨. ಪೂರಕವಾದ ಆಕರಗಳು

ಅಂಜು ಜಿ., ೨೦೦೨, ಅವರು"ಭಾರತದಲ್ಲಿ ಲಿಂಗ -ಸಮಾನತೆ", ಇ.ಪಿ.ಡಬ್ಲೂ ವಾಲ್ಯೂಮ ನಂ:ಪಿ.ಪಿ ೩೮-೪೨.

ಅರ್ಚನಾ ಮೆಂದಿಲೇ, ೨೦೧೦, "ಮಾರ್ಡನ್ ರೂಲ್ಸ್ ಫಾರ್ ರೈಟ್ ಟೂ ಎಜ್ಯುಕೇಶನ್ ಆಕ್ಟ್" ಇ.ಪಿ.ಡಬ್ಲೂ ವೊ.ನಂಎಕ್ಸ್.ಎಲ್.ವಿ.ಐ. ನಂ೪.

ಅರ್ಥೇಕೆಡತ್ ಕೆ.ಕೆ., ೧೯೯೮, ಅವರು "ಶತಮಾನದ ಅಂಚಿನಲ್ಲಿ ಶಿಕ್ಷಣ", ಹರ್-ಆನಂದ ಪಬ್ಲಿಕೇಶನ್ ನ್ಯೂಡೆಲ್ಲಿ.

ಅಮ್ಮಾನ್‌ಮಧನ್, ೨೦೦೫, ಫರ್‌ಸ್ಪೆಕ್ಟೀವ್ ಆನ್ ಎಜುಕೇಶನ್, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಜುಲೈ-೩೦), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಅಮಿಯಾಕುಮಾರ್ ಬೀಚಿ, ೧೯೮೯, ದ ಪ್ರೆಸಿಡೆನ್ಸಿ ಬ್ಯಾಂಕ್ ಆ್ಯಂಡ್ ಇಂಡಿಯನ್ ಎಕಾನಮಿ, ೧೮೭೬ರಿಂದ ೧೯೧೪, ಕಲ್ಕತ್ತ ಆಕ್ಸ್‌ಫರ್ಡ್ ಯೂನಿವರ್ಸಿಟಿ, ಪ್ರೆಸ್, ಕಲ್ಕತ್ತ.

ಆಚಾರ ವನಮಾಲ, ಸ್ತ್ರೀ ಮತ್ತು ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೫.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಅಂಕಿ ಅಂಶಗಳ ನೋಟ(೨೦೧೦-೧೧) ಬೆಂಗಳೂರು, ಬಹುಮಹಡಿಗಳ ಕಟ್ಟಡ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.

ಇಂದಿರಾ ಆರ್., ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇಂಡಿಯನ್ ಎಕಾನಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಆಪರ್ಚುನಿಟಿ, ನ್ಯೂಡೆಲ್ಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

ಕರ್ನಾಟಕ ಜನಸಂಖ್ಯೆಯ ಜನಗಣತಿ ವರದಿ ೨೦೧೧.

ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೦-೧೧ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

ಕುಮಾರಸ್ವಾಮಿ ಹೆಚ್., ೨೦೦೭, ಗುಣಮಟ್ಟದ ಶಿಕ್ಷಣ: ತರಗತಿಯಲ್ಲಿನ ಪ್ರಕ್ರಿಯೆಗಳು, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ(ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣಕುಮಾರ್, ಮನಿಷ ಪ್ರಿಯಮ್, ಸಾಧನಸಕ್ಸೇನ್, ೨೦೦೧, ಲುಕ್ಕಿಂಗ್ ಬಿಯಾಂಡ್ ದ ಸಂಸ್ಕ್ರೀನ್, ಡಿ.ಪಿ.ಇ.ಪಿ. ಆ್ಯಂಡ್ ಪ್ರೈಮರಿ ಎಜುಕೇಷನ್ ಇನ್ ಇಂಡಿಯಾ, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಫೆಬ್ರವರಿ ೧೭), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಕೃಷ್ಣಾಜೀ ಎನ್., ೨೦೦೦, "ಪಾವರ್ಟಿ ಜೆಂಡರ್ ಆ್ಯಂಡ್ ಸ್ಕೂಲಿಂಗ್: ಎ ಸ್ಟಡಿ ಆಫ್ ಟೂ ಡಿಸ್ಟ್ರಿಕ್ಟ್ ಇನ್ ಆಂದ್ರಪ್ರದೇಶ, ರಾವತ್ ಪಬ್ಲಿಕೇಶನ್ ನ್ಯೂಡೆಲ್ಲಿ.

ಗೀತಾ, ೨೦೦೭, ಸ್ತ್ರೀ ವಿಮುಕ್ತ ಚಿಂತನೆ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ, ಮಂಡ್ಯ.

ಚಂದ್ರಶೇಖರ್ ಟಿ.ಆರ್.. ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗ ಸಂಬಂಧಿ ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್., ೧೯೯೯ "ಜಿಲ್ಲಾ ಅಬಿವೃದ್ದಿ ಅದ್ಯಯನ", ಪ್ರಸಾರಾಂಗ ವಿಶ್ವ ವಿದ್ಯಾಲಯ ಹಂಪಿ.

ಚಂದ್ರಶೇಖರ ಟಿ.ಆರ್., ೨೦೦೩, "ಕರ್ನಾಟಕ ಆಭಿವೃದ್ಧಿಯ ಸಾಮಾಜಿಕ ನೆಲೆಗಳು" ಸಿ,ವಿ,ಜಿ ಪಂಬ್ಲಿಕೇಷನ್ಸ್ ಬೆಂಗಳೂರು.

ಚಂದ್ರಶೇಖರ್ ಟಿ.ಆರ್., ೨೦೦೭, ಕರ್ನಾಟಕದ ಪ್ರಾದೇಶಿಕ ಅಸಮಾನತೆ, ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ಟಿ.ಆರ್., ೨೦೦೮, "ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ". ಪ್ರಸಾರಾಂಗ ವಿಶ್ವ ವಿದ್ಯಾಲಯ ಹಂಪಿ.

ಜಯಂತಿಲಾಲ್. ಬಿ.ಜಿ. ತಿಲಕ್, ೨೦೧೧, "ಎಜ್ಯುಕೇಷನ್ ಫಾರ್ ಪ್ರಾಫಿಟ್", ಇಪಿಡಬ್ಲು ವೊ.ನಂ ಎಕ್ಸ್‌ಎಲ್‌ವಿಐ ನಂ.೯.

ಜಯಕುಮಾರ ಇ.ಸಿ., ೧೯೯೪, "ಎಜ್ಯುಕೇಶನ್ ಆ್ಯಂಡ್ ಡೆವಲಪ್‌ಮೆಂಟ್", ಪ್ರಿಂಟ್‌ವೆಲ್ ನ್ಯೂಡೆಲ್ಲಿ.

ಜಾರ್ಜ ಮತ್ತು ಮಾರಿನ್ ವುಡ್ ಹಾಲ್, ೧೯೮೫, "ಎಜ್ಯುಕೇಶನ್ ಫಾರ್ ಡೆವಲಪ್‌ಮೆಂಟ್ ಆನ್ ಇನ್ವೆಸ್ಟ್‌ಮೆಂಟ್ ಚ್ವಾಯ್ಸ್". ವರ್ಲ್ಡ್‌ಬ್ಯಾಂಕ್ ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್.

ಚಾರಗುಪ್ತ, ೨೦೦೭. ದಲಿತ್ ವೈರಂಗಣಾಸ್ ಆ್ಯಂಡ್ ರಿ ಇನ್‌ವೆನ್ಷನ್ ಆಫ್ ೧೮೫೭, ಎಕನಾಮಿಕ್ ಅಂಡ್ ಪೊಲಿಟಿಕಲ್ ವಿಕ್ಲಿ(ಮೇ-೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಡೇವಿಡ್, ೨೦೦೬, "ಎಜ್ಯುಕೇಶನ್ ಫಾರ್ ರೂರಲ್ ಡೆವಲಪ್‌ಮೆಂಟ್", ರಾವತ್ ಪಬ್ಲಿಕೇಶನ್ ನ್ಯೂಡೆಲ್ಲಿ.

ಡಿ.ಆರ್.ಎಫ್.ಟಿ., ವಾರ್ಷಿಕ ವರದಿ ೨೦೧೨-೧೩, ಕರ್ನಾಟಕ ಸರ್ಕಾರ, ಬೆಂಗಳೂರು.

ನಂದಹಾರ್ ಇಕಟರ, ಒಂದನೇ ತರಗತಿಯಿಂದ ಐದನೇ ತರಗತಿ ಕನ್ನಡ ಪುಸ್ತಕಗಳ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಟರಾಜ್ ಹುಳಿಯಾರ್, ಸುವರ್ಣ ಕರ್ನಾಟಕ ಗ್ರಾಮೀಣಾಭಿವೃದ್ಧಿ ವರ್ಷಚಾರಣೆ ಕಾರ್ಯಕ್ರಮ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೭.

ನಾರಾಯಣ ಡಿ.ಎಸ್. ಇಂಗ್ಲಿಷ್ ಮತ್ತು ಕನ್ನಡ ಸಂಬಂಧ ಕುರಿತು ಚಿಂತನೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಎಂ.ಫಿಲ್ ನಿಬಂಧ.

ನೀರಾಬುರ್ರ, ೨೦೦೧, ಕಲ್ಚರಲ್ ಸ್ಟೀರಿಯೋ ಟೈಪ್ಸ್ ಆ್ಯಂಡ್ ಹೌಸ್ ಹೋಲ್ಡ್ ಬಿಹೇವಿಯರ್, ಗರ್ಲ್‌ಚೈಲ್ಡ್ ಲೇಬರ್ ಇನ್ ಇಂಡಿಯಾ, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಫೆಬ್ರವರಿ ೩-೧೦), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ನಿರಂಜನಾರಾಧ್ಯ ವಿ.ಪಿ., ೨೦೦೭, ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಾಭಾಗಿತ್ವ: ಕರ್ನಾಟಕದ ಅನುಭವಗಳು, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ(ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಂಕಜ್ ಎಸ್. ಜೈನ್, ೨೦೧೧, ರೈಟ್ ಎಜ್ಯುಕೇಶನ್ ಆ್ಯಕ್ಟ್ ಆ್ಯಂಡ್ ಪಬ್ಲಿಕ್-ಪ್ರೈವೆಟ್ ಪಾರ್ಟ್ನರ್‌ಷೀಪ್: ಇ.ಪಿ.ಡಬ್ಲೂ ವೊ.ನಂಎಕ್ಸ್.ಎಲ್.ವಿ.ಐ ನಂ. ೧೧.

ಪಂಚಮುಖಿ ಆರ್.ಒಇ., ೧೯೯೬, "ಎಜ್ಯುಕೇಶನಲ್ ಚೆಂಜ್ ಇನ್ ಇಂಡಿಯಾ", ಹರ್ - ಆನಂದ ಪಬ್ಲಿಕೇಶನ್ ನ್ಯೂಡೆಲ್ಲಿ.

ಪಣಿಕಾರ ಕೆ.ಎನ್., ೨೦೧೧, "ಇಂಡಿಯನ್ ಎಜ್ಯುಕೇಷನ್ ಪಾಲಿಸಿ ಪ್ರಮ್ ನ್ಯಾಷನಲ್ ಟೂ ಕಮರ್ಷಿಯಲ್" ಇಪಿಡಬ್ಲು ವೊ.ನಂ ಎಕ್ಸ್‌ಎಲ್‌ವಿಐ ನಂ ೧೭.

ಪದ್ಮ ಎಂ. ಸಾರಂಗಪಾಣಿ, ೨೦೦೩, ಕನ್‌ಸ್ಟ್ರಕ್ಟಿಂಗ್ ಸ್ಕೂಲ್ ನಾಲೆಜ್ಡ್ ಆನ್ ಎತ್ನಾಗ್ರಫಿ ಆಫ್ ಲರ್ನಿಂಗ್ ಇನ್ ಆನ್ ಇಂಡಿಯನ್ ವಿಲೇಜ್, ಸೇಜ್ ಪಬ್ಲಿಕೇಷನ್ಸ್, ಇಂಡಿಯಾ ಪ್ರೈವೇಟ್ ಲಿಮೆಟೆಡ್, ಬಿ. ೪೨, ಪಂಚಶೀಲ ಎನ್‌ಕ್ಲೇವ್, ನವದೆಹಲಿ.

ಪ್ರಶಾಂತ್ ಎಚ್.ಡಿ., ೨೦೦೫, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಶಾಂತ್ ಎಚ್.ಡಿ., ೨೦೦೭, ಶಾಲಾಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕ ಅನುಭವಗಳು: ಸಾಧನೆ – ಸವಾಲು – ಸಾಧ್ಯತೆ, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ (ಜನವರಿ–ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಶಾಂತ್ ಎಚ್.ಡಿ., ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ವಿಚಾರ, ಸಂಕಿರಣ (ಲೇಖನ), ೨೦೦೬.

ಭಂಡಾರಿ ನಾರಾಯಣ ತಿವಾರಿ, ೨೦೦೭, ರೀ ಆಕ್ಟಿವೇಟಿಂಗ್ ದಿ ಪಾಸ್ಟ್, ದಲಿತ್ಸ್ ಆ್ಯಂಡ್ ಮೆಮೋರಿಸ್ ಆಫ್ ೧೮೭೫, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಭಾರತದ ಜನಗಣತಿ ೨೦೧೧, ಪ್ರಾವಿಜನ್ ಲಿಸ್ಟ್ ಕೋರಮಂಗಲ, ಕೇಂದ್ರೀಯ ಸದನ, ಕರ್ನಾಟಕ ಜನಗಣತಿ ಮೌಲ್ಯಾಂಕ ವರದಿ, ಕರ್ನಾಟಕ ಶಾಲಾಗುಣಮಟ್ಟ ಮೌಲ್ಯಾಂಕ ಸಂಸ್ಥೆ, ೨೦೦೫–೦೬, ಕರ್ನಾಟಕ ಸರ್ಕಾರ, ಬೆಂಗಳೂರು.

ಬೇಹೂರ, ಕಾನ್‌ಸ್ಟ್ರೈನ್ ಆಫ್ ಟ್ರೈಬಲ್ ಎಜುಕೇಷನ್ ಇನ್ ಒರಿಸ್ಸಾ, ೧೯೮೨.

ಭೈರಪ್ಪ ಕೆ., ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ, ಐಬಿಹೆಚ್ ಪ್ರಕಾಶನ, ಮೈಸೂರು.

ಮಂಜಪ್ಪ, ದಲಿತರ ಶೈಕ್ಷಣಿಕ ಸ್ಥಿತಿಗತಿಗಳು (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ಮಧು ಎಸ್., ೨೦೦೩, "ಎಜ್ಯುಕೇಶನ್ ಸೊಸಾಯಿಟಿ ಆ್ಯಂಡ್ ಡೆವಲಪ್‌ಮೆಂಟ್" ಎ.ಪಿ.ಹೆಚ್.ಪಂಬ್ಲಿಷಿಂಗ್ ಕಾರ್ಪೊರೇಷನ್ ನ್ಯೂಡೆಲ್ಲಿ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ಷಿಕ ವರದಿ, ೨೦೦೯–೧೦, ಕರ್ನಾಟಕ ಸರ್ಕಾರ, ಬೆಂಗಳೂರು.

ಯರ್ರಿಸ್ವಾಮಿ ಎಂ., ಗ್ರಾಮಪಂಚಾಯಿತಿ ಮತ್ತು ಸಬಲೀಕರಣ (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ಯೋಜನಾ, ಅಭಿವೃದ್ಧಿ ಮಾಸ ಪತ್ರಿಕೆ, ಸೆಪ್ಟೆಂಬರ್ ೨೦೧೩–ಸರ್ವರಿಗೂ ಶಿಕ್ಷಣ, ವಿಶೇಷ ಸಂಚಿಕೆ.

ರುಕ್ಮಿಣಿ ಬ್ಯಾನರ್ಜಿ, ೨೦೦೦, ಪಾವರ್ಟಿ ಆ್ಯಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರೈಮ್ ಮುಂಬೈ ಆ್ಯಂಡ್ ದೆಹಲಿ, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಮಾರ್ಚ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ರೇಖಾಕೌಲ್, ಅಸಿಸ್ಟಿಂಗ್ ಪ್ರೈಮರಿ ಎಜುಕೇಶನ್ ಗೋಯಿಂಗ್ ಟು ಬಿಯಾಂಡ್ ದ ಕ್ಲಾಸ್ ರೂಂ. ೨೦೦೧.

ರತನ್ ನಬೀಸ್ ಮತ್ತು ತಾನಿತಾ ಚಟರ್ಜಿ, ೨೦೦೭, ಎನ್‌ರೋಲಿಂಗ್ ಆ್ಯಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಪಾರ್ಮಲ್ ಸ್ಕೂಲ್ ಎ ಫಿಲ್ಡ್ ಸರ್ವೆ ಇನ್ ಇಸ್ಟನ್ ಸ್ಲಮ್ ಆಫ್ ಕೊಲ್ಕತ್ತ" ಇ.ಪಿ.ಡಬ್ಲೂ ವೊ.ನಂಎಕ್ಸ್.ಎಲ್.ವಿ.ಐ ನಂ. ೧೧. ಪು.-೩೩-೩೯

ರವೀಂದ್ರ ಹೆಚ್.ಎಸ್., 'ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಾಮಾಜಿ, ಆರ್ಥಿಕ ಅಂಶಗಳ ಪಾತ್ರ" ಅಪ್ರಕಟಿತ ಪಿಹೆಚ್.ಡಿ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ.

ರಾಬರ್ಟ ಕೆಸಸ್ವನ್‌ರ್, ೨೦೦೯, "ಎಫೆಕ್ಸ್ ಆಫ್ ವೇಟ್ ಆನ್ ಚಿಲ್ಡನ್ಸ್ ಎಜ್ಯುಕೇಶನಲ್ ಅಚ್ಯುಮೆಂಟ್", ಎಕನಾಮಿಕ್ಸ ಆಪ್ ಎಜ್ಯುಕೇಶನ್ ರಿವ್ಯೂವ್ ೨೮

ರುಕ್ಮೀಣಿ ಬೆನರ್ಜಿ, ೨೦೧೧, "ಚಾಲೆಂಜಿಂಗ್ ಬಿಂಕಾ ಆ್ಯನ್ ಪ್ರೈಮರಿ-ಎಜ್ಯುಕೇಶನ್. ಇಡಿಡಬ್ಲು. ವೊ.ನಂ.ಎಕ್ಸ್‌ಎಲ್‌ವಿಐ ನಂ.೧೧. ಪು-೩೩-೩೯.

ಲಕ್ಷ್ಮಣ್ ತೆಲಗಾವಿ, ೨೦೦೭, ಕರ್ನಾಟಕದ ದಲಿತ ಚಳುವಳಿ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, (ಸಂ) ಹಿ.ಚಿ.ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲೀಲಾವತಿ ಟಿ.ಆರ್., ಕರ್ನಾಟಕ ಶೈಕ್ಷಣಿಕ ಬೆಳೆವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು". ಅಪ್ರಕಟಿತ ಪಿಎಚ್.ಡಿ. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಾರ್ಮಿ ಗೋಸ್ವಾಮಿ, ೨೦೧೧, "ಬಜಕ್ಟಿಂಗ್ ಫಾರ್ ಹೆಲ್ತ್ ಆ್ಯಂಡ್ ಎಜ್ಯುಕೇಶನ್" ಯೋಜನಾ ಮಾರ್ಚ-೨೦೧೧.

ವಾಸವಿ ಎ.ಆರ್., ಪಿ.ಜಿ. ವಿಜಯ ಶೇರ್ರಿಚಾಂದ್, ಶೈಲಶ್ ಆರ್. ಶುಕ್ಲ, ೧೯೯೭, ಬ್ಲೂ ಪ್ರಿಂಟ್ ಫಾರ್ ರೂರಲ್ ಪ್ರೈಮರಿ ಎಜ್ಯುಕೇಶನ್, ಹೌ ವೈಯಬಲ್? ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಡಿಸೆಂಬರ್ ೧೩), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ವಾರ್ಷಿಕ ವರದಿ ೨೦೧೧-೧೨, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ಬೆಂಗಳೂರು.

ವಿಠೋಬ ಮತ್ತು ಇತರರು, ೨೦೦೫, ಇವರು "ಶಿಕ್ಷಣ ಮತ್ತು ಅಸಮತೋಲನ" ಇ.ಪಿ.ಡಬ್ಲೂ ವಾಲ್ಯೂಮ ನಂ:ಪಿ.ಪಿ೨೨-೨೬

ವಿನೋದ್ ಬಿ. ಅಣ್ಣಿಗೇರಿ, ೨೦೦೪, 'ಪ್ಲಾನಿಂಗ್ ಆ್ಯಂಡ್ ಫೈನಾನ್ಸಿಂಗ್ ಆಫ್ ಪ್ರೈಮರಿ ಎಜ್ಯುಕೇಶನ್ ಇನ್, ದಿ ಇಂಡಿಯನ್ ಫೆಡರರ್ ಸೆಟ್‌ಆಪ್' (ಎ ಕೆಸ್ ಸ್ಟಡಿ ಆಪ್ ಕರ್ನಾಟಕ) ಅಪ್ರಕಟಿತ ಪಿಹೆಚ್‌ಡಿ ಮಹಾಪ್ರಬಂಧ ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು.

ವೈದ್ಯನಾಥ ಎ., ಪಿ.ಆರ್. ಗೋಪಿನಾಥ, ೨೦೦೧, "ಎಲಿಮೆಂಟರಿ ಎಜ್ಯುಕೇಶನ್ ಇನ್ ರೂರಲ್ ಇಂಡಿಯಾ" ಸೇಜ್ ಪಬ್ಲಿಕೇಶನ್ ನ್ಯೂಡೆಲ್ಲಿ.

ಶಾರದ ಜೈನ್, ಅಲೋಕ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಷಾ, ೧೯೯೯, ಚಿಲ್ಡ್ರನ್ ವರ್ಕ್ಸ್ ಆ್ಯಂಡ್ ಎಜುಯಕೇಶನ್, ರೀಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್, ಇಂಡಿಯಾ ಎಜುಕೇಶನ್ ರಿಪೋರ್ಟ್, ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಶನ್.

ಶಾರದ ಕೆ.ಎಸ್., ೨೦೦೭, ವಯಸ್ಕರ ಶಿಕ್ಷಣ – ಸಾಕ್ಷರತಾ ಅಂದೋಲನ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, (ಸಂ) ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸವಿತಾ ಕೆ., ೨೦೦೮, ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಸಂಬಂಧಿ ಆಯಾಮಗಳು: ಸಮಾಜೋ–ಆರ್ಥಿಕ ಅಂಶಗಳು, (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೋಭಾ ಕೆ. ಮತ್ತು ವಿನೀತಾ, ೨೦೧೦, "ಇನ್‌ಕ್ಲೂಷನ್ ಆಪ್ ಫಿಮೇಲ್ ಲೇಬರ್ ಪೋರ್ಸ್ ಇನ್ ಎಮ್.ಜಿ.ಎನ್‌ಆರ್‌ಇಜಿಎ" ಸೌದರನ್ ಎಕನಾಮಿಸ್ಟ ವೊ.ನಂ–೫೦, ಪು.ಸಂ.೫೮–೭೮.

೧೮೫೪ರ ವುಡ್ ಡಿಸ್‌ಪ್ಯಾಚ್ ವರದಿ, ಶಾಸಕರ ಗ್ರಂಥಾಲಯ, ವಿಧಾನಸೌಧ, ಬೆಂಗಳೂರು.

೧೯೯೧ರ ಎಚ್. ನರಸಿಂಹಯ್ಯ ಸಮಿತಿ ವರದಿ, ಶಾಸಕರ ಗ್ರಂಥಾಲಯ, ವಿಧಾನಸೌಧ, ಬೆಂಗಳೂರು.

ವರದಿಗಳು

..... (೧೯೬೨) "ಎಜ್ಯುಕೇಶನ್ ಇನ್ ಇಂಡಿಯಾ" ೧೯೫೮–೫೯ ವೊ–೧ ರಿಪೋರ್ಟ್ ಗೌರ್ನ್‌ಮೆಂಟ್ ಆಫ್ ಇಂಡಿಯಾ (ಮಿನಿಸ್ಟರಿ ಆಫ್ ಎಜ್ಯುಕೇಶನ್)

..... (೧೯೮೮) "ಸ್ಕೀಮ್ ಆಪ್ ನಾನ್ ಪಾರ್‌ಮುಲ ಎಜ್ಯುಕೇಷನ್". ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಮಿನಿಸ್ಟರಿ ಆಪ್ ಹೆಚ್‌ಆರ್‌ಡಿ ಗೌರ್ನಮೆಂಟ್ ಆಪ್ ಇಂಡಿಯಾ ನ್ಯೂಡೆಲ್ಲಿ.

..... (೨೦೦೭–೦೮) "ಶೈಕ್ಷಣಿಕ ಮಾಹಿತಿ(ವರದಿ) ಜಿಲ್ಲಾವಾರು ವಿಶ್ಲೇಷಣೆ" ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೦೭-೦೮) "ಶೈಕ್ಷಣಿಕ ಪಕ್ಷಿನೋಟದ ಜಿಲ್ಲಾ ವರದಿ" ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ. ಕರ್ನಾಟಕ ಸರಕಾರ.

..... (೨೦೦೭-೦೮) "ಶೈಕ್ಷಣಿಕ ಮಾಹಿತಿ(ವರದಿ) ಜಿಲ್ಲಾವಾರು ವಿಶ್ಲೇಷಣೆ" ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೦೮-೦೯) "ಎಜ್ಯುಕೇಷನ್ ಇನ್ ಕರ್ನಾಟಕ ಸ್ಟೇಟ್" (ವರದಿ) ಜಿಲ್ಲಾ ವಿಶ್ಲೇಷಣೆ. ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೦೮-೦೯) "ಶೈಕ್ಷಣಿಕ ಪಕ್ಷಿನೋಟದ ಜಿಲ್ಲಾ ವರದಿ" ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ. ಕರ್ನಾಟಕ ಸರಕಾರ.

..... (೨೦೦೮-೦೯) "ಬಾನೂಲಿ ಕಾರ್ಯಕ್ರಮಗಳ ವರದಿ" ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ಶೊಕ್ಷಣ ತರಬೇತಿ ಇಲಾಖೆ ಸರ್ವ ಶಿಕ್ಷಣ ಅಭಿಯಾನ ಮತ್ತು ಶಿಕ್ಷಣ ಅಭಿವೃದ್ಧಿ ಕೆಂದ್ರ ಬೆಂಗಳೂರು. ಕರ್ನಾಟಕ ಸರಕಾರ.

..... (೨೦೦೮-೦೯) "ಬಾನೂಲಿ ಕಾರ್ಯಕ್ರಮಗಳ ವರದಿ" ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ಶಿಕ್ಷಣ ತರಬೇತಿ ಇಲಾಖೆ ಸರ್ವ ಶಿಕ್ಷಣ ಅಭಿಯಾನ ಮತ್ತು ಶಿಕ್ಷಣ ಅಭಿವೃದ್ಧಿ ಕೆಂದ್ರ ಬೆಂಗಳೂರು. ಕರ್ನಾಟಕ ಸರಕಾರ.

..... (೨೦೦೮-೦೯) "ಎಜ್ಯುಕೇಷನ್ ಇನ್ ಕರ್ನಾಟಕ ಸ್ಟೇಟ್" (ವರದಿ) ಜಿಲ್ಲಾ ವಿಶ್ಲೇಷಣೆ. ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೦೯-೧೦) ಎಜ್ಯುಕೇಷನ್ ಇನ್ ಕರ್ನಾಟಕ (ವರದಿ) ಜಿಲ್ಲಾ ವಿಶ್ಲೇಷಣೆ ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೦೯-೧೦) "ಶೈಕ್ಷಣಿಕ ಪಕ್ಷಿನೋಟದ ಜಿಲ್ಲಾ ವರದಿ" ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ. ಕರ್ನಾಟಕ ಸರಕಾರ.

..... (೨೦೦೯-೧೦) ಎಜ್ಯುಕೇಷನ್ ಇನ್ ಕರ್ನಾಟಕ (ವರದಿ) ಜಿಲ್ಲಾ ವಿಶ್ಲೇಷಣೆ ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೦೯-೧೦) "ಎಜ್ಯುಕೇಷನ್ ಇನ್ ಕರ್ನಾಟಕ ಡಿಸ್ಟ್ರಿಕ್ ರಿಪೋರ್ಟ್" ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೧೦) "ಅನಾಲೇಟಿಕಲ್ ಟೇಬಲ್" ನ್ಯಾಷನಲ್ ಯುನಿವರ್ಸಿಟಿ ಆಫ್ ಎಜ್ಯುಕೇಶನಲ್. ಪ್ಲಾನಿಂಗ್ ಆ್ಯಂಡ್ ಅಡ್ಮಿನಿಷ್ಟ್ರೇಶನ್.

..... (೨೦೧೦-೧೧) 'ಸರ್ವ ಶಿಕ್ಷಣ ಅಭಿಯಾನ್' ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೧೦) 'ಆರ್‌ಐಡಿಎಸ್ ಯೋಜನೆ ವರದಿ' ಶಿಕ್ಷಣ ಇಲಾಖೆ ಕೊಪ್ಪಳ, ಕರ್ನಾಟಕ ಸರಕಾರ.

..... (೨೦೧೦-೧೧) 'ಸರ್ವ ಶಿಕ್ಷಣ ಅಭಿಯಾನ್' ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

..... (೨೦೧೦) 'ಆರ್‌ಐಡಿಎಸ್ ಯೋಜನೆ ವರದಿ' ಶಿಕ್ಷಣ ಇಲಾಖೆ ಕೊಪ್ಪಳ, ಕರ್ನಾಟಕ ಸರಕಾರ.

..... "ಅಕ್ಷರದಾಸೋಹ" ವರದಿ ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ. ಕರ್ನಾಟಕ ಸರಕಾರ.

..... "ನಿರಂತರ ಸಹಪಠ್ಯೆ ಚಟುವಟಿಕೆಗಳು" ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವಶಿಕ್ಷಣ ಅಭಿಯಾನ, ಕರ್ನಾಟಕ ಸರಕಾರ ಬೆಂಗಳೂರು.

..... 'ಮಕ್ಕಳ ಹಕ್ಕುಗಳು' ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ. ಜಿಲ್ಲಾ ಪಂಚಾಯತ್ ಕೊಪ್ಪಳ. ಕರ್ನಾಟಕ ಸರಕಾರ.

..... 'ಸರ್ವ ಶಿಕ್ಷಣ ಅಭಿಯಾನ' (ಒಂದು ಪಕ್ಷಿನೋಟ) ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರಕಾರ ಬೆಂಗಳೂರು.

..... 'ಸಂಪನ್ಮೂಲ ವ್ಯಕಿಗಳ ಜವಬ್ದಾರಿಗಳು' ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

ಅನುಬಂಧ-೨

ಪ್ರಶ್ನಾವಳಿ

ಪ್ರಶ್ನಾವಳಿಗಳು

I) ಸಾಮಾನ್ಯ ಮಾಹಿತಿ :-

1) ಸಂದರ್ಶಕರ ಹೆಸರು :

2) ಸಂದರ್ಶನದ ದಿನಾಂಕ:

II) ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ವಿವರ :-

ಕ್ರ.ಸಂ.	ಹೆಸರು	ವಯಸ್ಸು	ಶಿಕ್ಷಣ	ಉದ್ಯೋಗ		ಒಟ್ಟು ಆದಾಯ
				ಮುಖ್ಯ	ಇತರೆ	

III) ಕುಟುಂಬದ ಆಸ್ತಿ :-

1) ಮನೆಯ ಸ್ವರೂಪ :-

2) ವಿದ್ಯುತ್ ದ್ವೀಪ :-

3) ಕೊಠಡಿಗಳ ಸಂಖ್ಯೆ :-

4) ಕಿಟಕಿಗಳ ಸಂಖ್ಯೆ :-

5) ಸ್ನಾನದ ಕೊಠಡಿ :-

6) ಶೌಚಾಲಯ ವ್ಯವಸ್ಥೆ :-

7) ಆಕಾಶವಾಣಿ (ರೇಡಿಯೋ) :-

8) ದೂರವಾಣಿ :-

9) ಟಿ.ವಿ. :-

10) ಸೈಕಲ್ :-

11) ದ್ವಿಚಕ್ರ ವಾಹನ :-

12) ಟೇಬಲ್ :-

13) ಚೇರ್ಸ್ (ಕುರ್ಚಿ) :-

14) ಮಂಚ :-

15) ಪಡಿತರ ಚೀಟಿಯ ವಿಧ :-

16) ಇತರೆ:-

IV) ಭೂಮಿಯ ವಿವರ :-

ಭೂಮಿ	ಒಣ ಭೂಮಿ	ನೀರಾವರಿ	ಒಟ್ಟು
ಸ್ವಂತ ಭೂಮಿ			
ಉಳುಮೆಯ ಭೂಮಿ			

V) ಶಾಲೆಗೆ ಹೋಗುತ್ತಿರುವ ಮಕ್ಕಳ ವಿವರ :-

ಮಗುವಿನ ಹೆಸರು	ವಯಸ್ಸು	ಓದುವ ತರಗತಿ	ಭಾಗವಹಿಸದ ಮಕ್ಕಳ ಸಂಖ್ಯೆ	ಶಾಲೆ ಬಿಟ್ಟ ಮಕ್ಕಳ ಸಂಖ್ಯೆ	ಶಾಲೆ ಬಿಟ್ಟಿದ್ದರೆ	
					ಯಾವ ವಯಸ್ಸು	ಯಾವ ಕಾರಣ

ಶಾಲೆಯಿಂದ ಹೊರಗುಳಿದಿದ್ದರೆ ಕಾರಣಗಳೇನು ?

1. ತಂದೆ – ತಾಯಿಯ ಸಾವು
2. ಒಡಹುಟ್ಟಿದವರ ಪಾಲನೆಗಾಗಿ
3. ಕುಟುಂಬ ನಿರ್ವಹಣಾ ಆದಾಯಕ್ಕಾಗಿ
4. ಮನೆಯಲ್ಲಿನ ಕೆಲಸಕ್ಕಾಗಿ
5. ಶಾಲಾ ಶುಲ್ಕ ಮತ್ತು ಪುಸ್ತಕಗಳನ್ನು ಕೊಳ್ಳಲಾಗದ ಸ್ಥಿತಿ
6. ಶಿಕ್ಷಕರ ಭೇದ – ಭಾವ ನೀತಿ
7. ಶಾಲೆ ದೂರವಿರುವ ಕಾರಣ
8. ಅನುತ್ತೀರ್ಣ ಮತ್ತು ಉತ್ಸಾಹವಿಲ್ಲದಿರುವಿಕೆ
9. ಮಹಿಳಾ ಶಿಕ್ಷಕರ ಕೊರತೆ

10. ಮಹಿಳಾ ಶೌಚಾಲಯದ ಕೊರತೆ

11. ಇತರೆ

A) ನಿಮ್ಮ ಮಗುವನ್ನು ಪುನಃ ಶಾಲೆಗೆ ಕಳುಹಿಸುವ ಆಸಕ್ತಿ ಇದೆಯಾ ? ಇದೆ / ಇಲ್ಲ

ಇದ್ದರೆ, ಯಾವ ಕಾರಣಕ್ಕಾಗಿ

1) ಅವನ / ಅವಳಿಗೆ ಓದಿನಲ್ಲಿ ಆಸಕ್ತಿ ಇದೆ
2) ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ
3) ಶಾಲೆಯಲ್ಲಿ ಬಟ್ಟೆ, ಪುಸ್ತಕ, ವಿದ್ಯಾರ್ಥಿವೇತನ ಕೊಡುತ್ತಿರುವುದಕ್ಕೆ
4) ಸರ್ಕಾರದ ಮಧ್ಯಾಹ್ನದ ಬಿಸಿಯೂಟ ನೀಡುತ್ತಿರುವುದಕ್ಕೆ
5) ಮನೆಗೆಲಸದಲ್ಲಿ ನಮ್ಮ ಮಗುವಿನ ಆಸಕ್ತಿ ಇಲ್ಲದಿರುವುದಕ್ಕಾಗಿ
6) ನಮ್ಮ ಊರಿನಲ್ಲಿ ಶಾಲೆ ಪ್ರಾರಂಭಿಸಿರುವುದಕ್ಕಾಗಿ
7) ಶಿಕ್ಷಣದ ಮಾರ್ಗದರ್ಶನಕ್ಕಾಗಿ (ಮರಳಿ ಬಾ ಶಾಲೆಗೆ)
8) ಶಿಕ್ಷಕರ ನೇಮಕಾತಿ ಆಗಿದ್ದರಿಂದ
9) ಅವನು / ಅವಳು ಹೆಚ್ಚಿನ ಕಲಿಕೆಗಾಗಿ
10) ಇತರೆ

B) 5–15 ವರ್ಷದ ಒಳಗಿನ ನಿಮ್ಮ ಮಗುವಿಗೆ ಸರ್ಕಾರದ ಕಾಯ್ಕ್ರಮದಡಿ ಈ ಕೆಳಗಿನ ಯಾವುದಾದರು ಸಹಾಯವನ್ನು ಪಡೆಯುತ್ತಿರುವಿರಾ? ಹೌದು / ಅಲ್ಲ

ಪಡಿಯುತ್ತಿದ್ದರೆ

1) ಪುಸ್ತಕಗಳು   2) ಲೇಖನಿ ಸಾಮಗ್ರಿಗಳು   3) ವಿದ್ಯಾರ್ಥಿ ವೇತನ
4) ಅಕ್ಕಿ   5) ಬಟ್ಟೆ   6) ಮದ್ಯಾಹ್ನದ ಬಿಸಿಯೂಟ
7) ಇತರೆ

C) ನಿಮ್ಮ ಮಗು ಯಾವುದಾದರು ವಿಷಯದಲ್ಲಿ ಹಿಂದುಳಿದಿದೆಯಾ ? **ಹೌದು / ಅಲ್ಲವಾ**

ಹೌದಾದರೆ ಯಾವ ವಿಷಯದಲ್ಲಿ

1) ಭಾಷಾ ವಿಷಯ   2) ಇಂಗ್ಲೀಷ್   3) ಗಣಿತ   4) ವಿಜ್ಞಾನ
5) ಇತರೆ   6) ಎಲ್ಲಾ

D) ನಿಮ್ಮ ಮನೆಯಿಂದ ಶಾಲೆಗೆ ಎಷ್ಟು ದೂರವಿದೆ ?

E) ನಿಮ್ಮ ಮಕ್ಕಳು ಶಾಲೆಗೆ ಹೇಗೆ ಹೋಗುತ್ತಾರೆ ?

F) ನಿಮ್ಮ ಮಗು ಶಾಲೆಯಲ್ಲಿ ಪೌಷ್ಟಿಕಾಂಶಯುಕ್ತ ಆಹಾರವನ್ನು ಪಡೆಯುತ್ತಿದ್ದಿಯಾ ?

G) ಯಾವ ಸ್ವರೂಪದ ಶಿಕ್ಷಣ ಮಾದರಿಯನ್ನು ಪ್ರಾಥಮಿಕ ಹಂತದಲ್ಲಿ ಕೊಡಿಸಬೇಕೆಂದು ಬಯಸುತ್ತೀರಿ?

-: ಶಾಲಾ ಸಂದರ್ಶನ ಪ್ರಶ್ನಾವಳಿ :-

I) ಸಾಮಾನ್ಯ ಮಾಹಿತಿ

1) ಶಾಲೆಯ ಹೆಸರು

2) ಮುಖ್ಯೋಪಾಧ್ಯಾಯರ ಹೆಸರು

ಪದನಾಮ	ಹೆಣ್ಣು	ಗಂಡು
ಮು.ಶಿಕ್ಷಕ		
ಸಹಶಿಕ್ಷಕ		
ಕಛೇರಿ ಸಹಾಯಕ		
ಇತರೆ		
ಒಟ್ಟು		

II) ಶಾಲಾ ಮಾಹಿತಿ :-

1) ನಿಮ್ಮ ಶಾಲೆಗೆ ದಾಖಲಾದ ಮಕ್ಕಳ ಶೈಕ್ಷಣಿಕ ಬೆಳವಣಿಗೆಗಾಗಿ ಯಾವ ಯಾವ ರೀತಿಯ ಕಾರ್ಯಗಳನ್ನು ಹಮ್ಮಿಕೊಂಡಿದ್ದೀರಿ ?

ಎ) ______________________

ಬಿ) ______________________

ಸಿ) ______________________

ಡಿ) ______________________

2) ಶಾಲಾ ಅಭಿವೃದ್ಧಿ ಕಮಿಟಿ ಇದೆಯೆ? ಇದೆ/ ಇಲ್ಲ ಇದ್ದರೆ

1. ಒಟ್ಟು ಕಮಿಟಿ ಸದಸ್ಯರ ಸಂಖ್ಯೆ __________
2. ವರ್ಷದಲ್ಲಿ ಈ ಕಮಿಟಿ ಎಷ್ಟು ಬಾರಿ ಸಭೆ ಸೇರುತ್ತದೆ ____________
3. ಆ ಕಮಿಟಿಯ ಸಭೆಗೆ ಎಷ್ಟು ಜನ ಸದಸ್ಯರು ಸೇರುತ್ತಾರೆ ________

ಎ) 30% ಬಿ) 30 ರಿಂದ 50% ಸಿ) 51 ರಿಂದ 75 % ಡಿ) 75% ಮೇಲ್ಪಟ್ಟು

3) ಈ ಕೆಳಗಿನ ಯಾವ ಕಾರ್ಯಕ್ರಮಗಳು ನಿಮ್ಮ ಶಾಲೆಯಲ್ಲಿ ಲಭ್ಯವಿರುತ್ತವೆ.

ಎ) ಮಧ್ಯಾಹ್ನ ಬಿಸಿಯೂಟ

ಬಿ) ಉಚಿತ ಪುಸ್ತಕ ವಿತರಣೆ

ಸಿ) ಹಾಜರಾತಿ ವಿದ್ಯಾರ್ಥಿ ವೇತನ

ಡಿ) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಇ) ಮೆಟ್ರಿಕ್ ವಿದ್ಯಾರ್ಥಿ ವೇತನ

ಎಫ್) ಹಿಂದುಳಿದ ವರ್ಗಗಳ ವೇತನ

ಜಿ) ಅಂಗವಿಕಲರ ವಿದ್ಯಾರ್ಥಿ

ಎ) ಕೇಂದ್ರ ಬಿ) ರಾಜ್ಯ

ಹೆಚ್) ಇತರೆ ಯೋಜನೆಗಳು :- ಬಟ್ಟೆ ವಿತರಣೆ

ಐ) ಇತರೆ ಯಾವುದೇ

ಜೆ) ಮೇಲಿನ ಎಲ್ಲಾ

4) ಮೇಲಿನ ಕಾರ್ಯಕ್ರಮಗಳಿಂದ ಅಥವಾ ಯೋಜನೆಗಳಿಂದ ಇಲ್ಲಿಯವರೆಗೆ ಎಷ್ಟು ಜನ ವಿದ್ಯಾರ್ಥಿಗಳು ಅನುಕೂತೆಯನ್ನು ಪಡೆದುಕೊಂಡಿದ್ದಾರೆ ?

5) ನಿರಂತರ ಮಕ್ಕಳ ಹಾಜರಾತಿಗಾಗಿ ನೀವು ತೆಗೆದುಕೊಂಡ ಹಂತಗಳು ಯಾವು ?

ಎ) ________________________

ಬಿ) ________________________

ಸಿ) ________________________

ಡಿ) ________________________

ಇ) ________________________

6) ಮಕ್ಕಳ ಭಾಗವಹಿಸುವಿಕೆಯ ವಿವರ :-

ವರ್ಷ	ನಿರಂತರ ದಾಖಲಾತಿಯ ವಿವರ				ಒಟ್ಟು	ಹೊಸದಾಗಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ				ಒಟ್ಟು
	ಹುಡುಗರು		ಹುಡುಗಿಯರು			ಹುಡುಗರು		ಹುಡುಗಿಯರು		
	SC/ST	others	SC/ST	others		SC/ST	others	SC/ST	others	
001–02										
002–03										
003–04										
004–05										
005–06										
006–07										
007–08										

2008–09										
2009–10										
2010–11										

7) ಮಕ್ಕಳ ಹಾಜರಾತಿ ವಿವರ:

ವರ್ಷ	ನಿರಂತರ ಶಾಲೆಗೆ ಹಾಜರಾಗುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯ ಸಂಖ್ಯೆ				ಒಟ್ಟು	ಶಾಲೆಗೆ ಗೈರು ಹಾಜರಾದವರ ಸಂಖ್ಯೆ				ಶಾಲೆಯಿಂದ ಹೊರಗುಳಿದ ಮಕ್ಕಳ			
	ಹುಡುಗರು		ಹುಡುಗಿಯರು			ಹುಡುಗರು		ಹುಡುಗಿಯರು		ಹುಡುಗರು		ಹುಡುಗಿಯರು	
	SC/ST	others	SC/ST	others		SC/ST	others	SC/ST	others	SC/ST	others	SC/ST	others
001–02													
002–03													
003–04													
004–05													
005–06													
006–07													
007–08													
008–09													
009–10													
010–11													

III) ಶಾಲೆಯ ಪೀಠೋಪಕರಣಗಳು :-

1) ಕಪ್ಪು ಹಲಗೆ

1) ಗೋಡೆ 2) ಸುರುಳಿ ಹಲಗೆ 3) Stand 4) ಯಾವುದೇ ಇತರೆ

2) ಕುಳಿತುಕೊಳ್ಳುವ ಆಸನಗಳ ವ್ಯವಸ್ಥೆ :

1) ನೆಲದ ಮೇಲೆ 2) ಬೆಂಚು 3) ಡೆಸ್ಕ್ 4) ಪುಸ್ತಕ ಇಡುವ ಡೆಸ್ಕ್

5) ಇತರೆ ಯಾವುದೇ

3) ಶಾಲಾ ಸಿಬ್ಬಂದಿಯವರ ಪೀಠೋಪಕರಣಗಳು :-

1) ಕುರ್ಚಿಗಳು 2) ಟೇಬಲ್ 3) ಅಲ್ಮಾರಗಳು 4) ಇತರೆ

4) ನಕ್ಷೆಗಳು :

1) ಪ್ರಪಂಚ 2) ಭಾರತದ 3) ತಾಲ್ಲೂಕ 4) ರಾಜ್ಯ

5) ಹಳ್ಳಿಗಳು 6) ಬೇರೆ ರಾಷ್ಟ್ರಗಳು 7) ಜಿಲ್ಲೆಗಳು

5) ಚಾರ್ಟ್ಸ್ :

1) ಅಲ್ಫಾಬೆಟ್ಸ್ 2) ಸಂಖ್ಯೆಗಳು 3) ಪ್ರಾಣಿಗಳು 4) ಹೂವುಗಳು

5) ರಾಜ್ಯಗಳು 6) ಜೀವ ವಿಜ್ಞಾನ 7) ಗಣಿತ 8) ಇತರೆ

6) ಚಿತ್ರಪಟಗಳು :-

1) ರಾಷ್ಟ್ರ ನಾಯಕರು 2) ರಾಜ್ಯ ನಾಯಕರು 3) ಶಾಲೆಯ ಚಿತ್ರಗಳು

4) ಇತರೆ

7) ಭೋಧನೆ :

1) ಭೋಧನಾ ಉಪಕರಣಗಳು 2) ಸಮಾಜ ವಿಜ್ಞಾನ 3) ವಿಜ್ಞಾನ

4) ಗಣಿತ

8) ಆಟದ ಮೈದಾನ : ಇದೆಯಾ ಇಲ್ಲವೋ

9) ಸಹ ಪಠ್ಯೇತರ ಚಟುವಟಿಕೆಗಳು / ಪಠ್ಯೇತರ ಚಟುವಟಿಕೆಗಳು :

1)

2)

3)

4)

10) ಶಾಲೆಯ ಚಟುವಟಿಕೆಗಳು :

1)

2)

3)

4)

11) ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ಇದೆಯಾ ?

ಇದೆಯಾ ? ಇಲ್ಲವೋ

12) ಇತರೆ ಸೌಲಭ್ಯಗಳು :

1) ಕುಡಿಯುವ ನೀರು
2) ಶೌಚಾಲಯ
3) ಉದ್ಯಾನವನ
4) ದಾಸ್ತಾನು ಕೊಠಡಿ
5) ಅಡುಗೆ ಮನೆ
6) ಸಿಬ್ಬಂದಿ ಕೊಠಡಿ
7) ಇತರೆ

IV) ಶಾಲಾ ವಿದ್ಯಾರ್ಥಿಗಳ ಒಟ್ಟು ವಿವರ :

2011–12

ವರ್ಷ	ತರಗತಿ	ಹುಡುಗರು			ಒಟ್ಟು	ಹುಡುಗಿಯರು			ಇತರೆ
		ಎಸ್.ಸಿ	ಎಸ್.ಟಿ	ಇತರೆ		ಎಸ್.ಸಿ	ಎಸ್.ಟಿ	ಇತರೆ	
2011–12	1								
	2								
	3								
	4								
	5								
	6								
	7								
	8								
	9								
	10								

V) ಶಾಲಾ ವಿದ್ಯಾರ್ಥಿಗಳ ಒಟ್ಟು ವಿವರ :– 2011–2012

ವರ್ಷ	ತರಗತಿ	ಹುಡುಗರು			ಒಟ್ಟು	ಹುಡುಗಿಯರು			ಒಟ್ಟು
		ಎಸ್.ಸಿ.	ಎಸ್.ಟಿ	ಇತರೆ		ಎಸ್.ಸಿ.	ಎಸ್.ಟಿ	ಇತರೆ	
2011–12	1								
	2								
	3								

ಛಾಯಾಚಿತ್ರಗಳು

ಕೊಪ್ಪಳ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು

























ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು










ಸರಕಾರಿ ಪ್ರೌಢಶಾಲೆ. ರಾದಿಹಾಳ















ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು























ಸರಕಾರಿ ಪ್ರೌಢಶಾಲೆ ಅಂಕುಳದೊಡ್ಡಿ





ಅಭಿವೃದ್ಧಿ ಅಧ್ಯಯನ ವಿಭಾಗ